ಶುಕ್ರವಾರ, ಜೂನ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 172 | ಪುಟ 14
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಚಂದನವನದ ತೆರೆಗಳಲ್ಲಿ ಇಂದು ನಾಲ್ಕು ಸಿನಿಮಾಗಳು ಬಿಡುಗಡೆಯಾಗುತ್ತಿವೆ

ಆಳ-ಅಗಲ
ಪ್ರಜಾಪ್ರಭುತ್ವವಾದಿ, ಜಾತ್ಯತೀತ ಭಾರತಕ್ಕಾಗಿ ದೊರೆತ ಫಲಿತಾಂಶವೇ? ಅಧಿಕ ತೆರಿಗೆ ಹೊರೆ ಇಳಿಸಿ 10

ಗರ್ಭಪಾತ ಕಿಟ್ ಮಾರಾಟ ತಡೆಗೆ ಜಿಲ್ಲಾ ತಂಡ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,478	23,567	₹74,120 (ಬೆಂಗಳೂರು)	₹92,300 (ಬೆಂಗಳೂರು)	83.61

ಕೇಜ್ರಿವಾಲ್‌ಗೆ ಜಾಮೀನು

ನವದೆಹಲಿ (ಪಿಟಿಐ): ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ. 9

ಕ್ರಿಕೆಟಿಗ ಡೇವಿಡ್ ಜಾನ್ಸನ್ ಆತ್ಮಹತ್ಯೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕನ್ನಡಿಗ ಡೇವಿಡ್ ಜಾನ್ಸನ್ (52) ಅವರು ಗುರುವಾರ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 11

ದೌರ್ಜನ್ಯ ತಡೆಗೆ 33 ಪೊಲೀಸ್ ಠಾಣೆ

ಬೆಂಗಳೂರು: ಪರಿಶಿಷ್ಟರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ನಿರ್ವಹಿಸಲು ನಾಗರಿಕ ಹಕ್ಕು ನಿರ್ದೇಶನಾಲಯದ (ಡಿಸಿಆರ್‌ಇ) 33 ಘಟಕಗಳನ್ನು 'ವಿಶೇಷ ಪೊಲೀಸ್ ಠಾಣೆ'ಗಳೆಂದು ಘೋಷಿಸಲು ಸರ್ಕಾರ ನಿರ್ಧರಿಸಿದೆ. 8

ಪರೀಕ್ಷೆ: ಆಕ್ರೋಶ ಭುಗಿಲು

ನೀಟ್, ನೆಟ್ ಅಕ್ರಮ • ಎನ್‌ಟಿಎ ವಜಾಕ್ಕೆ ಆಗ್ರಹ • ದೇಶದಾದ್ಯಂತ ಪ್ರತಿಭಟನೆ

ನವದೆಹಲಿ (ಪಿಟಿಐ): 'ನೀಟ್- ಯುಜಿ' ಮತ್ತು ಯುಜಿಸಿ- ನೆಟ್ ಪರೀಕ್ಷೆಗಳಲ್ಲಿನ ಅಕ್ರಮಗಳ ವಿರುದ್ಧ ಆಕ್ರೋಶ ಭುಗಿಲೆದ್ದಿದ್ದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ವಿವಿಧ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ದೆಹಲಿ, ಲಖನೌ ಸೇರಿದಂತೆ ದೇಶದ ವಿವಿಧೆಡೆ ಗುರುವಾರ ಪ್ರತಿಭಟನೆ ನಡೆಸಿದರು.

ಯುಜಿಸಿ-ನೆಟ್ ಪರೀಕ್ಷೆಯನ್ನು ರದ್ದುಗೊಳಿಸಿದ ಕ್ರಮವನ್ನು ವಿರೋಧಿಸಿ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಮತ್ತು ಭಾರತೀಯ ಯುವ ಕಾಂಗ್ರೆಸ್ (ಐವೈಸಿ), ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸದಸ್ಯರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ನಿವಾಸದ ಬಳಿ ಪ್ರತಿಭಟಿಸಿದರು. ಎನ್‌ಎಸ್‌ಯುಐನ ರಾಷ್ಟ್ರೀಯ ಅಧ್ಯಕ್ಷ ವರುಣ್ ಚೌಧರಿ ಅವರು, ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಬೇಡ ಎಂದು ಆಗ್ರಹಿಸಿದರು.

9ನೇ ಪುಟ ನೋಡಿ

ನೀಟ್–ಯುಜಿ ಮತ್ತು ಯುಜಿಸಿ–ನೆಟ್ ಪರೀಕ್ಷಾ ಅಕ್ರಮಗಳನ್ನು ವಿರೋಧಿಸಿ ವಿವಿಧ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಗುರುವಾರ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಉಕ್ರೇನ್–ರಷ್ಯಾ ಯುದ್ಧವನ್ನು ನರೇಂದ್ರ ಮೋದಿ ನಿಲ್ಲಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ, ಪರೀಕ್ಷೆ ಪ್ರಶ್ನೆಪತ್ರಿಕೆಯ ಸೋರಿಕೆ ತಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅವರ ಕಾಳಜಿ ತಮ್ಮ ಸರ್ಕಾರದ ಉಳಿವಿಗಾಗಿಯೇ ಹೊರತು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಕೇಂದ್ರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ ನೀಟ್–ಯುಜಿ 2024 ಪರೀಕ್ಷೆ ಯನ್ನು ರದ್ದುಪಡಿಸಬೇಕು ಹಾಗೂ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂಬ ಕೋರಿಕೆ ಇರುವ ಅರ್ಜಿಗಳು ಸೇರಿದಂತೆ ಹಲವು ಅರ್ಜಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯಿಂದ (ಎನ್‌ಟಿಎ ಸುಪ್ರೀಂ ಕೋರ್ಟ್ ಪ್ರತಿಕ್ರಿಯೆ ಕೇಳಿದೆ.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ದರ್ಶನ್ ಸೇರಿ ನಾಲ್ವರು ಪುನಃ ಕಸ್ಟಡಿಗೆ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್ ಸೇರಿದಂತೆ ನಾಲ್ವರು ಆರೋಪಿಗಳ ಪೊಲೀಸ್ ಕಸ್ಟಡಿಯನ್ನು ಇದೇ 22ರವರೆಗೆ ಮುಂದುವರಿಸಿದ ವಿಶೇಷ ನ್ಯಾಯಾಲಯ ಪ್ರಕರಣದ ಉಳಿದ ಎಲ್ಲ ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದೆ.

ಕಸ್ಟಡಿಗೆ ಒಳಗಾದ ಆರೋಪಿಗಳು

- ಎ–2 ದರ್ಶನ್ ಅಲಿಯಾಸ್ ಡಿ ಬಾಸ್ ಬಿನ್ ಲೇಟ್ ತೂಗುದೀಪ ಶ್ರೀನಿವಾಸ್ (47)
- ಎ–9 ಡಿ.ಧನರಾಜ್ ಅಲಿಯಾಸ್ ರಾಜು ಬಿನ್ ದಿನೇಶ್ (27)
- ಎ–10 ವಿ.ವಿನಯ್ ಬಿನ್ ಲೇಟ್ ವೆಂಕಟರೆಡ್ಡಿ (38)
- ಎ–14 ಪ್ರದೋಷ್ ಬಿನ್ ಸುಬ್ಬಾರಾವ್ (40)

ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್ ಆಪ್ತೆ ಪವಿತ್ರಾ ಗೌಡ ಮತ್ತು ದರ್ಶನ್ ಸೇರಿದಂತೆ ಎಲ್ಲ 17 ಆರೋಪಿಗಳನ್ನು ನಗರದ ಹೆಚ್ಚುವರಿ ಮುಖ್ಯ ಮೆಟ್ರೊ ಪಾಲಿಟನ್ ನ್ಯಾಯಾಲಯದ 24ನೇ ಆರ್ಥಿಕ ಅಪರಾಧಗಳ ಕೋರ್ಟ್ ನ್ಯಾಯಾಧೀಶ ವಿಶ್ವನಾಥ ಚನ್ನಬಸಪ್ಪ ಗೌಡರ್ ಅವರ ಮುಂದೆ ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಗುರುವಾರ ಮಧ್ಯಾಹ್ನ ಹಾಜರುಪಡಿಸಲಾಯಿತು.

ದರ್ಶನ್ ಪರ ಹಾಜರಿದ್ದ ಹೈಕೋರ್ಟ್ ವಕೀಲ ಮೋನೇಶ್ ಕುಮಾರ್ ಹಾಗೂ ರಂಗನಾಥ ರೆಡ್ಡಿ, ಪವಿತ್ರಾ ಗೌಡ ಪರ ನಾರಾಯಣ ಸ್ವಾಮಿ, ಪ್ರದೋಷ್ ಪರ ಹೈಕೋರ್ಟ್‌ನ ಹಿರಿಯ ವಕೀಲ ಸಿ.ದಿವಾಕರ್, 'ಪೊಲೀಸರು ಆರೋಪಿಗಳನ್ನು ಯಾಕೆ ಬಂಧಿಸಲಾಗುತ್ತಿದೆ ಎಂಬುದನ್ನು ಬಂಧಿಸುವ ಮುನ್ನ ತಿಳಿಸಿಲ್ಲ. ರಿಮಾಂಡ್ ಅರ್ಜಿ ನೀಡಿಲ್ಲ. ಖಾಲಿ ಹಾಳೆಯ ಮೇಲೆ ಸಹಿ ಮಾಡಿಸಿಕೊಂಡು ಬಂಧಿಸಿದ್ದಾರೆ. ಇದು ಸಂವಿಧಾನ ಕೊಡಮಾಡಿರುವ ವ್ಯಕ್ತಿಯೊಬ್ಬನ ಮೂಲಭೂತ ಹಕ್ಕಿನ ಸ್ಪಷ್ಟ ಉಲ್ಲಂಘನೆ. ಆರೋಪಿಗಳನ್ನು ವಶದಲ್ಲಿ ಇರಿಸಿಕೊಂಡಿರುವ ಪೊಲೀಸರು ಸಾಕ್ಷ್ಯಗಳನ್ನು ಸೃಷ್ಟಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

8ನೇ ಪುಟ ನೋಡಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಬ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ
ಹೈಟೆಕ್ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ
"ಕಾರ್ಯಾಚರಣೆ ಮತ್ತು ನಿರ್ವಹಣೆಯ" ಲೋಕಾರ್ಪಣೆ ಕಾರ್ಯಕ್ರಮ

21 ಜೂನ್ 2024

ಸಮಯ : ಮಧ್ಯಾಹ್ನ 3.00 ಗಂಟೆಗೆ
ಸ್ಥಳ : ಸ್ವಾತಂತ್ರ್ಯ ಉದ್ಯಾನವನದ ಆವರಣ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು

-: ಉದ್ಘಾಟನೆ :-
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ



ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ **ಶ್ರೀ ದಿನೇಶ್ ಗುಂಡೂರಾವ್** ರವರು ಈ ಹಿಂದೆ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಕಾಮಗಾರಿ ಕಾರ್ಯವನ್ನು ಪರಿಶೀಲಿಸುತ್ತಿರುವುದು

ಹೈಟೆಕ್ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ವೈಶಿಷ್ಟ್ಯ

- ದೇಶದಲ್ಲೇ ಮೊದಲ ಬಾರಿಗೆ ಸರ್ಕಾರಿ ಒಡೆತನದ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದಲ್ಲಿ ಅಡ್ವಾನ್ಸ್ ಸ್ಮಾರ್ಟ್ ಪಾರ್ಕಿಂಗ್ ತಂತ್ರಜ್ಞಾನ ಹಾಗೂ ಕ್ಯಾಶ್‌ಲೆಸ್ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದೆ.
- 600 ಕಾರುಗಳು ಮತ್ತು 750 ದ್ವಿಚಕ್ರ ವಾಹನಗಳನ್ನು ಏಕಕಾಲದಲ್ಲಿ ನಿಲುಗಡೆ ವ್ಯವಸ್ಥೆ.
- ಮಹಿಳೆಯರು, ಹಿರಿಯ ನಾಗರೀಕರು ಹಾಗೂ ವಿಶೇಷ ಚೇತನರಿಗೆ ಪ್ರತ್ಯೇಕವಾಗಿ ಕಾರ್ ಪಾರ್ಕಿಂಗ್ ವ್ಯವಸ್ಥೆ.
- ಉಚಿತ ವೈಫೈ, ಇವಿ ಚಾರ್ಜಿಂಗ್, ಶೌಚಾಲಯ, ಶುದ್ಧ ಕುಡಿಯುವ ನೀರಿನ ಸೌಲಭ್ಯ.

ಪ್ರಗತಿಯತ್ತ ಬೆಂಗಳೂರು
ನೆಮ್ಮದಿಯತ್ತ ನಾಗರಿಕರು

ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ QR ಕೋಡ್ ಬಳಸಿ

ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ ಪ್ರತಿ ಮನೆಗೆ 200 | ಅನ್ನಭಾಗ್ಯ 10 kg | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

ಕಳ್ಳ ನೆಪದಲ್ಲಿ ವೀಸಾ ಕೋರಿಕೆ: ಇರಾಕ್ ಪ್ರಜೆ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶಿಯರಿಗೆ ವೈದ್ಯಕೀಯ ವೀಸಾ ಮಂಜೂರು ಮಾಡುವ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು' ಎಂದು ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿ (ಎಫ್‌ಆರ್‌ಆರ್‌ಒ) ನಿರ್ದೇಶಿಸಿರುವ ಹೈಕೋರ್ಟ್, ತಮ್ಮ ಹೆಸರಿನಲ್ಲಿರುವ ಒಂದೆರಡು ಅಕ್ಷರಗಳನ್ನು ಬದಲಾಯಿಸಿಕೊಂಡು ಕಳ್ಳನೆಪದಲ್ಲಿ ಭಾರತ ಪ್ರವೇಶಿಸಲು ಮುಂದಾಗಿದ್ದ 33 ವರ್ಷದ ಇರಾಕ್ ಪ್ರಜೆಯೊಬ್ಬರ ಮನವಿಯನ್ನು ತಿರಸ್ಕರಿಸಿದೆ.

ವೈದ್ಯಕೀಯ ವೀಸಾ ನೀಡುವುದಕ್ಕೆ ನಿರಾಕರಿಸಿದ್ದ ಎಫ್‌ಆರ್‌ಆರ್‌ಒ ನಿರ್ಧಾರ ಪ್ರಶ್ನಿಸಿ ಬಾಗ್ದಾದ್ ನಿವಾಸಿ ಸಗದ್ ಕರೀಂ ಇಸ್ಮಾಯಿಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, 'ಅರ್ಜಿದಾರರು ಅವಧಿ ಮೀರಿ ನೆಲೆಸಿದ್ದ ಕಾರಣ ನಿರ್ಗಮನ ಪರವಾನಗಿ ನೀಡಿ ಗಡಿಪಾರು ಮಾಡಲಾಗಿತ್ತು. ಮೊದಲು ಫಾರ್ಮಸಿ ಕೋರ್ಸ್ ವಿದ್ಯಾರ್ಥಿ ಎಂದು ನಂತರ ವೈದ್ಯಕೀಯ ಚಿಕಿತ್ಸೆ ನೆಪದಲ್ಲಿ ವೀಸಾ ಪಡೆದಿದ್ದರು. ಈ ವೇಳೆ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ನೆಲೆಸಿದ್ದ ಅವರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿತ್ತು. ಇದೀಗ ಸಜ್ಜದ್ ಕರೀಂ ಇಸ್ಮಾಯಿಲ್ ಎಂಬ ತಮ್ಮ ಮೂಲ ಹೆಸರನ್ನು ಸಗದ್ ಕರೀಂ ಇಸ್ಮಾಯಿಲ್ ಎಂದು ಬದಲಾಯಿಸಿ ಮತ್ತೊಂದು ಅವಧಿಗೆ ವೀಸಾ ಕೋರಿದ್ದಾರೆ. ಈ ಕಾನೂನುಬಾಹಿರ ಕೋರಿಕೆಯನ್ನು ಪರಿಗಣಿಸಬಾರದು' ಎಂದು ಕೋರಿದ್ದರು.

ಕೇಂದ್ರದ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಅರ್ಜಿದಾರರು ವಿದೇಶದಲ್ಲಿ ಕುಳಿತು ತಮ್ಮ ಪರವಾಗಿ ವಿಶೇಷ ಪವರ್ ಆಫ್ ಅಟಾರ್ನಿ (ಎಸ್‌ಪಿಎ) ಮೂಲಕ ಅರ್ಜಿ ಸಲ್ಲಿಸಿದಲ್ಲಿ ಅದನ್ನು ಕಾರ್ಯಗತಗೊಳಿಸಲು ಅವಕಾಶವಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿ ಆದೇಶಿಸಿದೆ.

ಏಳು ವರ್ಷಗಳ ಹಿಂದೆ ಚಾಲನೆ ನೀಡಲಾಗಿದ್ದ ಕಾಮಗಾರಿ • ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭದ ನಿರೀಕ್ಷೆ

ಶುರುವಾಗದ ನಾಗಸಂದ್ರ–ಮಾದಾವರ ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುತೇಕ ಎಲ್ಲ ಕೆಲಸಗಳು ಮುಗಿದಿವೆ. ಸೆಪ್ಟೆಂಬರ್ ಒಳಗೆ ಮೆಟ್ರೊ ರೈಲು ಸಂಚಾರ ಆರಂಭ...'

'ನಮ್ಮ ಮೆಟ್ರೊ' ನಾಗಸಂದ್ರ–ಮಾದಾವರ ವಿಸ್ತರಿತ ಮಾರ್ಗದಲ್ಲಿ ರೈಲು ಸಂಚಾರ ಆರಂಭಕ್ಕೆ ಬಿಎಂಆರ್‌ಸಿಎಲ್ ನೀಡುತ್ತಿರುವ ಹೊಸ ಗಡುವು ಇದು.

ಈ ವಿಸ್ತರಿತ ಮಾರ್ಗದ ಕಾಮಗಾರಿ ಆರಂಭವಾಗಿ ಏಳು ವರ್ಷಗಳು ಕಳೆದರೂ ರೈಲು ಸಂಚರಿಸಲು ಕಾಲ ಕೂಡಿ ಬರುತ್ತಿಲ್ಲ. ಸಂಚಾರದ ಗಡುವು ನಿರಂತರ ಮುಂದಕ್ಕೆ ಹೋಗುತ್ತಿದೆ. ಈಗ ಸೆಪ್ಟೆಂಬರ್ ಒಳಗೆ ಮೆಟ್ರೊ ರೈಲು ಸಂಚಾರ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ಹೇಳುತ್ತಿದೆ.

ಹಸಿರು ಮಾರ್ಗದಲ್ಲಿ ವಿಸ್ತರಿತಗೊಂಡಿರುವ ಈ ಪ್ರದೇಶದಲ್ಲಿ ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದಾವರ ಮೆಟ್ರೊ ನಿಲ್ದಾಣಗಳ ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿವೆ. 3.7 ಕಿಲೋಮೀಟರ್ ದೂರದ ಈ ಮಾರ್ಗದಲ್ಲಿ ಗರ್ಡರ್ ಅಳವಡಿಕೆ ಸಹಿತ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿವೆ. ಎಲೆಕ್ಟ್ರಿಕಲ್ ಮತ್ತು ಸಿಗ್ನಲಿಂಗ್ ಕೆಲಸಗಳು ಬಾಕಿ ಇವೆ.

ವಿಸ್ತರಿತ ಕಾಮಗಾರಿಗೆ 2017ರ ಮೇ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕು ಉಂಟಾಗಿತ್ತು, ಕೆಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಇದಲ್ಲ 'ಇತ್ಯರ್ಥ'ವಾಗಲು ನಾಲ್ಕು ವರ್ಷ ಹಿಡಿಯಿತು. ಪ್ರಕರಣ ಇತ್ಯರ್ಥವಾಗಿ ಕಾಮಗಾರಿ ಆರಂಭಗೊಂಡು ಮೂರು ವರ್ಷಗಳಾದವು. ಸಿವಿಲ್ ಕಾಮಗಾರಿ ಶೇ 100ರಷ್ಟು ಮುಗಿದಿದ್ದರೂ ತಾಂತ್ರಿಕ ಕೆಲಸಗಳು ಮುಗಿದಿಲ್ಲ.

2023ರ ಜೂನ್ ವೇಳೆಗೆ ರೈಲು ಸಂಚಾರ ಆರಂಭವಾಗಲಿದೆ ಎಂದು ಮೊದಲು ಗಡುವು ನೀಡಲಾಗಿತ್ತು. ಅನಂತರ 2024ರ ಫೆಬ್ರುವರಿ, ನಂತರ ಜುಲೈಗೆ ನಿಗದಿಯಾಗಿತ್ತು. ಇದೀಗ ಗಡುವು ಸೆಪ್ಟೆಂಬರ್‌ಗೆ ಹೋಗಿದೆ.

'ತಾಂತ್ರಿಕ ಕೆಲಸಗಳು ಆರಂಭವಾಗಿವೆ. ಸಿಗ್ನಲಿಂಗ್ ಸಹಿತ ಎಲೆಕ್ಟ್ರಿಕಲ್ ಕೆಲಸಗಳು ನಡೆಯುತ್ತಿವೆ. ಎರಡು ತಿಂಗಳ ಒಳಗೆ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಬಳಿಕ ಸಿಗ್ನಲ್ ಪರೀಕ್ಷೆ, ಹಳಿಗಳ ಸಾಮರ್ಥ್ಯ ಪರೀಕ್ಷೆ, ಓಪನ್ ವೆಬ್ ಗರ್ಡರ್ ಪರೀಕ್ಷೆ ಸಹಿತ ವಿವಿಧ ತಾಂತ್ರಿಕ ಪರೀಕ್ಷೆಗಳು ನಡೆಯಲಿವೆ. ಸೆಪ್ಟೆಂಬರ್ ಅಂತ್ಯದ ಒಳಗೆ ರೈಲು ಸಂಚರಿಸಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹಸಿರು ಮಾರ್ಗ ಯೋಜನೆಯ ಕಾಮಗಾರಿಗಳು ಹಂತಹಂತವಾಗಿ ನಡೆದಿದ್ದವು. ಇದರ ಕೊನೆಯ ಹಂತವಾದ ನಾಗಸಂದ್ರ–ಮಾದಾವರ ಮಾರ್ಗ ಮಾತ್ರ ವಿಪರೀತ ವಿಳಂಬವಾಗಿದೆ. ಈ ಕಾಮಗಾರಿ ಮುಕ್ತಾಯಗೊಂಡರೆ ಹಸಿರು ಮಾರ್ಗ ಶೇ 100ರಷ್ಟು ಪೂರ್ಣಗೊಂಡಂತಾಗಲಿದೆ.

ವಿಸ್ತರಿತ ಹಸಿರು ಮಾರ್ಗದಲ್ಲಿ ನಿರ್ಮಾಣಗೊಂಡಿರುವ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣ

ಶೀಘ್ರ ಆರಂಭಿಸಿ

ಮಾದಾವರವರೆಗೆ ಮೆಟ್ರೊ ಆರಂಭಗೊಂಡರೆ ತುಮಕೂರು ರಸ್ತೆಯಲ್ಲಿ ಉಂಟಾಗುತ್ತಿರುವ ವಾಹನದಟ್ಟಣೆ ಕಡಿಮೆಯಾಗಲಿದೆ. ನೆಲಮಂಗಲ ಕಡೆಯಿಂದ ಬೆಂಗಳೂರಿಗೆ ಬರುತ್ತಿರುವ ಕಾರ್ಮಿಕರು, ಉದ್ಯೋಗಿಗಳು ನಾಗಸಂದ್ರದವರೆಗೆ ಬೇರೆ ಬೇರೆ ವಾಹನಗಳಲ್ಲಿ ಬಂದು, ಅಲ್ಲಿಂದ ಮೆಟ್ರೊ ರೈಲಿನಲ್ಲಿ ಸಂಚರಿಸುತ್ತಿದ್ದಾರೆ. ಮಾದಾವರದವರೆಗೆ ಮೆಟ್ರೊ ಸಂಚರಿಸಿದರೆ, ಜನರು ಅಲ್ಲೇ ವಾಹನ ನಿಲ್ಲಿಸಿ ಮೆಟ್ರೊ ಹತ್ತಲಿದ್ದಾರೆ. ಕೂಡಲೇ ಮೆಟ್ರೊ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಮೆಟ್ರೊ ಪ್ರಯಾಣಿಕ ಎಚ್. ರಮೇಶ್ ಆಗ್ರಹಿಸಿದರು.

ಆಡಳಿತ ಸುಧಾರಣೆ: ಶಿಫಾರಸು ತ್ವರಿತ ಅನುಷ್ಠಾನಕ್ಕೆ ಸೂಚನೆ

ಬೆಂಗಳೂರು: ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಎಲ್ಲಾ ಶಿಫಾರಸುಗಳನ್ನೂ ತ್ವರಿತವಾಗಿ ಅನುಷ್ಠಾನಗೊಳಿಸಬೇಕು ಎಂದು ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಸೂಚಿಸಿದ್ದಾರೆ.

39 ಇಲಾಖೆಗಳಿಗೆ ಸಂಬಂಧಿಸಿದಂತೆ 7 ವರದಿಗಳನ್ನು ಇದೇ ಜನವರಿಯಲ್ಲಿ ಸಲ್ಲಿಸಿದ್ದ ಆಡಳಿತ ಸುಧಾರಣಾ ಆಯೋಗವು, ಆಡಳಿತದಲ್ಲಿ ಪಾರದರ್ಶಕತೆ, ಸಕಾಲದಲ್ಲಿ ನಾಗರಿಕ ಸೇವೆ ಒದಗಿಸುವುದು, ಕಡಿಮೆ ವೆಚ್ಚದಲ್ಲಿ ಇಲಾಖೆಗಳ ನಿರ್ವಹಣೆ ಸೇರಿದಂತೆ 5,039 ಶಿಫಾರಸುಗಳನ್ನು ಮಾಡಿತ್ತು.

'ಮೊದಲನೆ ಅವಧಿಯ 856 ಶಿಫಾರಸುಗಳಲ್ಲಿ 359 ಅನುಷ್ಠಾನಗೊಂಡಿವೆ. 98 ಅನುಷ್ಠಾನ ಹಂತದಲ್ಲಿವೆ. 165 ಪರಿಶೀಲನೆಯಲ್ಲಿವೆ. ಎಲ್ಲಾ ಶಿಫಾರಸುಗಳ ಅನುಷ್ಠಾನಕ್ಕೆ ಕ್ರಮ ಕೈಗೊಂಡು ಆಯೋಗಕ್ಕೆ ವರದಿ ನೀಡಲು ಸೂಚಿಸಲಾಗಿದೆ' ಎಂದರು.

ಪತಿಯ ಕೊಲೆ ಆರೋಪಿ ಮಹಿಳೆಗೆ ಕೋರ್ಟ್ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಿಯಕರನೊಂದಿಗೆ ಅನೈತಿಕ ಸಂಬಂಧ ಮುಂದುವರಿಸಲು ಅಡ್ಡಿಯಾದ ಎಂಬ ಕಾರಣಕ್ಕೆ ಸುಪಾರಿ ನೀಡಿ ಪತಿಯನ್ನು ಕೊಲೆ ಮಾಡಿಸಿದ್ದಾರೆ' ಎಂಬ ಆರೋಪದಡಿ ನ್ಯಾಯಾಂಗ ಬಂಧನದಲ್ಲಿದ್ದ ಮಹಿಳೆಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಕುಣಿಗಲ್ ನಿವಾಸಿ ಹರ್ಷಿತಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರರ ಪರ ವಕೀಲ ಡಿ.ಮೋಹನ್ ಕುಮಾರ್ ವಾದ ಮನ್ನಿಸಿರುವ ನ್ಯಾಯಪೀಠ, 'ಅರ್ಜಿದಾರರು ₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್, ಅಷ್ಟೇ ಮೊತ್ತಕ್ಕೆ ಒಬ್ಬರ ಭದ್ರತಾ ಖಾತರಿ ನೀಡಬೇಕು. ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ನಿಯಮಿತವಾಗಿ ಹಾಜರಾಗಬೇಕು. ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ಸಾಕ್ಷ್ಯಾಧಾರ ತಿರುಚಲು ಯತ್ನಿಸಬಾರದು. ಇದೇ ಮಾದರಿಯ ಅಪರಾಧಗಳಲ್ಲಿ ಭಾಗಿಯಾಗಬಾರದು' ಎಂಬ ಷರತ್ತು ವಿಧಿಸಿದೆ. ಕೊಲೆ ಪ್ರಕರಣಕ್ಕೆ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 302ರ ಅಡಿಯಲ್ಲಿ ಜೀವಾವಧಿ ಅಥವಾ ಗಲ್ಲು ಶಿಕ್ಷೆ ವಿಧಿಸಲು ಅವಕಾಶವಿದೆ.

ಆಟೊಗೆ ಕ್ರೇನ್ ಡಿಕ್ಕಿ ಆಟೊ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಆಟೊಗೆ ಹಿಂಬದಿಯಿಂದ ಬಂದ ಕ್ರೇನ್ ಡಿಕ್ಕಿ ಹೊಡೆದ ಪರಿಣಾಮ ಆಟೊದೊಳಗೆ ಕುಳಿತಿದ್ದ ಚಾಲಕ ಮೃತಪಟ್ಟಿರುವ ಘಟನೆ ಉಪ್ಪಾರಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದೆ.

ಹೇರೋಹಳ್ಳಿಯ ನಾಗರಹೊಳೆ ನಗರದ ನಿವಾಸಿ ವಿನೋದ್ ಕುಮಾರ್ (35) ಮೃತಪಟ್ಟವರು.

ವಿನೋದ್ ಕುಮಾರ್ ಬುಧವಾರ ರಾತ್ರಿ ಬಾಡಿಗೆಗೆಂದು ಆಟೊ ತೆಗೆದುಕೊಂಡು ಹೋಗಿದ್ದರು. ಗುರುವಾರ ಬೆಳಿಗ್ಗೆ 6.50ಕ್ಕೆ ಶೇಷಾದ್ರಿಪುರ ರಸ್ತೆಯ ಗಾಂಧಿ ಪಾರ್ಕ್ ಬಳಿ ಆಟೊ ನಿಲ್ಲಿಸಿ ಸ್ನೇಹಿತರೊಂದಿಗೆ ಟೀ ಕುಡಿದಿದ್ದರು. ನಂತರ ಸ್ನೇಹಿತರು ಅಲ್ಲಿಂದ ತೆರಳಿದ ಬಳಿಕ ವಿನೋದ್ ಅವರು ಮತ್ತೆ ಆಟೊದಲ್ಲಿ ಕುಳಿತಿದ್ದರು' ಎಂದು ಪೊಲೀಸರು ಹೇಳಿದರು.

'ರೇಸ್‌ಕೋರ್ಸ್ ಮಾರ್ಗದಲ್ಲಿ ವೇಗವಾಗಿ ಬಂದ ಕ್ರೇನ್, ನಿಂತಿದ್ದ ಆಟೊಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿಯಾದ ರಭಸಕ್ಕೆ ಆಟೊದಲ್ಲಿ ಕುಳಿತಿದ್ದ ವಿನೋದ್ ಕುಮಾರ್ ಕೆಳಗೆ ಬಿದ್ದಿದ್ದು, ಅವರ ತಲೆಯ ಮೇಲೆ ಕ್ರೇನ್‌ನ ಚಕ್ರ ಹರಿದಿದೆ. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದರು.

'ಈ ಬಗ್ಗೆ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಭಾರತೀಯ ತಂತ್ರಜ್ಞಾನ ಸಂಸ್ಥೆ ಖರಗ್‌ಪುರ

ಎಡಿವಿಟಿ. ನಂ.: ಆರ್/07/2024 ದಿನಾಂಕ: ಜೂನ್ 05, 2024

ಸದರಿ ಸಂಸ್ಥೆಯಿಂದ ಕೆಳಕಂಡ ಹುದ್ದೆಗಳಿಗಾಗಿ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ:

(1) ಪ್ರೊಫೆಷನಲ್ ಟ್ರೈನಿ (ಫೈನಾನ್ಸ್ & ಅಕೌಂಟ್ಸ್)	10 ಹುದ್ದೆಗಳು

ಶೈಕ್ಷಣಿಕ ವಿದ್ಯಾರ್ಹತೆ, ವಯಸ್ಸು ಮತ್ತು ಅಪ್‌ಡೇಟ್‌ಗಳಿಗೆ ಸಂಬಂಧಿತ ವಿವರಗಳಿಗಾಗಿ ಭೇಟಿ ಕೊಡಿ: http://www.iitkgp.ac.in/non-teaching-positions

CBC 21255/12/0002/2425 ರಿಜಿಸ್ಟ್ರಾರ್

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

REAL ESTATE SELLING

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9902604714

Sites

Banashankari

BANASHANKARI 6TH Stage, 4th 'T' Block, 30x40 site for sale. Contact:- 9844006666.

Kempegowda Layout

NADAPRABHU KEMPEGOWDA Layout 9th block 'D' Sector 82x65 South West Corner Commercial site sale. ₹.6500/-.sqft. Contact:9686469799

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

RENTAL PROPERTIES

Accommodation Available

Commercial

AKSHAY NAGAR Main Road (Near DLF) Ground floor 4500 sqft Mezzanine floor 3100 sqft Total- 7600 sqft Per sqft/ 90 Rupees Advance 10 months Contact 9916912244/ 9482395455

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Business For Sale

BUSINESS FOR SALE 40 year old established profitable auto parts business for sale. Contact 9448039076

PUBLIC NOTICE

PUBLIC NOTICE

This is to inform the General public that we intend to purchase house property in Sy No.41/2, Gavipura village, BBMP No.1703/12, old No.41/2, 10th main road, BSK 1st stage, 2nd Block, Bengaluru, PID No.53-148-1703/12, Ward No.156, East-West: (52'1"+51'9")/2 feet & North-South: (27'11"+29'1")/2 feet, bounded on East : Road, West : Private property & road, North : Site No.11, South: Private property from its owners **B V MUNIRATHNAM & B V RAMESH BABU, both sons of Late M C Velu.** Any person/s asserting any kind of right, title, interest or claims of any sort towards the sale transaction may file their objections or claims with documentary proof thereof with the undersigned within **SEVEN** days from the date of this publication, failing which we will proceed to complete the transaction without being liable for any claims put forth thereof.

PRADEEP K R
#31/9, NCP Tower, I floor, I main, Mountjoy Extn, Hanumanthnagar, B'luru – 560 019
Mail : praroopIaw@gmail.com
Phone : 9886012455 / 9916326682
Bengaluru, Date: 20.06.2024

PUBLIC NOTICE
WILASA GRAND VILLAMENTS

NOTICE is hereby given to the general public not to deal with or enter into any agreement to purchase / lease / leave and licence / sale deed or any other arrangement for any of the residential villaments bearing Unit Nos. **A2, A3, E5, H3, H5, I3, I5, J3, J5, K3, K5, L2, L4, L5, M2, M4, N2, N3, N4, 0-4, 0-5, P2, P4, P5, Q4, Q5, R1, S1, T3, T4, T5, U4, U5, V1, V3, V4, V5, W4, W5, X2, X3, X4, X5, Z001, Z002, Z003, Z004, Z101, Z102, Z202, Z303, Z403, Z304, Z404** and the commercial block located in the project **"Wilasa Grand Villaments"** situated at "Raja Farms", Sy. No. 35/3 of Doddakallasandra Village, Uttarahalli Hobli, Bangalore South Taluk, Bangalore, from any of the following persons, namely **M/s.G.R.Nataraj Hindu Joint Family, Mr.G.R.Nataraj, Mrs.Suneetha Nataraj, Mr.Charan G.R., Mr.Sharan G.R. and Mrs.Vidya Mallik** in lieu of the fact that interim orders have been passed in the pending arbitration proceedings between M/s. Pride and Expert Properties Pvt. Ltd., G.R. Nataraj Hindu Joint Family and Tanvi Asset Holdings LLP as well as in O.S. No. 7060/2023 not to alienate the aforesaid units and the above said persons themselves have undertaken before the Hon'ble Orbitral Tribunal to maintain status quo in respect of all the aforesaid units.

Contrary to the same and in contempt of the orders of the Hon'ble Arbitral Tribunal, we are reliably informed that they are attempting to defraud / cheat innocent persons by entering into sale / lease / leave and licence and other transactions with them by collecting substantial amounts towards the sale consideration / deposits agreed to with such persons. Any person/s failing to desist and proceeding further to deal with the aforesaid persons in respect of the aforesaid units despite this notice, will be doing so at their own risk and cost and they will also be liable to be proceeded against for the offence of Contempt of Court.

M/s. B.K. Sampath Kumar & Associates,
Suraj Sampath, Advocate,
Advocates & Solicitors
Ph: 080 2224 5459, 080 2224 7181, 9845020105
Place: Bangalore **Date: 17.06.2024**

PERSONAL

Change of Name

I, SUDHIR Dattatray Chandavarkar, S/o. Late D.V. Chandavarkar, Age 84 years, R/at No. 4224, 19th Main Road, A-Block, 2nd Stage, Subramanya Nagar, Rajajinagar, Benglauru North, Bengaluru 560021 do hereby declare that S.D. Chandavarkar and Sudhir Dattatray Chandavarkar refer to one and the same person that is myself. Vide affidavit dated 18.06.2024 sworn before M. Rajendra Advocate & Notary Public Bengaluru.

CHANGE OF NAME

I, BHARATHI KAMALAKANNAN, residing at # 719/A, 5th Cross, Konena Agrahara, Vinayaka Nagar, A Block,Vimanapura, Bangalore-17 have changed my name to **BHARATHI KAMALAKANNAN PRABHU** vide affidavit dated 20.06.2024 before notary C.V. Earappa, Bangalore. Henceforth I shall be called as **BHARATHI KAMALAKANNAN PRABHU** only.

I, THIMMARAYA. N S/o. Narayanaswamy residing at Doddaiggalur Village, Malur Taluq, Kolar District Karnataka 563130 have changed my name from Thimmaraya. N to Thanmay Roy. N vide affidavit dated 28/03/2024 before notary M. Jagannatha BA.LL.B, notary Reg No: 20305

I, RAMESH, R/o #210, 2nd Floor, 32nd A Cross, 7th Block, Jayanagar, Bengaluru-70 have changed my name as MUNIREDDY RAMESH vide affidavit dated 19/06/2024 before Notary Aravind Patil, Bangalore

CHANGE OF NAME

I, **JAGADISH B R,** Residing at No. 240, 3rd Cross, Maruti Layout, Hebbal Dasarahalli, Bengaluru-560024, declare that in my son's **Shreyas J** 10th Marks Card my name is wrongly mentioned is **Jagadish B R** instead of **JAGADEESH B R** vide affidavit dated 13-06-2024 sworn before notary R.T. Dhanajaya, Alur.

CHANGE OF NAME

I, **M. Jayashree** W/o Late Sreedhar Kumar P (Ex-Army Havaldar Service No. 1369604Y) Residing at No.70, 5th Cross, Subramani Layout, Ramamurthy Nagar, Bengaluru-16, have changed my name to **JAYSREE** vide Affidavit dated 20-06-2024 sworn to before Notary K.B. Sadha Shivappa, Bengaluru. Henceforth I shall be known as **JAYSREE** only

WE, P. NARESH BABU and VANITHA BEDKEKAR, Residing at Flat #202, Tower-4, Pine, Wing C, Godrej Royale Woods, Chicksanne, Bhuvanahalli Devanahalli Bengaluru-562110 have chaqnged our daughters name from N. YASHASWINI to YASHASWINI BEDKEKAR. Also N. AKSHARA to AKSHARA BEDKEKAR, vide affidavit dated 20/6/2024 before Notary T.V.Bhadravijaya Bengaluru

I, C L Gayathri Devi, W/o C.D Dayanand, R/at`No.65/E Saithrone,SKC Whitemeadows Suncity Road,Kengeri, Bangalore-560060. Have`Changed My_Name From GAYATHRIDEVI DAYANAND_to C_L_GAYATHRI_DEVI. Vide`Affidavit Dtd:19-06-2024. Sowrn`Before Notary: M.Ramalinge Gowda

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ದಿನಾಂಕ: 20.06.2024

ಎನ್‌ಐಎಎನ್‌ಪಿ/ಎಡಿವಿ–ಪ್ರಾಜೆಕ್ಟ್–7–ಎಸ್ಟಾ/2024

ಐಸಿಎಆರ್ ಅನುದಾನದ ಅಡಿಯಲ್ಲಿನ "ವಿವಿಧ ಆಹಾರ ವ್ಯವಸ್ಥೆಗಳ ಅಡಿಯಲ್ಲಿ ಮಿಥೇನ್ ಹೊರಸೂಸುವಿಕೆಯ ಅಂದಾಜು ಮತ್ತು ಅದನ್ನು ತಗ್ಗಿಸುವ ಕಾರ್ಯತಂತ್ರಗಳ" ಕುರಿತಾದ ಯೋಜನೆ ಅಡಿಯಲ್ಲಿನ ಸೀನಿಯರ್ ರಿಸರ್ಚ್ ಫೆಲೊ ಹುದ್ದಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತೆ ಇತ್ಯಾದಿಗಳ ಕುರಿತಾದ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸಹಿ/– ಆಡಳಿತಾಧಿಕಾರಿ

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

"ಕೃಷಿಕರ ಜೀವನೋಪಾಯ ಸುಧಾರಿಸುವ ನಿಟ್ಟಿನಲ್ಲಿ, ನಾನ್ ಡಿಸ್ಕ್ರಿಪ್ಟ್ ತಳಿಗಳಲ್ಲಿ ಆನುವಂಶಿಕ ಗುಣಮಟ್ಟ ಹೆಚ್ಚಿಸಲು ಕುರಿಗಳ ಮತ್ತು ಮೇಕೆಗಳ ಭ್ರೂಣಗಳು ಹಾಗೂ ವೀರ್ಯಾಣುವಿನ ಕ್ರೈರೊಪ್ರಿಸರ್ವೇಶನ್" ಎಂಬ ರಾಷ್ಟ್ರೀಯ ಜಾನುವಾರು ಮಿಷನ್ ಅಡಿಯಲ್ಲಿನ ಒಂದು ಸೀನಿಯರ್ ರಿಸರ್ಚ್ ಹುದ್ದೆಗೆ (ಒಂದು ಸಂಖ್ಯೆ) ಅರ್ಜಿಗಳನ್ನು ಸ್ವೀಕರಿಸುವ ದಿನಾಂಕವನ್ನು **03–07–2024**ರ ವರೆಗೆ ವಿಸ್ತರಿಸಲಾಗಿದೆ. ಅರ್ಹತೆ, ಸಂಭಾವನೆ ಇತ್ಯಾದಿ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು, ಈ ಯೋಜನೆಯ ಯೋಜನಾ ಪ್ರಭಾರಿ ಇವರಿಗೆ ashishvet1@gmail.com; ashisvet1@rediffmail.com **03–07–2024** ರೊಳಗೆ, ನಿರ್ದಿಷ್ಟ ನಮೂನೆಯಲ್ಲಿ ತಮ್ಮ ಅರ್ಜಿ ಸಲ್ಲಿಸಬಹುದು. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಇ–ಮೇಲ್/ದೂರವಾಣಿ ಮುಖಾಂತರ ಐಸಿಎಆರ್–ಎನ್‌ಐಎಎನ್‌ಪಿ, ಬೆಂಗಳೂರು ಇಲ್ಲಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ನೀಡಲಾಗುತ್ತದೆ.

ಸಹಿ/– ಎಸ್.ಶಶಿಕಲಾ, ಆಡಳಿತಾಧಿಕಾರಿ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
ಕಾವೇರಿ ಭವನ, 9ನೇ ಮಹಡಿ, ಇ&ಎ ಬ್ಲಾಕ್, ಕೆ.ಜಿ. ರಸ್ತೆ, ಬೆಂಗಳೂರು–560009.
ದೂರವಾಣಿ: 080–23118888

No. RGRHCL/01/AMR/03/2024 ದಿನಾಂಕ: 20-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಜೀವ್ ಗಾಂಧಿ ವಸತಿ ನಿಗಮದ **ಅಧಿಕಾರಿ/ಸಿಬ್ಬಂದಿಗಳ ಮತ್ತು ಅವಲಂಬಿತರಿಗೆ ಗ್ರೂಪ್ ಮೆಡಿಕ್ಲೈಮ್ ಸೌಲಭ್ಯವನ್ನು ಕಲ್ಪಿಸಲು** ಕರ್ನಾಟಕದಲ್ಲಿ ನೊಂದಾಯಿತ ಸಾರ್ವಜನಿಕ ವಿಮಾ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಆಸಕ್ತರು ಖಾಲಿ ಟೆಂಡರ್ ಪ್ರಸ್ತಾವನೆಗಳನ್ನು ದಿನಾಂಕ: **20.06.2024** ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ದಿನಾಂಕ: **27.06.2024ರಂದು ಸಾಯಂಕಾಲ: 05.00 ಗಂಟೆಯವರೆಗೆ** ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ಮಾಹಿತಿ ಪಡೆದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಕಾರ್ಯಕ್ರಮ ಅನುಷ್ಠಾನ)
ರಾಜೀವ್ ಗಾಂಧಿ ವಸತಿ ನಿಗಮ ನಿ.,

DIPR/CP/YC/466/2024-25

ಭಾರತ ಸರ್ಕಾರ
ಕಲ್ಲಿದ್ದಲು ಸಚಿವಾಲಯ,
ನಾಮನಿರ್ದೇಶಿತ ಪ್ರಾಧಿಕಾರ,
120, ಎಫ್–ವಿಂಗ್, 1ನೇ ಮಹಡಿ, ಶಾಸ್ತ್ರಿಭವನ, ನವದೆಹಲಿ–110001.
ಫೋನ್: 011–23384106

"ಕಲ್ಲಿದ್ದಲು ಮಾರಾಟಕ್ಕಾಗಿ ಕಲ್ಲಿದ್ದಲು ಗಣಿಗಳು / ಬ್ಲಾಕ್‌ಗಳ ಹರಾಜಿಗಾಗಿ ಬಿಡ್ ಆಹ್ವಾನ"

ಕಲ್ಲಿದ್ದಲು ಗಣಿಗಳು (ವಿಶೇಷ ನಿಯಮಗಳು) ಕಾಯ್ದೆ, 2015ರ ಸೆಕ್ಷನ್ 4 (1) ಮತ್ತು 4 (2) ಹಾಗೂ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಸೆಕ್ಷನ್ 11ಎ ಅಡಿಯಲ್ಲಿನ ಹಕ್ಕುಗಳನ್ನು ಚಲಾಯಿಸುವ ಮೂಲಕ ಮತ್ತು ಇವುಗಳ ಅಡಿಯಲ್ಲಿನ ನಿಯಮಗಳ ಪ್ರಕಾರ, ಸಿಎಂ (ಎಸ್‌ಪಿ) ಆಕ್ಟ್, 2015ರ ಅಡಿಯಲ್ಲಿನ 20ನೇ ಕಂತಿನ ಅಡಿಯಲ್ಲಿ ಹಾಗೂ ಎಂಎಂಡಿಆರ್ ಆಕ್ಟ್, 1957ರ ಅಡಿಯಲ್ಲಿನ 10ನೇ ಕಂತಿನ ಅಡಿಯಲ್ಲಿ, 60 ಕಲ್ಲಿದ್ದಲು ಗಣಿಗಳ/ಬ್ಲಾಕ್‌ಗಳ ಮತ್ತು ಸಿಎಂ (ಎಸ್‌ಪಿ) ಆಕ್ಟ್, 2015ರ ಅಡಿಯಲ್ಲಿ 19ನೇ ಕಂತಿನ ಎರಡನೇ ಪ್ರಯತ್ನದ ಅಡಿಯಲ್ಲಿನ ಹಾಗೂ ಎಂಎಂಡಿಆರ್ ಆಕ್ಟ್, 1957ರ ಅಡಿಯಲ್ಲಿ 9ನೇ ಕಂತಿನ ಎರಡನೇ ಪ್ರಯತ್ನದ ಅಡಿಯಲ್ಲಿನ 5 ಕಲ್ಲಿದ್ದಲು ಗಣಿಗಳ/ ಬ್ಲಾಕ್‌ಗಳ ಮತ್ತು ಸಿಎಂ(ಎಸ್‌ಪಿ) ಆಕ್ಟ್, 2015ರ ಅಡಿಯಲ್ಲಿ 18ನೇ ಕಂತಿನ ಎರಡನೇ ಪ್ರಯತ್ನದ ಅಡಿಯಲ್ಲಿನ ಹಾಗೂ ಎಂಎಂಡಿಆರ್ ಆಕ್ಟ್, 1957ರ ಅಡಿಯಲ್ಲಿ 8ನೇ ಕಂತಿನ ಎರಡನೇ ಪ್ರಯತ್ನದ ಅಡಿಯಲ್ಲಿನ 2 ಕಲ್ಲಿದ್ದಲು ಗಣಿಗಳ/ ಬ್ಲಾಕ್‌ಗಳ ಹರಾಜು ಪ್ರಕ್ರಿಯೆ ಕೈಗೊಳ್ಳಬೇಕೆಂದು, ಭಾರತ ಸರ್ಕಾರವು ನಾಮನಿರ್ದೇಶಿತ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಶುಕ್ರವಾರ, ಜೂನ್ 21, 2024 ರಂದು ಪ್ರಾರಂಭಿಸಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು ಮತ್ತು ಇನ್ನಿತರ ವಿವರಗಳಿಗಾಗಿ, https://www.mstcecommerce.com/auctionhome/coalblock/index.jsp ಲಿಂಕ್ ಪರಿಶೀಸಲಿಸಬಹುದು.

CBC 04107/11/0001/2425

ಭಾರತ ಸರ್ಕಾರ
ಗ್ರಾಮೀಣಾಭಿವೃದ್ಧಿ ಸಚಿವಾಲಯ, (ಭೂ ಸಂಪನ್ಮೂಲ ಇಲಾಖೆ)
ನಂ. ಎ–12035/01/2023/ಅಡ್ಮಿನ್. (ಇ–3013116)

ಭೂ ಸಂಪನ್ಮೂಲ ಇಲಾಖೆ ಇವರಿಂದ ಕೆಳಕಂಡ ಹುದ್ದೆಗಳಿಗಾಗಿ ಗುತ್ತಿಗೆ ಆಧಾರದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ
1	ಯಂಗ್ ಪ್ರೊಫೆಷನಲ್ (ಜಿಐಎಸ್)	ಒಂದು	ಗುತ್ತಿಗೆ
2	ಯಂಗ್ ಪ್ರೊಫೆಷನಲ್ (ಲೀಗಲ್)	ಎರಡು	
3	ಯಂಗ್ ಪ್ರೊಫೆಷನಲ್ (ಎನರ್ಜಿ ಕ್ರಾಪ್ಸ್)	ಒಂದು	
4	ಯಂಗ್ ಪ್ರೊಫೆಷನಲ್ (ಸ್ಪ್ರಿಂಗ್ ಷೆಡ್ ಡೆವಲಪ್‌ಮೆಂಟ್)	ಒಂದು	

ಅರ್ಹತಾ ಮಾನದಂಡಗಳಾದ ಶೈಕ್ಷಣಿಕ ವಿದ್ಯಾರ್ಹತೆ, ಅನುಭವ, ಬಯೋಡೇಟಾ, ಪ್ರೊಫಾರ್ಮಾ ಇತ್ಯಾದಿಗಳಿಗಾಗಿ, ಅರ್ಜಿದಾರರು ಸದರಿ ಇಲಾಖೆಯ https://dolr.gov.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಸೂಚಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು, ತಾವು ಸಹಿ ಹಾಕಿರುವ ಅರ್ಜಿಯನ್ನು (ಸ್ಕ್ಯಾನ್/ಪಿಡಿಎಫ್) 1) usadmn-dolr@gov.in 2) th.lianboi@nic.in ಇಮೇಲ್ ಐಡಿಗೆ ಮಾತ್ರ ರವಾನಿಸುವುದು. ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 15 ದಿನಗಳು, ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಆಗಿರುತ್ತದೆ.

(ಅರ್ಜುನ್ ರಾಣಾ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ
ಫೋನ್: 011–23044653

CBC 35201/11/0002/2425

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052.

ಸಂಖ್ಯೆ: STRRPA/Accounts/01/2023-24 ದಿನಾಂಕ: 20-06-2024

ಪ್ರಕಟಣೆ

ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಹರಾಜು ಪ್ರಕಟಣೆಯನ್ನು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **www.kppp.karnataka.gov.in** ಭೇಟಿ ನೀಡಬಹುದಾಗಿದೆ.

Auction Notice No: TPA/2024-25/AUCTION20

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ,
ಬೆಂಗಳೂರು.

ವಾಸಾಸಂಇ/ವಾ.ಪ್ರ/461/ಅಡ್ವರ್ಟೋರ್/2024–25

PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of **Mr. Zainuddin M Thakur ("Owner")**, with respect to the properties bearing Municipal (i) Khata No. 298/294/346/48/4B/4C measuring 8193.75 Sq Ft and (ii) Khata No. 299/295/347/48/4B measuring 7790 Sq Ft, admeasuring 15983.75 Sq Ft, situated at Hongasandra Village, Begur Hobli, Bangalore South Taluk, presently under the revenue jurisdiction of BBMP Ward No. 190, Mangammanapalya, Garvebhavipalya, which is more particularly described in the Schedule hereunder written and hereinafter referred to as **"Schedule Property"**. Our client (**"Client"**) is desirous of entering into a sale transaction of the Schedule Property with **Mr. Zainuddin M Thakur** who has represented to our Client that he is the absolute owner of the Schedule Property with absolute rights of alienation over the same.

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, bequest, succession, family arrangement, grant, possession, lease, sub-lease tenancy, sub-tenancy, maintenance easement, license, bequeath, share, assignment, lien, attachment, development rights, covenant, settlement right of way, lis pendens, reservation, agreement, FSI consumption, development rights, order/decree/judgement of court or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road, Bengaluru – 560 025 within a period of 14 (Fourteen) days from the date of publication of this notice, failing which, the claim or claims, if any, of such person or persons shall be considered to have been waived and/or abandoned and our Client would be at liberty to proceed with the sale transaction in connection with the Schedule Property.

SCHEDULE PROPERTY

All that piece and parcel of properties bearing Municipal (i) Khata No. 298/294/346/48/4B/4C measuring 8193.75 Sq Ft and (ii) Khata No.299/295/347/48/4B measuring 7790 Sq Ft, admeasuring 15983.75 Sq Ft, situated at Hongasandra Village, Begur Hobli, Bangalore South Taluk, presently under the revenue jurisdiction of BBMP Ward No. 190, Mangammanapalya, Garvebhavipalya, together bounded on the:

EAST : By Private Property; **WEST** : Optima Lamps Co. Property;
NORTH : Kudlu road ; and **SOUTH** : Subbaiah Pillai Company's property.

Dated : 21/06/2024.

Mr. S T Prashantha Kumar, Senior Partner
Mr. B C Keerthi Kishore, Group Head
Fox Mandal & Associates, Solicitors & Advocates,
FM House, 6/12, Primrose Road, Bangalore – 560025, Karnataka, India. Phone: +91 80 2559 5911
Email: prashantha.kumar@foxmandal.in

ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ₹1,860.17 ಕೋಟಿ ಬಾಕಿ • ತೆರಿಗೆ ಸಂಗ್ರಹಿಸಿದವರಿಗೆ ಶೇ 5 ಕಮಿಷನ್

ಆಸ್ತಿ ತೆರಿಗೆ ಸಂಗ್ರಹಕ್ಕೆ ಸ್ವಸಹಾಯ ಗುಂಪು ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳು, ಮಹಾನಗರ ಪಾಲಿಕೆಗಳು, ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ಮತ್ತು ನಾಲ್ಕು ಅಧಿಸೂಚಿತ ಪ್ರದೇಶಗಳಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಿ ಮಾಡಲು ಸ್ಥಳೀಯ ಸ್ವಸಹಾಯ ಗುಂಪುಗಳ ಸೇವೆ ಪಡೆಯಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, ಈ ಎಲ್ಲ ಸ್ಥಳೀಯ ಸಂಸ್ಥೆಗಳಿಂದ ಆಸ್ತಿ ತೆರಿಗೆ ಒಟ್ಟು ₹1,860.17 ಕೋಟಿ ಬಾಕಿ ಇದೆ. ಅಷ್ಟನ್ನೂ ವಸೂಲು ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ಸ್ವಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು, ಸ್ತ್ರೀಶಕ್ತಿ ಗುಂಪುಗಳ ಸೇವೆಯನ್ನು ಬಳಸಿಕೊಂಡು ನೀರಿನ ಶುಲ್ಕ ಮತ್ತು ಆಸ್ತಿ ತೆರಿಗೆಯನ್ನು ಬಡ್ಡಿ ಸಮೇತ ಬಾಕಿ ವಸೂಲು ಮಾಡಲಾಗುವುದು. ವಸೂಲಾದ ಮೊತ್ತದ ಶೇ 5ರಷ್ಟು ಕಮಿಷನ್‌ನನ್ನು ವಸೂಲಿ ಮಾಡಿದವರಿಗೆ ನೀಡಲು ನಿರ್ಧರಿಸಲಾಗಿದೆ ಎಂದರು.

315 ನಗರ ಸ್ಥಳೀಯ ಸಂಸ್ಥೆಗಳು, 10 ಮಹಾನಗರ ಪಾಲಿಕೆಗಳು, 61 ನಗರ ಸಭೆಗಳು, 114 ಪಟ್ಟಣ ಪಂಚಾಯಿತಿಗಳು ಹಾಗೂ 4 ಅಧಿಸೂಚಿತ ಪ್ರದೇಶಗಳಲ್ಲಿ ಆಸ್ತಿ ತೆರಿಗೆ ವಸೂಲಿಯ ಹೊಣೆಯನ್ನು ಸ್ವಸಹಾಯ ಸಂಘಗಳಿಗೆ ವಹಿಸಲಾಗುತ್ತದೆ ಎಂದು ಪಾಟೀಲ ಹೇಳಿದರು.

7,110 ಕಿ.ಮೀ ಗ್ರಾಮೀಣ ರಸ್ತೆಗೆ ಒಪ್ಪಿಗೆ

ಪ್ರಗತಿ ಪಥ ಯೋಜನೆಯಡಿ 7,110 ಕಿ.ಮೀ ಗ್ರಾಮೀಣ ರಸ್ತೆಗಳನ್ನು ₹5,190 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದಕ್ಕಾಗಿ ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯಲು ತೀರ್ಮಾನಿಸಲಾಗಿದೆ.

ಪಿಎಂಜಿಎಸ್‌ವೈ ಮತ್ತು ಎನ್‌ಜಿಎನ್‌ಆರ್‌ವೈ 1,500 ಕಿ.ಮೀ ರಸ್ತೆ ಮತ್ತು ಡಿಆರ್‌ಆರ್‌ಪಿಯಿಂದ ಪರಿಗಣಿಸಿದ, ಹಾಳಾಗಿರುವ ಬಿಟಿಡಬ್ಲ್ಯೂಎಂ ಪದರ ರಸ್ತೆಗಳು 5,610 ಕಿ.ಮೀ(ಒಟ್ಟು 7110) ಈ ಯೋಜನೆಯಡಿ ಸೇರಿವೆ ಎಂದು ಸಚಿವ ಎಚ್‌.ಕೆ.ಪಾಟೀಲ ವಿವರ ನೀಡಿದರು.

ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾದ ಪ್ರಮುಖ ತೀರ್ಮಾನಗಳು

- ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ ಯೋಜನೆಯನ್ನು ರಾಜ್ಯದ ಆರು ವಿಶ್ವವಿದ್ಯಾಲಯಗಳಲ್ಲಿ ₹279.77 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಒಪ್ಪಿಗೆ. ಕೇಂದ್ರ ಸರ್ಕಾರ ₹167.86 ಕೋಟಿ ಮತ್ತು ರಾಜ್ಯ ಸರ್ಕಾರ ₹111.91 ಕೋಟಿ ಭರಿಸಲಿವೆ. ಬೆಂಗಳೂರು ವಿಶ್ವವಿದ್ಯಾಲಯ, ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವ ವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕಲಬುರಗಿ ವಿಶ್ವವಿದ್ಯಾಲಯ, ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಸೌಲಭ್ಯ ಸಿಗಲಿದೆ.
- ಎಂಟು ಜಿಲ್ಲೆಗಳಲ್ಲಿರುವ 201 ಕೆಆರ್‌ಐಎಸ್ ವಸತಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮ ರೋಟರಿ ಇಂಟರ್‌ನ್ಯಾಷನಲ್ ಸಹಭಾಗಿತ್ವದಲ್ಲಿ ನಡೆಸಲಾಗುವುದು. ಇದಕ್ಕೆ ₹2.37 ಕೋಟಿ ವೆಚ್ಚವಾಗಲಿದ್ದು, ರೋಟರಿ ಇಂಟರ್‌ನ್ಯಾಷನಲ್ ₹1.87 ಕೋಟಿ ಮತ್ತು ಕೆಆರ್‌ಐಎಸ್ ಸಂಸ್ಥೆ ₹49.89 ಲಕ್ಷ ಭರಿಸಲಿವೆ.
- ಮೈಸೂರಿನ ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ನೂತನ ಹೊರ ರೋಗಿ ವಿಭಾಗದ ಕಟ್ಟಡ ಕಾಮಗಾರಿ ₹75 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
- ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುಸನೂರ ವಸತಿ ಯೋಜನೆಯಲ್ಲಿ ಕುಸನೂರು ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ವಸತಿ ಅಭಿವೃದ್ಧಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ₹122.40 ಕೋಟಿಗೆ ಒಪ್ಪಿಗೆ.
- ಹಾಸನ ಜಿಲ್ಲೆ ಮೊಸಳೆ ಹೊಸಳ್ಳಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ₹59.57 ಕೋಟಿ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.

ಶ್ರೀಧರ್ ತಂದೆಯ ವಿಚಾರಣೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬಗ್ಗನ ದೊಡ್ಡಿಯ ಸಮೀಪದಲ್ಲಿರುವ ನಟ ದರ್ಶನ್ ಒಡೆತನದ ಫಾರ್ಮ್‌ಹೌಸ್‌ನಲ್ಲಿ ಎರಡು ತಿಂಗಳ ಹಿಂದೆ ನಡೆದ ಸಿಬ್ಬಂದಿ ಶ್ರೀಧರ್ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಆನೇಕಲ್ ಪೊಲೀಸರು ಚುರುಕುಗೊಳಿಸಿದ್ದಾರೆ.

ಪೊಲೀಸರು ಶ್ರೀಧರ್ ತಂದೆ ಸಿದ್ಧಪ್ಪ ಮತ್ತು ಅಕ್ಕ ರೂಪಾ ಅವರನ್ನು ಠಾಣೆಗೆ ಕರೆಸಿಕೊಂಡು ಮಾಹಿತಿ ಪಡೆಯುತ್ತಿದ್ದಾರೆ. ಶ್ರೀಧರ್ ಬಳಸುತ್ತಿದ್ದ ಮೊಬೈಲ್ ಫೋನ್ ಕೂಡ ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ನನ್ನ ಮಗ ಶ್ರೀಧರ್ ಫಾರ್ಮ್‌ಹೌಸ್‌ನ ಮೇಲ್ವಿಚಾರಕನಾಗಿರಲಿಲ್ಲ. ಫಾರ್ಮ್‌ಹೌಸ್‌ನಲ್ಲಿ ಕಟ್ಟಡ ನಿರ್ಮಿಸುತ್ತಿರುವ ದುರ್ಗಾ ಕನ್‌ಸ್ಟ್ರಕ್ಷನ್ ಖಾಸಗಿ ನಿರ್ಮಾಣ ಕಂಪನಿಯ ಉದ್ಯೋಗಿಯಾಗಿದ್ದ. ಫಾರ್ಮ್‌ಹೌಸ್‌ನಲ್ಲಿ ನಿರ್ಮಿಸುತ್ತಿರುವ ಕಟ್ಟಡದ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದ.

ಆದರೆ, ಕಂಪನಿಯವರು ಆತನಿಗೆ ಒಂದು ವರ್ಷದಿಂದ ಸಂಬಳವನ್ನೇ ನೀಡಿರಲಿಲ್ಲ. ನಿವೇಶನ ನೀಡುವುದಾಗಿ ಭರವಸೆ ನೀಡಿದ್ದರು’ ಎಂದು ಸಿದ್ಧಪ್ಪ ಅವರು ಪೊಲೀಸರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ದರ್ಶನ್ ಒಡೆತನದ ಫಾರ್ಮ್‌ಹೌಸ್‌ನಲ್ಲಿ ಕಳೆದ ಏಪ್ರಿಲ್ 16ರಂದು ಶ್ರೀಧರ್ ಮರಣಪತ್ರ ಬರೆದಿಟ್ಟು, ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

‘ಆತ್ಮಹತ್ಯೆಗೆ ಒಂಟಿತನ ಕಾರಣ. ಯಾರಿಗೂ ತೊಂದರೆ ಕೊಡಬೇಡಿ’ ಎಂದು ಅದರಲ್ಲಿ ಬರೆದಿದ್ದರು. ಅದನ್ನೇ ಮೊಬೈಲ್‌ನಲ್ಲಿ ವಿಡಿಯೊ ಸಹ ಮಾಡಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠ ಮಲ್ಲಿಕಾರ್ಜುನ ಬಾಲದಂಡಿ ಅವರು ಈಚೆಗೆ ಶ್ರೀಧರ್ ಅಸಹಜ ಸಾವು ಪ್ರಕರಣದ ಕಡತ, ಮರಣೋತ್ತರ ಶವಪರೀಕ್ಷೆಗೆ ಸಂಬಂಧಿಸಿದ ಎಫ್‌ಎಸ್‌ಎಲ್ ವರದಿ ತರಿಸಿಕೊಂಡು ಪರಿಶೀಲಿಸಿದ್ದರು.

‘ಹೊರ ರಾಜ್ಯದವರು ಕನ್ನಡ ಕಲಿಯಲಿ’

ಭುವನೇಶ್ವರಿ ಪ್ರತಿಮೆ ಭೂಮಿಪೂಜೆ ಬಳಿಕ ಸಿ.ಎಂ ಸಿದ್ದರಾಮಯ್ಯ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ನೆಲೆಸಿರುವ ಹೊರ ರಾಜ್ಯದವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು. ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡಲು ಎಲ್ಲರೂ ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ನಿರ್ಮಿಸ ಲಾಗುತ್ತಿರುವ ಭುವನೇಶ್ವರಿ ದೇವಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪನೆಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕನ್ನಡಿಗರು ಉದಾರಿಗಳು. ಹಾಗಾಗಿ, ಬೇರೆ ಭಾಷೆ ಮಾತನಾಡುವವರೂ ಕನ್ನಡ ಕಲಿಯದೆ ಬದುಕುವ ವಾತಾವರಣ ಕರ್ನಾಟಕದಲ್ಲಿದೆ. ಅವರಿಗೆ ಕನ್ನಡ ಕಲಿಸಬೇಕು. ನೆರೆಯ ರಾಜ್ಯದವರಂತೆ ಕನ್ನಡಿಗರು ಭಾಷಾ ದುರಭಿಮಾನ ಬೆಳೆಸಿಕೊಳ್ಳದೆ, ಕನ್ನಡ ಪ್ರೀತಿ, ಅಭಿಮಾನ ಉಳಿಸಿಕೊಂಡರೆ ಸಾಕು ಎಂದರು.

‘ತಮಿಳುನಾಡು, ಆಂಧ್ರ, ಕೇರಳದ ಜನರು ಮಾತೃಭಾಷೆಯಲ್ಲೇ ಮಾತನಾಡುತ್ತಾರೆ. ಕರ್ನಾಟಕದಲ್ಲೂ ಮಾತೃಭಾಷೆಯಲ್ಲೇ ವ್ಯವಹಾರ ಮಾಡಬೇಕು. ಕನ್ನದಲ್ಲಿಯೇ ಮಾತನಾಡುತ್ತೇನೆ. ಕನ್ನಡ ಬಿಟ್ಟು ಬೇರೆ ಭಾಷೆ ಮಾತನಾಡುವುದಿಲ್ಲ ಎಂದು ತೀರ್ಮಾನ ಮಾಡಬೇಕು. ಅದು ನಮಗೆ ಹೆಮ್ಮೆಯ ವಿಷಯವಾಗಬೇಕು’ ಎಂದು ಹೇಳಿದರು.

ಮೈಸೂರು ರಾಜ್ಯ ಕರ್ನಾಟಕವೆಂದು ಮರು ನಾಮಕರಣಗೊಂಡು 50 ವರ್ಷಗಳಾಗುತ್ತಿದೆ. ಅದಕ್ಕಾಗಿ ಕನ್ನಡ ತಾಯಿ ಭುವನೇಶ್ವರಿಯ ಕಂಚಿನ ಪ್ರತಿಮೆ ಸ್ಥಾಪಿಸ ಲಾಗುತ್ತಿದೆ. ನವೆಂಬರ್ 1ರ ಒಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಕಾನೂನು ಸಚಿವ ಎಚ್‌.ಕೆ. ಪಾಟೀಲ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಿದ್ದರು.

ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ಭುವನೇಶ್ವರಿ ದೇವಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಭೂಮಿಪೂಜೆ ನೆರವೇರಿಸಿದರು

ಚಿತ್ರದುರ್ಗದಲ್ಲಿ ಜುಲೈ 18ರಂದು ಬೋವಿ ಜನೋತ್ಸವ

ಬೆಂಗಳೂರು: ಚಿತ್ರದುರ್ಗದ ಬೋವಿ ಗುರುಪೀಠದಲ್ಲಿ ಜುಲೈ 18ರಂದು ರಾಜ್ಯಮಟ್ಟದ ಬೃಹತ್ ಬೋವಿ ಜನೋತ್ಸವ, ಗುರುಗಳ ಜನ್ಮದಿನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಲು ಗುರುವಾರ ನಡೆದ ಸಮಾಜದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ನಗರದ ಜಸ್ಮಾ ಭವನದಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಭೆ ನಡೆಯಿತು.

ಸಮಾಜದ ಸಂಘಟನೆಯ ದೃಷ್ಟಿಯಿಂದ ಬೋವಿ ಜನೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಬೇಕು. ಸಮುದಾಯದ ನೂತನ ಸಂಸದರು, ನಿಗಮ ಮಂಡಳಿ ಅಧ್ಯಕ್ಷರ ಗೌರವ ಸಮರ್ಪಣೆ ಮತ್ತು ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಗೊಂಡ ಅಭ್ಯರ್ಥಿಗಳ ಸನ್ಮಾನ ಕಾರ್ಯಕ್ರಮ ಆಯೋಜಿಸಿ, ಈ ಸಮಾರಂಭದಲ್ಲಿ ಸಮಾಜದ ಜನರನ್ನು ತೊಡಗಿಸಿಕೊಳ್ಳಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರು ಸಲಹೆ ನೀಡಿದರು.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿ, ‘ಸಂಘಟನೆಗೊಂಡ ಸಮಾಜ ಮಾತ್ರ ಎಲ್ಲ ರಂಗಗಳಲ್ಲಿಯೂ ಮುಖ್ಯವಾಹಿನಿಗೆ ಬಂದಿದೆ. ಇದನ್ನರಿತು ಬಾಬಾ ಸಾಹೇಬರ ನುಡಿಯಂತೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಆದ್ಯತೆ ನೀಡಬೇಕು. ಎಲ್ಲ ರಂಗಗಳ ಸಾಧಕರನ್ನು ಗುರುತಿಸುವ ಹಾಗೂ ಪ್ರೋತ್ಸಾಹಿಸುವ ಕ್ಷೇತ್ರವಾಗಿ ಬೋವಿ ಗುರುಪೀಠ ಕಾರ್ಯ ನಿರ್ವಹಿಸುತ್ತಿದೆ. ಬೋವಿ ಸಮಾಜದ ಭೂತ, ವರ್ತಮಾನ, ಭವಿಷ್ಯ ದಿಕ್ಸೂಚಿ ಮಹಾಸಂಗಮವೇ ಬೋವಿ ಜನೋತ್ಸವ’ ಎಂದು ಬಣ್ಣಿಸಿದರು.

ಅಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ

‘ಗುಣಮಟ್ಟದ ಆರೋಗ್ಯ ಸೇವೆ ಒದಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುಣಮಟ್ಟದ ಆರೋಗ್ಯ ಸೇವೆಗಳನ್ನು ಜನರಿಗೆ ತಲುಪಿಸುವಲ್ಲಿ ಹೆಚ್ಚಿನ ಗಮನ ಹರಿಸಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆಯ ಉಪ ನಿರ್ದೇಶಕರು ಹಾಗೂ ವಿವಿಧ ಕಾರ್ಯ ಕ್ರಮಗಳ ಅಧಿಕಾರಿಗಳೊಂದಿಗೆ ನಗರದಲ್ಲಿ ಗುರುವಾರ ಸಭೆ ನಡೆಸಿದ ಅವರು, ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

‘ರಾಷ್ಟ್ರೀಯ ಆರೋಗ್ಯ ಯೋಜನೆ ಯಡಿ ಜಾರಿಯಲ್ಲಿರುವ ಆರೋಗ್ಯ ಸೇವೆಗಳು ಹೆಚ್ಚು ಪ್ರಗತಿ ಕಂಡಿಲ್ಲ. ಹಲವು ಸೇವೆಗಳು ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನಗೊಂಡಿಲ್ಲ. ಯೋಜನೆಯಡಿ ದೊರೆಯುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ ಎಂದಾದರೆ ಆರೋಗ್ಯ ಸೇವೆಗಳು ಸಮರ್ಪಕವಾಗಿ ತಲುಪಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿ, ಹಲವು ಬಿಲ್‌ಗಳನ್ನು ಪಾವತಿಸದೆ ಬಾಕಿ ಇಟ್ಟಿರು ವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

‘ಅನುದಾನವನ್ನು ಸರಿಯಾಗಿ ಖರ್ಚು ಮಾಡದಿದ್ದರೆ ಏನು ಪ್ರಯೋಜನ? ಟೆಂಡರ್ ಪ್ರಕ್ರಿಯೆಗಳನ್ನು ಮಾರ್ಚ್‌ವರೆಗೆ ಏಕೆ ಎಳೆದುಕೊಂಡು ಹೋಗುತ್ತಿದ್ದೀರಿ’ ಎಂದು ಅಧಿಕಾರಿ ಗಳನ್ನ ಪ್ರಶ್ನಿಸಿದರು.

‘ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೊ ಅಂತಹವರ ವಿರುದ್ಧ ಕ್ರಮಕೈಗೊಳ್ಳಲು ನಾನು ಹಿಂಜರಿ ಯುವುದಿಲ್ಲ. ಯಾರ ಒತ್ತಡದಿಂದಲೂ ನಾನು ಅಧಿಕಾರಿಯನ್ನು ನೇಮಿಸಿಲ್ಲ. ಕಾರ್ಯದಕ್ಷತೆ ತೋರದಿರುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾಸ್ಪತ್ರೆಗಳಲ್ಲಿ ಕಾರ್ಯವೈಖರಿ, ಇ-ಆಫೀಸ್, ಟೆಲಿ ಐಸಿಯು, ಆಯುಷ್ಮಾನ್ ಭಾರತ್ ಯೋಜನೆಯ ರೆಫರಲ್ ಪದ್ಧತಿ ಬಗ್ಗೆ ಚರ್ಚಿಸಲು ಸಭೆ ಆಯೋಜಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್, ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಪಾಲ್ಗೊಂಡಿದ್ದರು.

ಆರೋಗ್ಯ ಇಲಾಖೆಯ ಅಧಿಕಾರಿಗಳ ಜತೆಗೆ ಸಚಿವ ದಿನೇಶ್ ಗುಂಡೂರಾವ್ ಅವರು ಗುರುವಾರ ಸಭೆ ನಡೆಸಿದರು

ಮುಖ್ಯಾಂಶಗಳು

- ಅಧಿಕಾರಿಗಳ ಕಾರ್ಯವೈಖರಿಗೆ ಕಿಡಿ
- ಸರಿಯಾಗಿ ಕೆಲಸ ಮಾಡದಿದ್ದರೆ ಕ್ರಮದ ಎಚ್ಚರಿಕೆ

‘ಆಸ್ಪತ್ರೆ ಹಣ: ಜಮೆ ವಿಳಂಬವಾದಲ್ಲಿ ಕ್ರಮ’

ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಆರೋಗ್ಯ ರಕ್ಷಾ ಸಮಿತಿಯ (ಯೂಸರ್ಸ್ ಚಾರ್ಜ್) ಹಣವನ್ನು ಪ್ರತಿ ದಿನ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಹಣ ಜಮಾ ಮಾಡುವುದು ವಿಳಂಬವಾದಲ್ಲಿ ಅಥವಾ ದುರುಪಯೋಗ ಮಾಡಿಕೊಂಡಲ್ಲಿ ಕಾನೂನಿನ ಅಡಿ ಕ್ರಮ ಜರುಗಿಸಲಾಗುವುದು ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಎಚ್ಚರಿಕೆ ನೀಡಿದ್ದಾರೆ.

ತುಮಕೂರು ಜಿಲ್ಲಾ ಆಸ್ಪತ್ರೆ ಆರೋಗ್ಯ ರಕ್ಷಾ ಸಮಿತಿಯ ಹಣ ದುರುಪಯೋಗ ದಿಂದಾಗಿ ಅವರು ಈ ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಯಲ್ಲಿ ಹೊರರೋಗಿ ವಿಭಾಗದ ಚೀಟಿ ಹಂಚುವ ಕಾರ್ಯವನ್ನು ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿರುವ ಡಿಇಒಗಳಿಗೆ ವಹಿಸಲಾಗಿದೆ. ಇವರು ಸಂಗ್ರಹವಾಗುವ ಹಣವನ್ನು ಸಂಬಂಧಪಟ್ಟ ಆಡಳಿತ ವಿಭಾಗದ ಕಾಯಂ ನೌಕರರಿಗೆ ಒಪ್ಪಿಸಬೇಕು. ಅವರು ಇ–ಆಸ್ಪತ್ರೆಯಲ್ಲಿ ನಮೂದಾಗಿರುವ ಲೆಕ್ಕದ ಪ್ರಕಾರ ಹಣವನ್ನು ಮೇಲ್ವಿಚಾರಕ ಸಿಬ್ಬಂದಿ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು, ಬ್ಯಾಂಕ್ ಖಾತೆಗೆ ನಿಗದಿತ ಸಮಯದೊಳಗೆ ಜಮೆ ಮಾಡಬೇಕು ಎಂದು ಹೇಳಿದ್ದಾರೆ.

ಸಂಗ್ರಹಿಸಿದ ಹಣವನ್ನು ಯಾವುದೇ ಸಂದರ್ಭದಲ್ಲಿ ಅನಗತ್ಯ ವಿಳಂಬವಿಲ್ಲದೆ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಈ ಪ್ರಕ್ರಿಯೆಯಲ್ಲಿ ವಿಳಂಬವಾದಲ್ಲಿ, ಹಣ ದುರುಪಯೋಗವಾದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರು, ತಾಲ್ಲೂಕು ಮಟ್ಟದಲ್ಲಿ ಆಡಳಿತ ವೈದ್ಯಾಧಿಕಾರಿಗಳು ಮತ್ತು ಆಡಳಿತ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ, ಅಧಿಕಾರಿ ವರ್ಗದವರು ನೇರವಾಗಿ ಹೊಣೆಯಾಗುತ್ತಾರೆ ಎಂದು ತಿಳಿಸಿದ್ದಾರೆ.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬಾಣಸವಾಡಿ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವ ಕಾರಣ ಸುತ್ತಮುತ್ತಲ ಪ್ರದೇಶಗಳಲ್ಲಿ ಜೂನ್ 22ರಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಹೊರಮಾವು ಪಿ ಆ್ಯಂಡ್ ಟಿ ಬಡಾವಣೆ, ನಿಸರ್ಗ ಕಾಲೊನಿ, ನಂದನಂ ಕಾಲೊನಿ, ಆಶೀರ್ವಾದ್ ಕಾಲೊನಿ, ಜ್ಯೋತಿನಗರ, ಆಗರ, ಬಾಲಾಜಿ ಲೇಔಟ್, ಚಿನ್ನಸ್ವಾಮಪ್ಪ ಲೇಔಟ್, ಕೊಕೊನಟ್ ಗ್ರೋವ್, ದೇವಮಾತ ಶಾಲೆ, ವಿಜಯ ಬ್ಯಾಂಕ್ ಕಾಲೊನಿ ಎಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣನಗರ, ಬಿ.ಡಬ್ಲ್ಯೂಎಸ್ ಎಸ್‌ಬಿ ವಾಟರ್ ಟ್ಯಾಂಕ್, ಹೆಣ್ಣೂರು ಗ್ರಾಮ, ಚೆಳ್ಳಿಕೆರೆ, ಮೇಘನ ಪಾಳ್ಯ, ಗೆದ್ದಲಹಳ್ಳಿ, ಕೊತ್ತನೂರು, ವಡ್ಡರ ಪಾಳ್ಯಗಳಲ್ಲಿ ಈ ಸಮಯದಲ್ಲಿ ವಿದ್ಯುತ್ ಸ್ಥಗಿತಗೊಳ್ಳಲಿದೆ.

ಜಾನಕೀರಾಮ್ ಲೇಔಟ್, ಬಿ.ಡಿ.ಎಸ್. ಗಾರ್ಡನ್, ಸತ್ಯಎನ್‌ಕ್ಲೇವ್, ಪ್ರಕೃತಿ ಲೇಔಟ್ ಹೊಯ್ಸಳನಗರ, ಬೃಂದಾವನ ಲೇಔಟ್, ವಿನಾಯಕ ಲೇಔಟ್, ವಿವೇಕಾನಂದ ಲೇಔಟ್, ಮಂಜುನಾಥ ನಗರ ರಸ್ತೆ, ಎನ್‌ಆರ್‌ಐ ಲೇಔಟ್, ಸುಂದರಾಂಜನೇಯ ದೇವಸ್ಥಾನ, ಡಬಲ್ ರಸ್ತೆ, ಪುಣ್ಯಭೂಮಿ ಲೇಔಟ್, ಸಮದ್ ಲೇಔಟ್, ಯಾಸಿನ್‌ನಗರ, ಪಿಎನ್‌ಎಸ್ ಲೇಔಟ್, ಕುಳ್ಳಪ್ಪ ಸರ್ಕಲ್, 5ನೇ ಮುಖ್ಯರಸ್ತೆ, ಎಚ್‌ಬಿಆರ್ 2ನೇ ಬ್ಲಾಕ್, ರಾಜ್‌ಕುಮಾರ್ ಪಾರ್ಕ್, ಸಂಗೊಳ್ಳಿ ರಾಯಣ್ಣರಸ್ತೆ, ನೆಹರೂ ರಸ್ತೆ, 80ಅಡಿರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆಗಳಲ್ಲಿ ವಿದ್ಯುತ್ ಇರುವುದಿಲ್ಲ.

ಮರಿಯಪ್ಪ ಸರ್ಕಲ್, ಕೆ.ಕೆ.ಹಳ್ಳಿ ಡಿಪೊ, ಸಿ.ಎಂ.ಆರ್.ರಸ್ತೆ, ನಂಜುಂಡಪ್ಪರಸ್ತೆ, ಕರಾವಳ್ಳಿ ರಸ್ತೆ, ರಾಮಯ್ಯ ಲೇಔಟ್, ಅಜಮಲ್ಲಪ್ಪ ಲೇಔಟ್, ದೊಡ್ಡ ಬಾಣಸವಾಡಿ, ರಾಮಮೂರ್ತಿನಗರ ಮುಖ್ಯರಸ್ತೆ, ಕೃಷ್ಣರೆಡ್ಡಿ ಲೇಔಟ್, ಗೋಪಾಲರೆಡ್ಡಿ ಲೇಔಟ್, ಚಿಕ್ಕ ಬಾಣಸವಾಡಿ, ಸುಬ್ಬಯ್ಯನಪಾಳ್ಯ, ಒಎಂಬಿಆರ್ 2ನೇ, 5ನೇ, 6ನೇ ಕ್ರಾಸ್, 100 ಅಡಿರಸ್ತೆ ಬಾಣಸವಾಡಿ, ಗ್ರೀನ್ ಪಾರ್ಕ್ ಲೇಔಟ್ ಫ್ಲವರ್ ಗಾರ್ಡನ್, ಎಂ.ಎಂ. ಗಾರ್ಡನ್, ದಿವ್ಯ ಉನ್ನತಿ ಲೇಔಟ್, ಪ್ರಕೃತಿ ಟೌನ್‌ಶಿಪ್, ಮಲ್ಲಪ್ಪ ಲೇಔಟ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಗೊಳ್ಳಲಿದೆ.

ಬೈರತಿ, ಕ್ಯಾಲಸನಹಳ್ಳಿ ಗ್ರಾಮ, ನಕ್ಷತ್ರ ಲೇಔಟ್, ಬೈರತಿ ಬಂಡೆ, ಸಂಗಂ ಎನ್‌ಕ್ಲೇವ್, ಅಥಂ ವಿದ್ಯಾನಗರ, ಬೈರತಿ ಹಳ್ಳಿ, ಕನಕಶ್ರೀ ಲೇಔಟ್, ಗುಬ್ಬಿಕ್ರಾಸ್, ಬಾಬೂಸಾ ಪಾಳ್ಯ, ಬ್ಯಾಂಕ್ ಅವೆನ್ಯೂ ಲೇಔಟ್, ನಂಜಪ್ಪ ಗಾರ್ಡನ್, ಸಿಎನ್ ಆರ್ ಲೇಔಟ್, ಆರ್.ಎಸ್. ಪಾಳ್ಯ, ಮುನಿಕಲ್ಲಪ್ಪ ಗಾರ್ಡನ್, ಹನುಮಂತಪ್ಪ ರಸ್ತೆ, ಮುನೇಗೌಡರಸ್ತೆ, ಸತ್ಯಮೂರ್ತಿ ರಸ್ತೆ, ಜೆ.ವಿ. ಶೆಟ್ಟಿ ರಸ್ತೆ, ಕುವೆಂಪು ರಸ್ತೆ, ಸದಾಶಿವ ದೇವಸ್ಥಾನದ ರಸ್ತೆ, ಗುರುಮೂರ್ತಿ ರಸ್ತೆ, ಗುಳ್ಳಪ್ಪ ರಸ್ತೆ, ಕಮ್ಮನಹಳ್ಳಿ ಸಂಪಣ್ಣ ರಸ್ತೆ ಎಡಿಎಂಸಿ ಮಿಲಿಟರಿ, ಬಂಜಾರ ಲೇಔಟ್, ಎನ್.ಪಿ.ಎಸ್., ಬೆಥೆಲ್ ಲೇಔಟ್, ಸಮೃದ್ಧಿ ಲೇಔಟ್, ವಾಟರ್ ಟ್ಯಾಂಕ್, ಕಲ್ಕೆರೆ, ಜಯಂತಿನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸ್ಥಗಿತಗೊಳ್ಳಲಿದೆ.

ರಸ್ತೆ, ಮೇಲ್ಸೇತುವೆಗಳಲ್ಲೇ ನಿಂತ ನೀರು; ಸಂಚಾರಕ್ಕೆ ಅಡ್ಡಿ, ವಾಹನ ಸವಾರರ ಪರದಾಟ

ಮಳೆ: ಬಿಬಿಎಂಪಿ ಭರವಸೆ ಹುಸಿ

ನಗರದ ಕಬ್ಬನ್ ಪಾರ್ಕ್– ನಮ್ಮ ಮೆಟ್ರೊ ನಿಲ್ದಾಣದ ಬಳಿ ಗುರುವಾರ ಸುರಿದ ಮಳೆಗೆ ರಾಜಭವನದ ರಸ್ತೆಯಲ್ಲಿ ನಿಂತ ನೀರಿನಲ್ಲಿ ಸಂಚರಿಸಿದ ವಾಹನ ಸವಾರರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಕಸ್ತೂರಬಾ ರಸ್ತೆಯಲ್ಲಿ ಮಳೆನೀರಿನೊಂದಿಗೆ ಮ್ಯಾನ್‌ಹೋಲ್‌ನ ಕೊಳಕು ನೀರೂ ರಸ್ತೆಯಲ್ಲೇ ನಿಂತಿತ್ತು ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಗುರುವಾರ ಸಾಧಾರಣ ಮಳೆಯಾಗಿದೆ. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಹೆಚ್ಚು ಮಳೆಯಾಗಿದ್ದು, ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರಿಗೆ ಸಂಕಷ್ಟ ಉಂಟಾಯಿತು. 'ಯಾವುದೇ ಸಮಸ್ಯೆಯಾಗುವುದಿಲ್ಲ' ಎಂಬ ಬಿಬಿಎಂಪಿ ಭರವಸೆ ಹುಸಿಯಾಗಿದೆ.

'ಮಳೆಗಾಲಕ್ಕೆ ಎಲ್ಲ ರೀತಿಯ ಮುಂಜಾಗ್ರತೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ರಸ್ತೆಗಳಲ್ಲಿ ನೀರು ನಿಲ್ಲದಂತೆ ಸ್ವಚ್ಛತಾ ಕಾರ್ಯ ನಡೆಸಲಾಗಿದೆ. ಎರಡು ಮೂರು ದಿನ ಮಳೆ ಬಿಡುವು ನೀಡಿದರೂ ಎಲ್ಲ ಮುಂಜಾಗ್ರತೆ, ಸ್ವಚ್ಛತೆ ಕಾರ್ಯ ಮುಗಿಯುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೇರಿದಂತೆ ಉನ್ನತ ಅಧಿಕಾರಿಗಳು ಭರವಸೆ ನೀಡಿದ್ದರು.

ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ವೃತ್ತದಲ್ಲಿ ಮಳೆಯಿಂದ ಯಾವಾಗಲೂ ನೀರು ನಿಂತು ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ಇದಕ್ಕೆ ಶಾಶ್ವತ ಪರಿಹಾರ ನೀಡುವುದಾಗಿ ಬಿಬಿಎಂಪಿ ವರ್ಷಗಳಿಂದಲೂ ಹೇಳುತ್ತಿದೆ. ಆದರೆ, ಕಳೆದ ವಾರ ಆರಂಭಿಸಿರುವ ಸ್ವಚ್ಛತಾ ಕಾರ್ಯ ಇನ್ನೂ ಮುಗಿಯದೆ, ಗುರುವಾರ ಮಧ್ಯಾಹ್ನ ಸುರಿದ ಸಾಧಾರಣ ಮಳೆಯಿಂದಲೇ ಸಂಕಷ್ಟ ಉಂಟಾಯಿತು. ಕಾಲುವೆ ಸ್ವಚ್ಛತೆ ಹಾಗೂ ದುರಸ್ತಿಯಿಂದ ನೀರು ಹರಿಯದೆ ಪೂರ್ಣವಾಗಿ ರಸ್ತೆಯಲ್ಲೇ ನಿಂತಿತ್ತು. ಇದರಿಂದ ಎಂ.ಜಿ. ರಸ್ತೆ ಆರಂಭದಿಂದ ಅಂತ್ಯದವರೆಗೂ ನೀರು ನಿಂತಿತ್ತು.

ಕಬ್ಬನ್‌ಪಾರ್ಕ್ ನಮ್ಮ ಮೆಟ್ರೊ ನಿಲ್ದಾಣದ ಬಳಿಯೂ ಮಳೆ ನೀರು ಚರಂಡಿಗೆ ಹರಿಯದೆ, ರಾಜಭವನ ರಸ್ತೆಯಲ್ಲೇ ನಿಂತು ಸಂಚಾರಕ್ಕೆ ಅಡ್ಡಿಯಾಗಿತ್ತು. ಮಳೆ ನಿಂತು ಹಲವು ಗಂಟೆಗಳು ಕಳೆದರೂ ಈ ರಸ್ತೆಗಳಲ್ಲೇ ನೀರು ತುಂಬಿತ್ತು.

ಕಸ್ತೂರಬಾ ರಸ್ತೆಯನ್ನು 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಅಭಿವೃದ್ಧಿ ಮಾಡಲಾಗಿದೆಯಾದರೂ, ಪ್ರತಿ ಮಳೆಗೂ ಇಲ್ಲಿ ಮ್ಯಾನ್‌ಹೋಲ್ ತುಂಬಿಹರಿಯುತ್ತದೆ. ಗುರುವಾರ ಮಧ್ಯಾಹ್ನ ಮಳೆ ನೀರಿನ ಜೊತೆಗೆ ಮ್ಯಾನ್‌ಹೋಲ್‌ನಿಂದ ಕೊಳಕು ನೀರು ಹೊರಗೆ ಹರಿದು, ಚರಂಡಿಯಲ್ಲಿ ಸಾಗಲು ಹಾದಿಯಿಲ್ಲದೆ ಕಸ್ತೂರಬಾ ರಸ್ತೆಯಲ್ಲೇ ತುಂಬಿಕೊಂಡಿತ್ತು.

ವಿಂಡ್ಸರ್ ಮ್ಯಾನರ್ ಮೇಲ್ಸೇತುವೆ, ಸಂಜಯ್‌ನಗರ ಕ್ರಾಸ್, ಒಟಿಸಿ ರಸ್ತೆ–ಎನ್‌ಆರ್ ಜಂಕ್ಷನ್‌ಗಳಲ್ಲೂ ಮಳೆನೀರು ರಸ್ತೆಯಲ್ಲೇ ನಿಂತು ಸಂಚಾರಕ್ಕೆ ಅಡ್ಡಿಯಾಯಿತು. ವಾಹನದಟ್ಟಣೆ ಉಂಟಾಗಿತ್ತು.

ಸಂಪಂಗಿರಾಮನಗರ, ವಿಧಾನ ಸೌಧ, ಕಬ್ಬನ್‌ಪಾರ್ಕ್, ಇಂದಿರಾನಗರ, ಪೀಣ್ಯಾ ಕೈಗಾರಿಕೆ ಪ್ರದೇಶ ಹಾಗೂ ದಾಸರಹಳ್ಳಿಯ ಸುತ್ತಮುತ್ತ ತಲಾ ಒಂದು ಸೆಂಟಿ ಮೀಟರ್‌ಗೂ ಅಧಿಕ ಮಳೆಯಾಯಿತು. ಪುಲಕೇಶಿನಗರ, ಹೊಯ್ಸಳನಗರ, ಕಾಟನ್‌ಪೇಟೆ, ಎಚ್‌ಎಎಲ್ ವಿಮಾನನಿಲ್ದಾಣ, ದೊಡ್ಡನೆಕ್ಕುಂದಿ, ನಂದಿನಿ ಲೇಔಟ್, ದೊಡ್ಡಬಿದರಕಲ್ಲು, ಮಾರುತಿ ಮಂದಿರದಲ್ಲಿ ಉತ್ತಮ ಮಳೆಯಾಯಿತು.

'ಎಂಜಿನಿಯರ್‌ಗಳು ರಸ್ತೆಗೆ ಬರಲಿ'

'ಬಿಬಿಎಂಪಿ ಎಂಜಿನಿಯರ್‌ಗಳು, ಆಯುಕ್ತರು ಕಚೇರಿಯಲ್ಲಿ ಕುಳಿತು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ನೋಡಿ, ಆ್ಯಪ್‌ಗಳನ್ನು ತಯಾರಿಸಲು ಆದ್ಯತೆ ನೀಡದೆ ರಸ್ತೆಗೆ ಬಂದು ನೋಡಲಿ. ಸಣ್ಣ ಮಳೆಬಂದರೂ ರಸ್ತೆಯಲ್ಲಿ ನೀರು ನಿಂತು ಸಾಕಷ್ಟು ಸಮಸ್ಯೆಯಾಗುತ್ತಿದೆ. ಎಂಜಿನಿಯರ್‌ಗಳು, ಮುಖ್ಯ ಆಯುಕ್ತರು ಮಳೆ ಬಂದಾಗ ರಸ್ತೆಗೆ ಬರಲಿ, ಸಮಸ್ಯೆಯ ಅರಿವಾಗುತ್ತದೆ' ಎಂದು ವಾಹನ ಸವಾರ ರಮೇಶ್ ಭಟ್ ಆಕ್ರೋಶ ವ್ಯಕ್ತಪಡಿಸಿದರು.

ಮೇಲ್ಸೇತುವೆಯಲ್ಲೂ ನೀರು: ಟೌನ್‌ಹಾಲ್‌ನಿಂದ ಸಿರ್ಸಿ ವೃತ್ತದವರೆಗಿನ ಮೇಲ್ಸೇತುವೆ, ನಾಯಂಡಹಳ್ಳಿ ಮೇಲ್ಸೇತುವೆಗಳ ಮೇಲೆ ಹಾಗೂ ಪ್ರಾರಂಭ ಸ್ಥಳಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ದ್ವಿಚಕ್ರ ವಾಹನಗಳ ಸವಾರರು ಸಾಕಷ್ಟು ಪರದಾಡಿದರು.

'ಮೇಲ್ಸೇತುವೆಗಳ ಮೇಲೆ ಸ್ವಚ್ಛತಾ ಕಾರ್ಯ ಕೈಗೊಂಡಿಲ್ಲ. ಮಳೆನೀರು ರಸ್ತೆಯಲ್ಲೇ ನಿಲ್ಲುತ್ತಿದೆ. ಮೇಲ್ಸೇತುವೆಗಳ ಮೇಲೆ ದೀಪಗಳೂ ಹಾಳಾಗಿವೆ. ಬಲ್ಬ್‌ಗಳನ್ನೂ ಬದಲಿಸಿಲ್ಲ' ಎಂದು ವಾಹನ ಸವಾರ ಶ್ರೀನಿವಾಸ್ ದೂರಿದರು.

ಬಸ್ ಟಿಕೆಟ್ ದರ ಏರಿಕೆ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ರಾಜ್ಯದಲ್ಲಿ ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಮಾಡುವ ಪ್ರಸ್ತಾವ ಸದ್ಯ ಸರ್ಕಾರದ ಮುಂದೆ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ಯೋಗರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಳ್ಳಾರಿ ಜಿಲ್ಲೆಯ ತೋರಣಗಲ್‌ಗೆ ಗುರುವಾರ ಭೇಟಿ ನೀಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಬಸ್ ಪ್ರಯಾಣ ದರ ಏರಿಕೆ ಇಲ್ಲ' ಎಂದರು.

ಪೆಟ್ರೋಲ್–ಡೀಸೆಲ್ ಮೇಲಿನ ತೆರಿಗೆ ಹೆಚ್ಚಳದ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನರೇಂದ್ರ ಮೋದಿ ಪ್ರಧಾನಿಯಾದಾಗ ತೈಲ ದರ ಎಷ್ಟಿತ್ತು? ಅವರು ಅಧಿಕಾರಕ್ಕೆ ಬಂದಾಗ ₹9.48 ಇದ್ದ ಹೆಚ್ಚುವರಿ ಅಬಕಾರಿ ಸುಂಕ ಈಗ ₹32.98ಕ್ಕೆ ಏರಿಕೆಯಾಗಿದೆ. ಹಾಗಾದರೆ ತೈಲ ದರ ಏರಿಸಿದ್ದು ಯಾರು? ಮನಮೋಹನ್ ಸಿಂಗ್ ಅಧಿಕಾರದಲ್ಲಿ ಇದ್ದಾಗ ಕಚ್ಚಾ ತೈಲ ದರ ಕಡಿಮೆ ಇತ್ತು. ಆದರೂ ಪೆಟ್ರೋಲ್–ಡೀಸೆಲ್ ದರ ಕಡಿಮೆ ಇತ್ತು. ಈಗ ಕಚ್ಚಾ ತೈಲ ಬೆಲೆ ಕಡಿಮೆಯಾಗಿದ್ದರೂ, ಪೆಟ್ರೋಲ್–ಡೀಸೆಲ್ ದರ ಇಳಿಕೆ ಮಾಡುತ್ತಿಲ್ಲ' ಎಂದು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

ದೇವದಾರಿ ಗಣಿಗಾರಿಕೆಗೆ ಪರಿಸರ ಹೋರಾಟಗಾರರು ವಿರೋಧಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಗಣಿಗಾರಿಕೆಗೆ ಅನುಮತಿ ನೀಡಿದವರು ಕುಮಾರಸ್ವಾಮಿ. ಗಣಿಗಾರಿಕೆಗೆ ರಾಜ್ಯ ಸರ್ಕಾರ ಅನುಮತಿ ನೀಡಿಲ್ಲ. ಹಿಂದೊಮ್ಮೆ ಅವರೇ ಗಣಿಗಾರಿಕೆ ವಿರೋಧಿಸಿದ್ದರು. ಇದಕ್ಕೆ ಅವರೇ ಉತ್ತರಿಸಬೇಕು' ಎಂದರು.

'ತುಂಗಭದ್ರಾ ಜಲಾಶಯಕ್ಕೆ ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಕುರಿತು ನೆರೆಯ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

ಸುದ್ದಿ 2 ನಿಮಿಷ

ಬೆಂಗಳೂರಿನಲ್ಲಿ 2ನೇ ವಿಮಾನ ನಿಲ್ದಾಣ: ವರದಿ ನೀಡಲು ಸೂಚನೆ

ಬೆಂಗಳೂರು: ಬೆಂಗಳೂರು ಮಹಾನಗರದ ಮುಂಬರುವ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಎರಡನೇ ವಿಮಾನ ನಿಲ್ದಾಣ ನಿರ್ಮಿಸುವ ಬಗ್ಗೆ ಸಾಧ್ಯಾಸಾಧ್ಯತೆ ವರದಿ ಸಲ್ಲಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಸೂಚಿಸಿದರು.

ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ದೆಹಲಿ ಮತ್ತು ಮುಂಬೈಯಲ್ಲಿರುವ ವಿಮಾನ ನಿಲ್ದಾಣಗಳ ನಂತರ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು ಮೂರನೇ ಅತಿ ದಟ್ಟಣೆಯ ವಿಮಾನ ನಿಲ್ದಾಣವಾಗಿದೆ. ಕಳೆದ ಸಾಲಿನಲ್ಲಿ ಇಲ್ಲಿ 37.5 ದಶಲಕ್ಷ ಪ್ರಯಾಣಿಕರು ಮತ್ತು 4 ಲಕ್ಷ ಟನ್‌ಗೂ ಹೆಚ್ಚಿನ ಸರಕು ಸಾಗಣೆಯಾಗಿದೆ. ಈ ಒತ್ತಡವನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯದಲ್ಲಿ ಎರಡನೇ ವಿಮಾನ ನಿಲ್ದಾಣದ ಅಗತ್ಯವಿದೆ' ಎಂದರು.

'ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವಾಗ ಬಿಐಎಎಲ್ ಸಂಸ್ಥೆ, ಸರ್ಕಾರದ ಜತೆ ಒಪ್ಪಂದ ಮಾಡಿಕೊಂಡು 25 ವರ್ಷಗಳ ವರೆಗೆ (ಅಂದರೆ 2033) 150 ಕಿ.ಮೀ. ವ್ಯಾಪ್ತಿಯಲ್ಲಿ ಇನ್ನೊಂದು ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವುದಿಲ್ಲ ಎಂದು ಹೇಳಿತ್ತು. ಈ ಷರತ್ತು ಒಂಬತ್ತು ವರ್ಷಗಳಲ್ಲಿ ಮುಗಿಯಲಿದೆ. ಭೂ ಸ್ವಾಧೀನ, ಪರಿಹಾರ ಹಂಚಿಕೆ ಇತ್ಯಾದಿಗಳಿಗೆ ದೀರ್ಘ ಸಮಯ ಹಿಡಿಯುತ್ತದೆ. ಹೀಗಾಗಿ ನಾವು ಈಗಿನಿಂದಲೇ ಕಾರ್ಯಪ್ರವೃತ್ತರಾಗುತ್ತಿದ್ದೇವೆ. ಎರಡನೆಯ ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸುವುದರಿಂದ ರಾಜಧಾನಿಯ ಆಚೆಗೂ ಕೈಗಾರಿಕಾ ಬೆಳವಣಿಗೆ ಸಾಧ್ಯವಾಗಲಿದೆ' ಎಂದರು.

'ಬೆಂಗಳೂರಿನ ಜನಸಂಖ್ಯೆ ಈಗಾಗಲೇ ಒಂದು ಕೋಟಿ ದಾಟಿದೆ. ಇಲ್ಲಿ ಜಾಗತಿಕ ಮಟ್ಟದ ಕಂಪನಿಗಳಿವೆ. ಸುತ್ತಮುತ್ತಲಿನ ಜಿಲ್ಲೆಗಳ ಜತೆಗೆ ಆಂಧ್ರ ಪ್ರದೇಶದ ಕೆಲವು ಜಿಲ್ಲೆಗಳ ಜನರೂ ಈಗಿರುವ ವಿಮಾನ ನಿಲ್ದಾಣದ ಮೇಲೆ ಅವಲಂಬಿತರಾ ಗಿದ್ದಾರೆ. 2033ರ ಹೊತ್ತಿಗೆ ಈಗಿನ ವಿಮಾನ ನಿಲ್ದಾಣವು ಪ್ರಯಾಣಿಕರ ನಿರ್ವಹಣೆಯ ತುತ್ತತುದಿ ಮುಟ್ಟಲಿದೆ. ಸರಕು ಸಾಗಣೆ ಪ್ರಮಾಣ ಕೂಡ 2040ರ ವೇಳೆಗೆ ಆ ಮಟ್ಟ ತಲುಪಲಿದೆ' ಎಂದರು.

ಹಜ್ ಯಾತ್ರೆ: ಬೆಂಗಳೂರಿನ ಇಬ್ಬರು ವ್ಯಕ್ತಿಗಳು ಸಾವು

ಬೆಂಗಳೂರು: ಈ ಸಲದ ಹಜ್ ವಾರ್ಷಿಕ ಯಾತ್ರೆ ಸಂದರ್ಭದಲ್ಲಿ ಅಧಿಕ ತಾಪಮಾನದಿಂದ ಬೆಂಗಳೂರಿನ ಇಬ್ಬರು ಹಜ್ ಯಾತ್ರಿಕರು ಮೃತಪಟ್ಟಿದ್ದಾರೆ.

'ಆರ್‌.ಟಿ. ನಗರದ ನಿವಾಸಿ ಕೌಸರ್ ರುಕ್ಸಾನ (70) ಹಾಗೂ ಅಮರ್ ಲೇಔಟ್ ನಿವಾಸಿ ಅಬ್ದುಲ್ ಅನ್ಸಾರಿ (56) ಎಂದು ಗುರುತಿಸಲಾಗಿದೆ. ಮೆಕ್ಕಾಗಿಂತ 50 ಕಿ.ಮೀ ದೂರದ ಮಿನಾ ಎಂಬ ನಗರದಲ್ಲಿ ಇವರಿಬ್ಬರು ಮೂರು ದಿನಗಳ ಹಿಂದೆಯೇ ಮೃತಪಟ್ಟಿದ್ದಾರೆ' ಎಂದು ಹಜ್ ಕಮಿಟಿ ಕಾರ್ಯನಿರ್ವಾಹಕ ಅಧಿಕಾರಿ ಸರ್ಫರಾಜ್ ಖಾನ್ ಮಾಹಿತಿ ನೀಡಿದರು.

'ಅಲ್ಲಿನ ಸರ್ಕಾರ ಮೆಕ್ಕಾ ನಗರದಲ್ಲಿಯೇ ಇವರಿಬ್ಬರ ಅಂತ್ಯಕ್ರಿಯೆ ನಡೆಸಿ ಮರಣ ಪ್ರಮಾಣ ನೀಡಲಿದೆ. ಕರ್ನಾಟಕದಿಂದ ತೆರಳಿರುವ ಉಳಿದ ಹಜ್ ಯಾತ್ರಿಗಳು ಸುರಕ್ಷಿತವಾಗಿದ್ದಾರೆ. ಈ ಬಾರಿ ರಾಜ್ಯದಿಂದ 10,300 ಜನ ಹಜ್ ಯಾತ್ರೆ ತೆರಳಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ' ಎಂದು ತಿಳಿಸಿದ್ದಾರೆ.

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

ಬಿಬಿಎಂಪಿ ವಿಭಜನೆ ನಿರರ್ಥಕ

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಎಂದು ಮರು ನಾಮಕರಣ ಮಾಡಿದ ಉದ್ದೇಶ ಹಾಗೂ ಎಂಟು ವಲಯಗಳನ್ನಾಗಿ ಮಾಡಿದ ಮೇಲೆ ಪಾಲಿಕೆಯನ್ನು ಐದು ವಿಭಾಗವಾಗಿ ವಿಭಜನೆ ಮಾಡುವ ಯೋಜನೆ ಸರಿಯಲ್ಲ. ವಾಟ್ಸ್‌ಆ್ಯಪ್, ಇಮೇಲ್, ಇನ್‌ಸ್ಟಾಗ್ರಾಂ, ಎಕ್ಸ್, ಮೇಟಾಗಳು ಮೊಬೈಲ್‌ನಲ್ಲೇ ಇರುವಾಗ, ಬಿಬಿಎಂಪಿಯಲ್ಲಿ ಸಮರ್ಥ ಉನ್ನತ ಅಧಿಕಾರಿಗಳು ಹಾಗೂ ನುರಿತ ಸಹಾಯಕರೇ ಇರುವಾಗ ಬಿಬಿಎಂಪಿ ವಿಭಜನೆ ನಿರರ್ಥಕ.

ಇಂಜೀನೇರಿ ಆರ್‌.ಸಿ., ಎಚ್‌ಎಂಟಿ, ಜಾಲಹಳ್ಳಿ

ಕರ್ತವ್ಯ ಪ್ರಜ್ಞೆವುಳ್ಳ ಅಧಿಕಾರಿಗಳನ್ನು ನೇಮಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ವಿಭಾಗಗಳಾಗಿ ವಿಂಗಡಿಸುವ ಆಲೋಚನೆ ಸರಿಯಾಗಿದೆ. ಜನರು ಅವರ ಮುಖ್ಯ ಕೆಲಸಗಳಿಗೆ ಹಾಗೂ ಸಮಸ್ಯೆಗಳ ಬಗ್ಗೆ ಪರಿಹಾರಕ್ಕೆ ಕೇಂದ್ರ ಕಚೇರಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲಿ ದಿನೇ ದಿನೇ ಜನಸಂಖ್ಯೆ ಹೆಚ್ಚುತ್ತಿದೆ. ಕಸ ವಿಲೇವಾರಿಯಲ್ಲಿ ಪಾಲಿಕೆ ವಿಫಲವಾಗಿದೆ. ವ್ಯವಸ್ಥೆಯನ್ನು ಸರಿಪಡಿಸಿ, ಕರ್ತವ್ಯ ಪ್ರಜ್ಞೆಯ ಅಧಿಕಾರಿಗಳನ್ನು ನೇಮಿಸಿದರೆ ಸುಗಮವಾಗಿ ಸಾಗುತ್ತದೆ.

ಗೀತಾ ವಿ.ಆರ್. ಮಾರುತಿ ನಗರ

ಭ್ರಷ್ಟಾಚಾರ ಮುಕ್ತ ಆಗುತ್ತದೆಯೇ?

ಬಿಬಿಎಂಪಿಯನ್ನು ಐದು ಭಾಗವಾಗಿ ಮಾಡುವುದಕ್ಕೆ ಅಭ್ಯಂತರವಿಲ್ಲ. ಆದರೆ ಎಲ್ಲಾ ಸಮಸ್ಯೆಗೆ ಪರಿಹಾರ ನೀಡಲು ಸಾಧ್ಯವೇ? ಭ್ರಷ್ಟಾಚಾರ ಮುಕ್ತ, ನಕಲಿ ಬಿಲ್ ಮುಕ್ತ, ಕಮಿಷನ್ ಮುಕ್ತ, ಏಜೆಂಟ್ ಮುಕ್ತವಾದರೆ ವಿಭಜನೆ ಮಾಡಿ. ಆರೋಗ್ಯ, ಕಂದಾಯ, ಎಂಜಿನಿಯರಿಂಗ್ ಇಲಾಖೆಗೆ 'ಶಸ್ತ್ರಚಿಕಿತ್ಸೆ' ಮಾಡದೆ ಐದು ಭಾಗ ಮಾಡಿದರೆ, ಲಂಚದ ಹಂಚಿಕೆ ಪ್ರಮಾಣ ಹೆಚ್ಚಾಗುತ್ತದೆ. ಬಿಬಿಎಂಪಿ ಅಂದರೆ 'ಬೃಹತ್ ಭ್ರಷ್ಟಾಚಾರ ಮಹಾನಗರ ಪಾಲಿಕೆ' ಎನ್ನುವ ಹೆಸರನ್ನು ಮೊದಲು ಅಳಿಸಿ.

ಪರಿಸರ ಚಂದ್ರಶೇಖರ, ಬಸವನಗುಡಿ

ಇಚ್ಛಾಶಕ್ತಿ ಕೊರತೆಯೇ ಸಮಸ್ಯೆಯ ಮೂಲ

ಬಿ.ಎಸ್.ಪಾಟೀಲ ವರದಿ ಅನ್ವಯ ಬಿಬಿಎಂಪಿ ವಿಭಜನೆ ಆಗುವುದು ಸೂಕ್ತ. ಆದರೆ, ನಗರದ ಎಲ್ಲ ಸಮಸ್ಯೆಗಳಿಗೆ ವಿಭಜನೆಯೊಂದೇ ಪರಿಹಾರ ಆಗದು. ಅಧಿಕಾರಿ ವರ್ಗ ಮತ್ತು ಶಾಸಕರು, ಪಾಲಿಕೆ ಸದಸ್ಯರು ಒಟ್ಟುಗೂಡಿ ನಗರದ ಅಭಿವೃದ್ಧಿಗೆ ದುಡಿಯುವ ಇಚ್ಛಾಶಕ್ತಿ ತೋರಬೇಕು. ಇದು ಇಲ್ಲದಿರುವುದೇ ಸಮಸ್ಯೆಯ ಮೂಲ. ನಗರ ಯೋಜನೆ ರೂಪಿಸುವಾಗ ಸಮುದಾಯವನ್ನು ಒಳಗೊಂಡು ರೂಪಿಸುವಂತಾದಲ್ಲಿ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ.

ಎನ್.ದಯಾನಂದ, ಗಾರ್ವೆಬಾವಿಪಾಳ್ಯ

ವಿಭಜನೆಯಿಂದ ಸುಸೂತ್ರ

ಬೆಂಗಳೂರು ಬರೀ ನಾಲ್ಕು ದಿಕ್ಕಲ್ಲ, ದಶ ದಿಕ್ಕುಗಳಿಗೂ ವಿಸ್ತರಿಸುತ್ತಾ ಹೋಗುತ್ತಿದೆ. ಪ್ರಸ್ತುತ ವಿಶಾಲ ಬೆಂಗಳೂರು, ನಗರ ಪಾಲಿಕೆ ಆಡಳಿತಕ್ಕೆ ಇದು ತೊಡಕಾಗಬಹುದು. ವಾರ್ಡ್ ವಿಭಜನೆ ಒಂದೇ ಸುಸೂತ್ರ ಆಡಳಿತಕ್ಕೆ ಸೂಕ್ತವಾದುದು. ಆಯಾ ವಾರ್ಡ್‌ಗಳಲ್ಲಿ ಕುಂದುಕೊರತೆಗಳನ್ನು ಅಧಿಕಾರಿಗಳು ಸಕಾಲದಲ್ಲಿ ಗಮನಿಸಲು ಸಾಧ್ಯವಾಗುತ್ತದೆ. ಆಡಳಿತದಲ್ಲಿ ಅನ್ಯ ಭಾಷಿಕರ ಆಗಮನವಾಗುತ್ತದೆ ಎನ್ನುವ ಮಾತಿನಲ್ಲಿ ಅರ್ಥವಿಲ್ಲ.

ಎಂ.ಜೆ. ಅಭಿಷೇಕ್, ಬಿಟಿಎಂ ಲೇಔಟ್ ಎರಡನೇ ಹಂತ

ಹೊಸ ಸಮಸ್ಯೆಗಳನ್ನು ಸೃಷ್ಟಿಸಬೇಡಿ

ಬಿಬಿಎಂಪಿ ವಿಭಜನೆ ಮಾಡದೆ, ಇರುವ ಪಾಲಿಕೆಗೆ ಸಮರ್ಪಕ ಸಿಬ್ಬಂದಿ ವರ್ಗ ನೇಮಿಸಿ ಆಡಳಿತ ನಿಷ್ಠೆ, ನಿಷ್ಪಕ್ಷಪಾತ, ಭ್ರಷ್ಟಾಚಾರ ಮುಕ್ತವಾಗಿ ಕಾರ್ಯ ನಿರ್ವಹಿಸಿದರೆ ಉತ್ತಮ. ಸರ್ಕಾರದ ಬೊಕ್ಕಸ ತುಂಬಿಸಿಕೊಳ್ಳಲು ಜನಸಾಮಾನ್ಯರ ಮೇಲೆ ಹೊರೆ ಹಾಕದಿರುವುದು ಉತ್ತಮ. ಪ್ರಸ್ತುತ ಸಮಸ್ಯೆಗಳತ್ತ ಗಮನಕೊಟ್ಟು ಜನತೆಗೆ ಜನರ ಮತಕ್ಕೆ ನ್ಯಾಯ ಒದಗಿಸುವ ಕಾರ್ಯ ಮಾಡಿ, ಹೊಸ ಸಮಸ್ಯೆಗಳನ್ನು ಸೃಷ್ಟಿಸಬೇಡಿ.

ನೇತ್ರಾವತಿ ಎಂ, ಅರೇಹಳ್ಳಿ, ಚಿಕ್ಕತಿರುಪತಿ

ಮೇಯರ್ ಅವಧಿ ಐದು ವರ್ಷ ಇರಲಿ

ನಮ್ಮ ನಗರದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೇಯರ್ ಅವಧಿ ಕನಿಷ್ಠ ಐದು ವರ್ಷವಿರಬೇಕು. ಆಗ ಸರಿಯಾದ ಅಧಿಕಾರಿಗಳನ್ನು ಸೂಕ್ತ ಜಾಗಕ್ಕೆ ನೇಮಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಚುನಾವಣೆಯನ್ನೂ ಮೊದಲು ನಡೆಸಬೇಕು.

ಮರಿಸ್ವಾಮಿ ಟಿ, ಬಾಪೂಜಿನಗರ, ಮೈಸೂರು ರಸ್ತೆ

ಭ್ರಷ್ಟಾಚಾರ ಕೊನೆಯಾಗಬೇಕು

ಆಡಳಿತಾತ್ಮಕ ದೃಷ್ಟಿಯಿಂದ ಬಿಬಿಎಂಪಿ ವಿಭಜನೆ ಆಗಬೇಕು. ಬಡವರು ವಾಸಿಸುವ ಕಾಲೊನಿಗಳಿಗೆ ಮೂಲಸೌಕರ್ಯ ಸಿಗಬೇಕು. ಬಿಬಿಎಂಪಿಯಲ್ಲಿ ನಕ್ಷೆ ಮಂಜೂರಾತಿ, ಖಾತೆ, ಜನನ- ಮರಣ ಪತ್ರ ಪಡೆಯಲೂ ಲಂಚ ಕೊಡಬೇಕಾದ ಪರಿಸ್ಥಿತಿ ಇದೆ. ಭ್ರಷ್ಟಾಚಾರ ಕೊನೆಯಾಗಬೇಕು. ಬಿಬಿಎಂಪಿ ಅಧಿಕಾರಿಗಳು-ಸಿಬ್ಬಂದಿ ಜನರ ಸಮಸ್ಯೆಗೆ ಸ್ಪಂದಿಸಬೇಕು.

ಬಸವರಾಜು, ಬನಶಂಕರಿ 2ನೇ ಹಂತ

ವಿಭಜನೆಯಿಂದ ಅಭಿವೃದ್ಧಿ

ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಳದಿಂದ ಯಾವ ಕ್ಷೇತ್ರದಲ್ಲೂ ಅಭಿವೃದ್ಧಿ ಸಂಪೂರ್ಣವಾಗಿಲ್ಲ. ಒಬ್ಬರೇ ಮೇಯರ್ ಸಂಪೂರ್ಣ ಜವಾಬ್ದಾರಿ ಹೊರಲು ಆಗುವುದಿಲ್ಲ. ಹಾಗೆ ಅವರು ಪ್ರತಿಯೊಂದು ಕ್ಷೇತ್ರಕ್ಕೂ ಭೇಟಿ ನೀಡಲು ಆಗುವುದಿಲ್ಲ. ಐದು ಪಾಲಿಕೆ ಆಗುವುದರಿಂದ ಅಧಿಕಾರಿಗಳು ಆಯಾ ವಿಭಾಗದ ಅಭಿವೃದ್ಧಿ ಹೊಣೆಯನ್ನು ಹೊರುತ್ತಾರೆ. ನೀರಿನ ಸಮಸ್ಯೆ, ಕಳಪೆ ರಸ್ತೆ, ನಿರುದ್ಯೋಗ ಸಮಸ್ಯೆ, ಸರ್ಕಾರಿ ಆಸ್ಪತ್ರೆಗಳು ಶಾಲಾ ಕಾಲೇಜುಗಳ ಅಭಿವೃದ್ಧಿ ಆಗುತ್ತದೆ.

ಎ.ಸಿ. ಪುಷ್ಪ, ಬೆಂಗಳೂರು

ಜನಪ್ರತಿನಿಧಿಗಳೇ ಪ್ರಜಾಪ್ರಭುತ್ವಕ್ಕೆ ಅಡ್ಡಿ!

ಬಿಬಿಎಂಪಿಗೆ ಚುನಾವಣೆ ನಡೆಸುವ ಬಗ್ಗೆ ಸರ್ಕಾರ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ವಿಭಜನೆಯ ಮಂತ್ರವನ್ನು ಹೇಳುತ್ತಾ ಮುಂದಕ್ಕೆ ಸಾಗಿಸುತ್ತಲೇ ಬಂದಿದೆ. ವಲಯ ಮಟ್ಟದಲ್ಲೇ ಕಾರ್ಯವೈಖರಿಯನ್ನು ಚುರುಕುಗೊಳಿಸಿದರೆ ಬಿಬಿಎಂಪಿ ವಿಭಜನೆಯ ಅವಶ್ಯವಿಲ್ಲ. ಶಾಸಕರು ಅಧಿಕಾರವನ್ನು ನೇರವಾಗಿ ಚಲಾಯಿಸಲು ಕಾರ್ಪೊರೇಟರ್‌ಗಳು ಅಡ್ಡಿಯಾಗುವ ಆತಂಕ ಕಾಡುತ್ತಿದೆ. ಜನಪ್ರತಿನಿಧಿಗಳೇ ಪ್ರಜಾಪ್ರಭುತ್ವಕ್ಕೆ ಅಡ್ಡಿಯಾದರೆ ಹೇಗೆ...?

ಸತೀಶ ವಿ, ಕಾಡುಗೋಡಿ, ವೈಟ್‌ಫೀಲ್ಡ್

ಕಲುಷಿತ ನೀರು ಸೇವನೆ ಸಾವಿನ ಸಂಖ್ಯೆ 7ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಮಧುಗಿರಿ ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜಯರಾಮಪ್ಪ (67) ಎಂಬುವರು ಗುರುವಾರ ಮೃತಪಟ್ಟಿದ್ದು ಸಾವಿನ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಕಲುಷಿತ ನೀರು ಕುಡಿದು ವಾಂತಿ, ಭೇದಿಯಿಂದ 200ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜಯರಾಮಪ್ಪ ಮೊದಲಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯದಲ್ಲಿ ಗಂಭೀರ ಸಮಸ್ಯೆ ಕಾಣಿಸಿಕೊಂಡ ನಂತರ ಜೂನ್ 13ರಂದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿತ್ತು.

'ಇನ್ನೂ ಏಳು ಮಂದಿ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಡಿಎಚ್‌ಒ ಡಾ.ಡಿ.ಎನ್.ಮಂಜುನಾಥ್ ಮಾಹಿತಿ ನೀಡಿದ್ದಾರೆ.

ಟಿಕೆಟ್ ರಹಿತ ಪ್ರಯಾಣ: 3754 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೇ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದ 3,754 ಪ್ರಯಾಣಿಕರಿಂದ ₹6.54 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು ಆಗಸ್ಟ್‌ನಲ್ಲಿ 42,680 ಬಸ್‌ಗಳಲ್ಲಿ ತನಿಖೆ ನಡೆಸಿದ್ದರು. ನಿಗಮದ ಆದಾಯದಲ್ಲಿ ₹88,429 ಸೋರಿಕೆ ಪತ್ತೆಯಾಗಿತ್ತು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ. ಪ್ರಯಾಣಿಕರು ಟಿಕೆಟ್ ಇಲ್ಲವೇ ಬಸ್ ಪಾಸ್ ಪಡೆದು ಪ್ರಯಾಣಿಸಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದಿಂದ ಗುರುವಾರ ನಡೆದ ರಾಜ್ಯ ಮಟ್ಟದ ಮುಖಂಡರ ಸಮಾವೇಶದಲ್ಲಿ ಸಮಾಜದ ಎಸ್‌ಎಸ್‌ಎಲ್‌ಸಿ, ಪಿಯುಸಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾಜದ ಶಿವಸುಜ್ಞಾನತೀರ್ಥ ಸ್ವಾಮೀಜಿ, ರಾಮಚಂದ್ರ ಸ್ವಾಮೀಜಿ, ನೀಲಕಂಠಾಚಾರ್ಯ ಸ್ವಾಮೀಜಿ, ರಾಜ್ಯಾಧ್ಯಕ್ಷ ಮಳವಳ್ಳಿ ಶ್ರೀನಿವಾಸ, ಲೋಹಿಯ ವಿಚಾರ ವೇದಿಕೆ ಶಿವಣ್ಣ, ಶಿಲ್ಪಿ ಅರುಣ್ ಯೋಗಿರಾಜ್, ರಾಜಣ್ಣ, ಚಂದ್ರಶೇಖರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ್ ಲಕ್ಷ್ಮೀಪುರ, ಕಾನೂನು ಘಟಕ ಅಧ್ಯಕ್ಷ ಪುರುಷೋತ್ತಮ್ ಗುರುವಿಶ್ವಕರ್ಮ, ಮಹಿಳಾ ವಿಭಾಗದ ಉಪಾಧ್ಯಕ್ಷರಾದ ಗೋವಿಂದಮ್ಮ, ಆಶಾ, ಸಿದ್ದಯ್ಯ ಒಡೆಯರ್ ಭಾಗವಹಿಸಿದ್ದರು

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'20 ವಸತಿ ಶಾಲೆಗಳ ಆರಂಭಕ್ಕೆ ಅನುಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೋಬಳಿಗೊಂದು ವಸತಿ ಶಾಲೆ ಸರ್ಕಾರದ ಗುರಿಯಾಗಿದೆ. ಆದ್ದರಿಂದ, ಈ ವರ್ಷ 20 ಹೊಸ ವಸತಿ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹಯೋಗದಲ್ಲಿ ಬುಧವಾರ ನಡೆದ 2024ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

'ದಲಿತ ಸಂಘರ್ಷ ಸಮಿತಿ ರಾಜ್ಯದಲ್ಲಿ ನಡೆಸಿದ್ದ 'ನಮಗೆ ಸಾರಾಯಿ ಅಂಗಡಿ ಬೇಡ, ವಸತಿ ಶಾಲೆ ಬೇಕು' ಎನ್ನುವ ಹೋರಾಟದಿಂದ ಪ್ರೇರಿತನಾಗಿ ಮೊದಲ ಬಜೆಟ್‌ನಲ್ಲೇ ಗ್ರಾಮೀಣ ಭಾಗದಲ್ಲಿ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಆರಂಭಿಸಿದೆ. ಅಂದಿನಿಂದ ನಿರಂತರವಾಗಿ ವಸತಿ ಶಾಲೆಗಳನ್ನು ತೆರೆಯುತ್ತಲೇ ಇದ್ದೇನೆ. ಸದ್ಯ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ 833 ವಸತಿ ಶಾಲೆಗಳಿವೆ. ಅಲ್ಪಸಂಖ್ಯಾತ ಇಲಾಖೆಯಡಿ ಸೇರಿ ಒಟ್ಟು 946 ವಸತಿ ಶಾಲೆಗಳಿವೆ' ಎಂದರು.

'ಗ್ರಾಮೀಣ ಭಾಗದಲ್ಲಿ ಸರ್ವರಿಗೂ ಗುಣಮಟ್ಟದ ವೈಚಾರಿಕತೆ, ವೈಜ್ಞಾನಿಕತೆಯಿಂದ ಕೂಡಿದ ಶಿಕ್ಷಣ ದೊರೆಯಬೇಕು. ಮಕ್ಕಳಿಗೆ ಜಾತಿ, ಧರ್ಮದ ತಾರತಮ್ಯ ಕಲಿಸುವವರೇ ನಾವು. ಆದ್ದರಿಂದ, ಪೋಷಕರು, ಶಿಕ್ಷಕರು ಮೊದಲು ಕಂದಾಚಾರ, ಮೌಢ್ಯಾಚರಣೆಯಿಂದ ಹೊರಗಡೆ ಬರಬೇಕು. ಆಗ, ಮಕ್ಕಳು ವೈಜ್ಞಾನಿಕವಾಗಿ ಬೆಳೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗಲಿದೆ. ಜಾತಿ ವ್ಯವಸ್ಥೆ ಶಿಥಿಲವಾಗಬೇಕಾದರೆ ದಲಿತರು, ಹಿಂದುಳಿದವರಿಗೆ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬಬೇಕು' ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, 'ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳ ಸಮುದಾಯಗಳ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ಮೌಲ್ಯಾಧಾರಿತ, ವೈಚಾರಿಕತೆಯಿಂದ ಕೂಡಿದ ಶಿಕ್ಷಣ ನೀಡಲಾಗುತ್ತಿದೆ' ಎಂದರು.

2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯ ಪ್ರಥಮ ಸ್ಥಾನ ಪಡೆದ ಅಂಕಿತಾ ಕೊನ್ನೂರು ಅವರಿಗೆ ₹5 ಲಕ್ಷ, ತೃತೀಯ ಸ್ಥಾನ ಪಡೆದ ನವನೀತ್ ಕೆ.ಸಿ. ಅವರಿಗೆ ₹3 ಲಕ್ಷ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಹೆಚ್ಚು ಅಂಕಗಳಿಸಿದ 162 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಶಾಸಕ ಸುದಾಮ್ ದಾಸ್, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಭಾಗವಹಿಸಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಾದ (ಎಡದಿಂದ) ಪ್ರತಿಭಾ ನುರುತಿ, ಶ್ರುತಿ ರವಿಕುಮಾರ್, ನವನೀತ್ ಕೆ.ಸಿ ಮತ್ತು ಅಂಕಿತ ಬಸಪ್ಪ ಕೊನ್ನೂರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚೆಕ್ ನೀಡಿ ಅಭಿನಂದಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್‌.ಸಿ ಮಹದೇವಪ್ಪ ಮತ್ತು ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

> **ಸರ್ಕಾರಿ ವಸತಿ ಶಾಲೆಗಳ ಮಕ್ಕಳು ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 96ರಷ್ಟು ಫಲಿತಾಂಶ ಪಡೆದಿದ್ದಾರೆ. ಮುಂದಿನ ಬಾರಿ ಇದು ಶೇ 100 ರಷ್ಟು ಆಗಬೇಕು**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಅಪಾಯದಲ್ಲಿ ಅವಿಶ್ವಾಸ ಮಂಡನೆ ಅಸ್ತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಿಶ್ವಾಸವೆಂಬ ಅಸ್ತ್ರವು ಅಧಿಕಾರದ ಕೂಗುಮಾರಿಗಳಿಂದ ಅಪಾಯಕ್ಕೆ ಸಿಲುಕಿದೆ' ಎಂದು ಆತಂಕ ವ್ಯಕ್ತಪಡಿಸಿರುವ ಹೈಕೋರ್ಟ್, 'ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ರಾಜೀನಾಮೆ, ಮರಣ ಮತ್ತು ಅನರ್ಹತೆಯಿಂದ ತೆರವಾದ ಸ್ಥಾನಕ್ಕೆ ಆಯ್ಕೆಯಾದವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕನಿಷ್ಠ 15 ತಿಂಗಳ ಅವಧಿ ಪೂರ್ಣವಾಗಿರಬೇಕು' ಎಂದು ಸ್ಪಷ್ಟಪಡಿಸಿದೆ.

'ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಆಯ್ಕೆಯಾದವರ ಅವಿಶ್ವಾಸ ನಿರ್ಣಯ ಮಂಡಿಸಲು 15 ತಿಂಗಳ ಅವಧಿ ಪೂರ್ಣವಾಗಲೇಬೇಕಾದ ಅವಶ್ಯ ಇಲ್ಲ' ಎಂದು ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಯಲಹಂಕ ತಾಲ್ಲೂಕಿನ ಬಾಗಲೂರು ಗ್ರಾ.ಪಂ ಅಧ್ಯಕ್ಷರಾಗಿದ್ದ ಪ್ರೀತಿ ಮುನೇಗೌಡ ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದು, 'ಅನೈತಿಕ ರಾಜಕೀಯ ಹಿತಾಸಕ್ತಿ ಈಡೇರಿಸುವುದು ಮತ್ತು ಕ್ಷುಲ್ಲಕ ಕಾರಣಗಳಿಗಾಗಿ ಅತೃಪ್ತ ಗುಂಪುಗಳಿಂದ ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡನೆ ಮಾಡಲಾಗುವ ಪ್ರವೃತ್ತಿ ನಿಯಂತ್ರಿಸುವುದು ಪಂಚಾಯತ್ ರಾಜ್ ಕಾಯ್ದೆಯ ಕಲಂ 49(2)ರ ಮೂಲ ಉದ್ದೇಶವಾಗಿದೆ' ಎಂದು ಉಲ್ಲೇಖಿಸಿದೆ.

'ಅಧ್ಯಕ್ಷರ ಚುನಾವಣೆ ದಿನಾಂಕದಿಂದ ಮೊದಲ 15 ತಿಂಗಳವರೆಗೂ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ನಿರ್ಬಂಧ ಇರಲಿದೆ. ಈ ಪ್ರಕರಣದಲ್ಲಿ 2023ರ ಮಾರ್ಚ್ 7ರಂದು ಅಧಿಕಾರ ವಹಿಸಿಕೊಳ್ಳಲಾಗಿದ್ದು, ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ–2021ರ ಕಲಂ 49ರ ಅಡಿಯಲ್ಲಿ ತಿಳಿಸಿರುವಂತೆ ಅಧಿಕಾರ ವಹಿಸಿಕೊಂಡ 15 ತಿಂಗಳ ಒಳಗಾಗಿ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶವಿಲ್ಲ' ಎಂದು ವಿವರಿಸಿದೆ.

ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ– ಕೆಐಒಸಿಎಲ್ ಶ್ಲಾಘಿಸಿದ್ದ ರಾಜ್ಯ ಸರ್ಕಾರ

ವಿರೋಧ ಮರೆಮಾಚಿಸಿ ಕೇಂದ್ರಕ್ಕೆ ವರದಿ!

• ಹರಿಶಂಕರ್ ಆರ್.

ಬಳ್ಳಾರಿ: ಸಂಡೂರಿನ ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ (ಆರಂಭಿಕ ಪ್ರಸ್ತಾವ 484 ಹೆಕ್ಟೇರ್) ಕುದುರೆಮುಖ ಐರನ್ ಓರ್ ಕಂಪನಿ (ಕೆಐಒಸಿಎಲ್) ಕೈಗೊಳ್ಳುವ ಗಣಿಗಾರಿಕೆಗೆ ಅರಣ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ವಿರೋಧ ವ್ಯಕ್ತಪಡಿಸಿ ವರದಿ ನೀಡಿದ್ದರೂ, ರಾಜ್ಯ ಸರ್ಕಾರ ಅದನ್ನೆಲ್ಲ ಬದಿಗೊತ್ತಿ ಕೇಂದ್ರ ಸರ್ಕಾರಕ್ಕೆ ಬೇರೆಯದೇ ವರದಿ ಕೊಟ್ಟಿತ್ತು.

ದೇವದಾರಿ ಗಣಿಗೆ 'ಸ್ಟೇಜ್–1' ಅನುಮತಿ ಕೋರಿ ರಾಜ್ಯ ಸರ್ಕಾರ 2020ರ ಅಕ್ಟೋಬರ್ 9ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಕೆಐಒಸಿಎಲ್ ಅನ್ನು ಕೊಂಡಾಡಿದ್ದ ರಾಜ್ಯ ಸರ್ಕಾರ, ಆಗ ಅರಣ್ಯ ಇಲಾಖೆಯ ವಿರೋಧಗಳನ್ನೆಲ್ಲ ಮರೆಮಾಚಿತ್ತು. ಇದಕ್ಕೆ ಸಂಬಂಧಿಸಿದ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

2020ರ ಅಕ್ಟೋಬರ್‌ನಲ್ಲಿ ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರ ಅಸ್ತಿತ್ವದಲ್ಲಿ ಇತ್ತು. ಹೊಸಪೇಟೆ ಶಾಸಕರಾಗಿದ್ದ ಆನಂದ್ ಸಿಂಗ್ ಅರಣ್ಯ ಸಚಿವರಾಗಿದ್ದರು.

ಸರ್ಕಾರದ ಸಮರ್ಥನೆ: ಕರ್ನಾಟಕದಲ್ಲಿ ಪ್ರಾಣಿಗಳ ಅದರಲ್ಲೂ ಆನೆಗಳ ಸುಲಭ ಸಂಚಾರಕ್ಕೆ ಅರಣ್ಯ ಕಾರಿಡಾರ್ ಅಭಿವೃದ್ಧಿಪಡಿಸಲು ಕೆಐಒಸಿಎಲ್ ಉತ್ಸುಕವಾಗಿದೆ. ಅದಕ್ಕಾಗಿ ಕಂಪನಿ 10 ವರ್ಷಗಳಲ್ಲಿ ₹50 ಕೋಟಿ ಖರ್ಚು ಮಾಡಲಿದೆ. ಯೋಜನಾ ಸ್ಥಳದಲ್ಲಿ ಅರಣ್ಯ ಇಲಾಖೆ ಮಾರ್ಗದರ್ಶನದಂತೆ ಸಸಿಗಳನ್ನು ನೆಡಲು ಒಪ್ಪಿದೆ. 'ಕಾಂಪನ್ಸೇಟರಿ ಅಫ್ಫಾರ್‌ಸ್ಟೇಷನ್'ಗೆ (ಹಾನಿಗೀಡಾದ ಅರಣ್ಯಕ್ಕೆ ಪ್ರತಿಯಾಗಿ ಬೇರೆಡೆ ಬೆಳೆಸಲಾಗುವ ಅರಣ್ಯ) ಸಂಸ್ಥೆ ಹಣ ಪಾವತಿಸಲಿದೆ.

'ಕೆಐಒಸಿಎಲ್ ಸಾರ್ವಜನಿಕ ಉದ್ದಿಮೆ. ಸಂಸ್ಥೆಯು ರಾಜ್ಯದಲ್ಲಿ ₹3,500 ಕೋಟಿ ಹೂಡಿಕೆ ಮಾಡಲಿದ್ದು, 1,500 ಮಂದಿಗೆ ಉದ್ಯೋಗ ಕೊಡಲಿದೆ. ರಾಜ್ಯಕ್ಕೆ ಆದಾಯವೂ ಸಿಗುತ್ತದೆ. ಕಂಪನಿಯು ಪ್ರಸ್ತಾವಿತ 484 ಹೆಕ್ಟೇರ್ ಪ್ರದೇಶದ ಯೋಜನೆಯಲ್ಲಿ 82 ಹೆಕ್ಟೇರ್ ಕಡಿತ ಮಾಡಲು ಒಪ್ಪಿದೆ' ಎಂದು ಕೇಂದ್ರಕ್ಕೆ ಸಲ್ಲಿಸಿದ್ದ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು.

ಆದರೆ, ಅರಣ್ಯ ಇಲಾಖೆ ವರದಿಗೆ ವ್ಯತಿರಿಕ್ತ ವರದಿಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಕೇಂದ್ರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅರಣ್ಯ ಉಪ ಮಹಾನಿರೀಕ್ಷಕ ಬ್ರಿಜೇಂದರ್ ಸ್ವರೂಪ್ ಗಮನಿಸಿದ್ದರು. 2020ರ ನವೆಂಬರ್ 26ರಂದು ಕರ್ನಾಟಕದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ (ಅರಣ್ಯ) ಪತ್ರ ಬರೆದು, ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದರು.

'ದೇವದಾರಿ ಗಣಿ ಗುತ್ತಿಗೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಕೊಟ್ಟ ವರದಿಗೆ ವ್ಯತಿರಿಕ್ತ ವರದಿ ನೀಡುತ್ತಿರುವುದಕ್ಕೆ ರಾಜ್ಯ ಸರ್ಕಾರ ಉತ್ತರಿಸಬೇಕು. ಯೋಜನೆಯ ಅನುಷ್ಠಾನದ ವಿವಿಧ ಹಂತಗಳಲ್ಲಿ 99,330 ಮರಗಳು ಉರುಳಲಿವೆ ಎಂದು ಡಿಸಿಎಫ್ ವರದಿಯಲ್ಲಿದೆ. ಇದನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದಿದ್ದರು.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಬಳ್ಳಾರಿ ಜಿಲ್ಲೆಯಲ್ಲಿ ಅನುಮತಿಸಲಾದ ವಾರ್ಷಿಕ ಅದಿರು ಉತ್ಪಾದನೆ 28 ದಶಲಕ್ಷ ಮೆಟ್ರಿಕ್ ಟನ್ (ಎಂಎಂಟಿ). ಆದರೆ, ಇದಕ್ಕಿಂತ ಹೆಚ್ಚು ಉತ್ಪಾದನೆಗೆ ಅವಕಾಶ ನೀಡುತ್ತಿರುವುದಕ್ಕೆ ಸ್ಪಷ್ಟನೆ ಬೇಕು. ಬಳ್ಳಾರಿಯಲ್ಲಿ ಒಟ್ಟು 67 ಗಣಿಗಳು ಗುತ್ತಿಗೆಯಲ್ಲಿ ಲಭ್ಯವಿವೆ. ಅದರಲ್ಲಿ ಯಾವುದನ್ನಾದರೂ ಕೆಐಒಸಿಎಲ್‌ಗೆ ನೀಡಬಹುದು ಎಂದು ವರದಿಯಲ್ಲಿದೆ. ಆದರೆ, ಗಣಿಗಾರಿಕೆಗೆ ಅರಣ್ಯ ಭೂಮಿ ಕಬಳಿಸುತ್ತಿರುವುದು ಯಾಕೆ ಎಂದು ಪ್ರಶ್ನಿಸಿದ್ದರು.

'ಚರ್ಚೆಗೆ ಕೋರ್ಟ್ ವೇದಿಕೆ'

'ಕೇಂದ್ರದ ಕ್ಯಾಬಿನೆಟ್ ಮಂತ್ರಿಯಾಗಿ ಎಚ್.ಡಿ ಕುಮಾರಸ್ವಾಮಿ ಅವರು ಶಪಥ ತೆಗೆದುಕೊಂಡಿದ್ದಾರೆ. ಮೊದಲ ದಿನ ಅವರು ಸೌಜನ್ಯಕ್ಕೆ ಇಲಾಖೆಗೆ ಭೇಟಿ ಕೊಟ್ಟಿರಬಹುದು. ಆದರೆ, ಮೊದಲ ಭೇಟಿಯಲ್ಲೇ ದೇವದಾರಿ ಗಣಿಗೆ ಸಹಿ ಹಾಕುವ ಅವಸರ ಏನಿತ್ತು?' ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ'ಯೊಂದಿಗೆ ಮಾತನಾಡಿರುವ ಅವರು, 'ಕುಮಾರಸ್ವಾಮಿ ಸ್ಥಳೀಯರೊಂದಿಗೆ ಮಾತನಾಡಿ, ಸಹಿ ಹಾಕುತ್ತೇನೆ ಎಂದು ಅಧಿಕಾರಿಗಳಿಗೆ ಹೇಳಬಹುದಿತ್ತು. ಅವರಿಗೆ ಅರಣ್ಯದ ಬಗ್ಗೆ ಕಳಕಳಿ ಇದೆಯೇ? ಅರಣ್ಯ ಭೂಮಿ ಕಬಳಿಸಲು ಕೇಂದ್ರ ಸರ್ಕಾರ ಈ ವರೆಗೆ ಏನು ಮಾಡಿದೆ ಎಂಬುದು ಗೊತ್ತಿದೆಯೇ. ಇದನ್ನು ತಡೆಯಲು ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳ ಬಗ್ಗೆ ಕುಮಾರಸ್ವಾಮಿ ಅವರಿಗೆ ಗೊತ್ತಿದೆಯೇ ಎಂದು ಕೇಳಿದ್ದಾರೆ. ಕೋರ್ಟ್‌ನಲ್ಲಿ ನಮ್ಮ ದಾಖಲೆಗಳನ್ನು ಇಡುತ್ತೇವೆ. ಅಲ್ಲಿ ಅವರೂ ದಾಖಲೆ ಇಡಲಿ. ಅವರ ಆತುರದ ನಿರ್ಧಾರಗಳ ಬಗ್ಗೆ ನಾವು ಬಹಿರಂಗವಾಗಿ ಮಾತನಾಡುವುದು ಏನಿದೆ? ಎಂದು ಹೇಳಿದ್ದಾರೆ.

ವಿಚಾರಣಾ ಹಂತದಲ್ಲಿ ಪ್ರಕರಣ

ಸಂಡೂರಿನ ಅರಣ್ಯದಲ್ಲಿ ಕೆಐಒಸಿಎಲ್‌ಗೆ ದೇವದಾರಿ ಗಣಿಗಾರಿಕೆಗೆ ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದ ರಿಟ್ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಇದರ ಹೊರತಾಗಿಯೂ ದೇವದಾರಿಗೆ ಸಂಬಂಧಿಸಿದಂತೆ ರಾಜ್ಯ, ಕೇಂದ್ರ ಸರ್ಕಾರದ ಹಂತದಲ್ಲಿ ಹಲವು ಬೆಳವಣಿಗೆ, ನಿರ್ಧಾರಗಳಾಗಿವೆ. ಗಣಿಗಾರಿಕೆಗೆ ಸ್ಟೇಜ್–2 ಅನುಮತಿಯೂ ಸಿಕ್ಕಿದೆ.

ಹೋಟೆಲ್ ಕಟ್ಟಡ ಕುಸಿತ: ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಗೋಣಿಕೊಪ್ಪಲಿನಲ್ಲಿ ಗುರುವಾರ ಅಂಬೂರ್ ಬಿರಿಯಾನಿ ಹೋಟೆಲ್ ಕಟ್ಟಡ ಕುಸಿದಿದ್ದು, ಅದರಡಿ ಸಿಲುಕಿದ್ದ ಎಲ್ಲ 6 ಮಂದಿಯನ್ನೂ ರಕ್ಷಿಸಲಾಗಿದೆ. ಅವರಲ್ಲಿ ಐವರಿಗೆ ಗಾಯಗಳಾಗಿವೆ. 72 ವರ್ಷಗಳಷ್ಟು ಹಳೆಯ ಕಟ್ಟಡ ಇದು.

ಹೋಟೆಲ್ ಮಾಲೀಕ ಎನ್. ತಿರುಮುರುಗನ್ (60), ಪತ್ನಿ ಅಲಮೇಲಮ್ಮ(46), ಪುತ್ರ ನಾರಾಯಣ (24), ಕೆಲಸಗಾರ ಮಹಾಲಿಂಗ (25) ಹಾಗೂ ಗ್ರಾಹಕ ಮಧು (32) ಗಾಯಗೊಂಡಿದ್ದು, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮತ್ತೊಬ್ಬ ಗ್ರಾಹಕ ತಿಮ್ಮ (45) ಅವರನ್ನೂ ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತುರ್ತು ಸೇವೆಗಳು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದರು. ನಂತರ, ಮಡಿಕೇರಿಯಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ಸಹ ಆಗಮಿಸಿ ರಕ್ಷಣಾ ಕಾರ್ಯವನ್ನು ಪೂರ್ಣಗೊಳಿಸಿತು.

ಕರ್ನಾಟಕ ಸ್ವಾಭಿಮಾನಿ ವೇದಿಕೆ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಅವರಿಗೆ 'ಚಂಪಾ ಸಿರಿಗನ್ನಡ ಪ್ರಶಸ್ತಿ'ಯನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರದಾನ ಮಾಡಿದರು. ಕರ್ನಾಟಕ ಸ್ವಾಭಿಮಾನಿ ವೇದಿಕೆಯ ಅಧ್ಯಕ್ಷ ಶಂಕರ್ ಹೂಗಾರ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಸಾಹಿತಿ ಹಂ.ಪ.ನಾಗರಾಜಯ್ಯ, ಕಾರ್ಮಿಕ ಇಲಾಖೆಯ ಉಪ ಆಯುಕ್ತೆ ಮೀನಾ ಪಾಟೀಲ ಪಾಲ್ಗೊಂಡಿದ್ದರು. ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ –ಪ್ರಜಾವಾಣಿ ಚಿತ್ರ

'ಶೆಟ್ಟರ್ ಸೋತಿದ್ದರೆ ಸನ್ಯಾಸಿ ಆಗುತ್ತಿದ್ದೆ'

ಪ್ರಜಾವಾಣಿ ವಾರ್ತೆ

ಗೋಕಾಕ: 'ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಜಗದೀಶ ಶೆಟ್ಟರ್ ಸೋತಿದ್ದರೆ ನಾನು ಹಿಮಾಲಯಕ್ಕೆ ಹೋಗಿ ಸನ್ಯಾಸಿ ಆಗಬೇಕಿತ್ತು. 'ಮಹಾನಾಯಕ' ಹಾಗೂ 'ವಿಷಕನ್ಯೆ' ಸೋಲು ನನ್ನನ್ನು ಸನ್ಯಾಸತ್ವದಿಂದ ಪಾರು ಮಾಡಿದೆ' ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಸಂಸದ ಜಗದೀಶ ಶೆಟ್ಟರ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿಧಾನಸಭೆ ಚುನಾವಣೆಯಲ್ಲಿ ಸೋಲುಂಡೆವು. ಹಾಗಾಗಿ, ನಾನು ಎಲ್ಲಿಯೂ ಏನೂ ಮಾತನಾಡಿಲ್ಲ. ಪದೇಪದೇ ಸೋಲುವುದು ಸರಿಯಲ್ಲ. ಹೀಗಾಗಿ, ಈ ಚುನಾವಣೆಯನ್ನು ನಾನು ಪ್ರತಿಷ್ಠೆಯಾಗಿ ತೆಗೆದುಕೊಂಡೆ. ಒಂದು ವೇಳೆ ಈ ಬಾರಿಯೂ ಸೋತರೆ ಸನ್ಯಾಸಿ ಆಗಲು ಹಿಮಾಲಯದಲ್ಲಿ ಒಂದು ಜಾಗ ಕೂಡ ನೋಡಿ ಬಂದಿದ್ದೆ' ಎಂದು ಹೇಳಿ ನಕ್ಕರು.

ವಾಮಮಾರ್ಗದಲ್ಲಿ ಉಪ ಚುನಾವಣೆ ಗೆಲ್ಲಲು ತಂತ್ರ: ಸಿಪಿವೈ ಆರೋಪ

'ಚನ್ನಪಟ್ಟಣದಲ್ಲೇ ಡಿಕೆಶಿ ರಾಜಕೀಯ ಅಂತ್ಯ'

ಪ್ರಜಾವಾಣಿ ವಾರ್ತೆ

ರಾಮನಗರ: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಮಮಾರ್ಗದಲ್ಲಿ ಚನ್ನಪಟ್ಟಣ ಉಪ ಚುನಾವಣೆ ಗೆಲ್ಲಲು ಮುಂದಾಗಿದ್ದಾರೆ. ಅವರ ಮೊದಲ ಭೇಟಿಯಲ್ಲೇ ಚುನಾವಣಾ ಅಕ್ರಮ ಎಸಗುವ ಲಕ್ಷಣ ಗೋಚರಿಸುತ್ತಿವೆ' ಎಂದು ವಿಧಾನ ಪರಿಷತ್ ಸದಸ್ಯ, ಬಿಜೆಪಿಯ ಸಿ.ಪಿ. ಯೋಗೇಶ್ವರ್ ಆರೋಪಿಸಿದ್ದಾರೆ.

'ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಅಧಿಕಾರಿಗಳ ರಹಸ್ಯ ಸಭೆ ನಡೆಸಿರುವ ಶಿವಕುಮಾರ್ ಒಂದೇ ಕೋಮಿಗೆ ಸೇರಿದ ಎಂಟು ಸಾವಿರ ಜನರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಈ ವಿಷಯ ಹೊರಗೆ ಗೊತ್ತಾಗಬಾರದೆಂದು ತಾಕೀತು ಮಾಡಿದ್ದರು. ಸಭೆಗೆ ಹಾಜರಾಗಿದ್ದ ಅಧಿಕಾರಿಗಳ ಮೊಬೈಲ್ ನಿರ್ಬಂಧಿಸಲಾಗಿತ್ತು. ಮಾಧ್ಯಮದವರಿಗೂ ಪ್ರವೇಶ ನಿರಾಕರಿಸಿದ್ದರು' ಎಂದು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಡಿ.ಕೆ.ಶಿವಕುಮಾರ್ ಸ್ಪರ್ಧೆಯನ್ನು ಸ್ವಾಗತಿಸುವೆ. ಆದರೆ, ಸ್ಪರ್ಧೆ ಆರೋಗ್ಯಕರವಾಗಿರಬೇಕು. ಡಿಸಿಎಂ ಕ್ಷೇತ್ರ ಭೇಟಿ ಮತ್ತು ನಡವಳಿಕೆ ಗಮನಿಸಿದರೆ ಚುನಾವಣೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯುವ ಬಗ್ಗೆ ಅನುಮಾನವಿದೆ. ಹಾಗಾಗಿ, ಚುನಾವಣಾ ಅಕ್ರಮಕ್ಕೆ ಅವಕಾಶವಿಲ್ಲದಂತೆ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ಮೈತ್ರಿ ನಾಯಕರು ಚುನಾವಣಾ ಆಯೋಗಕ್ಕೆ ಸದ್ಯದಲ್ಲೇ ಮನವಿ ಸಲ್ಲಿಸುತ್ತೇವೆ' ಎಂದರು.

ಕೊನೆ ಅಧ್ಯಾಯ: 'ಚನ್ನಪಟ್ಟಣದಲ್ಲಿ ಗೆದ್ದು ಮುಖ್ಯಮಂತ್ರಿಯಾಗುವ ಕನಸು ಕಂಡಿರುವ ಶಿವಕುಮಾರ್, ಇಲ್ಲಿಂದ ರಾಜಕೀಯದ ಹೊಸ ಅಧ್ಯಾಯ ಶುರುವಾಗಲಿದೆ ಎಂದು ಹೇಳಿದ್ದಾರೆ. ಆದರೆ, ಕ್ಷೇತ್ರವು ಮೈತ್ರಿ ಪಕ್ಷಗಳ ನೆಲೆಯಾಗಿರುವುದರಿಂದ ಇದೇ ಚುನಾವಣೆ ಶಿವಕುಮಾರ್ ರಾಜಕೀಯ ಜೀವನದ ಕೊನೆಯ ಅಧ್ಯಾಯವಾಗಲಿದೆ. ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂಬ ಅವರ ಬೆಂಬಲಿಗರ ಘೋಷಣೆಗಳೇ ಅವರಿಗೆ ಮುಳುವಾಗಲಿವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಚನ್ನಪಟ್ಟಣವನ್ನು ಯಾವುದೇ ಕಾರಣಕ್ಕೂ ಕನಕಪುರಕ್ಕೆ ಹೋಲಿಸಬಾರದು. ಕನಕಪುರ ಕೊಲೆ, ಬೆದರಿಕೆ, ದರ್ಪ, ದೌರ್ಜನ್ಯಕ್ಕೆ ಮಾದರಿಯಾದುದೇ ಹೊರತು, ಬೊಂಬೆನಾಡಿನಂತೆ ಆರ್ಥಿಕ ಸಮೃದ್ಧಿ, ತಲಾ ಆದಾಯ ವೃದ್ಧಿ, ನೀರಾವರಿ ಕ್ರಾಂತಿಯಂತಹ ಅಭಿವೃದ್ಧಿಗೆ ಹೆಸರಾಗಿಲ್ಲ. ತಮ್ಮ ವಿರೋಧಿಗಳನ್ನು ಬಗ್ಗು ಬಡಿದು ಸಹೋದರರು ಸ್ಥಾಪಿಸಿರುವ ಕನಕಪುರ ರಿಪಬ್ಲಿಕ್ ಮಾದರಿಯನ್ನು ಇಲ್ಲಿಗೆ ಬರಲು ಬಿಡುವುದಿಲ್ಲ' ಎಂದರು.

'ಲೋಕಸಭಾ ಚುನಾವಣೆಯಲ್ಲಿ ಸೋತಿರುವ ಡಿ.ಕೆ. ಸುರೇಶ್ ಉಪ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆಂಬ ಮಾತು ಕೇಳಿ ಬರುತ್ತಿದ್ದವು. ಈಗ ಅವರ ಅಣ್ಣ ಸ್ಪರ್ಧಿಸಲು ಮುಂದಾಗಿರುವುದನ್ನು ನೋಡಿದರೆ ಸುರೇಶ್ ಅಸಮರ್ಥ ಎಂದು ಅವರೇ ಒಪ್ಪಿಕೊಂಡಂತಲ್ಲವೆ?' ಎಂದು ಪ್ರಶ್ನಿಸಿದರು.

ಅಭ್ಯರ್ಥಿ ಆಯ್ಕೆ ಎಚ್‌ಡಿಕೆಗೆ ಬಿಟ್ಟದ್ದು; ಅವಕಾಶ ಕೊಟ್ಟರೆ ಸ್ಪರ್ಧೆ: ಯೋಗೇಶ್ವರ್

'ಉಪ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಯಾರು ಸ್ಪರ್ಧಿಸಬೇಕು ಎಂಬುದನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನಿರ್ಧರಿಸುತ್ತಾರೆ. ಅವರೇ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಕಾರಣಕ್ಕಾಗಿ ಮೈತ್ರಿ ಪಕ್ಷಗಳ ನಾಯಕರೊಂದಿಗೆ ಚರ್ಚಿಸಿ ಅವರೇ ತೀರ್ಮಾನ ಕೈಗೊಳ್ಳುತ್ತಾರೆ. ನಾಯಕರು ಅವಕಾಶ ಕೊಟ್ಟರೆ ನಾನು ಸ್ಪರ್ಧೆ ಮಾಡುವೆ. ಇಲ್ಲದಿದ್ದರೆ, ಯಾರೇ ಅಭ್ಯರ್ಥಿಯಾದರೂ ಅವರ ಪರವಾಗಿ ಕೆಲಸ ಮಾಡುವೆ. ಚಿಹ್ನೆ ನಮಗೆ ಮುಖ್ಯವಲ್ಲ. ಒಟ್ಟಿನಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲ್ಲಬೇಕಷ್ಟೆ. ಕ್ಷೇತ್ರದ ಗೆಲುವಿಗಾಗಿ ಪಕ್ಷದ ನಾಯಕರು ಶೀಘ್ರ ಸಭೆ ನಡೆಸಿ ಚರ್ಚಿಸಲಿದ್ದಾರೆ. ಮುಂದಿನ ವಾರದಿಂದ ನಾವೂ ಚುನಾವಣೆ ತಯಾರಿ ಶುರು ಮಾಡಲಿದ್ದೇವೆ' ಎಂದು ಯೋಗೇಶ್ವರ್ ಹೇಳಿದರು.

ಡಿಕೆಶಿ ಸಿ.ಎಂ ಆಗಲು ಅವರ ಪಕ್ಷದ ಶಾಸಕರ ವಿಶ್ವಾಸ ಸಾಕು. ಚನ್ನಪಟ್ಟಣದಲ್ಲಿ ಸ್ಪರ್ಧಿಸಿದರೆ ಈ ಚುನಾವಣೆ ಅವರ ರಾಜಕೀಯದ ಕೊನೆಯ ಅಧ್ಯಾಯವಾಗಲಿದೆ

ಸಿ.ಪಿ. ಯೋಗೇಶ್ವರ್
ವಿಧಾನ ಪರಿಷತ್ ಸದಸ್ಯ

ಅರ್ಜುನ ಆನೆಯ ಸ್ಮಾರಕಕ್ಕೆ ಜುಲೈನಲ್ಲಿ ಶಿಲಾನ್ಯಾಸ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಕಳೆದ ಡಿ. 4ರಂದು ಆನೆ ಸೆರೆ ಕಾರ್ಯಾಚರಣೆ ವೇಳೆ ಮೃತಪಟ್ಟ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಜುಲೈನಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಸಫಾರಿಗಾಗಿ ವಿಶೇಷ ವಿನ್ಯಾಸದೊಂದಿಗೆ ಸಿದ್ಧವಾಗಿರುವ ಮೂರು ಹೊಸ ಮಿನಿ ಬಸ್‌ಗಳಿಗೆ ಗುರುವಾರ ಹಸಿರು ನಿಶಾನೆ ತೋರಿಸಿ ಮಾತನಾಡಿದ ಅವರು, 'ಯಸಳೂರು ಬಳಿ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ಮತ್ತು ಅರ್ಜುನನ ಆವಾಸ ಸ್ಥಾನವಾಗಿದ್ದ, ನಾಗರಹೊಳೆಯ ಬಳ್ಳೆ ಆನೆ ಶಿಬಿರದಲ್ಲಿ ಸ್ಮಾರಕ ನಿರ್ಮಾಣ ಮಾಡಲಾಗುವುದು' ಎಂದರು.

'ಎರಡೂ ಸ್ಮಾರಕಗಳಲ್ಲಿ ಅರ್ಜುನನ ಪ್ರತಿಕೃತಿ ಪ್ರತಿಷ್ಠಾಪಿಸಲಾಗುವುದು. ಜೊತೆಗೆ ಚಿನ್ನದ ಅಂಬಾರಿ ಹೊತ್ತ ಅರ್ಜುನನ ಚಿತ್ರಗಳು, ಅರ್ಜುನ ವಿವಿಧ ಆನೆ ಕಾರ್ಯಾಚರಣೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಚಿತ್ರಗಳನ್ನು ಅಳವಡಿಸುವ ಮೂಲಕ ಜನರ ಮನದಲ್ಲಿ ಅರ್ಜುನನ ಸಾಹಸ, ಸೇವೆ, ಕೊಡುಗೆ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಲಾಗುವುದು. ಆರು ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ' ಎಂದರು.

ರಾಜ್ಯದ ಹುಲಿ ಸಂರಕ್ಷಿತ ಪ್ರದೇಶ ಸೇರಿದಂತೆ ಎಲ್ಲ ಅರಣ್ಯ ಪ್ರದೇಶವನ್ನು ಸಂಪೂರ್ಣ ಪ್ಲಾಸ್ಟಿಕ್ ಮುಕ್ತಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಹುಲಿ ಸಂರಕ್ಷಣಾ ಪ್ರತಿಷ್ಠಾನದ 15ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ವನ್ಯಜೀವಿಗಳ ಪ್ರಾಣಕ್ಕೆ ಪ್ಲಾಸ್ಟಿಕ್ ಕುತ್ತು ತರುತ್ತದೆ' ಎಂದರು.

ವಿಧಾನಸೌಧ ಮುಂಭಾಗ ನಾಗರಹೊಳೆ ಸಫಾರಿ ಮಿನಿ ಬಸ್‌ಗಳಿಗೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹಸಿರು ನಿಶಾನೆ ತೋರಿಸಿದರು. ಶಾಸಕರಾದ ಎ.ಎಸ್.ಪೊನ್ನಣ್ಣ, ಜಿ.ಡಿ.ಹರೀಶ್ ಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕೊಲೆ ಮಾಡಿ ಆತ್ಮಹತ್ಯೆ ಶಂಕೆ • ಆಸ್ತಿ ವಿಷಯವೇ ಕಾರಣ?

ಗುಂಡಿನ ದಾಳಿ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಹೊಯ್ಸಳ ಬಡಾವಣೆಯಲ್ಲಿ ಗುರುವಾರ ಮಧ್ಯಾಹ್ನ ಗುಂಡಿನ ದಾಳಿ ನಡೆದಿದ್ದು, ನಗರದ ಆಡುವಳ್ಳಿಯ ಶರಾಫತ್ ಅಲಿ (52) ಹಾಗೂ ಬೆಂಗಳೂರಿನ ಆಸೀಫ್ (46) ಎಂಬವರು ಸಾವಿಗೀಡಾಗಿದ್ದಾರೆ.

ಮಧ್ಯಾಹ್ನ 12.30 ರ ಸಮಯದಲ್ಲಿ ಕಾರಿನಲ್ಲಿ ಇಬ್ಬರೂ ಬಡಾವಣೆಗೆ ಬಂದು, ನಿವೇಶನವೊಂದನ್ನು ಪರಿಶೀಲಿಸಿ, ಕಾರಿನಲ್ಲಿ ಕುಳಿತು ಮಾತನಾಡುತ್ತಿದ್ದರು. ನಂತರ ಗುಂಡಿನ ಸದ್ದು ಕೇಳಿ ಬಂದಿತ್ತು. ಸುತ್ತಮುತ್ತಲಿನ ಜನ ಬಂದು ನೋಡಿದಾಗ ಶರಾಫತ್ ಅಲಿ ಶವ ಕಾರಿನ ಎದುರು ಬಿದ್ದಿತ್ತು. ಆಸೀಫ್ ಶವ ಕಾರಿನಲ್ಲಿತ್ತು.

ಸ್ಥಳಕ್ಕೆ ಭೇಟಿ ನೀಡಿದ್ದ ಎಸ್ಪಿ ಮೊಹಮ್ಮದ್ ಸುಜೀತಾ ಪ್ರತಿಕ್ರಿಯಿಸಿ, 'ಮೇಲ್ನೋಟಕ್ಕೆ ವ್ಯವಹಾರಕ್ಕೆ ಸಂಬಂಧಿಸಿದ ಘಟನೆಯಂತೆ ಕಾಣುತ್ತಿದೆ. ಕಾರಿನೊಳಗೆ ಕೂತಿರುವ ವೇಳೆಯೇ ಗುಂಡು ಹಾರಿಸಲಾಗಿದೆ. ಆಸೀಫ್, ಶರಾಫತ್ ಅಲಿಗೆ ಗುಂಡು ಹೊಡೆದಿದ್ದು, ನಂತರ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು. ಯಾವ ಕಾರಣಕ್ಕೆ ಘಟನೆ ನಡೆಯಿತೆಂಬ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ತಿಳಿಸಿದರು.

'ಕಾರಿನಲ್ಲಿಯೇ ಪಿಸ್ತೂಲ್ ಸಿಕ್ಕಿದೆ. ಸ್ಥಳಕ್ಕೆ ಬೇರೆ ವಾಹನ ಬಂದಿಲ್ಲ. ಹೀಗಾಗಿ ಬೇರೆಯವರು ಬಂದು ಗುಂಡಿನ ದಾಳಿ ನಡೆಸಿರುವ ಸಾಧ್ಯತೆಗಳಿಲ್ಲ. ಗುಂಡು ಹಾರಿಸಿ ಕೊಲೆ ಮಾಡಿ, ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಎಲ್ಲ ಆಯಾಮದಲ್ಲಿಯೂ ತನಿಖೆ ಮುಂದುವರಿದಿದೆ' ಎಂದರು.

'ಕಾರಿನ ಹೊರಗೆ ಬಿದ್ದಿದ್ದ ಶರಾಫತ್ ಅಲಿ ತಲೆಯಲ್ಲಿ ಗುಂಡು ಹೊಕ್ಕಿದ್ದು, ಕಾರಿನಲ್ಲಿದ್ದ ಆಸೀಫ್ ಕೂಡ ಗುಂಡೇಟಿನಿಂದ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, 'ಘಟನೆಯಲ್ಲಿ ಸಿಕ್ಕಿರುವ ಗನ್ ಆಸೀಫ್ ಅವರದ್ದಾಗಿದ್ದು, ಕಾರು ಶರಾಫತ್ ಅಲಿ ಅವರದ್ದು' ಎಂದು ಹೇಳಿದರು.

ಒಟ್ಟಿಗೆ ಉಪಾಹಾರ ಮಾಡಿದ್ದರು: 'ಗುರುವಾರ ಬೆಳಿಗ್ಗೆ ಅರಾಫತ್ ಅಲಿ ಅವರ ಮನೆಯಲ್ಲಿ ಇಬ್ಬರೂ ಒಟ್ಟಿಗೆ ಉಪಾಹಾರ ಸೇವಿಸಿದ್ದರು. ನಂತರ ಆಸ್ತಿ ನೋಂದಣಿಗಾಗಿ ಉಪ ನೋಂದಣಾಧಿಕಾರಿ ಕಚೇರಿಗೆ ತೆರಳಬೇಕಿತ್ತು. ಆದರೆ, ಹೊಯ್ಸಳ ಬಡಾವಣೆಗೆ ಏಕೆ ಹೋದರು ಎಂಬುದು ಗೊತ್ತಾಗುತ್ತಿಲ್ಲ' ಎಂದು ಸಂಬಂಧಿಯೊಬ್ಬರು ತಿಳಿಸಿದರು.

'ಸಮಿತಿ ಒಗ್ಗಟ್ಟು ಬಲಪಡಿಸಲು ಪ್ರತಿಜ್ಞೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಾಸಾಶ್ರಮ ಕೇಂದ್ರದಲ್ಲಿ ಇಪಿಎಸ್–95 ರಾಷ್ಟ್ರೀಯ ಸಂಘರ್ಷ ಸಮಿತಿಯ ಸಂಸ್ಥಾಪನಾ ದಿನ ಹಾಗೂ ಪರಿಸರ ದಿನವನ್ನು ಸಸಿ ನೆಡುವ ಮೂಲಕ ಆಚರಿಸಲಾಯಿತು.

ನಂತರ ನಡೆದ ಸಮಿತಿ ಸಮಾವೇಶದಲ್ಲಿ 'ರಾಷ್ಟ್ರೀಯ ಸಂಘರ್ಷ ಸಮಿತಿಗೆ ಇನ್ನಷ್ಟು ಇಪಿಎಸ್-95 ಪಿಂಚಣಿದಾರರನ್ನು ಸೇರಿಸಿ ಸಮಿತಿಯ ಒಗ್ಗಟ್ಟನ್ನು ಬಲಪಡಿಸಿ ತಮ್ಮ ಬೇಡಿಕೆಗಳ ಇತ್ಯರ್ಥಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಹೋರಾಡಲು ಪ್ರತಿಜ್ಞಾ ವಿಧಿಯನ್ನು ಸಮಿತಿ ಸದಸ್ಯರು ಸ್ವೀಕರಿಸಿದರು.

ಹೊಸ ಸರ್ಕಾರಕ್ಕೆ, ರಾಜ್ಯದ 28 ಸಂಸದರಿಗೆ ಇಪಿಎಸ್-95 ಪಿಂಚಣಿದಾರರ ಸಂಕಷ್ಟಗಳನ್ನು ಮನವರಿಕೆ ಮಾಡಬೇಕು. ಮೂರು ಬೇಡಿಕೆಗಳಾದ ₹7,500 ಕನಿಷ್ಠ ಪಿಂಚಣಿ ನಿಗದಿ, ಡಿ.ಎ. ಹಾಗೂ ಪಿಂಚಣಿದಾರರ ಕುಟುಂಬಕ್ಕೆ ಜೀವಮಾನ ಪರ್ಯಂತ ಉಚಿತ ವೈದ್ಯಕೀಯ ವಿಮೆ ಒದಗಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಅವರ ಮನೆ ಹಾಗೂ ಕಚೇರಿಯ ಹತ್ತಿರ ಧರಣಿ ಕೂರಲು ಸಭೆಯಲ್ಲಿ ತೀರ್ಮಾನಿಸಿದರು.

ರಾಷ್ಟ್ರೀಯ ಸಂಘರ್ಷ ಸಮಿತಿಯ ರಮಾಕಾಂತ ನರಗುಂದ, ಜಿ.ಎಸ್.ಎಂ. ಸ್ವಾಮಿ, ಸಿ.ಎಸ್. ಮಂಜುನಾಥ, ವಿ.ಕೆ. ಗಡದ್, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ನಿವೃತ್ತರ ಸಂಘದ ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಉಪಾಧ್ಯಕ್ಷ ಸುಬ್ಬಣ್ಣ, ಪದಾಧಿಕಾರಿಗಳು ಭಾಗವಹಿಸಿದ್ದರು.

ಎನ್‌ಟಿಎ ವೈಫಲ್ಯ: ಸಚಿವ ಪ್ರಧಾನ್

ನವದೆಹಲಿ (ಪಿಟಿಐ): ಯುಜಿಸಿ–ನೆಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) 'ಸಾಂಸ್ಥಿಕ ವೈಫಲ್ಯ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಹೇಳಿದರು.

'ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದಕ್ಕೆ ಸ್ಪಷ್ಟ ಪುರಾವೆಗಳು ಲಭ್ಯವಾಗಿದ್ದರಿಂದ ಪರೀಕ್ಷೆ ರದ್ದುಗೊಳಿಸಲು ನಿರ್ಧರಿಸಿದ್ದೇವೆ' ಎಂದರು.

ಎನ್‌ಟಿಎಯ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಮತ್ತು ಸುಧಾರಣೆಗಳನ್ನು ಶಿಫಾರಸು ಮಾಡಲು ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರ ರಚಿಸಲಿದೆ ಎಂದು ತಿಳಿಸಿದರು.

ಸಚಿವರಿಗೆ ತಿಳಿಹೇಳುವಂತೆ ಮುಖ್ಯಮಂತ್ರಿಗೆ ಪತ್ರ ಬರೆದ ಸಾಹಿತಿಗಳು

'ಸಾಂಸ್ಕೃತಿಕ ಜೀತಗಾರಿಕೆ ಒಪ್ಪಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಡೆಮಿ, ಪ್ರಾಧಿಕಾರಗಳು ಹಾಗೂ ಸಾಹಿತಿಗಳ ಕುರಿತು ಕೆಪಿಸಿಸಿ ಅಧ್ಯಕ್ಷರ ಹೇಳಿಕೆ ಕಾಂಗ್ರೆಸ್ ಪಕ್ಷದ ನಿಲುವೂ ಆಗಿದೆ. ಸಾಹಿತಿ, ಕಲಾವಿದರು, ಸಂಸ್ಕೃತಿ ಚಿಂತಕರನ್ನು ಯಾವುದೇ ಪಕ್ಷದ ಅಡಿಯಾಳುಗಳಂತೆ ಕಾಣುವುದು ಸರಿಯಾದ ನಡವಳಿಕೆಯಲ್ಲ. ಇಂತಹ ಸಾಂಸ್ಕೃತಿಕ ಜೀತಗಾರಿಕೆ ಒಪ್ಪಲು ಸಾಧ್ಯವಿಲ್ಲ' ಎಂದು 'ಜಾಗೃತ ನಾಗರಿಕರು–ಕರ್ನಾಟಕ'ದ ಪ್ರಮುಖರು ಹೇಳಿದ್ದಾರೆ.

'ಸಾಹಿತಿಗಳು ರಾಜಕಾರಣಿಗಳೇ, ಬಾಯಿಬಿಟ್ಟು ಹೇಳಿಕೊಳ್ಳುವುದಿಲ್ಲ ಅಷ್ಟೆ' ಎಂದು ಉಪಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆಯನ್ನು ಖಂಡಿಸಿದ್ದಾರೆ.

'ಸಾಂಸ್ಕೃತಿಕ ಕ್ಷೇತ್ರ ತನ್ನ ಅಬಾಧಿತ ಗುಣದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳು ಸಂರಕ್ಷಿತವಾಗುತ್ತವೆ. ಇದು ವ್ಯಕ್ತಿಯ ಸ್ವಾಭಿಮಾನದ ಪ್ರಶ್ನೆಯಷ್ಟೇ ಅಲ್ಲ, ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರದ ಘನತೆ ಗೌರವಗಳನ್ನು ಒಳಗೊಂಡಿದೆ. ಹಾಗಾಗಿ, ಸಾಂಸ್ಕೃತಿಕ ಕ್ಷೇತ್ರಗಳ ವಿವಾದವನ್ನು ಕೊನೆಗೊಳಿಸಲು ಮುಖ್ಯಮಂತ್ರಿ ಮಧ್ಯಪ್ರವೇಶ ಮಾಡಬೇಕು' ಎಂದು ಸಂಘಟನೆಯ ಪ್ರಮುಖರಾದ ಕೆ. ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಎಸ್.ಜಿ. ಸಿದ್ದರಾಮಯ್ಯ, ವಿಜಯಾ, ಕೆ.ಎಸ್. ವಿಮಲಾ, ಬಿ.ಶ್ರೀಪಾದ ಭಟ್, ಟಿ.ಸುರೇಂದ್ರ ರಾವ್, ಬಂಜಗೆರೆ ಜಯಪ್ರಕಾಶ್, ಮೀನಾಕ್ಷಿ ಬಾಳಿ, ಎನ್. ಗಾಯತ್ರಿ, ಎನ್.ಕೆ. ವಸಂತರಾಜ್ ಒತ್ತಾಯಿಸಿದ್ದಾರೆ.

ಸಚಿವರಿಗೆ ತಿಳಿಹೇಳಿ: ಡಿ.ಕೆ. ಶಿವಕುಮಾರ್ ಅವರ ನಡೆ ಹಾಗೂ ಹೇಳಿಕೆಯನ್ನು ಖಂಡಿಸಿ 150ಕ್ಕೂ ಅಧಿಕ ಸಾಹಿತಿಗಳು, ಲೇಖಕರು ಹಾಗೂ ಬರಹಗಾರರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಎಚ್. ಎಸ್. ಅನುಪಮಾ, ನಿರಂಜನಾರಾಧ್ಯ ವಿ.ಪಿ., ಬಸವರಾಜ ಸೂಳಿಭಾವಿ, ಡಾ.ಶ್ರೀನಿವಾಸ ಕಕ್ಕಿಲಾಯ, ಕೆ.ಫಣಿರಾಜ್, ಕೆ.ಪಿ. ಸುರೇಶ, ಬಿ. ಸುರೇಶ, ಕೇಸರಿ ಹರವು, ಕೆ. ವಿ. ನಾರಾಯಣ, ಚಂದ್ರಕಾಂತ ವಡ್ಡು, ಯೋಗಾನಂದ ಬಿ.ಎನ್., ರಹಮತ್ ತರೀಕೆರೆ, ನಾ. ದಿವಾಕರ, ಎಚ್.ಎಸ್. ರಾಘವೇಂದ್ರರಾವ್, ಬಿ. ಶ್ರೀನಿವಾಸ, ಸುನಂದಾ ಕಡಮೆ ಸೇರಿ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು, ಸಂಪುಟದ ಸದಸ್ಯರಿಗೆ ತಿಳಿಹೇಳಬೇಕೆಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

'ಉಪಮುಖ್ಯಮಂತ್ರಿ ಅವರ ಉದ್ಧಟತನ ಹಾಗೂ ಅಧಿಕಾರದ ದರ್ಪದಿಂದ ಕೂಡಿದ ಹೇಳಿಕೆಯನ್ನು ನಾವು ಒಕ್ಕೊರಲಿನಿಂದ ಖಂಡಿಸುತ್ತೇವೆ. ಅವರ ಹೇಳಿಕೆಯನ್ನು ಮುಖ್ಯಮಂತ್ರಿ ಮತ್ತು ಸರ್ಕಾರದ ಇತರೆ ಸಚಿವರು ಅನುಮೋದಿಸುತ್ತಾರೆಯೇ ಎಂಬುದನ್ನು ತಿಳಿಯಬಯಸುತ್ತೇವೆ. ಉಪ ಮುಖ್ಯಮಂತ್ರಿ ಅವರದ್ದು ಪಾಳೇಗಾರಿಕೆಯ ಮನೋಧೋರಣೆಯಾಗಿದ್ದು, ಸರ್ವಾಧಿಕಾರ ಹಾಗೂ ದರ್ಪದ ನಡೆಯಾಗಿದೆ' ಎಂದಿದ್ದಾರೆ.

'ಸಾಂವಿಧಾನಿಕ ಹಾಗೂ ಪ್ರಜಾತಾಂತ್ರಿಕ ಸಂಸ್ಥೆಗಳ ಸ್ವಾಯತ್ತೆಗೆ ಧಕ್ಕೆ ತರುವಂತಹ ಅವರ ಮಾತುಗಳು, ಸಂವಿಧಾನದ ಉಳಿವಿಗಾಗಿ ಕೆಲಸ ಮಾಡುತ್ತಿರುವ ನಮ್ಮಂತಹವರಿಗೆ ನೋವನ್ನುಂಟುಮಾಡಿದೆ. ಸಾಹಿತ್ಯ, ಸಂಸ್ಕೃತಿ, ಕಲೆ ಹಾಗೂ ಶೈಕ್ಷಣಿಕ ಸ್ವಾಯತ್ತ ಸಂಸ್ಥೆ ಹಾಗೂ ಅಕಾಡೆಮಿಗಳ ಸಾಂವಿಧಾನಿಕ ಪ್ರಜಾತಾಂತ್ರಿಕ ಘನತೆಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ತಮ್ಮ ಸಂಪುಟದ ಸದಸ್ಯರಿಗೆ ತಿಳಿಹೇಳಬೇಕು' ಎಂದು ಆಗ್ರಹಿಸಿದ್ದಾರೆ.

ಸಾಹಿತಿಗಳ ಟೀಕೆ ಅವಕಾಶವಾದದ ಪ್ರತೀಕ: ರಮೇಶಬಾಬು

ಬೆಂಗಳೂರು: 'ಅಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರ ಜೊತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡೆಸಿದ ಸಭೆಯನ್ನು ಕೆಲವು ಸಾಹಿತಿಗಳು ಮತ್ತು ಚಿಂತಕರು ಟೀಕಿಸುತ್ತಿರುವುದು ಅವರ ಅವಕಾಶವಾದದ ಪ್ರತೀಕ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶಬಾಬು ಟೀಕಿಸಿದ್ದಾರೆ.

'ಕೆಲವು ಹಿರಿಯ ಸಾಹಿತಿಗಳು ಸಿದ್ಧಾಂತ ಮತ್ತು ಅಧಿಕಾರದೊಂದಿಗೆ ರಾಜಿಯಾಗದೆ, ಅಧಿಕಾರವನ್ನೂ ಬಯಸದೆ ರಾಜಕಾರಣದೊಂದಿಗೆ ಅಂತರ ಕಾಯ್ದುಕೊಂಡು ಬಂದಿದ್ದಾರೆ. ಆದರೆ, ಕೆಲವರು ಅವಕಾಶವಿರುವ ಎಲ್ಲ ಲಾಬಿಗಳನ್ನು ಮಾಡಿ ಅಧಿಕಾರ ಸಿಗದೇ ಇದ್ದಾಗ ರಾಜಕಾರಣವನ್ನು ಜರಿಯುವ ಕೆಲಸಕ್ಕೆ ಮುಂದಾಗಿದ್ದಾರೆ. ಅವರನ್ನು ನೋಡಿದರೆ ದ್ರಾಕ್ಷಿ ಸಿಗದ ನರಿಯು ದ್ರಾಕ್ಷಿಯನ್ನು ಹುಳಿ ಎಂದು ಜರಿಯುವ ಕಥೆ ನೆನಪಾಗುತ್ತದೆ' ಎಂದು ವ್ಯಂಗ್ಯವಾಡಿದ್ದಾರೆ.

'ಡಿ.ಕೆ. ಶಿವಕುಮಾರ್ ಅವರು ನಡೆಸಿದ ಸಭೆಯು ರಾಜ್ಯದ ಸಾಂಸ್ಕೃತಿಕ ವಲಯವನ್ನು ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ಕೂಡಿತ್ತು. ಅದನ್ನು ಟೀಕಿಸುವ ನೈತಿಕತೆಯನ್ನು ಈ ಲೇಖಕರು ಮತ್ತು ಸಾಹಿತಿಗಳು ಕಳೆದುಕೊಂಡಿದ್ದಾರೆ. ಸಾಹಿತಿಗಳು ಹಿತ್ತಲ ಬಾಗಿಲಿನ ಸಂಸ್ಕೃತಿಯನ್ನು ಕೈಬಿಟ್ಟು, ಮನೆಯ ಮುಂಬಾಗಿಲಿನ ಮುಖಾಂತರ ಪ್ರವೇಶ ಮಾಡುವ ಸಂಸ್ಕೃತಿಯನ್ನು ಪಾಲಿಸಲಿ' ಎಂದಿದ್ದಾರೆ.

'ಸಾಹಿತಿಗಳು ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸ್ವತಂತ್ರರಾಗಿದ್ದಾರೆ. ಆದರೆ, ಅಂತಹ ಅನಿಸಿಕೆ ಅಥವಾ ಟೀಕೆಗಳು ಆರೋಗ್ಯಕರ ಚೌಕಟ್ಟಿನಲ್ಲಿ ಇರಬೇಕಾಗುತ್ತದೆ. ಅಧಿಕಾರದೊಂದಿಗೆ ಎಂದೂ ರಾಜಿಯಾಗದ ಸಾಹಿತಿ, ಲೇಖಕ ದೇವನೂರ ಮಹಾದೇವರಂತಹ ಅಪರೂಪದ ವ್ಯಕ್ತಿಗಳು ಸರ್ಕಾರಗಳನ್ನು, ರಾಜಕಾರಣಿಗಳನ್ನು ಟೀಕಿಸುವ ನೈತಿಕತೆಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಅವರ ಸಾಲಿನಲ್ಲಿ ಬರುವವರನ್ನು ಹೊರತುಪಡಿಸಿ ಉಳಿದವರಿಗೆ ಸರ್ಕಾರ ಅಥವಾ ಕಾಂಗ್ರೆಸ್ ಪಕ್ಷ ಅಥವಾ ಡಿ.ಕೆ. ಶಿವಕುಮಾರ್ ಅವರನ್ನು ಟೀಕಿಸುವ ಯಾವುದೇ ನೈತಿಕತೆ ಇಲ್ಲ' ಎಂದೂ ಹೇಳಿದ್ದಾರೆ.

'ಎಲ್ಲ ಸಾಹಿತಿಗಳೂ ರಾಜಕಾರಣ ಮಾಡುವುದಿಲ್ಲ'

ಹೊಸದುರ್ಗ: 'ಸಾಂಸ್ಕೃತಿಕ ಅಕಾಡೆಮಿಗಳಿಗೆ, ಪ್ರಾಧಿಕಾರಗಳಿಗೆ ಸರ್ಕಾರದಿಂದ ಅಧ್ಯಕ್ಷರು ನೇಮಕವಾಗಿದ್ದರೂ ಅವರಿಗೆ ಸ್ವಾಯತ್ತತೆ ಇದೆ. ಅಕಾಡೆಮಿ, ಪ್ರಾಧಿಕಾರಗಳು ಸರ್ಕಾರದ ಅಂಗಸಂಸ್ಥೆಗಳಾದರೂ ರಾಜಕೀಯ ಪಕ್ಷಗಳ ಅಂಗಸಂಸ್ಥೆಗಳಲ್ಲ. ಎಲ್ಲ ಸಾಹಿತಿಗಳೂ ರಾಜಕಾರಣ ಮಾಡುವುದಿಲ್ಲ. ಬದಲಿಗೆ, ರಾಜಕಾರಣಿಗಳು ತಪ್ಪು ಮಾಡಿದಾಗ ಎಚ್ಚರಿಸುವ ಅವಕಾಶ ಸಾಹಿತಿಗಳಿಗಿದೆ' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.



'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು 'ಸಾಹಿತಿಗಳನ್ನು ನಾನೇ ಕರೆಸಿದ್ದು; ತಪ್ಪೇನು?' ಎಂದು ಕೇಳಿದ್ದಾರೆ. ಕರೆಸಿದ್ದರಲ್ಲಿ ಖಂಡಿತ ತಪ್ಪಿಲ್ಲ. ಆದರೆ ಪ್ರಾಧಿಕಾರದ ಅಧ್ಯಕ್ಷರೂ ರಾಜಕಾರಣಿಗಳೇ ಎಂದಿರುವುದು ಮತ್ತು ಸಾಂಸ್ಕೃತಿಕ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರನ್ನು ಸರ್ಕಾರವೇ ನೇಮಕ ಮಾಡಿದೆ. ಅವರನ್ನು ಎಲ್ಲಿಗೆ ಬೇಕಾದರೂ ಕರೆಸಿಕೊಳ್ಳಬಹುದು ಎಂದಿರುವುದು ಸರಿಯಲ್ಲ' ಎಂದು ಅವರು ಪ್ರಕಟಣೆ ಮೂಲಕ ಹೇಳಿದ್ದಾರೆ.

ಮದ್ಯ ಮಾರಾಟ ನಿಷೇಧಿಸಿ: ಸರ್ಕಾರ ದುಬಾರಿ ಮದ್ಯದ ದರ ಇಳಿಕೆ ಮಾಡುವುದರ ಬದಲು, ಮದ್ಯದ ಮಾರಾಟವನ್ನೇ ನಿಷೇಧಿಸಿದರೆ ಅದು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ತತ್ವಗಳಿಗೆ ಗೌರವ ಕೊಟ್ಟಂತಾಗುತ್ತಿದೆ ಎಂದು ಪಂಡಿತಾರಾಧ್ಯ ಶ್ರೀ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಭಾರತೀಯ ಆಹಾರ ಸುರಕ್ಷತಾ ಸಮಾವೇಶ, ಉದ್ಘಾಟನೆ: ದಿನೇಶ್ ಗುಂಡೂರಾವ್, ಉಪಸ್ಥಿತಿ: ಶ್ರೀನಿವಾಸ್. ಕೆ, ಮುಖ್ಯ ಭಾಷಣ: ದೀಪೇಂದರ್ ಸಚ್‌ದೇವ್, ಆಯೋಜನೆ: ಫುಡ್ ಸೇಫ್ಟಿ ವರ್ಕ್ಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 9

'ಪರಿಸರ ಕಾನೂನಿನ ಮೂಲಕ ಮಾನವ ಹಕ್ಕುಗಳ ರಕ್ಷಣೆ' ವಿಷಯದ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣ: ಉದ್ಘಾಟನೆ: ಜಿ.ಎಸ್. ಸಂಗ್ರೇಶಿ, ಅಧ್ಯಕ್ಷತೆ: ಎಚ್.ಜಿ. ಬಾಲಗೋಪಾಲ, ಅತಿಥಿಗಳು: ಕೆ. ದ್ವಾರಕಾನಾಥ್ ಬಾಬು, ಎಸ್.ಟಿ. ನಾರಾಯಣ ಗೌಡ, ಎಂ.ಆರ್. ಲಕ್ಷ್ಮೀ ಮನೋಹರ್, ಆಯೋಜನೆ ಹಾಗೂ ಸ್ಥಳ: ಎಸ್.ಟಿ. ನಾರಾಯಣ ಗೌಡ ಸಭಾಂಗಣ, ವಿವೇಕಾನಂದ ಕಾನೂನು ಕಾಲೇಜು, ಗಾಯತ್ರಿನಗರ, ಬೆಳಿಗ್ಗೆ 9.30

ಭೂಮಿಕೆ ಥಿಯೇಟರ್ ಕ್ಲಬ್‌ನ ರಂಗ ತರಬೇತಿ ಮತ್ತು ಪ್ರದರ್ಶನ ಕಾರ್ಯಾಗಾರದ ಸಮಾರೋಪ ಸಮಾರಂಭ: ಮುಖ್ಯ ಅತಿಥಿಗಳು: ಲಕ್ಷ್ಮಣ್ ಕೆ.ಪಿ., ಶರತ್ ಕಾರಂತ್ ಎಂ.ಜಿ., ಅಧ್ಯಕ್ಷತೆ: ರಘು ಸಿ., ಸ್ಥಳ: ಸರ್ಕಾರಿ ಪ್ರಥಮದರ್ಜೆ ಕಾಲೇಜು, ಎಚ್.ಎಸ್. ಆರ್. ಬಡಾವಣೆ, ಬೆಳಿಗ್ಗೆ 10.30

ವಿಶ್ವ ರಕ್ತದಾನಿ ದಿನಾಚರಣೆ: ಉದ್ಘಾಟನೆ: ಆರ್. ನಿರ್ಮಲ್ ಕುಮಾರ್, ಅಧ್ಯಕ್ಷತೆ: ಬಿ.ಸಿ. ಶಿವಲಿಂಗೇಗೌಡ, ಪ್ರಶಸ್ತಿ ಪ್ರದಾನ: ಜಯರಾಮ್ ರಾಯಪುರ, ಆಯೋಜನೆ: ಕರ್ನಾಟಕ ವಿದ್ಯಾರ್ಥಿ ಕೂಟ ಟ್ರಸ್ಟ್, ಭಾರತ್ ವಿದ್ಯಾ ಸಂಸ್ಥೆ, ಸ್ಥಳ: ಸೆಮಿನಾರ್ ಹಾಲ್, ಬಿ.ಇ.ಎಸ್. ಕಾಲೇಜು, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 11

ರಾಷ್ಟ್ರೀಯ ಕಾರ್ಯಕಾರಿಣಿ ಸಭೆ: ಸಂತ ಸತ್ಪಾಲ್ ಮಹಾರಾಜ್‌ಗೆ ಅಭಿನಂದನೆ, ಭೈರವಿ ಮಾತಾಜಿ ಪದಗ್ರಹಣ, ಸಭೆಯ ನೇತೃತ್ವ: ಚಿ.ನಾ. ರಾಮು, ಆಯೋಜನೆ: ಅಖಿಲ ಭಾರತ ದಲಿತ ಕ್ರಿಯಾ ಸಮಿತಿ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

'ಭಾರತೀಯ ರಂಗಭೂಮಿಯನ್ನು ಪುನರುಜ್ಜೀವನಗೊಳಿಸಲು ದೇವಾಲಯದ ನೃತ್ಯ ಮತ್ತು ಸಂಗೀತದ ಮರುಪರಿಶೀಲನೆ' ವಿಷಯದ ಬಗ್ಗೆ ಉಪನ್ಯಾಸ: ಭರತ್ ಗುಪ್ತ, ಆಯೋಜನೆ: ಸಂಸ್ಕೃತಿ ಸಚಿವಾಲಯ, ಜೈನ್ ವಿಶ್ವವಿದ್ಯಾಲಯದ ಪ್ರದರ್ಶನ ಕಲೆ ಮತ್ತು ಸಾಂಸ್ಕೃತಿಕ ಅಧ್ಯಯನ ವಿಭಾಗ, ಇಂದಿರಾಗಾಂಧಿ ಅಂತರರಾಷ್ಟ್ರೀಯ ಕಲಾ ಕೇಂದ್ರ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಶೇಷಾದ್ರಿ ರಸ್ತೆ, ಗಾಂಧಿ ನಗರ, ಮಧ್ಯಾಹ್ನ 2

ಕುವೆಂಪು ಸಿರಿಗನ್ನಡ ದತ್ತಿ ಹಾಗೂ ಮ.ರಾಮಮೂರ್ತಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿ: ಬಿ.ಕೆ. ಶಿವರಾಮ್, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಸಾ.ರಾ. ಗೋವಿಂದು, ಜೆ. ಹುಚ್ಚಪ್ಪ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ರಾಮ ನಿರ್ಯಾಣ' ಯಕ್ಷಗಾನ ತಾಳಮದ್ದಳೆ: ಅರ್ಥದಾರಿಗಳು: ಉಮಾಕಾಂತ ಭಟ್ ಕೆರೆಕೈ, ವಾಸುದೇವ ರಂಗ ಭಟ್, ಶೇಣಿ ವೇಣುಗೋಪಾಲ ಭಟ್, ಅಜಿತ್ ಕಾರಂತ, ಸುಹಾಸ್ ಮರಾಠೆ, ಭಾಗವತರು: ವಿದ್ವಾನ್ ಗಣಪತಿ ಭಟ್, ಮದ್ದಳೆ: ಎ.ಪಿ. ಫಾಟಕ್, ಆಯೋಜನೆ: ಶ್ರೀಸ್ವರ್ಣವಲ್ಲಿ ಸೇವಾ ಪ್ರತಿಷ್ಠಾನ, ಸ್ಥಳ: ಅಭ್ಯುದಯ ಶ್ರೇಯೋಧಾಮ, ವಿದ್ಯಾರಣ್ಯಪುರ, ಸಂಜೆ 5

ಯೋಗ ದಿನ

ಆಯುಷ್ ಹಾಗೂ ಆರೋಗ್ಯ ಇಲಾಖೆಯಿಂದ ಯೋಗೋತ್ಸವ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಸಿದ್ದರಾಮಯ್ಯ, ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ವಿಧಾನಸೌಧ ಮುಂಭಾಗ, ಬೆಳಿಗ್ಗೆ 6

ಆರೋಗ್ಯ ಮಂದಿರ ಟ್ರಸ್ಟ್: ಯೋಗಾಭ್ಯಾಸ: ಚಂದ್ರಶೇಖರ ಜಾಗೀರದಾರ, ಭಜನೆ: ಸಂಗೀತಾ ಕಟ್ಟಿ, ಸ್ಥಳ: ಆರೋಗ್ಯ ಮಂದಿರ ಟ್ರಸ್ಟ್, ರಾಜಾಜಿನಗರ, ಬೆಳಿಗ್ಗೆ 6

ಡಾ.ಲತಾಶೇಖರ್ ಹೋಲಿಸ್ಟಿಕ್ ವೆಲ್‌ನೆಸ್ ಸೆಂಟರ್, ಆಯುಷ್ ಟಿವಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ಯೋಗ ಸಂಜೀವಿನಿ: ನೇತೃತ್ವ: ಲತಾಶೇಖರ್, ಸ್ಥಳ: ಗಾಯಿತ್ರಿ ಭವನ, ಸಿದ್ದಣ್ಣ ಲೇಔಟ್, ಬಸವನಗುಡಿ, ಬೆಳಗ್ಗೆ 8

ಅಕ್ಷರ ಯೋಗ ಕೇಂದ್ರ ಯೋಗ ಪ್ರದರ್ಶನ: 7 ಗಿನ್ನಿಸ್ ದಾಖಲೆ ಪ್ರಯತ್ನ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 9

ಆರ್ಟ್ ಆಫ್ ಲಿವಿಂಗ್: ಯೋಗಾಭ್ಯಾಸ ಹಾಗೂ ಯೋಗ ಪಟುಗಳ ಉಪನ್ಯಾಸ, ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಆಶ್ರಮ, ಕನಕಪುರ ರಸ್ತೆ, ಬೆಳಿಗ್ಗೆ 7

ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಯೋಗಾಭ್ಯಾಸ: ಮುಖ್ಯ ಅತಿಥಿ: ಯೋಗ ಗುರು ಎನ್. ಆರಾಧ್ಯ, ಅಧ್ಯಕ್ಷತೆ: ಪ್ರೊ. ಲಿಂಗರಾಜ ಗಾಂಧಿ, ಸ್ಥಳ: ಕುಲಪತಿಗಳ ಕಚೇರಿ ಮುಂಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಸಿನಿಮಾ ಹಿಟ್ ಆದರಷ್ಟೇ ಬೆಲೆ

ಕೋವಿಡ್‌ಗೆ ಮೊದಲು ಕೆಲವು ಸ್ಟಾರ್‌ಗಳ ಸಿನಿಮಾಗಳು ತೆರೆಗೆ ಬರುವ ಮುಂಚೆಯೇ ಒಂದಷ್ಟು ಬಿಸಿನೆಸ್ ಮಾಡುತ್ತಿದ್ದವು. ಹಿಂದಿನ ಸಿನಿಮಾ ಹಿಟ್ ಆಗಿದ್ದರೆ, ಆ ತಂಡದ ಮತ್ತೊಂದು ಸಿನಿಮಾಕ್ಕೆ ಬೇಡಿಕೆ ಇರುತ್ತಿತ್ತು. ಆದರೆ ಈಗ ಕಾಲ ಬದಲಾಗಿದೆ. ನಿರ್ಮಾಪಕನಿಗೆ ಹಾಕಿದ ಹಣ ಮರಳಿ ಪಡೆಯಲು ಚಿತ್ರಮಂದಿರದಲ್ಲಿನ ಗೆಲುವು ಮಹತ್ವದ್ದಾಗಿದೆ.

ವಿನಾಯಕ ಕೆ.ಎಸ್

ಈ ವರ್ಷದ ಮೊದಲ ಆರು ತಿಂಗಳು ಕಳೆಯುತ್ತಿದ್ದರೂ ಕನ್ನಡದಲ್ಲಿ ಈ ತನಕ 'ಕಾಟೇರ'ವನ್ನು ಹೊರತುಪಡಿಸಿ ಉಳಿದ ಯಾವ ಸಿನಿಮಾಗಳೂ ಚಿತ್ರಮಂದಿರಗಳಲ್ಲಿ ಸೂಪರ್ ಹಿಟ್ ಎನಿಸಿಕೊಂಡಿಲ್ಲ. ಜೊತೆಗೆ, ದೊಡ್ಡ ಸ್ಟಾರ್‌ಗಳ ಸಿನಿಮಾಗಳು ತೆರೆ ಕಂಡಿಲ್ಲ. ಸ್ಟಾರ್‌ಗಳ ಸಿನಿಮಾಗಳ ಬಿಡುಗಡೆಯ ದಿನಾಂಕ ಹಲವು ಬಾರಿ ಮುಂದಕ್ಕೆ ಹೋಗುತ್ತಿವೆ. ಇದಕ್ಕೆ ಕಾರಣ ಹುಡುಕಿದರೆ 'ಬಿಸಿನೆಸ್ ಆಗಿಲ್ಲ!' ಎನ್ನುವ ಉತ್ತರ ಸಿಗುತ್ತದೆ.

ಒಂದು ಕಾಲಕ್ಕೆ ಸ್ಟಾರ್‌ಗಳ ಸಿನಿಮಾ ಹಕ್ಕು ಮುಹೂರ್ತದ ವೇಳೆಯೇ ಮಾರಾಟವಾಗುತ್ತಿತ್ತು. ಹಕ್ಕು ಖರೀದಿಸಿದ ಮಧ್ಯವರ್ತಿ ಚಿತ್ರೀಕರಣಕ್ಕೆ ಹಂತ ಹಂತವಾಗಿ ಹಣವನ್ನು ಒದಗಿಸುತ್ತಿದ್ದರು. ಆದರೆ ಕೋವಿಡ್ ನಂತರ ಕನ್ನಡ ಸಿನಿಮಾಗಳು ಬಿಡುಗಡೆಗೆ ಮುಂಚೆಯೇ ಬಿಸಿನೆಸ್ ಮಾಡುವುದು ಹಗಲುಗನಸಿನಂತಾಗಿದೆ. ಐದು ವರ್ಷಗಳಲ್ಲಿ ಬಿಡುಗಡೆಯಾಗಿರುವ ಕನಿಷ್ಠ ಸಾವಿರಕ್ಕೂ ಹೆಚ್ಚು ಸಿನಿಮಾಗಳು ಎಲ್ಲಿಯೂ ಬಿಸಿನೆಸ್ ಆಗದೇ ಉಳಿದಿವೆ. ಮಾರಾಟವಾಗಿದ್ದರೂ ಮಧ್ಯವರ್ತಿಗಳ ಮೂಲಕ ಸಣ್ಣ ಮೊತ್ತವಷ್ಟೇ ಸಿಕ್ಕಿದೆ. ಯಾವ ವೇದಿಕೆಯಲ್ಲಿಗಳೂ ಕನ್ನಡ ಸಿನಿಮಾಗಳನ್ನು ಖರೀದಿಸುತ್ತಿಲ್ಲ. ಸಿನಿಮಾ ಹಿಟ್ ಆದರೆ ಮಾತ್ರ ಬೆಲೆ ಎಂಬಂತಾಗಿದೆ.

''ಎ' ಕೆಟಗರಿಯ ಸ್ಟಾರ್‌ಗಳ ಸಿನಿಮಾ ವ್ಯವಹಾರ ಕುದುರುತ್ತದೆ. ಆದರೆ, ನಿರ್ಮಾಪಕರು ನಿರೀಕ್ಷಿಸಿದ್ದಕ್ಕಿಂತ ಅರ್ಧ ಬೆಲೆಗೆ ಕೇಳುತ್ತಾರೆ. ಹೀಗಾಗಿ ವ್ಯವಹಾರ ನಡೆಯುವುದೇ ಇಲ್ಲ. 'ಬಿ' ಮತ್ತು 'ಸಿ' ಕೆಟಗೆರಿಯ ಸ್ಟಾರ್‌ಗಳ ಸಿನಿಮಾಗಳಿಗೂ ಹೊಸಬರ ಸಿನಿಮಾಗಳಿಗೂ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂಬಂತಾಗಿದೆ' ಎನ್ನುತ್ತಾರೆ ನಿರ್ಮಾಪಕ ನಾಗೇಶ್ ಕುಮಾರ್ ಯು.ಎಸ್.

ಆದಾಯವಿಲ್ಲ: ಟಿ.ವಿ.ಯಲ್ಲಿ ಹೊಸ ಸಿನಿಮಾ ಪ್ರಸಾರ ಮಾಡಿದರೆ, ಮೊದಲ ಪ್ರಸಾರದಲ್ಲಿ ಜಾಹೀರಾತುಗಳು ಬರಬೇಕು. ಸಿನಿಮಾ ಖರೀದಿಸಿದ ಶೇಕಡ 70ರಷ್ಟು ಹಣ ಆ ಜಾಹೀರಾತುಗಳಿಂದ ಮರುಗಳಿಕೆ ಆಗಬೇಕು. ಆದರೆ ಈಗ ಶೇಕಡ 40ರಷ್ಟೂ ಮರುಗಳಿಕೆ ಆಗುತ್ತಿಲ್ಲ. ಜೊತೆಗೆ ಐದಕ್ಕಿಂತ ಹೆಚ್ಚು ಟಿಆರ್‌ಪಿ ಕೂಡ ಅರ್ಧದಷ್ಟು ಕುಸಿದಿದೆ.

'ಈ ವರ್ಷವೇ ದೊಡ್ಡ ಮೊತ್ತಕ್ಕೆ ಸಿನಿಮಾ ಖರೀದಿಸಿ ಪ್ರಸಾರ ಮಾಡಿದೆವು. ಟಿಆರ್‌ಪಿ ಬರಲಿಲ್ಲ. ಇದಕ್ಕಿಂತ ಸೀರಿಯಲ್ ಡಬ್ ಮಾಡಿ ಹಾಕಿದರೆ ಅತಿ ಕಡಿಮೆ ಖರ್ಚಿನಲ್ಲಿ ಹೊಸ ಸಿನಿಮಾದಷ್ಟೇ ಟಿಆರ್‌ಪಿ ಬರುತ್ತದೆ. ಹೀಗಾಗಿ ವಾಹಿನಿಗಳು ಮೊದಲಿನಂತೆ ಉತ್ತಮ ಮೊತ್ತ ಕೊಟ್ಟು ಸಿನಿಮಾ ಖರೀದಿಸಲು ಹಿಂದೇಟು ಹಾಕುತ್ತಿವೆ' ಎನ್ನುತ್ತಾರೆ ಮನರಂಜನಾ ವಾಹಿನಿಯೊಂದರ ಹೆಸರು ಹೇಳಲು ಇಚ್ಛಿಸದ ಅಧಿಕಾರಿ.

ಮನರಂಜನಾ ವಾಹಿನಿಗಳ ಒಟಿಟಿ ವೇದಿಕೆಯಿಂದಲೂ ಮರುಗಳಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಅದೇ ಕಾರಣಕ್ಕೆ ಇವತ್ತು ಮನರಂಜನಾ ವಾಹಿನಿಗಳ ಒಟಿಟಿ ವೇದಿಕೆಗಳು ಕನ್ನಡದಲ್ಲಿ ಅಷ್ಟು ಸಕ್ರಿಯವಾಗಿಲ್ಲ. ಯಾವುದೇ ಭಾಷೆಯ ಸೂಪರ್ ಹಿಟ್ ಆದ ಸಿನಿಮಾಗಳನ್ನು ಎಲ್ಲ ಭಾಷೆಗೂ ಡಬ್ ಮಾಡಿ ಹಾಕುತ್ತಿವೆ. ಪ್ರಮುಖ ಒಟಿಟಿ ಎನಿಸಿರುವ ನೆಟ್‌ಫ್ಲಿಕ್ಸ್‌ನಲ್ಲಿ ಕನ್ನಡಕ್ಕೆಂದು ಪ್ರತ್ಯೇಕ ವಿಭಾಗವೇ ಇಲ್ಲ. ಅಮೆಜಾನ್ ಹಕ್ಕು ಖರೀದಿ ಮಾಡಿ ಸಿನಿಮಾ ಪ್ರಸಾರ ಮಾಡುತ್ತಿಲ್ಲ.

'ಇವತ್ತು ಸಿನಿಮಾವನ್ನು ಬಿಡುಗಡೆಗೆ ಮೊದಲು ಬಿಸಿನೆಸ್ ಮಾಡಲು ಮನರಂಜನಾ ವಾಹಿನಿ ಅಥವಾ ಒಟಿಟಿಗೆ ತೆಗೆದುಕೊಂಡು ಹೋದರೆ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿಕೊಂಡು ಬನ್ನಿ ಎನ್ನುತ್ತಾರೆ. ಚಿತ್ರಮಂದಿರಗಳಿಗೆ ಜನ ಬರುವುದಿಲ್ಲ. ಒಳ್ಳೆಯ ಸಿನಿಮಾದಿಂದ ಹೆಸರು ಬರುತ್ತದೆ. ಆದರೆ ಹಾಕಿದ ಹಣ ಮರಳಿ ಪಡೆಯುವುದು ಕಷ್ಟ. ಚಿತ್ರಮಂದಿರದಲ್ಲಿ ಯಶಸ್ವಿಯಾಗಿಲ್ಲ ಎಂದಕೂಡಲೇ ಇತರೆ ವಹಿವಾಟು ವೇದಿಕೆಗಳ ಬಾಗಿಲು ಮುಚ್ಚುತ್ತವೆ. ಚಿತ್ರಮಂದಿರದಲ್ಲಿ ಎಷ್ಟು ಕಲೆಕ್ಷನ್ ಆಗಿದೆ ಎಂದು ಕೇಳುತ್ತಾರೆ. ಹಿಟ್ ಆದರೆ ಇಲ್ಲಿ ಉಸಿರಾಟ. ಇಲ್ಲವಾದರೆ ಐದು ಪೈಸೆಯೂ ಮರುಗಳಿಕೆ ಆಗುವುದಿಲ್ಲ. ನಿರ್ಮಾಪಕರು ಅತಂತ್ರ ಸ್ಥಿತಿಯಲ್ಲಿದ್ದೇವೆ' ಎನ್ನುತ್ತಾರೆ ನಿರ್ಮಾಪಕ, ನಿರ್ದೇಶಕ ರಘುನಂದನ್.

> “ಹಿಟ್ ಆದರೂ ಕನ್ನಡ ಸಿನಿಮಾಗಳಿಗೆ ಬೆಲೆಯಿಲ್ಲ. 'ಕಾಟೇರ'ದಂತಹ ಹಿಟ್ ಸಿನಿಮಾವನ್ನೇ ಒಟಿಟಿ ತೆಗೆದುಕೊಳ್ಳಲಿಲ್ಲ. ಬೇರೆ ಹಕ್ಕುಗಳನ್ನು ಮಾರಾಟ ಮಾಡಲು ಸಾಕಷ್ಟು ಅಲೆದಾಡಿದೆವು. ಡಬ್ಬಿಂಗ್ ಹಕ್ಕು ಇನ್ನೂ ಮಾರಾಟವಾಗಿಲ್ಲ. ಒಟಿಟಿ ಮಾರುಕಟ್ಟೆ ಬಿದ್ದು ಹೋಗಿದೆ. ದೊಡ್ಡ ಹೀರೊಗಳ ಸಿನಿಮಾಗೆ ಈ ಹಕ್ಕು ದೊಡ್ಡ ಮೊತ್ತವಾಗಿತ್ತು. ಬಾಕ್ಸ್ ಆಫೀಸ್‌ನಲ್ಲಿನ ಕಲೆಕ್ಷನ್ ಶೇಕಡ 50ರಷ್ಟು ಬಿದ್ದು ಹೋಗಿದೆ”
>
> **ರಾಕ್‌ಲೈನ್ ವೆಂಕಟೇಶ್**, ನಿರ್ಮಾಪಕ

ಕುಸಿದ ಡಬ್ಬಿಂಗ್ ಮಾರುಕಟ್ಟೆ

ನಾಲ್ಕೈದು ವರ್ಷಗಳ ಹಿಂದೆ ಕನ್ನಡದ ಆ್ಯಕ್ಷನ್ ಸಿನಿಮಾಗಳ ಡಬ್ಬಿಂಗ್ ಹಕ್ಕು ₹1-2 ಕೋಟಿಗಳಿಗೆ ಮಾರಾಟವಾಗುತ್ತಿತ್ತು. ಡಬ್ಬಿಂಗ್ ಹಕ್ಕಿನ ಹಣದಿಂದಲೇ ಕೆಲವು ಸ್ಟಾರ್‌ಗಳ ಮಾರುಕಟ್ಟೆ ನಿರ್ಮಾಣವಾಗುತ್ತಿತ್ತು. ಆದರೆ ಇವತ್ತು ₹25-30 ಲಕ್ಷಕ್ಕಿಂತ ಹೆಚ್ಚು ಬೆಲೆಗೆ ಡಬ್ಬಿಂಗ್ ಹಕ್ಕು ಮಾರಾಟವಾಗುತ್ತಿಲ್ಲ. ಸಿನಿಮಾ ಚಿತ್ರಮಂದಿರಗಳಲ್ಲಿ ಹಿಟ್ ಆದರೆ ಮಾತ್ರ ಡಬ್ಬಿಂಗ್‌ನಲ್ಲಿಯೂ ಉತ್ತಮ ಬೆಲೆ ಎಂಬಂತಾಗಿದೆ.

'ನಾವು ಸಿನಿಮಾಗಳನ್ನು ಡಿಜಿಟಲ್ ವೇದಿಕೆಗಳು, ವಿಶ್ವದ ಜಿಇಸಿ ವಾಹಿನಿಗಳಿಗೆ ಮಾರಾಟ ಮಾಡುತ್ತೇವೆ. ಸದ್ಯ ತಮಿಳು ಮತ್ತು ಮಲಯಾಳ ಸಿನಿಮಾಗಳ ಡಬ್ಬಿಂಗ್ ಹಕ್ಕು ಖರೀದಿ ಮಾಡುತ್ತಿದ್ದೇವೆ. ಕನ್ನಡ ಸಿನಿಮಾಗಳ ಡಬ್ಬಿಂಗ್ ಹಕ್ಕನ್ನು ₹3 ಲಕ್ಷದಿಂದ ₹ 25 ಲಕ್ಷದ ವರೆಗೆ ಖರೀದಿಸಿದ್ದೇವೆ. ಸಿನಿಮಾ ಗುಣಮಟ್ಟ, ಕಂಟೆಂಟ್ ಎಲ್ಲವೂ ಮುಖ್ಯವಾಗುತ್ತದೆ' ಎನ್ನುತ್ತಾರೆ ಸಿನಿಮಾ ಖರೀದಿ ಮಧ್ಯವರ್ತಿಯಾಗಿರುವ ಮುಂಬೈನ ಪರ್ಲ್ ಫಿಲಂಸ್‌ನ ಮೆಹಬೂಬ್.

ನಾಲ್ಕು ಸಿನಿಮಾಗಳು ತೆರೆಗೆ

ನಿಶಾ ರಜಪೂತ್

ಇಂದು (ಜೂನ್ 21) ಚಂದನವನದ ತೆರೆಗಳಲ್ಲಿ ನಾಲ್ಕು ಸಿನಿಮಾಗಳು ಬಿಡುಗಡೆಯಾಗುತ್ತಿವೆ.

ದೇಸಾಯಿ: 'ಲವ್ 360' ಖ್ಯಾತಿಯ ಪ್ರವೀಣ್ ಕುಮಾರ್ ಅಭಿನಯದ ಚಿತ್ರ ಇದಾಗಿದೆ. ವೀರಭದ್ರೇಶ್ವರ ಕ್ರಿಯೇಟಿವ್ ಫಿಲಂಸ್ ಲಾಂಛನದಲ್ಲಿ ಮಹಾಂತೇಶ ವಿ. ಚೋಳಚಗುಡ್ಡ ಕಥೆ ಬರೆದು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ನಾಗಿರೆಡ್ಡಿ ಭಡ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ದೇಸಾಯಿ' ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಉತ್ತರ ಕರ್ನಾಟಕದ ಶೈಲಿಯಲ್ಲಿ ಮೂಡಿಬಂದಿರುವ ಈ ಚಿತ್ರದ ಚಿತ್ರೀಕರಣ ಬಾದಾಮಿ, ಬಾಗಲಕೋಟೆ ಮುಂತಾದ ಕಡೆ ನಡೆದಿದೆ. ಪ್ರವೀಣ್ ಕುಮಾರ್‌ಗೆ ಜೋಡಿಯಾಗಿ ಮೈಸೂರಿನ ರಾಧ್ಯ ನಟಿಸಿದ್ದಾರೆ. 'ಒರಟ' ಪ್ರಶಾಂತ್, ಚೆಲುವರಾಜು, ಮಧುಸೂದನ್ ರಾವ್, ಕಲ್ಯಾಣಿ, ಹರಿಣಿ, ನಟನ ಪ್ರಶಾಂತ್, ಮಂಜುನಾಥ್ ಹೆಗಡೆ, ಸೃಷ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಕನ್ನಡ ಹಾಗೂ ತೆಲುಗು ಚಿತ್ರರಂಗದಲ್ಲಿ ಸಕ್ರಿಯರಾಗಿರುವ ನಾಗಿರೆಡ್ಡಿ ಅವರಿಗೆ ಇದು ಚೊಚ್ಚಲ ನಿರ್ದೇಶನದ ಚಿತ್ರ. ನಿರ್ಮಾಪಕ ಮಹಾಂತೇಶ್ ಅವರಿಗೂ 'ದೇಸಾಯಿ' ಮೊದಲ ನಿರ್ಮಾಣದ ಚಿತ್ರ.

ಚಿಲ್ಲಿ ಚಿಕನ್: ಬೆಂಗಳೂರಿನ ಚೈನೀಸ್ ಹೋಟೆಲ್‌ನಲ್ಲಿ ನಡೆಯುವ ಘಟನೆಗಳ ಸುತ್ತ ಸಾಗುವ ಚಿತ್ರವಿದು. ಮೆಟನೋಯ್ ಸ್ಟುಡಿಯೋಸ್ ಪ್ರೊಡಕ್ಷನ್ ಅಡಿಯಲ್ಲಿ ದೀಪ್ ಭೀಮಜಿಯಾನಿ ಮತ್ತು ಸುಧಾ ನಂಬಿಯಾರ್ ಅವರು ನಿರ್ಮಿಸಿರುವ ಚಿತ್ರಕ್ಕೆ ಪ್ರತೀಕ್ ಪ್ರಜೋಶ್ ಅವರ ನಿರ್ದೇಶನವಿದೆ.

'ಇದು ಬಹುತೇಕ ಹೊಸ ಕಲಾವಿದರಿಂದ ಕೂಡಿದ ಚಿತ್ರ. ಕೆಲಸಕ್ಕೆಂದು ಉತ್ತರ ಭಾರತದಿಂದ ಬಂದ ಐದು ಹುಡುಗರು ಬೆಂಗಳೂರಿನಲ್ಲಿ ಚೈನೀಸ್ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತ, ತಾವೇ ಸ್ವಂತ ಹೋಟೆಲ್ ತೆರೆಯಲು ಮುಂದಾಗುತ್ತಾರೆ. ಅನಿರೀಕ್ಷಿತ ಘಟನೆಯೊಂದು ಇವರ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ. ಕೊನೆಗೆ ಅದೆಲ್ಲದರಿಂದ ಪಾರಾಗಿ ಗೆಲ್ಲುತ್ತಾರಾ, ಇಲ್ಲವೇ? ಎಂಬುದೇ ಚಿತ್ರದ ಕಥೆ' ಎನ್ನುತ್ತಾರೆ ನಿರ್ದೇಶಕರು.

ಸಿದ್ಧಾಂತ್ ಸುಂದರ್ ಸಂಗೀತ, ಶ್ರೀಶ್ ತೋಮರ್ ಛಾಯಾಚಿತ್ರಗ್ರಹಣ, ಆಶಿಕ್ ಕೆ.ಎಸ್ ಅವರ ಸಂಕಲನ ಚಿತ್ರಕ್ಕಿದೆ. ಬಿ.ವಿ.ಶೃಂಗಾ, ರಿನಿ, ನಿತ್ಯಶ್ರೀ, ಬಿಜೌ ತಾಂಜಿಂ ಮುಂತಾದವರು ತಾರಾಗಣದಲ್ಲಿದ್ದಾರೆ.

ರಮೇಶ್ ಸುರೇಶ್: ಬಹುತೇಕ ಹೊಸಬರಿಂದಲೇ ಕೂಡಿರುವ 'ರಮೇಶ್ ಸುರೇಶ್' ಈ ವಾರ ತೆರೆ ಕಾಣುತ್ತಿರುವ ಮತ್ತೊಂದು ಚಿತ್ರ. ಆರ್.ಕೆ ಟಾಕೀಸ್ ಲಾಂಛನದಲ್ಲಿ ಪಿ.ಕೃಷ್ಣ ಹಾಗೂ ಬಿ.ಶಂಕರ್ ಅವರು ನಿರ್ಮಾಣ ಮಾಡಿರುವ ಈ ಚಿತ್ರಕ್ಕೆ ನಾಗರಾಜ್ ಮಲ್ಲಿಗೇನಹಳ್ಳಿ ಹಾಗೂ ರಘುರಾಜ್ ಗೌಡ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಗುಬ್ಬಿ ವೀರಣ್ಣ ಕುಟುಂಬದ ಬೆನಕ ಹಾಗೂ ಯಶು ರಾಜ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಇದೊಂದು ಕಾಮಿಡಿ ಜಾನರ್‌ನ ಚಿತ್ರವಾದರೂ ಉತ್ತಮ ಸಂದೇಶವಿದೆ. ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ' ಎನ್ನುತ್ತಾರೆ ನಿರ್ದೇಶಕರು. ಚಂದನ ಸೇಗು ಈ ಚಿತ್ರದ ನಾಯಕಿ. ಸಾಧು ಕೋಕಿಲ, ಬಹುಭಾಷಾ ನಟ ಸತ್ಯಪ್ರಕಾಶ್, ನೀನಾಸಂ ರಂಗನಾಥ್, ಉಮಾ ಮುಂತಾದವರು ತಾರಾಗಣದಲ್ಲಿದ್ದಾರೆ.

ಸಂಭವಾಮಿ ಯುಗೇ ಯುಗೇ: ಯುವಕರು ಹಳ್ಳಿಗಳಲ್ಲೇ ಇದ್ದು ಕೆಲಸ ಮಾಡಬೇಕು ಎಂಬ ಸಂದೇಶ ಹೊತ್ತುಬಂದಿದೆ ಈ ಸಿನಿಮಾ. ರಾಜಲಕ್ಷ್ಮಿ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಪ್ರತಿಭಾ ನಿರ್ಮಿಸಿರುವ ಚಿತ್ರಕ್ಕೆ ಚೇತನ್ ಚಂದ್ರಶೇಖರ್ ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಹೊಸಬರಾದ ಜಯ್ ಶೆಟ್ಟಿ - ನಿಶಾ ರಜಪೂತ್ ಹಾಗೂ ಮಧುರಾಗೌಡ ಪ್ರಮುಖ ಪಾತ್ರಗಳಲ್ಲಿದ್ದಾರೆ. 'ಚಿತ್ರದಲ್ಲಿ ಕೃಷ್ಣ ಹಾಗೂ ಅರ್ಜುನನನ್ನು ಹೋಲುವ ಪಾತ್ರಗಳು ಇವೆ. ಮಂಡ್ಯ, ಚನ್ನಪಟ್ಟಣ, ರಾಮನಗರ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಹಳ್ಳಿಯ ಹುಡುಗರು ವಿದ್ಯಾವಂತರಾದ ಮೇಲೆ, ಕೆಲಸದ ನಿಮಿತ್ತ ಪಟ್ಟಣಕ್ಕೆ ಅಂತ ಹೋದವರು ಅಲ್ಲೇ ನೆಲೆಸುತ್ತಾರೆ. ಇದರಿಂದ ಮುಂದಿನ ತಲೆಮಾರಿನ ಕಥೆ ಏನು? ನಮ್ಮ ಹಳ್ಳಿಗಳು ಉಳಿಯುವುದಾದರೂ ಹೇಗೆ? ಎಂಬ ಕಥೆ ಚಿತ್ರದಲ್ಲಿದೆ' ಎನ್ನುತ್ತಾರೆ ನಿರ್ದೇಶಕ ಚೇತನ್.

'ಬಹದ್ದೂರ್' ಮರುಬಿಡುಗಡೆ: ಧ್ರುವ ಸರ್ಜಾ ಅಭಿನಯದ 'ಬಹದ್ದೂರ್' ಚಿತ್ರ ತೆರೆಕಂಡು 10 ವರ್ಷಗಳಾಗಿವೆ. ಈ ಸಂಭ್ರಮದ ಬೆನ್ನಲ್ಲೇ ಈ ವಾರ ಸಿನಿಮಾ ಮತ್ತೆ ಬಿಡುಗಡೆಗೊಳ್ಳುತ್ತಿದೆ. ಚಿತ್ರವನ್ನು ಚೇತನ್ ಕುಮಾರ್ ನಿರ್ದೇಶಿಸಿದ್ದರು. ರಾಧಿಕಾ ಪಂಡಿತ್ ನಾಯಕಿಯಾಗಿ ನಟಿಸಿದ್ದ ಈ ಚಿತ್ರ 2014ರಲ್ಲಿ ಬಿಡುಗಡೆಯಾಗಿತ್ತು.

ಪ್ರವೀಣ್, ರಾಧ್ಯ

ರಾಮನಗರ ಸುತ್ತಮುತ್ತ ಧಾರಾಕಾರ ಮಳೆ ● ಹುಬ್ಬಳ್ಳಿಯಲ್ಲೂ ವರ್ಷಧಾರೆ

ದಕ್ಷಿಣ ಕನ್ನಡದಲ್ಲಿ ಮಳೆ ಮತ್ತೆ ಚುರುಕು

ಪ್ರಜಾವಾಣಿ ವಾರ್ತೆ

ಧಾರವಾಡದ ನಾರಾಯಣಪುರ ಭಾಗದಲ್ಲಿ ಗುರುವಾರ ಸಂಜೆ ಮಳೆ ಸುರಿಯಿತು –ಪ್ರಜಾವಾಣಿ ಚಿತ್ರ

ಮಂಗಳೂರು/ರಾಮನಗರ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾರದಿಂದ ಈಚೆಗೆ ತುಸು ಕಡಿಮೆಯಾಗಿದ್ದ ಮಳೆ ಮತ್ತೆ ಚುರುಕಾಗಿದೆ. ಜಿಲ್ಲೆಯಾದ್ಯಂತ ಗುರುವಾರ ಮಧ್ಯಾಹ್ನದವರೆಗೆ ಬಿಟ್ಟು ಬಿಟ್ಟು ಧಾರಾಕಾರ ಮಳೆಯಾಯಿತು.

ರಾಮನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲೂ ಧಾರಾಕಾರ ಮಳೆ ಸುರಿಯಿತು. ಮಧ್ಯಾಹ್ನ 2.15ಕ್ಕೆ ಸಣ್ಣದಾಗಿ ಹನಿಯತೊಡಗಿದ ಮಳೆ ನಂತರ ಜೋರಾಯಿತು. ಮಧ್ಯಾಹ್ನ 3 ಗಂಟೆಯವರೆಗೂ ಒಂದೇಸಮನೆ ಮಳೆ ಸುರಿಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಜಾನೆಯಿಂದಲೇ ಶುರುವಾದ ಮಳೆ ಹೊತ್ತೇರುವವರೆಗೂ ಮುಂದುವರಿದಿತ್ತು. ಮಧ್ಯಾಹ್ನದ ಬಳಿಕ ಕಡಿಮೆಯಾಯಿತು. ಬುಧವಾರ ರಾತ್ರಿಯೂ ಬಿರುಸಿನ ಮಳೆಯಾಗಿತ್ತು. ಗುರುವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಅರಸಿನಮಕ್ಕಿಯಲ್ಲಿ 4.9 ಸೆಂ.ಮೀ, ಮೂಲ್ಕಿ ತಾಲ್ಲೂಕಿನ ಕೆಮ್ರಾಲ್‌ನಲ್ಲಿ 4.35, ಪಡುಪಣಂಬೂರಿನಲ್ಲಿ 3.8, ಬಂಟ್ವಾಳ ತಾಲ್ಲೂಕಿನ ಚೆನ್ನೈ ತೋಡಿಯಲ್ಲಿ 4.10 ಸೆಂ.ಮೀ ಮಳೆಯಾಗಿದೆ.

ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇದೇ 23 ಮತ್ತು 24ರಂದು ಗುಡುಗು, ಸಿಡಿಲಿನಿಂದ ಕೂಡಿದ ಭಾರಿ ಮಳೆಯಾಗುವ ನಿರೀಕ್ಷೆಯಿದ್ದು, ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಈ ದಿನಗಳಲ್ಲಿ ಸರಾಸರಿ 20 ಸೆಂ ಮೀಗೂ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ನೀಡಿದೆ.

ಚಿಕ್ಕಮಗಳೂರು ನಗರ ಹಾಗೂ ಜಿಲ್ಲೆಯ ಮಲೆನಾಡು ಭಾಗದಲ್ಲಿ ಸಾಧಾರಣ ಮಳೆಯಾಯಿತು.

ರಾಮನಗರದ ಕೆಲವೆಡೆ ಚರಂಡಿ ಹಾಗೂ ಒಳ ಚರಂಡಿಗಳು ಕಟ್ಟಿಕೊಂಡಿದ್ದರಿಂದ ರಸ್ತೆಯಲ್ಲಿ ಮಳೆ ನೀರು ಸಂಗ್ರಹವಾಗಿತ್ತು. ನಗರದ ರೈಲು ನಿಲ್ದಾಣ ಬಳಿಯ ರೈಲ್ವೆ ಕೆಳ ಸೇತುವೆ ಸೇರಿದಂತೆ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ತೊಂದರೆ ಅನುಭವಿಸಿದರು.

ಉರುಳಿದ ಮರ, ವಿದ್ಯುತ್ ಕಂಬ: ತುಮಕೂರು ನಗರದಲ್ಲಿ ಗುರುವಾರ ಸಂಜೆ ಸುರಿದ ಗಾಳಿ ಸಹಿತ ಮಳೆಗೆ ಮರ, ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. ನಗರದ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದಿದ್ದು, ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಆದರೆ, ಯಾವುದೇ ಹಾನಿಯಾಗಿಲ್ಲ.

(ಹುಬ್ಬಳ್ಳಿ ವರದಿ): ಕೆಲ ದಿನಗಳಿಂದ ಬಿಸಿಲಿನ ವಾತಾವರಣವಿದ್ದ ಹುಬ್ಬಳ್ಳಿಯಲ್ಲಿ ಗುರುವಾರ ಸಂಜೆ ರಭಸದ ಮಳೆಯಾಗಿದೆ.

ಧಾರವಾಡ ಜಿಲ್ಲೆಯ ಧಾರವಾಡ, ಅಳ್ನಾವರ, ನವಲಗುಂದ ಭಾಗದಲ್ಲಿ ಸಂಜೆ ಸುಮಾರು ಅರ್ಧ ಗಂಟೆ ಸಾಧಾರಣ ಮಳೆಯಾಗಿದೆ. ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆ ಸುರಿಯಿತು.

ಮಡಿಕೇರಿ/ ಚಾಮರಾಜನಗರ: ಜಿಲ್ಲೆಯ ವಿವಿಧೆಡೆ ಗುರುವಾರ ಸಾಧಾರಣ ಮಳೆ ಸುರಿಯಿತು. ಗಾಳಿಯ ವೇಗ ಹೆಚ್ಚಿದ್ದು, ದಿನವಿಡೀ ಶೀತ ವಾತಾವರಣ ಇತ್ತು. ಒಂದು ವಾರದಿಂದ ಮೋಡ ಕವಿದ ವಾತಾವರಣವಿದ್ದರೂ ಉತ್ತಮ ಮಳೆಯಾಗುತ್ತಿಲ್ಲ. ಬಿತ್ತನೆ ಮಾಡಿರುವ ರೈತರು ಆಕಾಶದತ್ತ ಮುಖಮಾಡಿದ್ದಾರೆ.

ಕರಾವಳಿ: ಭಾರಿ ಮಳೆ, ಭೂಕುಸಿತ ಸಾಧ್ಯತೆ

ಬೆಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಬಿರುಗಾಳಿಯ ಜತೆಗೆ ಭೂಕುಸಿತ ಕಾಣಿಸಿಕೊಳ್ಳುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಲವಾದ ಗಾಳಿಯ ಒಮ್ಮುಖದ ಕಾರಣದಿಂದಾಗಿ, ಕರಾವಳಿ ಮತ್ತು ಪಶ್ಚಿಮ ಘಟ್ಟಗಳ ಪಕ್ಕದ ಜಿಲ್ಲೆಗಳಲ್ಲಿ 23ರಂದು ವಿಪರೀತ ಮಳೆಯಾಗುವ ಸಾಧ್ಯತೆಯಿದೆ. ಬಲವಾದ ಗಾಳಿ ಮತ್ತು ಭೂಕುಸಿತದ ಸಂಭವಗಳೂ ಇವೆ. ಶುಕ್ರವಾರದಿಂದ ರಾಜ್ಯದ ವಿವಿಧೆಡೆ ಮಳೆಯ ತೀವ್ರತೆ ಹೆಚ್ಚಲಿದೆ ಎಂದು ತಿಳಿಸಿರುವ ಇಲಾಖೆ, ಕೆಲ ಜಿಲ್ಲೆಗಳಿಗೆ ಭಾರಿ ಮಳೆಯ ಮುನ್ನೆಚ್ಚರಿಕೆ ನೀಡಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಶುಕ್ರವಾರ 'ಆರೆಂಜ್ ಅಲರ್ಟ್' ನೀಡಲಾಗಿದೆ. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ 30ರಿಂದ 40 ಕಿ.ಮೀ. ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಉದ್ದಕ್ಕೂ ಹಾಗೂ ಹೊರಗೆ ಚಂಡಮಾರುತದ ಹವಾಮಾನವು ಮೇಲುಗೈ ಸಾಧಿಸುವ ಸಂಭವವಿದೆ. ಗಾಳಿಯು ಗಂಟೆಗೆ 45ರಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ರಾಜ್ಯದ 10 ಜಿಲ್ಲೆಗಳಿಗೆ ಶನಿವಾರ ಭಾರಿ ಮಳೆಯ ಅಲರ್ಟ್ ಘೋಷಿಸಲಾಗಿದ್ದು, ಕರಾವಳಿಯ ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ನೀಡಲಾಗಿದೆ. ಭಾನುವಾರ 13 ಜಿಲ್ಲೆಗಳಿಗೆ ಭಾರಿ ಮಳೆಯ ಅಲರ್ಟ್ ಘೋಷಿಸಲಾಗಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಕೆಲವೊಮ್ಮೆ ಮೇಲ್ಮೈ ಗಾಳಿಯು ಪ್ರಬಲವಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಜೀವನಾಂಶ ಕೊಡಲು ಒಪ್ಪದ ಮಕ್ಕಳು

ತಂದೆಗೆ ಪ್ರತಿ ತಿಂಗಳು ₹6 ಸಾವಿರ ನೀಡಲು ಆದೇಶ

● ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ತಂದೆಗೆ ತಿಂಗಳಿಗೆ ₹3 ಸಾವಿರ ಜೀವನಾಂಶ ನೀಡಲು ಉಪವಿಭಾಗಾಧಿಕಾರಿ ನೀಡಿದ್ದ ಆದೇಶ ಪ್ರಶ್ನಿಸಿದ್ದ ಮಕ್ಕಳು ಜಿಲ್ಲಾಧಿಕಾರಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಜೀವನಾಂಶ ನೀಡಬೇಕು ಎಂಬ ಆದೇಶವನ್ನೇ ಜಿಲ್ಲಾಧಿಕಾರಿ ನ್ಯಾಯಾಲಯ ಕೂಡ ಎತ್ತಿ ಹಿಡಿದಿದೆ.

ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹೋಬಳಿಯ ಬಸವರಾಜಪ್ಪ ಅವರು ಜೀವನಾಂಶಕ್ಕಾಗಿ ಉಪವಿಭಾಗಾಧಿಕಾರಿ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಬಸವರಾಜಪ್ಪ ಅವರ ಪತ್ನಿ 2014ರಲ್ಲೇ ಮೃತಪಟ್ಟಿದ್ದಾರೆ. ಮಗ ಗ್ರಾಮ ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿದ್ದು, ಮಗಳು ಅಬಕಾರಿ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದಿರುವ ಮಕ್ಕಳು ಪ್ರತ್ಯೇಕವಾಗಿ ಜೀವನ ನಡೆಸುತ್ತಿದ್ದಾರೆ.

'ರಕ್ತದೊತ್ತಡ, ಮಧುಮೇಹ, ಹೃದಯ ಸಮಸ್ಯೆಯಿಂದ ಬಳಲುತ್ತಿದ್ದೇನೆ. ವಯಸ್ಸಾಗಿರುವುದರಿಂದ ನನ್ನ ಪಾಲಿಗೆ ಬಂದಿರುವ ಕೃಷಿ ಭೂಮಿಯಲ್ಲಿ ಉಳುಮೆ ಮಾಡಿ ಆದಾಯ ಸಂಪಾದಿಸಲು ಸಾಧ್ಯವಾಗುತ್ತಿಲ್ಲ. ಆಸ್ಪತ್ರೆಗೆ ತಿಂಗಳಿಗೆ ₹15 ಸಾವಿರ ಖರ್ಚಾಗುತ್ತಿದೆ. ಸರ್ಕಾರಿ ನೌಕರಿಯಲ್ಲಿರುವ ಮಕ್ಕಳು ನನ್ನ ಕಷ್ಟ-ಸುಖಗಳನ್ನು ನೋಡುತ್ತಿಲ್ಲ. ತಿಂಗಳಿಗೆ ₹15 ಸಾವಿರ ಖರ್ಚು ಮಾಡಿ ಮಕ್ಕಳನ್ನು ಓದಿಸಿದ್ದೇನೆ. ಇದರಿಂದಾಗಿಯೇ ಅವರು ಈಗ ಸುಖದಲ್ಲಿದ್ದಾರೆ' ಎಂದು ಬಸವರಾಜಪ್ಪ ಅವರು ಜೀವನಾಂಶ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಿದ್ದಾರೆ.

ತಂದೆಗೆ ಜೀವನಾಂಶ ಕೊಡಲು ಇಷ್ಟವಿಲ್ಲದೆ ಮೇಲ್ಮನವಿ ಸಲ್ಲಿಸಿರುವ ಮಕ್ಕಳು, 'ಪಿತ್ರಾರ್ಜಿತ ಆಸ್ತಿಯಲ್ಲಿ 8 ಎಕರೆಯಷ್ಟು ಜಮೀನನ್ನು 2005ರಲ್ಲೇ ಮಾರಾಟ ಮಾಡಿದ್ದಾರೆ. ಬಂದ ಹಣವನ್ನು ಅನೈತಿಕ ಮತ್ತು ಕಾನೂನು ಬಾಹಿರ ಚಟುವಟಿಕೆಗೆ ಬಳಸಿದ್ದಾರೆ. ಇದರಿಂದ ಬೇಸತ್ತ ಒಬ್ಬ ಮಗ ಆತ್ಮಹತ್ಯೆ ಕೂಡ ಮಾಡಿಕೊಂಡಿದ್ದಾನೆ. ನಮ್ಮ ತಾಯಿ ಕೂಡ ಇದರಿಂದಲೇ ನೊಂದು ಮೃತಪಟ್ಟಿದ್ದಾರೆ. ನಾವು ಕಷ್ಟಪಟ್ಟು ಓದಿ ಅರ್ಹತೆ ಮೇರೆಗೆ ಸರ್ಕಾರಿ ಕೆಲಸ ಪಡೆದುಕೊಂಡಿದ್ದೇವೆ. ತಾಯಿ ಮರಣ ನಂತರ ಮತ್ತೊಬ್ಬರನ್ನು ಮದುವೆಯಾಗಿ ಊರಿನಲ್ಲೇ ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ಜೀವನಾಂಶ ನೀಡುವುದಿಲ್ಲ' ಎಂದು ವಾದಿಸಿದ್ದಾರೆ.

'ಪಾಲಕರ ಪಾಲನೆ, ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ ಪ್ರಕಾರ ಹಿರಿಯ ನಾಗರಿಕರ ಪಾಲನೆ ಮಾಡುವುದು ಮಕ್ಕಳ ಜವಾಬ್ದಾರಿ. ಆಸ್ತಿ ವ್ಯಾಜ್ಯ ಮುಂದಿಟ್ಟುಕೊಂಡು ಪಾಲನೆ ಮತ್ತು ಪೋಷಣೆ ನಿರ್ಲಕ್ಷಿಸುವಂತಿಲ್ಲ. ಆಸ್ತಿ ಇದ್ದರೂ ಅದರಿಂದ ಜೀವನ ನಡೆಸುವಷ್ಟು ಆದಾಯ ಬರುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ ತಿಂಗಳಿಗೆ ತಲಾ ₹3 ಸಾವಿರ ಜೀವನಾಂಶ ನೀಡಬೇಕು ಎಂಬ ಉಪವಿಭಾಗಾಧಿಕಾರಿ ಆದೇಶವನ್ನು ಎತ್ತಿ ಹಿಡಿಯುತ್ತಿದ್ದೇನೆ' ಎಂದು 2023ರ ಜೂನ್ 22ರಂದು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಆದೇಶಿಸಿದ್ದರು.

ಆದರೂ, ಜೀವನಾಂಶ ಕೊಡುತ್ತಿಲ್ಲ ಎಂದು ಬಸವರಾಜಪ್ಪ ಜಿಲ್ಲಾಧಿಕಾರಿಗೆ 2024ರ ಮಾರ್ಚ್‌ನಲ್ಲಿ ಮನವಿ ಸಲ್ಲಿಸಿದ್ದರು. ಆದೇಶ ಕಟ್ಟುನಿಟ್ಟಿನ ಪಾಲನೆಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಇದೇ ಜೂನ್ 12ರಂದು ಉಪವಿಭಾಗಾಧಿಕಾರಿಗೆ ಸೂಚಿಸಿದ್ದಾರೆ.

ಕೆಇಎ: 684 ಹುದ್ದೆಗಳ ಅಂತಿಮ ಅಂಕ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನಿಗಮ, ಮಂಡಳಿಗಳ 684 ಹುದ್ದೆಗಳನ್ನು ತುಂಬಲು 2023ರ ಅಕ್ಟೋಬರ್-ನವೆಂಬರ್‌ನಲ್ಲಿ ನಡೆಸಿದ್ದ ಪರೀಕ್ಷೆಗಳ ಅಂತಿಮ ಅಂಕಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

'ಸ್ವೀಕೃತ ಆಕ್ಷೇಪಗಳನ್ನು ಪರಿಶೀಲಿಸಿದ ನಂತರ ಅಂತಿಮ ಅಂಕಪಟ್ಟಿ ಪ್ರಕಟಿಸಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಮಾಹಿತಿ ನೀಡಿದ್ದಾರೆ.

'ಒಟ್ಟು 6,18,148 ಅಭ್ಯರ್ಥಿಗಳ ಅಂತಿಮ ಅಂಕ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆ, ಸಂಸ್ಥೆಗಳಿಗೆ ಹಸ್ತಾಂತರಿಸಲಾಗುವುದು. ನಂತರ ಸಂಬಂಧಪಟ್ಟ ಇಲಾಖೆ, ಸಂಸ್ಥೆಗಳು ನಿಯಮಾನುಸಾರ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಮುಂದಿನ ಕ್ರಮ ವಹಿಸಲಿವೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಆಹಾರ ನಿಗಮ (386 ಹುದ್ದೆ), ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ (186), ಎಂಎಸ್‌ಐಎಲ್ (72), ಕಿಯೋನಿಕ್ಸ್ (26), ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ (14) ಹುದ್ದೆಗಳಿಗೆ ಪರೀಕ್ಷೆ ನಡೆದಿತ್ತು.

ಗೂಡ್ಸ್ ರೈಲಿನ ಪೈಲಟ್‌ನದ್ದೇ ಲೋಪ

ರೈಲು ದುರಂತ

ನವದೆಹಲಿ (ಪಿಟಿಐ): ಜೂನ್ 17ರಂದು ಸಂಭವಿಸಿದ ರೈಲು ಅಪಘಾತಕ್ಕೆ ಸರಕು ಸಾಗಣೆ ರೈಲಿನ ಪೈಲಟ್, ನ್ಯೂ ಜಲಪಾಇಗುಡಿ ವಿಭಾಗದ ನಿರ್ವಹಣಾ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ ಎಂದು ಪ್ರಾಥಮಿಕ ಹಂತದ ತನಿಖೆಯಲ್ಲಿ ತಿಳಿದುಬಂದಿದೆ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಕಳೆದ ಸೋಮವಾರ ರಾಣಿಪತ್ರ ರೈಲು ನಿಲ್ದಾಣ ಹಾಗೂ ಛತ್ತರ್‌ಹಾಟ್ ಜಂಕ್ಷನ್ ನಡುವೆ ಸಂಚರಿಸುತ್ತಿದ್ದ ಕಾಂಚನ್‌ಜುಂಗಾ ರೈಲಿಗೆ ಹಿಂಬದಿಯಿಂದ ಗೂಡ್ಸ್ ರೈಲು ಡಿಕ್ಕಿ ಹೊಡೆದು 10 ಮಂದಿ ಮೃತಪಟ್ಟಿದ್ದರು. ಮೃತರಲ್ಲಿ ಗೂಡ್ಸ್ ರೈಲಿನ ಪೈಲಟ್, ಸಹ ಪೈಲಟ್, ಪ್ಯಾಸೆಂಜರ್ ರೈಲಿನ ಗಾರ್ಡ್ ಕೂಡ ಸೇರಿದ್ದರು.

ಸಿಗ್ನಲ್ ನಿರ್ಲಕ್ಷಿಸಿದ್ದೇ ಅಪಘಾತಕ್ಕೆ ಕಾರಣ ಎಂದು ರೈಲ್ವೆ ಬೋರ್ಡ್ ಅಧ್ಯಕ್ಷ ಜಯ ವರ್ಮಾ ಸಿನ್ಹಾ ಅವರು ಹೇಳಿಕೆ ನೀಡಿದ್ದರು. ರೈಲ್ವೆ ಸುರಕ್ಷತಾ ಆಯುಕ್ತರು ಅಪಘಾತದ ತನಿಖೆಗೂ ಆದೇಶಿಸಿದ್ದರು.

'ಆರು ಮಂದಿ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ರೈಲ್ವೆ ಇಲಾಖೆಯು ತನಿಖಾ ತಂಡ ನೇಮಿಸಿದೆ. ತಂಡವು ಪ್ರಾಥಮಿಕ ಹಂತದ ತನಿಖೆ ನಡೆಸಿ, ವರದಿ ನೀಡಿದೆ. ಗೂಡ್ಸ್ ರೈಲಿನ ಪೈಲಟ್ ಸಿಗ್ನಲ್ ಉಲ್ಲಂಘಿಸಿ, ವೇಗಮಿತಿಗೆ ಕಡಿವಾಣ ಹಾಕುವಲ್ಲಿ ವಿಫಲವಾಗಿದ್ದೇ ಅಪಘಾತಕ್ಕೆ ಕಾರಣ ಎಂದು ತಂಡದಲ್ಲಿದ್ದ ಐದೂ ಸದಸ್ಯರು ದೂರಿದ್ದಾರೆ. ರಾಣಿಪತ್ರ ರೈಲು ನಿಲ್ದಾಣ ಹಾಗೂ ಛತ್ತರ್‌ಹಾಟ್ ಜಂಕ್ಷನ್ ನಡುವೆ ನ್ಯೂ ಜಲಪಾಇಗುಡಿ ವಿಭಾಗದ ನಿರ್ವಹಣಾ ಸಿಬ್ಬಂದಿ ಅಗತ್ಯ ಸುರಕ್ಷತಾ ಕ್ರಮ ತೆಗೆದುಕೊಂಡಿರಲಿಲ್ಲ' ಎಂದು ತಂಡದ ಉಳಿದ ಸದಸ್ಯರೊಬ್ಬರು ದೂರಿದ್ದಾರೆ.

'ಗೂಡ್ಸ್ ರೈಲಿನ ಪೈಲಟ್ ಅತ್ಯಂತ ವೇಗದಲ್ಲಿ ಅಪಾಯದ ಸ್ಥಿತಿಯಲ್ಲಿಯೂ ಸ್ವಯಂಚಾಲಿತ ಸಿಗ್ನಲ್ ದಾಟಿದ್ದನು' ತಂಡದಲ್ಲಿದ್ದ ಎಲ್ಲರೂ ಅಭಿಪ್ರಾಯಪಟ್ಟಿದ್ದಾರೆ.

'ನ್ಯೂ ಜಲಪಾಇಗುಡಿ ವಿಭಾಗದಲ್ಲಿ ಜೂನ್ 17ರಂದು ಬೆಳಿಗ್ಗೆ 5.50ರಿಂದ ಸ್ವಯಂಚಾಲಿತ, ಅರೆ ಸ್ವಯಂಚಾಲಿತ ಸಿಗ್ನಲ್‌ಗಳು ಕೆಲಸ ಮಾಡುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಿದ್ದ ರೈಲ್ವೆ ನಿಯಮವನ್ನು ಅನುಸರಿಸಿರಲಿಲ್ಲ' ಎಂದು ತನಿಖಾ ತಂಡದ ಸದಸ್ಯರು ಹೇಳಿದ್ದಾರೆ.

'ಆ ಮಾರ್ಗದಲ್ಲಿದ್ದ ಎಲ್ಲ ಕೆಂಪು ಸಿಗ್ನಲ್ ದಾಟಿದ್ದ ರೈಲಿನ ಪೈಲಟ್‌ಗೆ ವೇಗದ ಮಿತಿಯೂ ತಿಳಿಸಿರಲಿಲ್ಲ. ಹಾಳಾದ ಸಿಗ್ನಲ್ ಬಳಿ ಕಾಂಚನ್‌ಜುಂಗಾ ರೈಲು ಕಾದು ನಿಂತಿದ್ದ ಸಂದರ್ಭದಲ್ಲಿಯೇ ಗೂಡ್ಸ್ ರೈಲು ಹಿಂದಿನಿಂದ ಬಂದು ಗುದ್ದಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಇವಿಎಂ ಪರಿಶೀಲನೆ: ಅರ್ಜಿ ಸ್ವೀಕಾರ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಬಳಿಕ ಇವಿಎಂಗಳಲ್ಲಿ ಅಳವಡಿಸಲಾಗಿರುವ ಮೈಕ್ರೋ ಕಂಟ್ರೋಲರ್ ಚಿಪ್‌ಗಳಲ್ಲಿ ಅಕ್ರಮವಾಗಿ ತಿದ್ದುಪಡಿ ಮಾಡಲಾಗಿದೆಯೇ ಅಥವಾ ಮಾರ್ಪಾಡು ಮಾಡಲಾಗಿದೆಯೇ ಎಂಬುದರ ಪರಿಶೀಲನೆಗಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿ ಇತರ ಅಭ್ಯರ್ಥಿಗಳಿಂದ ಚುನಾವಣಾ ಆಯೋಗಕ್ಕೆ 8 ಅರ್ಜಿಗಳು ಸಲ್ಲಿಕೆಯಾಗಿವೆ.

ಇವಿಎಂ ಬಗೆಗಿನ ಅನುಮಾನವನ್ನು 'ಆಧಾರರಹಿತ' ಎಂದು ಕರೆದಿದ್ದ ಸುಪ್ರೀಂಕೋರ್ಟ್, ಏ. 26ರಂದು ಮತ ಪತ್ರ ಆಧಾರಿತ ಚುನಾವಣೆಗೆ ಮರಳುವ ಬೇಡಿಕೆಯುಳ್ಳ ಅರ್ಜಿ ತಿರಸ್ಕರಿಸಿತ್ತು.

ಆದರೆ, ಇದೇ ಸಮಯದಲ್ಲಿ ಚುನಾವಣಾ ಫಲಿತಾಂಶದಲ್ಲಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ ಪರಾಜಿತ ಅಭ್ಯರ್ಥಿಗಳು, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶೇ 5ರಷ್ಟು ಇವಿಎಂಗಳಲ್ಲಿನ ಚಿಪ್‌ಗಳ ಪರಿಶೀಲನೆಗಾಗಿ ಚುನಾವಣಾ ಆಯೋಗಕ್ಕೆ ನಿಗದಿತ ಶುಲ್ಕವನ್ನು ಪಾವತಿಸಿ, ಲಿಖಿತ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿತ್ತು.

ಮಹಾರಾಷ್ಟ್ರದ ಅಹಮದ್‌ನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುಜಯ್ ವಿಖೆ ಪಾಟೀಲ್ ಅವರು 40 ಮತಗಟ್ಟೆಗಳಲ್ಲಿನ ಇವಿಎಂಗಳನ್ನು ಪರಿಶೀಲಿಸುವಂತೆ ಕೋರಿದ್ದಾರೆ. ವೈಎಸ್‌ಆರ್‌ಸಿಪಿ ಮತ್ತು ಡಿಎಂಡಿಕೆ ಅಭ್ಯರ್ಥಿಗಳು ಸಹ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಆಂಧ್ರ ಹಾಗೂ ಒಡಿಶಾದಲ್ಲಿ ವಿಧಾನ ಸಭಾ ಚುನಾವಣೆ ನಡೆದಿದ್ದು, ವೈಎಸ್‌ಆರ್‌ಸಿಪಿ ಮತ್ತು ಬಿಜೆಡಿಯ ಅಭ್ಯರ್ಥಿಗಳು ಇವಿಎಂ ಪರಿಶೀಲನೆಗೆ ಅರ್ಜಿ ಹಾಕಿದ್ದಾರೆ. ಚುನಾವಣಾ ಆಯೋಗ ಜೂನ್ 1ರಂದು ಹೊರಡಿಸಿರುವ ಎಸ್‌ಒಪಿ ಪ್ರಕಾರ, ಎರಡು ಅಥವಾ ಮೂರನೇ ಸ್ಥಾನದಲ್ಲಿರುವ ಪರಾಜಿತ ಅಭ್ಯರ್ಥಿಗಳು ಇವಿಎಂ ಪರಿಶೀಲನೆಯನ್ನು ಬಯಸುವುದಾದರೆ, ಪ್ರತಿ ಇವಿಎಂ ಸೆಟ್‌ಗೆ ₹47,200 ಪಾವತಿಸಬೇಕು.

ಲೋಕಸಭೆ: ಭರ್ತೃಹರಿ ಮಹ್ತಬ್ ಹಂಗಾಮಿ ಸ್ಪೀಕರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಹಂಗಾಮಿ ಸಭಾಧ್ಯಕ್ಷರನ್ನಾಗಿ ಏಳು ಬಾರಿಯ ಸಂಸದ, ಚುನಾವಣೆಗೂ ಮುನ್ನ ಬಿಜೆಪಿ ಸೇರಿದ್ದ ಬಿಜೆಡಿ ನಾಯಕ ಭರ್ತೃಹರಿ ಮಹ್ತಬ್ ಅವರನ್ನು ಆಯ್ಕೆ ಮಾಡಲಾಗಿದೆ.

ಆ ಮೂಲಕ ಲೋಕಸಭೆಯ ಅತ್ಯಂತ ಹಿರಿಯ ಸದಸ್ಯರನ್ನು ನೇಮಕ ಮಾಡುವ ಸಂಪ್ರದಾಯವನ್ನು ಮುರಿಯಲಾಗಿದೆ. ಕಾಂಗ್ರೆಸ್‌ನ ಕೋಡಿಕ್ಕುನ್ನಿಲ್ ಸುರೇಶ್ ಅವರು ಸದನದ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ.

ಇದೇ 24ರಂದು ಸಂಸದರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ

1ನೇ ಮಹಡಿ, ಲೈಬ್ರರಿ ಬ್ಲಾಕ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು-560 002.

ದೂರವಾಣಿ: 080-26700074, 26700075,

e-mail: ksdneb@gmail.com ವೆಬ್‌ಸೈಟ್: www.ksdneb.org

ಸಂ: ಕ.ರಾ.ಶು.ಪ.ಮಂ./ಸಿಬ್ಬಂದಿ/07/2024-25 ದಿನಾಂಕ: 20.06.2024

2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕಟಣೆ

2024–25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಸೀಟುಗಳು ಮತ್ತು ಖಾಸಗಿ ಶುಶ್ರೂಷ ಶಾಲೆಗಳಲ್ಲಿನ ಶೇಕಡ 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ದ್ವಿತೀಯ ಪಿಯುಸಿಯ ಶೇಕಡ 40% ರಷ್ಟು ಅಂಕ ಪಡೆದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕನಿಷ್ಠ ಶೇಕಡ 35% ಅಂಕ ಪಡೆದಿರಬೇಕು) ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಹಾಗೂ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು (ಎ.ಎನ್.ಎಮ್.) ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿಗಳನ್ನು **ದಿನಾಂಕ: 21.06.2024 ರಿಂದ ದಿನಾಂಕ: 05.07.2024 ರವರೆಗೆ** ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿಯ ಜಾಲತಾಣ **www.ksdneb.org** ಸಂಪರ್ಕಿಸಬಹುದು.

ಸಹಿ/–ಕಾರ್ಯದರ್ಶಿಗಳು, ಕ.ರಾ.ಶು.ಪ.ಮಂ. ಬೆಂಗಳೂರು.

ಆಮೆಗಳ ಸಾಗಣೆ, ಬೇಟೆ: ಬಂಧನ

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರಕನ್ನಡ ಜಿಲ್ಲೆ): ತಾಲ್ಲೂಕಿನ ಬದನಗೋಡ ಹಳ್ಳದಲ್ಲಿ ಆರು ಆಮೆಗಳನ್ನು ಹಿಡಿದು ಅಕ್ರಮ ಸಾಗಣೆ ಮಾಡಿದ್ದ ಆರೋಪದ ಮೇಲೆ ಸೊರಬ ತಾಲ್ಲೂಕಿನ ದ್ಯಾಮಣ್ಣ ಹಾಗೂ ಶಿರಸಿಯ ಹೆಬ್ಬತ್ತಿ ಗ್ರಾಮದ ಶ್ರೀಕಾಂತ ನಾಯ್ಕ ಎಂಬುವರನ್ನು ಗುರುವಾರ ಬನವಾಸಿ ಅರಣ್ಯ ವಲಯದ ಅಧಿಕಾರಿಗಳು ಬಂಧಿಸಿದ್ದಾರೆ.

'ಇಬ್ಬರೂ ಆರೋಪಿಗಳು ಬದನಗೋಡ ಬಳಿ ಆಮೆ ಹಿಡಿದು ಸೊರಣಗಿಗೆ ಸಾಗಿಸಿದ್ದರು. ಎರಡು ಆಮೆಗಳನ್ನು ಸಾಯಿಸಿ ಬೇಯಿಸಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇವನಾಗರಿ ಶಿಲಾಶಾಸನ ಪತ್ತೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ ಸಮೀಪದ ತುಂಗಭದ್ರಾ ನದಿಯ ಬಂಡೆಯಲ್ಲಿ ಕಾಣಿಸಿದ ದೇವನಾಗರಿ ಶಾಸನ

ಹೊಸಪೇಟೆ (ವಿಜಯನಗರ): ಇಲ್ಲಿಗೆ ಸಮೀಪದ ಹೊಸೂರು ಗ್ರಾಮದ ಬಳಿ ತುಂಗಭದ್ರಾ ನದಿಯಲ್ಲಿ ದೇವನಾಗರಿ ಲಿಪಿಯಲ್ಲಿರುವ ಶಿಲಾಶಾಸನ ಪತ್ತೆಯಾಗಿದೆ. ವನ್ಯಜೀವಿ ಸಂಶೋಧಕ ಸಮದ್ ಕೊಟ್ಟೂರು ಅವರು ನದಿ ಮಧ್ಯೆ ಇರುವ ನಡುಗಡ್ಡೆಯಲ್ಲಿ ನದಿಯ ಬಂಡೆಯೊಂದರ ಮೇಲೆ ಈ ಶಾಸನವನ್ನು ಪತ್ತೆ ಮಾಡಿದ್ದಾರೆ. ಈ ನಡುಗಡ್ಡೆಯಲ್ಲಿ ಪುರಾತನ ಆಂಜನೇಯ ಮತ್ತು ಈಶ್ವರ ದೇವಾಲಯಗಳಿದ್ದು, ಪೂಜೆ ಸಲ್ಲಿಸಲಾಗುತ್ತದೆ. ಉಳಿದ ದೇವಾಲಯಗಳು ಪಾಳು ಬಿದ್ದಿವೆ.

'ನದಿಯ ಪಕ್ಕದ ಬೃಹತ್ ಬಂಡೆಯ ಇಳಿಜಾರಿನ ಮೇಲೆ ಚೌಕಾಕಾರದಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. 2 ಅಡಿ ಅಗಲ 3 ಅಡಿ ಉದ್ದವಿರುವ ಈ ಶಾಸನದಲ್ಲಿ 17 ಸಾಲುಗಳಿವೆ. ಮೇಲಿನ ಎಡಭಾಗದಲ್ಲಿ ಸೂರ್ಯ, ಮಧ್ಯೆ ಶಿವಲಿಂಗ, ಬಲಕ್ಕೆ ಚಂದ್ರನ ಚಿತ್ರವಿದೆ. ಅನೇಕ ಶತಮಾನಗಳಿಂದ ನೀರಿನಲ್ಲಿ ಮುಳುಗಿದ್ದು, ಬಿಸಿಲು, ಮಳೆ, ಚಳಿ, ಗಾಳಿಗೆ ಮೈಯೊಡ್ಡಿರುವ ಕಾರಣ ಈ ಶಾಸನ ಕೆಲ ಅಕ್ಷರಗಳು ಸವೆದಿವೆ' ಎಂದು ಸಮದ್ ಕೊಟ್ಟೂರು 'ಪ್ರಜಾವಾಣಿ'ಗೆ ತಿಳಿಸಿದರು.

'ವಿಜಯನಗರ ಸಾಮ್ರಾಜ್ಯ ಆರಂಭಕ್ಕೂ ಮುನ್ನ ಹಂಪಿ ಪ್ರದೇಶವು ವಿವಿಧ ಸಂಸ್ಕೃತಿಗಳ ನೆಲೆಯಾಗಿತ್ತು. ಕೊಪ್ಪಳದಲ್ಲಿ ಆಶೋಕನ ಶಿಲಾ ಶಾಸನವಿದೆ. ಅದೇ ರೀತಿ ಹಂಪಿಯ ನದಿಯುದ್ದಕ್ಕೂ ಇರುವ ಕಲ್ಲುಬಂಡೆಗಳ ಮೇಲೆ ಅನೇಕ ಶಾಸನಗಳಿವೆ. ಆದರೆ, ಯಾರೂ ಅದನ್ನು ಮಹತ್ವದ್ದು ಎಂದು ಪರಿಗಣಿಸದ ಕಾರಣ ಪಾಳು ಬಿದ್ದಿವೆ' ಎಂದು ಹೇಳಿದರು.

'ಹೊಸೂರು ಶಿಲಾ ಶಾಸನವು ಅತ್ಯಂತ ಪುರಾತನ ಶಾಸನವಾಗಿದ್ದು, ಇದರಿಂದ ಇಲ್ಲಿನ ಧಾರ್ಮಿಕ ಸಂಸ್ಕೃತಿ ಹಾಗೂ ಆಳ್ವಿಕೆಯ ಕುರಿತು ಬೆಳಕು ಚೆಲ್ಲುತ್ತದೆ. ಶಾಸನದ ಅರ್ಥ ವಿವರಣೆ ನೀಡಿ ಅದನ್ನು ಸೂಕ್ತವಾಗಿ ಸಂರಕ್ಷಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಕ್ರಮ ತೆಗೆದುಕೊಳ್ಳಬೇಕು' ಎಂದು ಹೇಳಿದರು.

'ಸಿಎಸ್‌ಆರ್ ನಿಧಿ: ರಾಜ್ಯದಲ್ಲೇ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳು ನೀಡುವ ಸಿಎಸ್‌ಆರ್ ನಿಧಿ ಬಳಸಿಕೊಂಡು ಖಾಸಗಿ ಸಹಭಾಗಿತ್ವದಲ್ಲಿ ಪಬ್ಲಿಕ್ ಶಾಲೆಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಸೌಧದಲ್ಲಿ ಗುರುವಾರ ನಡೆದ ವಿವಿಧ ಇಲಾಖೆಗಳ ಸಚಿವರು, ಅಧಿಕಾರಿಗಳನ್ನು ಒಳಗೊಂಡ ಸಭೆಯಲ್ಲಿ ಮಾತನಾಡಿದ ಅವರು, ಕೆಲ ಕಂಪನಿಗಳು ಆರಂಭದಲ್ಲಿ ಸರ್ಕಾರದಿಂದ ಪ್ರೋತ್ಸಾಹ ಧನ ಪಡೆದು, ಈಗ ಲಾಭದಾಯಕ ಸ್ಥಿತಿಯಲ್ಲಿವೆ. ಅಂತಹ ಎಲ್ಲ ಕಾರ್ಪೊರೇಟ್ ಕಂಪನಿಗಳಿಂದ ಸಿಎಸ್‌ಆರ್ ನಿಧಿ ಪಡೆದು ಶಾಲೆಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದರು.

ರಾಜ್ಯದಲ್ಲಿ ಹಲವು ಕೈಗಾರಿಕೆಗಳು, ಕಂಪನಿಗಳಿಗೆ ನೆಲ, ಜಲ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ನೀಡಲಾಗಿದೆ. ಆದರೆ, ಬಹುತೇಕ ಕಂಪನಿಗಳು ಸಿಎಸ್‌ಆರ್ ನಿಧಿಯನ್ನು ಹೊರ ರಾಜ್ಯಗಳಿಗೆ ನೀಡುತ್ತಿವೆ. ಅಂತಹ ಕಂಪನಿಗಳ ಮುಖ್ಯಸ್ಥರ ಜೊತೆ ಮಾತನಾಡಬೇಕು. ಕೈಗಾರಿಕೆ, ಗ್ರಾಮೀಣಾಭಿವೃದ್ಧಿ, ಶಿಕ್ಷಣ ಸಚಿವರು ಸಮನ್ವಯದಿಂದ ಕೆಲಸ ಮಾಡಬೇಕು. ಗ್ರಾಮೀಣ ಭಾಗದಲ್ಲಿ ಯಾವ ಭಾಗದಲ್ಲಿ, ಎಷ್ಟು ಪಬ್ಲಿಕ್ ಶಾಲೆಗಳ ಅಗತ್ಯವಿದೆ ಎನ್ನುವ ಕುರಿತು ಪಟ್ಟಿ ಸಿದ್ಧಪಡಿಸಬೇಕು ಎಂದು ಸೂಚಿಸಿದರು.

ಸಚಿವರಾದ ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ, ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ಅಹ್ಮದ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಆಯುಕ್ತೆ ಬಿ.ಬಿ. ಕಾವೇರಿ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಉಪ ಮುಖ್ಯಮಂತ್ರಿ ಕಾರ್ಯದರ್ಶಿ ರಾಜೇಂದ್ರ ಚೋಳನ್ ಉಪಸ್ಥಿತರಿದ್ದರು.

ಒಡಿಶಾ ಸ್ಪೀಕರ್: ಸುರ್ಮಾ ಪಾಧಿ ಆಯ್ಕೆ

ಭುವನೇಶ್ವರ (ಪಿಟಿಐ): ಬಿಜೆಪಿ ಹಿರಿಯ ನಾಯಕಿ ಸುರ್ಮಾ ಪಾಧಿ ಅವರು ಒಡಿಶಾ ವಿಧಾನಸಭೆಯ ಸ್ಪೀಕರ್ ಆಗಿ ಗುರುವಾರ ಅವಿರೋಧವಾಗಿ ಆಯ್ಕೆಯಾದರು.

ನಯಾಗಢ ಜಿಲ್ಲೆಯ ರಾಣಾಪುರ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಶಾಸಕಿಯಾಗಿ ಆಯ್ಕೆಯಾಗಿರುವ ಪಾಧಿ ಅವರೊಬ್ಬರೇ ಸ್ಪೀಕರ್ ಸ್ಥಾನದ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದರು.

ಹಂಗಾಮಿ ಸ್ಪೀಕರ್ ಆಗಿದ್ದ ಆರ್.ಪಿ. ಸ್ವೈನ್ ಅವರು ಅವಿರೋಧ ಆಯ್ಕೆ ಘೋಷಿಸಿದ ನಂತರ, ಸುರ್ಮಾ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಸುರ್ಮಾ ಪಾಧಿ ಒಡಿಶಾ ವಿಧಾನ ಸಭೆಯ ಸ್ಪೀಕರ್ ಆಗಿ ಆಯ್ಕೆಯಾದ ಎರಡನೇ ಮಹಿಳೆ. ಇವರಿಗೂ ಮುನ್ನ ಬಿಜೆಡಿಯ ಪರಿಮಳಾ ಮಲ್ಲಿಕ್ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದ್ದರು.

ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಉಪಮುಖ್ಯಮಂತ್ರಿಗಳಾದ ಕೆ.ವಿ. ಸಿಂಗ್ ದೇವ್, ಪ್ರವತಿ ಪರಿದಾ, ವಿರೋಧ ಪಕ್ಷದ ನಾಯಕ ನವೀನ್ ಪಟ್ನಾಯಕ್ ಮತ್ತಿತರರು ನೂತನ ಸ್ಪೀಕರ್ ಅವರನ್ನು ಅಭಿನಂದಿಸಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಳಗಾವಿ.
ದೂರವಾಣಿ ಸಂಖ್ಯೆ: 0831–2463850 / ಫ್ಯಾಕ್ಸ್ ಸಂಖ್ಯೆ: 0831–2423008

No: EE/MI&GWDDD/BGM/TND/JE/2024-25/2207 Date: 18-06-2024

ಅವಧಿ ವಿಸ್ತರಣೆ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–3)

ಈ ಕಛೇರಿ ಟೆಂಡರ್ ಪ್ರಕಟಣೆ **No. EE/MI&GWDDD/BGM/TND/AE-1/JE/2024-25/2137, Date: 13-06-2024** ರಲ್ಲಿ ಈ ಕೆಳಗಿನ ಕಾಮಗಾರಿಗಳಿಗಾಗಿ ಆಹ್ವಾನಿಸಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಗೆ ಈ ಕೆಳಗಿನಂತೆ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ. (3 ಕಾಮಗಾರಿಗಳು ಮಾತ್ರ).

1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **27–06–2024 ರಂದು ಸಂಜೆ 4.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ಭಾಗ–1 ದಿನಾಂಕ: **28–06–2024 ರಂದು ತೆರೆಯಲಾಗುವುದು (ಸಾಧ್ಯವಾದಲ್ಲಿ).**

ಉಳಿದ ಉಪವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರ ಪರವಾಗಿ
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

ವಾಸಾಸಂಇ/ಬೆಳಗಾವಿ/143/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2024–25/397 ದಿ: 18.06.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಆಣೆಕಟ್ಟು–ಪ್ರಧಾನ ಕಾಮಗಾರಿ ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ **01** ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. **179.79** ಲಕ್ಷಗಳಿರುತ್ತದೆ (ಜಿ.ಎಸ್.ಟಿ.ಸೇರಿದಂತೆ). ಟೆಂಡರ್‌ನ್ನು ದಿನಾಂಕ: **19.06.2024** ರಿಂದ ದಿನಾಂಕ: **27.06.2024** ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **29.06.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: **02.07.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/125/ಕೆಎಸ್‌ಎಂಸಿಎ/2024–25

ಸುಭಾಷಿತ

ನಾವು ಒಬ್ಬ ಮನುಷ್ಯನನ್ನು ಪ್ರೀತಿಸುತ್ತೇವೆ ಎಂದರೆ, ಅವನ ಗುಣಗಳನ್ನು ಪ್ರೀತಿಸುತ್ತೇವೆ ಎಂದರ್ಥ.

-ವಿನ್‌ಸ್ಟನ್ ಚರ್ಚಿಲ್

ನೀಟ್, ನೆಟ್ ಪರೀಕ್ಷೆಯಲ್ಲಿ ಲೋಪ ವಿದ್ಯಾರ್ಥಿಗಳ ಸಂಕಟಕ್ಕೆ ಹೊಣೆ ಯಾರು?

'ನೀಟ್'ನಲ್ಲಿ (ಯುಜಿ) ಅಕ್ರಮಗಳು ನಡೆದಿವೆ ಎಂಬ ದೂರುಗಳು ವ್ಯಾಪಕವಾಗಿರುವ ಹೊತ್ತಿನಲ್ಲಿ, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ಯುಜಿಸಿ-ನೆಟ್ ಪರೀಕ್ಷೆಯು ರದ್ದಾಗಿರುವುದು ಪರೀಕ್ಷಾ ವ್ಯವಸ್ಥೆಯ ಬಗ್ಗೆಯೇ ಗಂಭೀರ ಪ್ರಶ್ನೆಗಳನ್ನು ಮೂಡಿಸಿದೆ. ಯುಜಿಸಿ-ನೆಟ್ ಪರೀಕ್ಷೆಯನ್ನು ಒಂಬತ್ತು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದರು. ನೀಟ್-ಯುಜಿಗೆ ಸುಮಾರು 24 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ನೆಟ್ ಪರೀಕ್ಷೆಯನ್ನು ರದ್ದುಪಡಿಸುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು 'ಪರೀಕ್ಷೆಯಲ್ಲಿ ಲೋಪವಾಗಿರಬಹುದು' ಎಂಬ ಕಾರಣ ನೀಡಿದೆ. ಈ ವಿಚಾರವನ್ನು ಸಿಬಿಐ ತನಿಖೆಗೆ ಒಪ್ಪಿಸಲಾಗುತ್ತದೆ ಎಂದು ಹೇಳಿದೆ. ಅಂದರೆ, ಪರೀಕ್ಷೆಯು ನ್ಯಾಯಸಮ್ಮತವಲ್ಲದ ಬಗೆಯಲ್ಲಿ ನಡೆದಿದೆ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಂತೆ ಆಯಿತು. ಆದರೆ ಯಾವ ರೀತಿಯ ಅಕ್ರಮಗಳು ನಡೆದಿವೆ ಹಾಗೂ ಯಾರು ಆ ಕೃತ್ಯ ಎಸಗಿದ್ದಾರೆ ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಿಲ್ಲ. ನೀಟ್ ಅನ್ನು ವೈದ್ಯಕೀಯ ಹಾಗೂ ಅದಕ್ಕೆ ಸಂಬಂಧಿಸಿದ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆಯನ್ನು ನಿರ್ಣಯಿಸಲು ನಡೆಸಲಾಗಿದೆ. ನೆಟ್ ಪರೀಕ್ಷೆಯನ್ನು ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಹಾಗೂ ಪಿಎಚ್‌ಡಿ ಸಂಶೋಧನಾ ಫೆಲೋಗಳ ಅರ್ಹತೆಯನ್ನು ತೀರ್ಮಾನಿಸಲು ನಡೆಸಲಾಗಿದೆ.

ಈ ಪರೀಕ್ಷೆಗಳ ಸುತ್ತ ಎದ್ದಿರುವ ವಿವಾದಗಳು ಪರೀಕ್ಷಾ ವ್ಯವಸ್ಥೆಯಲ್ಲಿ ಗಂಭೀರ ಸ್ವರೂಪದ ಲೋಪಗಳು ಇದ್ದುದರತ್ತ ಬೊಟ್ಟುಮಾಡಿವೆ. ಅಲ್ಲದೆ, ಈ ವಿವಾದಗಳು ಪರೀಕ್ಷಾ ಪ್ರಕ್ರಿಯೆಯ ವಿಶ್ವಾಸಾರ್ಹತೆಗೆ ಬಲವಾದ ಪೆಟ್ಟು ಕೊಟ್ಟಿವೆ. ನೀಟ್-ಯುಜಿ ಕುರಿತ ವಿಚಾರಗಳು ಈಗ ಸುಪ್ರೀಂ ಕೋರ್ಟ್‌ನ ಅಂಗಳದಲ್ಲಿವೆ. ಎನ್‌ಟಿಎ ಬಗ್ಗೆ ಕಟುವಾದ ಮಾತುಗಳನ್ನು ಆಡಿರುವ ಸುಪ್ರೀಂ ಕೋರ್ಟ್, ಆ ಏಜೆನ್ಸಿಗೆ ಕೆಲವು ಗಂಭೀರ ಪ್ರಶ್ನೆಗಳನ್ನು ಕೇಳಿದೆ. ನೀಟ್‌ಗೆ ಹಾಜರಾಗಿದ್ದ 1,500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ನೀಡಿದ್ದ ಕೃಪಾಂಕಗಳನ್ನು ರದ್ದುಪಡಿಸಲಾಗುತ್ತದೆ, ಆ ವಿದ್ಯಾರ್ಥಿಗಳು ಹೊಸದಾಗಿ ನೀಟ್ ಬರೆಯಬಹುದು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿವರಣೆ ನೀಡಿದೆ. ನೀಟ್‌ನ ಪ್ರಶ್ನೆಪತ್ರಿಕೆ ಸೋರಿಕೆ ಆಗಿತ್ತು ಎಂಬ ಆರೋಪವಿದೆ, ಹಲವಾರು ವಿದ್ಯಾರ್ಥಿಗಳು ಟಾಪರ್‌ಗಳಾಗಿ ಹೊರಹೊಮ್ಮಿರುವುದು ಹೇಗೆ ಎಂಬ ಪ್ರಶ್ನೆಯೂ ಇದೆ. ಈ ಪರೀಕ್ಷೆಯಲ್ಲಿ ನಿರ್ದಿಷ್ಟ ಕಡೆಗಳಲ್ಲಿ ಕೆಲವು ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ನೀಟ್ ವಿಚಾರವಾಗಿ ಕಳೆದ ಕೆಲವು ವರ್ಷಗಳಿಂದ ಗಂಭೀರ ದೂರುಗಳು ಇವೆ. ಹಿಂದಿನ ವರ್ಷಗಳಲ್ಲಿ ಪರೀಕ್ಷೆಯನ್ನು ನಡೆಸಿದ ಬಗೆಯಿಂದ ಪಾಠ ಕಲಿತುಕೊಳ್ಳುವ ಬದಲು, ಅನುಭವ ಸಂಪಾದಿಸುವ ಬದಲು ಹಾಗೂ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಬದಲು ಎನ್‌ಟಿಎ ಇನ್ನಷ್ಟು ಗಂಭೀರವಾದ ತಪ್ಪುಗಳನ್ನು ಪ್ರತಿವರ್ಷವೂ ಮಾಡುತ್ತಿದೆ.

> ಹಿಂದಿನ ವರ್ಷಗಳಲ್ಲಿ ಪರೀಕ್ಷೆಯನ್ನು ನಡೆಸಿದ ಬಗೆಯಿಂದ ಪಾಠ ಕಲಿತುಕೊಳ್ಳುವ ಬದಲು, ಎನ್‌ಟಿಎ ಇನ್ನಷ್ಟು ಗಂಭೀರವಾದ ತಪ್ಪುಗಳನ್ನು ಪ್ರತಿವರ್ಷವೂ ಮಾಡುತ್ತಿದೆ

ಪರೀಕ್ಷೆಗಳಿಗೆ ಸಿದ್ಧರಾಗಲು ವಿದ್ಯಾರ್ಥಿಗಳು ಬಹಳಷ್ಟು ಸಮಯ, ಶಕ್ತಿ ಮತ್ತು ಹಣವನ್ನು ವ್ಯಯಿಸುತ್ತಾರೆ. ಕೆಲವು ವಿದ್ಯಾರ್ಥಿಗಳು ಯಾವುದೋ ಕೋಚಿಂಗ್ ಪಡೆಯುವ ತಿಂಗಳುಗಳ ಕಾಲ ತಾವಾಗಿಯೇ ಅಧ್ಯಯನ ನಡೆಸಿರುತ್ತಾರೆ. ಅವರು ಎರಡನೆಯ ಬಾರಿ ಪರೀಕ್ಷೆ ಬರೆಯುವಂತಹ ಪರಿಸ್ಥಿತಿ ಸೃಷ್ಟಿಸುವುದು, ಅವರು ಮಾನಸಿಕವಾಗಿ ಸಂಕಟ ಅನುಭವಿಸುವಂತೆ ಮಾಡುವುದು ಎಷ್ಟರಮಟ್ಟಿಗೆ ಸರಿ? ಪರೀಕ್ಷೆ ನಡೆಸಲು ಆಗ್ಗಿವಿಧಿವ ಅತ್ಯುತ್ತಮ ತಂತ್ರಜ್ಞಾನ ಲಭ್ಯವಿರುವಾಗ ಎನ್‌ಟಿಎ ಅಥವಾ ಇತರ ಯಾವುದೇ ಸಂಸ್ಥೆಗೆ ಲೋಪರಹಿತವಾದ ಪರೀಕ್ಷೆ ನಡೆಸಲು ಸಾಧ್ಯವಾಗಬೇಕು. ಲೋಪಗಳಿಗೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂದು ಸಚಿವರು ಭರವಸೆ ನೀಡಿದ್ದಾರಾದರೂ ಇದುವರೆಗೆ ಯಾರನ್ನೂ ಉತ್ತರದಾಯಿ ಆಗಿಸಿಲ್ಲ. ನೀಟ್ ಪರೀಕ್ಷೆಯನ್ನು ರದ್ದುಪಡಿಸಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ. ಹಾಗೆಯೇ, ಸಚಿವ ಪ್ರಧಾನ್ ಅವರ ರಾಜೀನಾಮೆಗೂ ಒತ್ತಾಯಿಸಿವೆ. ಅಲ್ಲದೆ, ಅವು ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರವಾಗಿ ತನಿಖೆ ನಡೆಸುವಂತೆಯೂ ಕೇಳಿವೆ. ಅದೇನೇ ಇರಲಿ, ಲಕ್ಷಾಂತರ ಮಂದಿ ವಿದ್ಯಾರ್ಥಿಗಳ ಜೀವನದ ಮೇಲೆ ಪರಿಣಾಮ ಉಂಟುಮಾಡುವಂತಹ ಇಂತಹ ತಪ್ಪುಗಳನ್ನು ಮಾಡಿರುವ ಎನ್‌ಟಿಎ ನಾಯಕತ್ವವು ತಾಳಿರುವ ನಿಲುವಿಗೆ ಯಾವುದೇ ಬಗೆಯ ಸಮರ್ಥನೆ ಉಳಿದುಕೊಂಡಿಲ್ಲ.

ದಿನದ ಟ್ವೀಟ್

ಇಬ್ಬರ ಜಗಳದಲ್ಲಿ...

... ಕೇಂದ್ರ ಸರ್ಕಾರ ಈ ಹಿಂದೆ ಅಡುಗೆ ಅನಿಲದ ಬೆಲೆ ಏರಿಸಿದಾಗ ರಾಜ್ಯ ಬಿಜೆಪಿಯವರು ಚಕಾರ ಎತ್ತಿಲ್ಲ. ಆದರೆ ಈಗ ಅವರು ನಮಗೆ ನೀತಿಬೋಧೆ ಮಾಡುತ್ತಿದ್ದಾರೆ. ಅದಕ್ಕಿಂತ ಮುಖ್ಯವಾಗಿ, ನಮ್ಮಲ್ಲಿನ ಪೆಟ್ರೋಲ್ ಬೆಲೆಯು ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ಇನ್ನಿತರ ರಾಜ್ಯಗಳಲ್ಲಿನ ಬೆಲೆಗಿಂತ ಕಡಿಮೆ ಇದೆ.

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಕಿಡಿನುಡಿ

ನಮ್ಮ ರಾಜ್ಯದ ಹಣಕಾಸು ವ್ಯವಹಾರದ ಮೇಲುಸ್ತುವಾರಿಗೆ ವಿದೇಶಿ ಸಲಹೆಗಾರರನ್ನು ನೇಮಿಸಿಕೊಳ್ಳುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ನಿರ್ಧಾರ ಅತಿರೇಕದ್ದು. ಇದು, ಈಸ್ಟ್ ಇಂಡಿಯಾ ಕಂಪನಿಯ ಕೈಗೆ ಲಗಾಮು ಕೊಡುವುದಕ್ಕೆ ಸಮಾನವಾದುದು!...



ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 21-6-1999

• **ಅತಿಕ್ರಮಣ: ಪಾಕ್‌ಗೆ ಜಿ-8 ಶೃಂಗ ಛೀಮಾರಿ**

ಕೊಲೊನ್, ಜೂನ್ 20 (ಯುಎನ್‌ಐ, ಪಿಟಿಐ)– ಕಾಶ್ಮೀರ ಪ್ರದೇಶದಲ್ಲಿ ಪಾಕಿಸ್ತಾನ ಸೈನ್ಯ ಮತ್ತು ಬಾಡಿಗೆ ಉಗ್ರಗಾಮಿಗಳು ಭಾರತದ ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಓಸಿ) ಉಲ್ಲಂಘಿಸಿರುವುದನ್ನು ಇಲ್ಲಿ ನಡೆಯುತ್ತಿರುವ ಜಿ–8 ರಾಷ್ಟ್ರಗಳ ಶೃಂಗಸಭೆ ತೀವ್ರವಾಗಿ ಖಂಡಿಸಿದೆ.

'ಗಡಿ ಪ್ರದೇಶದಲ್ಲಿನ ವಾಸ್ತವ ಪರಿಸ್ಥಿತಿಯನ್ನು ಸೈನಿಕ ಕಾರ್ಯಾಚರಣೆ ಮೂಲಕ ಬದಲಾಯಿಸಲು ನಡೆಸುವ ಕೃತ್ಯ ಹೊಣೆಗೇಡಿತನದ್ದು' ಎಂದು, ಸಿದ್ಧಪಡಿಸಿರುವ ಕರಡು ಹೇಳಿಕೆಯಲ್ಲಿ ತೀಕ್ಷ್ಣವಾಗಿ ಟೀಕಿಸಲಾಗಿದೆ.

ಕಾರ್ಗಿಲ್ ಬಿಕ್ಕಟ್ಟಿಗೆ ಪಾಕಿಸ್ತಾನವೇ ಹೊಣೆ ಎಂದು ಜಿ–8 ರಾಷ್ಟ್ರಗಳು ಆರೋಪಿಸಿರುವುದರಿಂದ ಭಾರತಕ್ಕೆ ರಾಜತಾಂತ್ರಿಕ ಗೆಲುವು ದೊರೆತಂತಾಗಿದೆ. ಭಾರತದ ಜೊತೆಗಿನ ತನ್ನ ವಿವಾದವನ್ನು ಪರಿಹರಿಸಲು ಮಧ್ಯಪ್ರವೇಶಿಸುವಂತೆ ಜಿ–8 ರಾಷ್ಟ್ರಗಳಿಗೆ ಮನವಿ ಮಾಡಿದ ಪಾಕಿಸ್ತಾನಕ್ಕೆ ಈ ಹೇಳಿಕೆಯಿಂದ ಮುಖಭಂಗವಾದಂತಾಗಿದೆ.

• **ಕೃಷ್ಣಾ ನದಿ ನೀರಿನ ಬಳಕೆ ಗಡುವು ವಿಸ್ತರಣೆಗೆ ಅರ್ಜಿ**

ಕಲ್ಬುರ್ಗಿ, ಜೂನ್ 20– ಕೃಷ್ಣಾ ನೀರನ್ನು 2000ನೇ ಇಸವಿ ಮೇ 31ರೊಳಗೆ ಬಳಸಿಕೊಳ್ಳಬೇಕೆಂಬ ಬಚಾವತ್ ಆಯೋಗದ ತೀರ್ಪಿನ ಗಡುವನ್ನು ವಿಸ್ತರಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಕರ್ನಾಟಕ ಮನವಿ ಸಲ್ಲಿಸಲಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ತಿಳಿಸಿದರು.

ಬಚಾವತ್ ಆಯೋಗದ ತೀರ್ಪಿನಂತೆ ರಾಜ್ಯ ತನ್ನ ಪಾಲಿನ ನೀರನ್ನು ಗಡುವಿನ ಅವಧಿಯೊಳಗೆ ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ, 2000ನೇ ಇಸವಿ ನಂತರವೂ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಸಮರ ನಡೆಸಲಿದೆ ಎಂದು ಇಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 21-6-1974

• **ವಿಶಿಷ್ಟ ಶಿಕ್ಷೆ**

ನ್ಯೂಯಾರ್ಕ್, ಜೂನ್ 20– ವ್ಯಕ್ತಿಯೊಬ್ಬರನ್ನು ಗುಂಡಿಟ್ಟು ಕೊಲೆ ಮಾಡಿದ ಅಪರಾಧಕ್ಕಾಗಿ ವೈದ್ಯರೊಬ್ಬರಿಗೆ ಎರಡು ವರ್ಷ ಕಾಲ ಜೈಲಿನಲ್ಲಿ ವೈದ್ಯನಾಗಿ ದುಡಿಯುವ ವಿಶಿಷ್ಟ ಶಿಕ್ಷೆಯನ್ನು ವಿಧಿಸಲಾಗಿದೆ.

ಜೈಲಿನಲ್ಲಿ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವೈದ್ಯನಾಗಿ ದುಡಿಯುವ ಈ ಶಿಕ್ಷೆ ನೀಡಿಕೆಯಿಂದ ನ್ಯಾಯಕ್ಕೆ ಹಾಗೂ ಮಾನವೀಯತೆಗೆ ಸೂಕ್ತ ಪುರಸ್ಕಾರ ನೀಡಿದಂತಾಗಿದೆ ಎಂದು ಬ್ರಾಂಕ್ಸ್ ಜಿಲ್ಲಾ ಅಟಾರ್ನಿ ಮಾರಿಯೋ ಮರೋಲಾ ತಿಳಿಸಿದ್ದಾರೆ.

ಅಪರಾಧಿಯನ್ನು ಪ್ರತೀಕಾರ ದೃಷ್ಟಿಯಿಂದ ಶಿಕ್ಷಿಸುವ ಬದಲು, ಸೂಕ್ತ ಶಿಕ್ಷೆಯ ಜತೆಗೆ ಆತನಿಗೆ ಮರುವಸತಿ ಕಲ್ಪಿಸಿಕೊಡುವುದು ನಮ್ಮ ಉದ್ದೇಶವಾಗಿದೆ ಎಂದೂ ತಿಳಿಸಿದ್ದಾರೆ. ಅವರ ಶಿಫಾರಸಿನ ಮೇರೆಗೆ, 50 ವರ್ಷ ವಯಸ್ಸಿನ ಡಾ. ಮಾರಿಸ್ ಹೆಲ್ವರ್‌ಗೆ ಮಾಮೂಲಾಗಿ ಏಳು ವರ್ಷ ಜೈಲು ವಾಸದ ಬದಲು ಈ ಅಪರೂಪದ ಶಿಕ್ಷೆಯನ್ನು ಕೋರ್ಟು ವಿಧಿಸಿತು.

• **ಗಾಂಧೀಜಿ ಬರೆದಿದ್ದ 30 ಅಪ್ರಕಟಿತ ಪತ್ರಗಳು 21 ಸಾವಿರ ರೂ.ಗೆ ಮಾರಾಟ**

ಲಂಡನ್, ಜೂನ್ 30– ಮಹಾತ್ಮ ಗಾಂಧಿ ಅವರು ತಮ್ಮ ಆಪ್ತ ಮಿತ್ರ ಕಲ್ಲೆನ್‌ಬಾಷ್ ಅವರಿಗೆ ಬರೆದಿದ್ದ, 30 ಅಪ್ರಕಟಿತ ಪತ್ರಗಳ ಸರಣಿಯೊಂದನ್ನು ಲಂಡನ್ನಿನ ಖ್ಯಾತ ಹರಾಜು ಮಾರಾಟಗಾರರಾದ ಸೋಥಬೀಸ್ ಸಂಸ್ಥೆಯವರು ಈ ವಾರ 1200 ಪೌಂಡುಗಳಿಗೆ (21,600 ರೂ.) ಮಾರಾಟ ಮಾಡಿದ್ದಾರೆ.

ಅಪರೂಪದ ಪುಸ್ತಕಗಳ ಸಂಗ್ರಹಣೆಗೆ ಹೆಸರಾದ ಮ್ಯಾಗ್ಸ್ ಸಂಸ್ಥೆಯವರು ಕೊಂಡ ಈ ಪತ್ರಗಳಲ್ಲಿ ಎರಡಕ್ಕೆ ಗಾಂಧಿ ಅವರು 'ಎಂ.ಕೆ.ಜಿ.' ಎಂದೂ ಉಳಿದವಕ್ಕೆ 'ಹಳೇ ಮಿತ್ರ' ಎಂದೂ ಸಹಿ ಹಾಕಿದ್ದಾರೆ.

ಗ್ರಾಮವೊಂದರ ಚಿತ್ರಣವನ್ನು ಯಥಾವತ್ತಾಗಿ ಹಿಡಿದಿಟ್ಟಿದೆ 'ಶಿವಮ್ಮ...' ಸಿನಿಮಾ

ಸಶಕ್ತ ದೃಶ್ಯಾವಳಿಯ ಪ್ರತಿಭಾ ಸಾಹಸ

ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು

ಅದೊಂದು ಉತ್ತರ ಕರ್ನಾಟಕದ ಬಸ್ ನಿಲ್ದಾಣ. ಅಲ್ಲಿ ಎದುರುಬದುರು ಕೂತ ಹದಿಹರೆಯದ ಹುಡುಗ ಹುಡುಗಿಯರು. ಒಳಭಾಗದಲ್ಲಿ ಒಬ್ಬ ಮುದುಕ. ಬಸ್ಸಿಗಾಗಿ ಕಾಯುತ್ತಿರುವ ವಯಸ್ಕರಿಗೆ ಅದು ಎಷ್ಟು ಹೊತ್ತಿಗಾದರೂ ಬರಲಿ, ಚಿಂತೆಯಿಲ್ಲ. ಕೈಯಲ್ಲಿ ಮಾಯಾಕನ್ನಡಿ ಮೊಬೈಲ್ ಇದೆ. ಕಣ್ಣೇಕಣ್ಣಾಗಿ ಮೊಬೈಲ್ ನೋಡುತ್ತಿರುವುದರ ತೀವ್ರತೆ ಅವರ ಮುಖಭಾವದಲ್ಲಿ ಎದ್ದೆದ್ದು ಕುಣಿಯುತ್ತಿದೆ! ತಮಾಷೆಯೆಂದರೆ, ಈ ನಿಲ್ದಾಣದ ಒಳಗೋಡೆಯಲ್ಲಿ ನಾನಾ ಬಗೆಯ ಪೋಸ್ಟರುಗಳನ್ನು ಒಂದರ ಮೇಲೊಂದರಂತೆ ಅಂಟಿಸಲಾಗಿದೆ. ಅದರಂತೆ ಅಲ್ಲಿಯೇ 'ಗುಂಗು ಹಿಡಿಶ್ಯಾಳ ಗಂಗಿ' ನಾಟಕ ಪ್ರದರ್ಶನ ಎಂಬ ಪೋಸ್ಟರು ಇದೆ. ಇದು, 'ಶಿವಮ್ಮ ಯರೇಹಂಚಿನಾಳ' ಎಂಬ ಶುದ್ಧ ಗ್ರಾಮೀಣ ಜನಪದ ಚಿತ್ರದ ಕ್ಷಣಮಾತ್ರದ ಒಂದು ದೃಶ್ಯ. ಇಡೀ ಚಿತ್ರ ಉತ್ತರ ಕರ್ನಾಟಕದಲ್ಲಿನ ಗ್ರಾಮದ ಓಣಿಯ ಬದುಕನ್ನು ಹಾಗೆ ಹಾಗೆಯೇ ಇತ್ತಿತ್ತ ಚಿತ್ರ ದೃಶ್ಯದಲ್ಲಿ ತೆಗೆದಿರಿಸಿದಂತಿದೆ!

ನಮ್ಮ ಈಗಿನ ಸಿನಿಮಾ ನಟರು ತಾವು ಚಿತ್ರದಲ್ಲಿ ನಟಿಸಬೇಕಾದರೆ ಎದೆಯೊಳಗೆ, ತಲೆಯೊಳಗೆ ಇರಬೇಕಾದ ಭಾವಕ್ಕಿಂತ, ಪ್ರತಿಭೆಗಿಂತ ದೇಹ, ತೋಳು ಹುರಿ ಇರಬೇಕು ಎಂಬುದನ್ನು ಬಲವಾಗಿ ನಂಬಿದಂತೆ ತೋರುತ್ತದೆ. ಇದರೊಂದಿಗೆ ಆಯಾ ನಟರದೇ ಅಭಿಮಾನಿ ಸೈನ್ಯವೂ ಹೆಚ್ಚುತ್ತಾ ಹುಚ್ಚೆದ್ದು ಕುಣಿದು, ಜಿಮ್‌ಗಳತ್ತ ಮುಖ ಮಾಡಿ ತೋಳು ದಪ್ಪ ಮಾಡಿಕೊಳ್ಳತೊಡಗಿದೆ. ಇದರಿಂದ ಅವರದೇ ದುರಂತ ಕಥೆಗಳು ಜೀವಂತ ಸೃಷ್ಟಿಯಾಗಿ, ಸಿನಿಮಾ ಕತೆಗಳಿಗಿಂತ ಹೆಚ್ಚು ಪ್ರಚಾರವಾಗತೊಡಗಿವೆ. ಭ್ರಮಾಧೀನ, ಅಗ್ಗದ ಜನಪ್ರಿಯ ಚಿತ್ರಗಳು ಈ ಹೊತ್ತು ಯುವ ಸಮೂಹದಲ್ಲಿ ಕೆಟ್ಟ ಕನಸುಗಳನ್ನು ಸೃಷ್ಟಿಸುತ್ತ, ನಿರುದ್ಯೋಗದ ಒಂಟಿತನವನ್ನು ಹೆಚ್ಚಿಸುತ್ತ ಹಾದಿ ತಪ್ಪಿಸುತ್ತಿವೆ ಎಂಬ ಯಥಾಪ್ರಕಾರದ ಮಾತನ್ನು ಮತ್ತೆ ಪ್ರಸ್ತಾಪಿಸಬೇಕಿದೆ.

ಶಿವಮ್ಮ... ಚಿತ್ರ ಸಿದ್ಧವಾಗಿ ಎರಡು ವರ್ಷಗಳಾಗಿದ್ದರೂ ಇದು ಇತ್ತೀಚೆಗೆ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ. ಆದರೆ ಕಾನ್ ಮತ್ತು ಬೆಂಗಳೂರು ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡು ವೀಕ್ಷಕರ ಮೆಚ್ಚುಗೆ ಗಳಿಸಿದೆ. ಯಾಕೆಂದರೆ ಅದರ ಪೂರ್ಣ ಹೊಸತನಕ್ಕಾಗಿ! ಯಾವುದೇ ಗ್ರಾಮೀಣ ಚಿತ್ರವೆಂದರೆ, ಒಬ್ಬ ಸುಪ್ರಸಿದ್ಧ ನಟಿಗೆ ಹಳೆಯ ಹರಿದ ಸೀರೆ, ನಟನಿಗೆ ಚೆಡ್ಡಿ, ಬನೀನು ಏರಿಸಿದರೆ ಹಳ್ಳಿಯ ಕಥೆ ಆದಂತೆ ಅಂದುಕೊಂಡದ್ದುಂಟು. ಆದರೆ ಅದದೇ ಜಾಡಿಗೆ ಬಿದ್ದ ನಟರಿಗೆ ಅವರ ಸವೆದ ನಟನೆಯ ಹಾವಭಾವ ಬದಲಾಗದೆ, ತದನಂತರ ಜನಪದ ನುಡಿಗಟ್ಟುಗಳು ಸರಿಯಾಗಿ ಹೊರಳದೆ, ಕಡೆಗೆ ಜನಪದವಲ್ಲದ ಚಿತ್ರಗಳಾಗಿ ಕಾಣಿಸಿಕೊಂಡದ್ದುಂಟು.

ಇದೀಗ ರಿಷಬ್ ಶೆಟ್ಟಿ ನಿರ್ಮಾಪಕರಾಗಿ, ಸಾಫ್ಟ್‌ವೇರ್ ಎಂಜಿನಿಯರ್ ಜೈಶಂಕರ ಆರ್ಯರ್ ನಿರ್ದೇಶಕರಾಗಿ ಹೊರತಂದಿರುವ ಶಿವಮ್ಮ... ಸಿನಿಮಾ, ನಾಳೆಯೋ ಮುಂದಿನ ವಾರವೋ ನಾವು ಯರೇಹಂಚಿನಾಳ ಗ್ರಾಮಕ್ಕೆ ಹೋಗಿ ಆ ಬೀದಿಯ ಬದುಕನ್ನು ಕಂಡರೆ ಹೇಗೆ ಕಣ್ಣಿಗೆ ಕಾಣಬಹುದೋ ಹಾಗೆಯೇ ಇರುವುದು ಅಚ್ಚರಿಯ ಸಂಗತಿ. ಹಾರಾಡುವ ಪಕ್ಷಿಗಳನ್ನು, ಬೀದಿಯಲ್ಲಾಡುವ ಜೀವಸಂಕುಲವನ್ನು ಕ್ಯಾಮೆರಾದ ಮುಂದೆ ನಿಲ್ಲೆಂದು ಹೇಳಲು ಸಾಧ್ಯವೇ? ಆದರೆ ಆ ಕ್ರಮ ಈ ಚಿತ್ರದಲ್ಲಿ ಶಿವಮ್ಮನಿಂದ, ಅವಳ ಗಂಡ, ಮಗ, ಮಗಳು ಮಿಕ್ಕ ಎಲ್ಲ ಪಾತ್ರಗಳಿಂದ ಸಾಧ್ಯವಾಗಿಬಿಟ್ಟಿದೆ. ಅಷ್ಟೇ ಅಲ್ಲ ಒಂದೇ ದೃಶ್ಯದಲ್ಲಿ ಕನಿಷ್ಠ ಮೂರ್ನಾಲ್ಕು ಭಾವಗಳನ್ನು ಸಾಮಾನ್ಯವೆಂಬಂತೆ ಕಾಣುವ ಈ ಅಸಾಮಾನ್ಯ ಚಿತ್ರದಲ್ಲಿ ನೋಡಬಹುದು.

ಈ ಹೊತ್ತು ಗ್ರಾಮಗಳಲ್ಲಿ ಬೆದ್ದಲು ಬೇಸಾಯ ಹೇಗೆ ಹೊಗೆ ಸುತ್ತಿಕೊಂಡಿದೆ ಎಂಬುದು ತಿಳಿದದ್ದೇ. ಶಿವಮ್ಮನ ಅಣ್ಣ ಬಯಲು ಬಿದ್ದ ಹೊಲದಲ್ಲಿ ಅದೇನೋ ಕೆಲಸ ಮಾಡುತ್ತಿರುತ್ತಾನೆ. ಅವನ ಬೇಸಾಯದ ಶ್ರಮ ಯಾವ ಬಗೆಯದು ಎಂಬುದೇ ಗೊತ್ತಾಗುವುದಿಲ್ಲ. ಹೊಲ ಪಾಳು ಬಿದ್ದಂತೆ ಕಾಣುತ್ತದೆ. ಅಲ್ಲಲ್ಲಿ ಬೆಂಕಿ ಉರಿಯುತ್ತಾ ಅಸಾಧ್ಯ ಹೊಗೆ ಎದ್ದುಕೊಂಡಿರುತ್ತದೆ. ಈ ಒಣಬೇಸಾಯದ ಯಜಮಾನ ಮುಂದೆ ತೀರಿಕೊಳ್ಳುತ್ತಾನೆ. ದೃಶ್ಯದ ವೈವಿಧ್ಯ ಇರುವುದು ಇಲ್ಲೇ. ಶಿವಮ್ಮನ ಈ ರೈತಾಪಿ ಅಣ್ಣ ತೀರಿಕೊಂಡದ್ದಕ್ಕೆ ಕಾರಣ ಅವನ ವ್ಯವಸಾಯದ ಪಡಿಪಾಟಲೋ ಇಲ್ಲಾ ಊರ ಶಾಲೆಯ ಪರಿಚಾರಿಕೆಯ ಉದ್ಯೋಗದೊಂದಿಗೆ ಹೊಸ ಬಿಜಿನೆಸ್ಸು ಹಿಡಿದು, ಆ ಶಕ್ತಿವರ್ಧಕ ಪೇಯವನ್ನು ಎಲ್ಲರಿಗೂ ಕುಡಿಸಿ, ಅದಕ್ಕಾಗಿ ಹೊಗಳಿಸಿಕೊಳ್ಳುವುದರ ಜೊತೆಜೊತೆಗೆ ಬೈಸಿಕೊಳ್ಳು-ತ್ತಲೂ ಇರುವ ಶಿವಮ್ಮನ ಅಣ್ಣನೂ ಅದನ್ನೇ ಕುಡಿದು ಸತ್ತನೋ ಎಂಬುದು ಸ್ಪಷ್ಟವಾಗುವುದಿಲ್ಲ. ಆದರೆ ಅಂತಹ ಅನುಮಾನದ ಅಪವಾದಕ್ಕೆ ಶಿವಮ್ಮ ಸಿಲುಕುತ್ತಾಳೆ. ಶಿವಮ್ಮ ತಾನು ತೊಡಗುವ ಬಿಜಿನೆಸ್ಸಿಗೆ ಬಂಡವಾಳ ಹೂಡಲು ಎಲ್ಲರಲ್ಲೂ ಸಾಲ ಕೇಳಿದಂತೆ ಅಣ್ಣನಲ್ಲೂ ಕಾಸು ಕೇಳಲು ಬಂದಿರುತ್ತಾಳೆ. ಆಗಲೇ ಅತ್ತಿಗೆಯ ಕೆಂಗಣ್ಣಿಗೆ ಗುರಿಯಾಗಿರುತ್ತಾಳೆ.

ಶಿವಮ್ಮನ ಸತ್ತ ಅಣ್ಣನ ಸುತ್ತ ಕುಳಿತವರಲ್ಲಿ ಮೊದಲ ಸುತ್ತಿನಲ್ಲಿ ಹೆಂಗಸರ ಸಮೂಹವಿದ್ದು, ಹೆಂಡತಿ ತಲೆ ತಲೆ ಚಚ್ಚಿಕೊಳ್ಳುತ್ತಿರಬೇಕಾದರೆ, ಅಣ್ಣನ ಸಾವಿಗೆ ಶಿವಮ್ಮ ಕಕ್ಕಾಬಿಕ್ಕಿಯಾಗಿಯೋ ಸುಪ್ತ ದುಃಖದಲ್ಲಿಯೋ ಕೂತಿರುತ್ತಾಳೆ. ಮತ್ತೊಬ್ಬಳು, ಸತ್ತವನ ಘನ ವ್ಯಕ್ತಿತ್ವವನ್ನು ಉತ್ಪ್ರೇಕ್ಷಾ ಧಾಟಿಯಲ್ಲಿ ಗಂಟಲಿಂದೀಚಿನ ಗುಣಗಾನ ಮಾಡುತ್ತಿರು-ತ್ತಾಳೆ. ಇದರ ನಡುವೆ ಅತ್ತಿಗೆಯ ದುಃಖ ಸ್ಫೋಟವಾಗಿ, ಶಿವಮ್ಮ ಮಾರುವ ಆಧುನಿಕ ಪೇಯವೇ ಗಂಡನ ಸಾವಿಗೆ ಕಾರಣವೆಂದು ಆಕೆಗೆ ಝಾಡಿಸಿ ಒದೆಯುತ್ತಾಳೆ. ಹೆಣದ ಎರಡನೆಯ ಸುತ್ತಿನಲ್ಲಿ, ಪುರುಷರು ಡಪ್ಪು ದಮಡಿ ತಾಳ ಹಿಡಿದು ಭಜನೆಯ ಪದ ಹಾಡುತ್ತಿರುತ್ತಾರೆ. ಇನ್ನು ಅಲ್ಲೇ ಮೂರನೆಯ ದೃಶ್ಯವಾಗಿ, ಸಿಂಗರಿಸಿದ ಹೆಣದ ಕುರ್ಜನ್ನು ಹೊತ್ತೊಯ್ಯುವಲ್ಲಿ ಭಯಂಕರ ಸದ್ದಿನ ಪಟಾಕಿಯ ಹೊಗೆ ಮತ್ತು ಹುಡುಗರ ಕುಣಿತ, ಓಣಿಯ ಮನೆಗಳೇ ಅಲ್ಲಾಡುವಂತಿರುತ್ತವೆ. ಇಲ್ಲಿ ಸಾವಿನ ಗಹನ ಸಂಗತಿಯೇ ಪತ್ತೆ ಇಲ್ಲದಂತಾಗಿಬಿಡುವುದು ದೃಶ್ಯದ ವಿಚಿತ್ರ! ಕೆಲವೇ ಕ್ಷಣಗಳ ಈ ದೃಶ್ಯದಲ್ಲಿ ಅಳು, ಈರ್ಷ್ಯೆ, ಗುಣಗಾನ, ತಾಳ ತಪ್ಪಿದ ಭಜನೆ, ಅದರೊಳಗೇ ಚೂರು ಪಾರು ಅಧ್ಯಾತ್ಮ ವಾಕ್ಯಗಳು, ಕಡೆಯದಾಗಿ ಪಟಾಕಿಯ ಸಿಡಿತ, ಕುಣಿತ ಎಲ್ಲ ದೃಶ್ಯಾವಳಿಯೂ ಅದ್ಭುತ ರೀತಿಯಲ್ಲಿ ಹಾಯ್ದುಬಿಡುತ್ತದೆ.

ಚಿತ್ರದ ಇನ್ನೊಂದು ಆರಂಭಿಕ ದೃಶ್ಯ ಶಕ್ತಿವರ್ಧಕ ಪುಡಿಯ ಪ್ರಚಾರ ಸಭೆ. ಸಭೆಗೆ ಆಗಮಿಸುವ ಪ್ರಚಾರಕ ಅಧಿಕಾರಿ ತನ್ನ ವಸ್ತುವಿನ ಮಹಿಮೆಯ ಗುಣಗಾನ ಮಾಡಿ, ಹಳ್ಳಿಯವರೆಲ್ಲ ಇದನ್ನು ಬಳಸುವರಾದರೆ ಎಲ್ಲರೂ ದಿನ, ವಾರ, ತಿಂಗಳು, ವರ್ಷದಲ್ಲಿ ಶಕ್ತಿಯುತರೂ ಶ್ರೀಮಂತರೂ ಆಗುವರೆಂದು ಹುರಿದುಂಬಿಸುತ್ತಾನೆ. ಅವನು ಕೈಕಾಲು ಝಾಡಿಸಿ 'ಐ ವಿಲ್ ಡೂ ಇಟ್' ಎಂದು ಘೋಷಿಸುವ ಪದಗಳನ್ನು ಶಿವಮ್ಮ 'ಐ ವಿಲ್ ಡುಟ್' ಎಂದು ಪುನರುಚ್ಚರಿಸುವಳು. ಇದು ಅವಳ ಕಿವಿಗೆ, ಮನಸ್ಸಿಗೆ 'ಡೌಟ್' ಆಗಿಯೂ 'ಡೋಂಟ್' ಆಗಿಯೂ ಕೇಳಿಸುತ್ತಿತ್ತೇನೊ!

ಎಲ್ಲರ ಆರೋಗ್ಯದ ಕುರಿತು ಮಾತನಾಡುವ ಶಿವಮ್ಮನ ಗಂಡನೇ ನಿತ್ಯ ರೋಗಿ. ಕಾಲೇಜು ಓದುವ ಉಢಾಳ ಮಗನನ್ನು 'ಎಲ್ಲಿಗೆ ಹೊರಟೆ?' ಎಂದು ಕೇಳಿದರೆ 'ಸುಡುಗಾಡಿಗೆ' ಎನ್ನುತ್ತಾನೆ. ಅವ್ವನ ಕೈಯಿಂದಲೇ ಬೈಕು ತಳ್ಳಿಸಿಕೊಳ್ಳುತ್ತಾನೆ. ಗ್ರಾನೈಟ್ ಉದ್ಯಮಿಯ ಮಗನನ್ನು ಪ್ರೀತಿಸಿದ ಮಗಳ ಮದುವೆಯನ್ನು ಶಿವಮ್ಮ ವಿರೋಧಿಸುತ್ತಾಳೆ. ಬಡತನಕ್ಕೂ ಶ್ರೀಮಂತಿಕೆಗೂ ಎಲ್ಲಿಯ ಸಂಬಂಧ? ಮದುವೆ ಮುರಿದ ಹಂತದಲ್ಲಿ ಶಿವಮ್ಮನೇ ಬೀಗರ ಮುಂದೆ ಮದುವೆಗಾಗಿ ಬೇಡಿಕೊಳ್ಳುತ್ತಾಳೆ. ಮುರಿದ ಮದುವೆಯ ಕೂಸನ್ನು ಯಾರಿಗೆ ಕೊಡಲಿ ಎಂದು ಕಂಗಾಲಾಗುತ್ತಾಳೆ. ಯಥಾಪ್ರಕಾರ ಹಂಚಿನಾಳದ ಸರ್ಕಾರಿ ಶಾಲೆಗೆ ಬೀಗ ಜಡಿದಿದ್ದು, ಶಿವಮ್ಮ ಅಂಗಳದ ಕಸ ಗುಡಿಸುತ್ತಿರುತ್ತಾಳೆ.

ಆಧುನಿಕ ಸಂದರ್ಭದಲ್ಲಿ ಅಪರಿಚಿತವೆನಿಸಿ ನಮ್ಮ ಕಣ್ಣ ಮುಂದೆ ಜಾಹೀರಾತು ರೂಪದಲ್ಲಿ ಬರುವ ವಸ್ತು ಸಂಗತಿಯ ಪ್ರಚಾರ ಮತ್ತು ಮಾರಾಟದ ತಂತ್ರಕ್ಕೆ ಪಟ್ಟಣ ಮಾತ್ರವಲ್ಲ, ಶರವೇಗದಲ್ಲಿ ಗ್ರಾಮಗಳ ಪರಿಸರವೂ ಬಲಿಯಾಗುತ್ತಿದೆ ಎಂಬುದರಲ್ಲಿ ಅಚ್ಚರಿಯೇನೂ ಇಲ್ಲ. ಒಂದು ಶಕ್ತಿವರ್ಧಕ ಪೇಯದ ಮಾರಾಟ ಮತ್ತು ಅದರ ದಿಢೀರ್ ಲಾಭದ ಮೋಹದ ಹಿಂದೆ ಹೊರಡುವವಳು ಶಿವಮ್ಮ. ಅದರ ಗುಂಗಿನಲ್ಲಿ ಏಳುತ್ತ, ಬೀಳುತ್ತ ಸಾಲಗಾರಳಾಗಿ ತಡವರಿಸುವ ಪರಿಯಲ್ಲಿ, ಆಧುನಿಕತೆ ಅನಿವಾರ್ಯ, ಅದಕ್ಕೆ ಒಗ್ಗುವುದೇ ಧರ್ಮ ಅಥವಾ ಕರ್ಮ ಎಂಬುದನ್ನು ಚಿತ್ರದ ಅಂತ್ಯ ಸಾರುವಂತಿದೆ.

ಚಿತ್ರದಲ್ಲಿ ದೃಶ್ಯಗಳಿಗೆ ಹಿನ್ನೆಲೆ ಸಂಗೀತವೇ ಇಲ್ಲ! ದೃಶ್ಯಗಳ ಆಡುಭಾಷೆ ಸಶಕ್ತ. ಈ ಚಿತ್ರ ನಿರ್ಮಾಣದ ಕ್ರಮವನ್ನೇ ವಿವರಿಸುವ ಹಾಡೊಂದಿದೆ. ಸಂಗೀತಾ ಕಟ್ಟಿಯವರ ಉತ್ತರ ಕರ್ನಾಟಕದ ಭಜನಾ ಶೈಲಿಯ ಆರಂಭಿಕ ಶೀರ್ಷಿಕೆಯ ಈ ಹಾಡು ಗುಂಗು ಹಿಡಿಸುವಂತಿದೆ. ಅಭಿನಯದ ಯಾವ ಹಿನ್ನೆಲೆಯೂ ಇಲ್ಲದ, ಶಿವಮ್ಮನ ಪಾತ್ರಧಾರಿಯಾದ ಶರಣಮ್ಮನ ಅದಮ್ಯ ಉತ್ಸಾಹದ ಅಭಿನಯದ ಕಥೆಯೊಂದಿಗೆ, ನಿರ್ಮಾಪಕ, ನಿರ್ದೇಶಕರ ಪ್ರತಿಭಾ ಸಾಹಸವೂ ಸೇರಿಕೊಂಡಿದೆ.

ಚುರುಮುರಿ

ಸಾಹಿತಿ ಸಂಕಟ!

• ಬಿ.ಎನ್.ಮಲ್ಲೇಶ್

'ಹಲೋ... ಎಮ್ಮೆಲ್ಲೆ ಸಾಹೇಬ್ರೆ, ನಾನು ಸಾಹಿತಿ ತೆಪರೇಸಿ ಮಾತಾಡ್ತಿರೋದು...'

'ಓ... ಏನಯ್ಯ, ಬಾಳ ದಿನ ಆತು, ಸಿಗ್ಲೇ ಇಲ್ಲ?'

'ಬಿಡಿ ಸಾ... ನನ್ನ ನೀವು ಯಾವ ನಿಗಮ ಮಂಡಳಿಗೂ ಹಾಕಿಸ್ಲಿಲ್ಲ, ಬೋರ್ಡು ಬಳಪ ಕೊಡಿಸ್ಲಿಲ್ಲ, ಅಕಾಡೆಮಿಗಾದ್ರೂ ಹಾಕಿಸ್ಬೋದಿತ್ತು...'

'ಲೇಯ್, ನಿಗಮ-ಮಂಡಳಿ ಇರೋದು ರಾಜಕಾರಣಿಗಳಿಗೆ, ಸಾಹಿತಿಗಳಿಗಲ್ಲ'.

'ನೀವೊಳ್ಳೆ, ಸಾಹಿತಿಗಳೂ ರಾಜಕಾರಣಿಗಳೇ ಅಂತ ನಿಮ್ ಪಕ್ಷದ ಅಧ್ಯಕ್ಷರು ಹೇಳಿಲ್ವಾ?'

'ಅಲ್ಲ, ಅವರು ಹೇಳಿದ ಮೇಲೆ ಮುಗೀತು ಬಿಡು, ಕೆಲವು ಸಾಹಿತಿಗಳು ಒಳಗೊಳಗೇ ರಾಜಕಾರಣಿನೂ ಆಗಿರ್ತಾರಂತೆ, ನೀನೆಂಗೆ?'

'ನಾನೂ ಹಂಗೇ ಸಾ... ನಾನು ಬರೆದ 'ಕೈಯಿಂದಲೇ... ಕೈಯಿಂದಲೇ... ಕನಸೊಂದು ನನಸಾಗಿದೆ' ಹಾಡು ಸಕತ್ ವೈರಲ್ ಆಗಿತ್ತು ಸಾ'.

'ಅಲೆ ಇವ್ನ, ಚೆನ್ನಾಗೇ ಬರ್ದಿದೀಯಲ್ಲೋ. ನಮ್ ಸಾಹೇಬ್ರಿಗೆ ಗೊತ್ತಾಗಿದ್ರೆ ನಿನ್ನ ಅಕಾಡೆಮಿ ಅಧ್ಯಕ್ಷರನ್ನೇ ಮಾಡಿರೋರು'.

'ನಾನು ಗ್ಯಾರಂಟಿ ಮೇಲೂ ಒಂದು ಕವನ ಬರೆದಿದೀನಿ ಸಾ... ಹೇಳ್ಲಾ?'

'ಬ್ಯಾಡ, ನೀನು ಬರೀ ಕವನ ಬರಿಯೋದಲ್ಲ, ರಾಜಕಾರಣನೂ ಮಾಡ್ಬೇಕು, ವೋಟ್ ಹಾಕಿಸ್ಬೇಕು'.

'ಅಲ್ಲ ಸಾ, ಆ ಗುಡ್ಡೆ ಏನೂ ಬರೆದಿಲ್ಲ, ಅವನನ್ನ ಅಕಾಡೆಮಿಗೆ ಹಾಕಿದೀರಲ್ಲ, ನ್ಯಾಯನಾ?'

'ಅವ್ನು ನಮ್ ಪಾರ್ಟಿಗೆ ಬಾಳ ದುಡಿದಿದಾನೆ ಕಣಯ್ಯ, ಅವನಿಗೆ ಎಲ್ಲಾದ್ರೂ ಅಕಾಮಡೇಟ್ ಮಾಡ್ಬೇಕಿತ್ತು, ಅಕಾಡೆಮೀಲಿ ಮಾಡಿದೀವಿ'.

'ಅಲ್ಲ ಸಾ, ಅವ್ನು ಸಾಹಿತಿ ಅಲ್ಲ, ರಾಜಕಾರಣಿ'.

'ಆಗ್ಲಿ ಏನೀಗ? ಸಾಹಿತಿಯು ರಾಜಕಾರಣಿ ಆಗಬೋದಾದ್ರೆ, ರಾಜಕಾರಣಿಯು ಸಾಹಿತಿ ಯಾಕಾಗಬಾರ್ದು?'

'ಅಲ್ಲ ಸಾ, ಸಾಹಿತಿ ಬೇಕಾದ್ರೆ ರಾಜಕಾರಣಿ ಆಗಬೋದು, ರಾಜಕಾರಣಿ ಹೆಂಗೆ ಸಾಹಿತಿ ಆಗ್ತಾರೆ? ಅವರಿಗೆ ಕತೆ, ಕವನ, ಪುಸ್ತಕ ಬರಿಯೋಕೆ ಬರ್ಬೇಕಲ್ಲ?'

'ಬರದಿದ್ರೆ ಬ್ಯಾಡ, ಅವರ ಹೆಸರಲ್ಲಿ ಬೇರೆಯವರು ಕತೆ, ಕವನ, ಪುಸ್ತಕ ಬರೆದುಕೊಡ್ತಾರೆ, ಆಗೇನ್ಮಾಡ್ತೀಯ?'

'ತಪ್ಪಾತು ಸಾ... ಮುಂದೆ ಮಾತಾಡಲ್ಲ...' ಫೋನಿಟ್ಟ ತೆಪರೇಸಿ.

ಸಂಗತ

ಪಠ್ಯಕ್ರಮದಲ್ಲಿ ಇರಲಿ ಸರಿಗಮ

ಸುಖ, ನೆಮ್ಮದಿಯ ಬದುಕಿಗೆ ಸರ್ವರೂ ಹಂಚಿಕೊಂಡು ಬಾಳುವುದೊಂದೇ ಮಾರ್ಗ ಎಂಬ ತತ್ವವನ್ನು ಸಂಗೀತವು ಬಿಂಬಿಸುತ್ತದೆ

• ಯೋಗಾನಂದ

'ಒಂದು ಎರಡು ಬಾಳೆಲೆ ಹರಡು, ಮೂರು ನಾಕು ಅನ್ನ ಹಾಕು...' ಜಿ.ಪಿ.ರಾಜರತ್ನಂ ಅವರ ಊಟದ ಹಾಡನ್ನು ಕೇಳದವರಿಲ್ಲ. ಎಳೆಯರಿಗೆ ಸಂಖ್ಯೆಗಳನ್ನು ಪ್ರಿಯವಾಗಿ ಉಣಬಡಿಸುವ ಬಗೆಯಿದು. ಶಾಲೆ, ಮನೆಯಲ್ಲಿ ಮಕ್ಕಳು ವಿಪರೀತ ಒತ್ತಡದಲ್ಲಿ ಬೆಳೆಯುತ್ತಿರುವುದು ಸ್ಪಷ್ಟ. ಮಕ್ಕಳು ವಿದ್ಯಾರ್ಜನೆಯಲ್ಲಿ ಶ್ರದ್ಧೆ, ಆಸಕ್ತಿಯಿಂದ ತೊಡಗಬೇಕು. ಶಾಲೆಗೆ ಗೈರಾಗಬಾರದು, ಅವರಿಗೆ ತರಗತಿಯೇ ಶಿಕ್ಷೆ ಅನ್ನಿಸಬಾರದು. ಎಲ್ಲ ನಿಗದಿತ ವಿಷಯಗಳಲ್ಲೂ ಕುತೂಹಲವಿರಬೇಕು. ಇವಿಷ್ಟನ್ನೂ ತಕ್ಕಮಟ್ಟಿಗಾದರೂ ಸಾಧ್ಯವಾಗಿಸುವ ಅಭಿಯಾನವೇನಾದರೂ ಇದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಅದುವೇ ತರಗತಿಯಲ್ಲಿ ಸಂಗೀತಕ್ಕೆ ಅನುವು ಮಾಡಿಕೊಡುವುದು.

ಹಿಂದೆ ಯಾರಾದರೂ ಬೋಧಕರು ರಜೆಯಲ್ಲಿ-ಇದ್ದರೆ ಅವರು ತೆಗೆದುಕೊಳ್ಳಬೇಕಾದ ಪೀರಿಯಡ್‌ಗೆ, ಬಿಡುವಿರುವ ಬೋಧಕರು ಬರುತ್ತಿದ್ದರು. ತಾವೂ ಹಾಡಿ ಮಕ್ಕಳಿಂದಲೂ ಹಾಡಿಸುತ್ತಿದ್ದರು. ಜಗತ್ತನ್ನು ಆವರಿಸಿರುವ ಸದ್ದು, ಗೌಜಿನ ನಡುವೆಯೂ ಸಂಗೀತ ಜೀವಿಸಿದೆ ಎನ್ನುವುದನ್ನು ಯಾರೂ ಅಲ್ಲಗಳೆಯರು.

ಸುಖ, ನೆಮ್ಮದಿಯ ಬದುಕಿಗೆ ಹಂಚಿಕೊಂಡು ಬಾಳುವುದೊಂದೇ ಮಾರ್ಗವೆಂಬ ತತ್ವವನ್ನು ಸಂಗೀತವು ಬಿಂಬಿಸುತ್ತದೆ. ಅನಾದಿ ಕಾಲದಿಂದಲೂ ಸಮುದಾಯಗಳಿಗೆ, ನಾಗರಿಕತೆಗಳಿಗೆ ಸಂಗೀತ ಅವಿಭಾಜ್ಯ ಅಂಗ. ಶಾಲೆಯ ಅಂಗಳದಲ್ಲಿ ಸಂಗೀತ ಅದೇಕೊ ಕಲಿಕೆಯ ವಿಷಯವಾಗಿ ಇನ್ನೂ ಚಿಗುರೊಡೆದಿಲ್ಲ. ಪ್ರವೇಶಾವಕಾಶದ ಪ್ರಕಟಣೆಯಲ್ಲೊ ಇಲ್ಲವೆ ಪರೀಕ್ಷಾ ವೇಳಾಪಟ್ಟಿಯಲ್ಲೊ 'ಹಿಂದೂಸ್ತಾನಿ ಸಂಗೀತ', 'ಕರ್ನಾಟಕ ಸಂಗೀತ' ಎಂಬ ನಮೂದನ್ನು ಕಣ್ತಪ್ಪಿ ಕಾಣಬೇಕಷ್ಟೆ. ಗಣಿತ, ವಿಜ್ಞಾನ, ವಾಣಿಜ್ಯದಂಥ ವಿಷಯಗಳ ಅಭ್ಯಾಸಕ್ಕಿರುವ ಅವಕಾಶ ವ್ಯಾಪ್ತಿ ಸಂಗೀತಕ್ಕಿಲ್ಲ ಎಂಬ ತಪ್ಪುಗ್ರಹಿಕೆ ಮತ್ತು ಭ್ರಮೆಯ ಫಲವಿದು. ಸಂತೋಷ ಮತ್ತು ಹಿಗ್ಗನ್ನು ಪ್ರಸರಿಸುವ ಸಂಗೀತವು ಪ್ರಕೃತಿಯಲ್ಲೇ ಇದೆ. ಸಾಮರಸ್ಯ ಇರುವುದೆಲ್ಲ ಸಂಗೀತವೆ. ವಿಶ್ವಪ್ರಸಿದ್ಧ ಸಂಗೀತಜ್ಞ 18ನೇ ಶತಮಾನದ ವಿಯೆನ್ನಾದ ವೋಲ್ಫ್‌ಗ್ ಅಮೆಡೆಸ್ 'ಸಂಗೀತವು ಸ್ವರಗಳಲ್ಲಿಲ್ಲ, ಅವುಗಳ ನಡುವಿನ ಮೌನದಲ್ಲಿದೆ' ಎಂದಿದ್ದಾರೆ.

ಸಂಗೀತ ಬರೀ ರಂಜನೆಗಲ್ಲ, ಅದನ್ನು ಆಲಿಸುವುದರಿಂದ ಅನೇಕ ಪ್ರಯೋಜನಗಳಿವೆ. ಎಲ್ಲ ವಿಧದ ಭಾವನೆಗಳನ್ನೂ ಸಂವಹಿಸುವ ಸಂಗೀತವು ವಿಶ್ವಭಾಷೆ. ಪ್ರತಿ ಜೀವಿಯಲ್ಲೂ ಸಂಗೀತವಿದೆ. ಕೂಸಿಗೆ ಹಾಡುವ ಜೋಗುಳವು ಸ್ವರದ ಮಧುರ ಏರಿಳಿತ. ಅದರಿಂದ ಮಗು ಹೊಸ ಪದಗಳನ್ನು ಪರಿಚಯಿಸಿಕೊಳ್ಳುವುದರ ಜೊತೆಗೆ ಶಬ್ದಗಳ ಲಯಬದ್ಧ ಉಚ್ಚಾರವನ್ನು ಕಲಿಯುತ್ತದೆ. ಎಂದಮೇಲೆ ಶಾಲೆಯು ಸಂಗೀತವನ್ನು ಒಳಗೊಳ್ಳುವುದು ಅತ್ಯಂತ ಸಮಂಜಸ.

ಶಾಲಾ ಸಮಾರಂಭಗಳಲ್ಲಿ ಅಥವಾ ಸ್ಪರ್ಧೆಗಳಲ್ಲಿ ಮಕ್ಕಳು ಶಾಸ್ತ್ರೀಯ ಗಾಯನ ಅನುಕರಿಸುತ್ತಾರೆ. ಅರೆ! ತುಸು ಅಭ್ಯಸಿಸಿದ್ದರೆ ನಗೆಪಾಟಲಿನಿಂದ ಪಾರಾಗಬಹುದಿತ್ತಲ್ಲ ಅನ್ನಿಸುತ್ತದೆ. ಸಂಗೀತವು ಸೃಜನಶೀಲತೆಗೆ ಹೆದ್ದಾರಿ. ಪ್ರತಿ ಮಗುವಿಗೂ ಸಂಗೀತ ಶಿಕ್ಷಣ ಅಗತ್ಯ. ಅದು ಹೊರೆಯೂ ಅಲ್ಲ, ದೊಡ್ಡಸ್ತಿಕೆಯೂ ಅಲ್ಲ. ಮಕ್ಕಳನ್ನು ವಿದ್ಯಾರ್ಜನೆಯ ಪ್ರಕ್ರಿಯೆಯಲ್ಲಿ ರಂಜಿಸುವಲ್ಲಿ ಮತ್ತು ತೊಡಗಿಸುವಲ್ಲಿ ಸಂಗೀತವು ಶಿಕ್ಷಣದ ಒಂದು ಭಾಗವಾಗಿರುವುದು ಉತ್ತೇಜನಕಾರಿ.

ಸಂಗೀತ ಕಲಿಕೆಯಿಂದ ಆಗುವ ಅನುಕೂಲಗಳು ಬಹುಮುಖಿ. ಏಕಾಗ್ರತೆ, ನೈತಿಕತೆ, ನೆನಪಿನಶಕ್ತಿಯ ವರ್ಧನೆ, ಉತ್ಸಾಹ ಮತ್ತು ಶಿಸ್ತು ಸಾಧ್ಯ. ಲಯ, ಇಂಪಿನ ಸೆಳೆತ ಇತರ ವಿಷಯಗಳನ್ನೂ ಸಮರ್ಥವಾಗಿ ಗ್ರಹಿಸಲು ಪ್ರೇರೇಪಿಸುತ್ತವೆ. ಭಾಷಾಕೌಶಲವನ್ನು ವರ್ಧಿಸುತ್ತವೆ. ಕ್ಲಿಷ್ಟವೆಂದು ತೋರುವ ಗಣಿತ ಕೂಡ ಸಂಗೀತಕ್ಕೆ ಮಣಿಯುವುದು. ಏಕೆಂದರೆ ಸಂಗೀತದ ಪರಿಕಲ್ಪನೆಗಳಿಗೆ ಗಣಿತೀಯ ಪ್ರತಿರೂಪಗಳಿವೆ.

ಇನ್ನು ವಾದ್ಯ ಸಂಗೀತವು ಪ್ರಯತ್ನಶೀಲ ಮತ್ತು ಪರಿಶ್ರಮ ಎಂಬ ಎರಡು ಮುಖ್ಯ ಮೌಲ್ಯಗಳನ್ನು ರೂಢಿಸುತ್ತದೆ. ಸಂಗೀತದಿಂದ ಲಭಿಸಿದ ಫಲಗಳನ್ನು ಶೈಕ್ಷಣಿಕ ವಿಷಯಗಳಿಗೆ ವರ್ಗಾಯಿಸಬಹುದು. ವಿವಿಧತೆಯಲ್ಲಿ ಏಕತೆ ಎಂಬ ಧೋರಣೆಯ ಭಾರತದಲ್ಲಿ ಸಂಸ್ಕೃತಿ ಪ್ರಜ್ಞೆ ಹಾಗೂ ಸಹಯೋಗ ಮನೋಭಾವದ ಸಾಕಾರಕ್ಕೆ ಸಂಗೀತಕ್ಕಿಂತ ದಿವ್ಯೌಷಧ ಇನ್ನೊಂದಿಲ್ಲ. ಶಾಲಾ ಕಾಲೇಜುಗಳಲ್ಲಿ ಗುಣಮಟ್ಟದ ಸಂಗೀತ ಶಿಕ್ಷಣ ಅಗತ್ಯ. ಭವಿಷ್ಯದಲ್ಲಿ ಮಕ್ಕಳು ಯಾವುದೇ ಮಹತ್ತರ ಜವಾಬ್ದಾರಿ ನಿರ್ವಹಿಸಲಿ ಅವರಿಗೆ ಬೇಕಾಗುವುದು ಸಮಾಧಾನಚಿತ್ತ ಮತ್ತು ಸಂವಹನ ಕೌಶಲ. ಸಂಗೀತ ಇವನ್ನು ಕಟ್ಟಿಕೊಡುವುದು.



ಜಗತ್ತಿನ ಹಲವು ಅಭಿವೃದ್ಧಿ ಹೊಂದಿದ ದೇಶಗಳು ತಂತಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಷ್ಕರಿಸಿವೆ. ಮಕ್ಕಳ ಅರಿವಿನ ಸಾಮರ್ಥ್ಯ ವರ್ಧನೆಗೆ ಮತ್ತು ಸಮಗ್ರ ಬೆಳವಣಿಗೆಗೆ ಸಂಗೀತದ ಅಗತ್ಯವನ್ನು ಮನಗಂಡಿವೆ. ಸಂಗೀತವು ಉಳಿದ ವಿಷಯಗಳ ಹಾಗೆ ಪರೀಕ್ಷೆಗಿರಬೇಕಿಲ್ಲ. ತರಗತಿಗೆ ವಾರಕ್ಕೆ ಒಂದೊ, ಎರಡೊ ಪೀರಿಯಡ್ ಇದ್ದರೆ ಸಾಕು. ಬೋಧಕರು ಹಾಡಿ, ಮಕ್ಕಳಿಂದ ಹಾಡಿಸುವ ಕಾರಣ ಬಹುತೇಕ ನೂರಕ್ಕೆ ನೂರು ಹಾಜರಾತಿಯಿದ್ದೀತು. ಸಂಗೀತ ಶಿಕ್ಷಣವು ಶಿಷ್ಯ ಮತ್ತು ಗುರು ಇಬ್ಬರಿಗೂ ಚೇತೋಹಾರಿ. ಎಂದೋ ಆಲಿಸಿದ ನಮ್ಮ ಅಚ್ಚುಮೆಚ್ಚಿನ ಹಾಡು ಬಹಳ ವರ್ಷಗಳ ನಂತರ ನಮ್ಮ ಕಿವಿಗೆ ಬಿದ್ದಾಗ ಅದರ ಸಾಲುಗಳು ತ್ರಾಸವಿಲ್ಲದೆ ನೆನಪಾಗುತ್ತವೆ. ಈ ಅನುಭಾವಕ್ಕೆ ಸಂಗೀತಜ್ಞರೇ ಆಗಬೇಕಿಲ್ಲ. ಸಂಗೀತ ಯಾವುದೇ ಪ್ರಕಾರವಿರಲಿ ಭಾಷೆಯ ಹಂಗಿಲ್ಲದೆ ಆನಂದಿಸಬಹುದು.

ಸಂಗೀತದ ಇಂತಹ ಸುಧಾರಕ ಶಕ್ತಿಯನ್ನರಿತ ಫ್ರಾನ್ಸ್ ಸರ್ಕಾರ 1982ರ ಜೂನ್ 21ರಂದು ವೈಭವದಿಂದ 'ಸಂಗೀತ ಉತ್ಸವ' ನಡೆಸಿತು. ಅದುವೇ ಇಂದಿನ 'ವಿಶ್ವ ಸಂಗೀತ ದಿನ'ಕ್ಕೆ ನಾಂದಿಯಾಯಿತು.

ವಾಚಕರ ವಾಣಿ

ಎಲ್‌ಇಡಿ ಹೆಡ್‌ಲೈಟ್: ಬೇಕು ಸ್ಪಷ್ಟನೆ

ಕೇಂದ್ರ ಮೋಟಾರು ಕಾಯ್ದೆಯಲ್ಲಿ ನಮೂದಿಸಿರುವ ಮಾನದಂಡಕ್ಕೆ ಹೊರತಾಗಿ ಪ್ರಖರ ಬೆಳಕು ಬೀರುವ ಎಲ್‌ಇಡಿ ಹೆಡ್‌ಲೈಟ್ ಅಳವಡಿಸಿರುವ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಲು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ಅವರು ಸೂಚಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 19). ಇದರಿಂದ, ಪ್ರಖರ ಬೆಳಕಿನ ವಾಹನಗಳಿಂದ ತೊಂದರೆಗೆ ಒಳಗಾಗುತ್ತಿರುವ ಇತರ ವಾಹನ ಚಾಲಕರ ಹಲವಾರು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

ವಾಹನಗಳಿಗೆ ಎಲ್‌ಇಡಿ ದೀಪಗಳನ್ನೇ ಅಳವಡಿಸದಂತೆ ಆದೇಶ ಹೊರಡಿಸಲಾಗಿದೆ ಎಂಬ ಮಾಹಿತಿ ಕೆಲವು ಮಾಧ್ಯಮಗಳಲ್ಲಿ ಇದೆ. ಆದೇಶದಲ್ಲಿ ಭಾರಿ ಗಾತ್ರದ ವಾಹನಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟು, ಅಗತ್ಯ ಕಾನೂನುಕ್ರಮಕ್ಕೆ ಸೂಚಿಸಿರುವಂತೆ ಇದೆ. ಇತ್ತೀಚಿನ ವರ್ಷಗಳಲ್ಲಿ ದ್ವಿಚಕ್ರ ವಾಹನ ಸೇರಿ ಬಹುಬಗೆಯ ವಾಹನಗಳಿಗೆ ತಯಾರಕರೇ ಎಲ್‌ಇಡಿ ಹೆಡ್‌ಲೈಟ್ ಅಳವಡಿಸಿರುತ್ತಾರೆ. ಅದರಲ್ಲೂ ವಿಶೇಷವಾಗಿ, ಐಷಾರಾಮಿ ವಾಹನಗಳಲ್ಲಿ ಅತ್ಯಂತ ಪ್ರಖರವಾದ, ಕಣ್ಣು ಕೋರೈಸುವ ಎಲ್‌ಇಡಿ ಹೆಡ್‌ಲೈಟ್‌ಗಳನ್ನೇ ಅಳವಡಿಸಲಾಗಿರುತ್ತದೆ. ಹೀಗೆ ತಯಾರಕರಿಂದಲೇ ಅಳವಡಿಕೆಯಾಗಿರುವ ಹೆಡ್‌ಲೈಟ್‌ಗಳು ಸಾಮಾನ್ಯವಾಗಿ ನಿಯಮಾನುಸಾರ ಇರುತ್ತವೆ ಎಂಬ ಭಾವನೆ ವಾಹನ ಸವಾರರಲ್ಲಿ ಇರುತ್ತದೆ. ಹೀಗಾಗಿ, ಈಗ ಎಲ್ಲ ರೀತಿಯ ಎಲ್‌ಇಡಿ ಹೆಡ್‌ಲೈಟ್‌ಗಳನ್ನೂ ತೆಗೆಯಬೇಕೊ, ಹೆಚ್ಚುವರಿಯಾಗಿ ಅಳವಡಿಸಿರುವಂತಹವುಗಳನ್ನು ಮಾತ್ರ ತೆಗೆಯಬೇಕೊ ಎಂಬ ಗೊಂದಲ ಇದೆ. ಈ ಕುರಿತು ಪೊಲೀಸ್ ಇಲಾಖೆ ಈಗಲೇ ಸ್ಪಷ್ಟನೆ ನೀಡಿದಲ್ಲಿ, ಜನಸಾಮಾನ್ಯರು ಸಂಚಾರ ಪೊಲೀಸರ ಕೈಯಲ್ಲಿ ಸಿಲುಕಿ, ಅನಗತ್ಯವಾಗಿ ಒದ್ದಾಡುವುದು ತಪ್ಪುತ್ತದೆ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ವ್ಯತ್ಯಾಸ...

ಹಿಂದೆ, ಸಾಹಿತಿಗಳು
ರಾಜಾಶ್ರಯದಲ್ಲಿದ್ದರು,
ರಾಜಕಾರಣಿಗಳಾಗಿರಲಿಲ್ಲ.
ಇಂದು, 'ಚಕ್ರವರ್ತಿ'ಯ
ಆಶ್ರಯದಲ್ಲಿದ್ದಾರೆ,
'ರಾಜಕಾರಣಿಗಳಾಗಿದ್ದಾರೆ'!
ಇಂಥವರಿರುವ
ಅಕಾಡೆಮಿ, ಪ್ರಾಧಿಕಾರ
ಕನ್ನಡಕ್ಕೆ ಹೊರೆ,
ಕಾರಣ, ಇಂದಿನ ರಾಜಕಾರಣವು
ಸಾಹಿತ್ಯ-ಸಂಸ್ಕೃತಿಯ ಶುಭ್ರಜಲವಲ್ಲ,
ಮಾಲಿನ್ಯ ತುಂಬಿರುವ ಕೊಳಕು ಕೆರೆ!

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಬಿತ್ತನೆ ಬೀಜ: ಸಕಾಲಕ್ಕೆ ತಲುಪಲಿ

ಬಿತ್ತನೆ ಬೀಜಗಳನ್ನು ಅಂಚೆ ಕಚೇರಿ ಸಿಬ್ಬಂದಿಯ ಮೂಲಕ ರೈತರ ಮನೆ ಬಾಗಿಲಿಗೇ ತಲುಪಿಸುವ ಸರ್ಕಾರದ ಯೋಜನೆ (ಪ್ರ.ವಾ., ಜೂನ್ 20) ಸ್ವಾಗತಾರ್ಹ. ಆದರೆ ಯೋಜನೆ ಅನುಷ್ಠಾನ ಆಗುವಾಗ ಕೆಳಮಟ್ಟದಲ್ಲಿ ಯಾವುದೇ ರೀತಿಯ ಲೋಪ ಆಗದಂತೆ ಸರ್ಕಾರ ಜಾಗ್ರತೆ ವಹಿಸಬೇಕಾಗಿದೆ. ಕಾಗದಪತ್ರಗಳು, ಸರ್ಕಾರದ ವಿವಿಧ ಯೋಜನೆಗಳ ಹಣವನ್ನು ಜನರಿಗೆ ಸಕಾಲದಲ್ಲಿ ತಲುಪಿಸುವಲ್ಲಿ ಅಂಚೆ ಇಲಾಖೆಯಿಂದ ಲೋಪ ಆಗುತ್ತಿರುವ ಬಗ್ಗೆ ಹಲವಾರು ಕಡೆ ದೂರುಗಳಿವೆ.

ಮಲೆನಾಡಿನ ಕೆಲವು ಕಡೆ ಭತ್ತದ ಸಸಿ ಹಾಕುವ ಕಾರ್ಯ ಹದ ಮಳೆ ಬಿದ್ದ ಕೂಡಲೇ ಜೂನ್ ಮೊದಲ ವಾರದಲ್ಲಿಯೇ ಆರಂಭವಾಗುವ ಪದ್ಧತಿ ಇದೆ. ಹಾಗಾಗಿ, ಪ್ರತಿವರ್ಷ ಮೇ ತಿಂಗಳ ಕೊನೆಯ ವಾರದಲ್ಲಿಯೇ ಬಿತ್ತನೆ ಬೀಜಗಳನ್ನು ರೈತರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಸಾಹಿತ್ಯದಲ್ಲಿ ರಾಜಕಾರಣ ಸಲ್ಲ

ಸಾಹಿತಿಗಳ ಬಗೆಗಿನ ಡಿ.ಕೆ.ಶಿವಕುಮಾರ್ ಅವರ ಹಗುರವಾದ ಹೇಳಿಕೆ ಈಗಿನ ಸರ್ಕಾರದ ಬಗ್ಗೆ ಕೆಲ ಬರಹಗಾರರು ಹೊಂದಿರುವ ಮೃದು ಧೋರಣೆಯ ಫಲವಾಗಿದೆ. ಇದೇ ಥರದ ಧೋರಣೆಯಿಂದ ಉಪಮುಖ್ಯಮಂತ್ರಿಯವರು ತಮ್ಮ ವ್ಯಾಪ್ತಿಯ ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸುವಂತಾಗಿದೆ. ಆದರೂ ಅವರು ತಿದ್ದಿಕೊಂಡಂತೆ ಕಾಣುವುದಿಲ್ಲ. ರಾಜಕಾರಣದಲ್ಲಿ ಸಾಹಿತ್ಯ ಇರಲಿ, ಸಾಹಿತ್ಯದಲ್ಲಿ ರಾಜಕಾರಣ ಸಲ್ಲದು.

ಗುರು ಜಗಳೂರು, ಹರಿಹರ

ಸ್ಪರ್ಧಾತ್ಮಕ ಪರೀಕ್ಷೆ: ಪಾರದರ್ಶಕ ನಡೆಯಿರಲಿ

ವೃತ್ತಿಯಲ್ಲಿ ಉಪನ್ಯಾಸಕನಾಗಿರುವ ನಾನು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ನನ್ನ ವಿದ್ಯಾರ್ಥಿಗಳಿಗೆ ಸುಮಾರು 15 ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾ ಬರುತ್ತಿದ್ದೇನೆ. ಆದರೆ ಇತ್ತೀಚೆಗೆ ಈ ರೀತಿ ಸಲಹೆ ನೀಡಲು ಹೋದರೆ, ಕೆಲವರು ಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆಯ ಬಗೆಗೆ ಅಸಹನೆ ಹೊರಹಾಕುವುದನ್ನು, ಇನ್ನು ಕೆಲವರು ಪರೀಕ್ಷಾ ತಯಾರಿಯಿಂದಲೇ ವಿಮುಖರಾಗುತ್ತಿರುವುದನ್ನು ನೋಡಿ ಬೇಸರವಾಗುತ್ತದೆ. ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ಬಳಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿರುವ, ಅಭ್ಯರ್ಥಿಗಳ ಮೇಲೆ ನಿಗಾ ಇಡಲು ತ್ರಿಸೂತ್ರ ನಿಯಮ ರೂಪಿಸಲು ಮುಂದಾಗಿರುವುದನ್ನು ತಿಳಿದು (ಪ್ರ.ವಾ., ಜೂನ್ 20) ಸಂತಸವಾಯಿತು. ಈ ರೀತಿಯ ಪಾರದರ್ಶಕ ನಡೆಯನ್ನು ದೇಶದ ಬೇರೆ ಬೇರೆ ಪರೀಕ್ಷಾ ಪ್ರಾಧಿಕಾರಗಳೂ ಕೈಗೊಳ್ಳುವಂತಾದರೆ ಎಷ್ಟೋ ಬಡ ಪ್ರತಿಭಾವಂತ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ಸಿಗುವಂತಾಗುತ್ತದೆ.

ಹಾಗೆಯೇ ಬಡ ಮತ್ತು ಮಧ್ಯಮ ವರ್ಗದ ಎಷ್ಟೋ ಪೋಷಕರ ಆಸೆ ನವೋದಯ ವಿದ್ಯಾಲಯದಲ್ಲಿ ತಮ್ಮ ಮಕ್ಕಳಿಗೆ ಸೀಟು ಪಡೆಯುವುದಾಗಿದೆ. ಆದರೆ ನವೋದಯ ಪರೀಕ್ಷೆಗಳಲ್ಲಿ ಮೇಲ್ವಿಚಾರಕರು ಉತ್ತರಗಳನ್ನು ಹೇಳಿಕೊಡುವ, ಉತ್ತರಗಳನ್ನು ತಿದ್ದುವಂತಹ ಅಕ್ರಮ ನಡೆಯುವ ಆರೋಪಗಳು ಪ್ರತಿವರ್ಷ ಕೇಳಿಬರುತ್ತವೆ. ಈ ಪರೀಕ್ಷೆಯಲ್ಲಿ ಒಎಂಆರ್ (ಆಪ್ಟಿಕಲ್ ಮಾರ್ಕ್ ರೆಕಗ್ನಿಷನ್) ನಕಲು ಪ್ರತಿಯನ್ನು ಕೊಡದಿರುವುದು, ಕಟ್ ಆಫ್ ಅಂಕಗಳನ್ನು ವರ್ಗವಾರು ಪ್ರಕಟಿಸದಿರುವುದು ಕೂಡ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಹಾಗಾಗಿ, ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸಿ ಮುಂದಿನ ನವೋದಯ ಪರೀಕ್ಷೆಗಳು ಪಾರದರ್ಶಕವಾಗಿ ಜರುಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾಪ್ರಭುತ್ವವಾದಿ, ಜಾತ್ಯತೀತ ಭಾರತಕ್ಕಾಗಿ ದೊರೆತ ಫಲಿತಾಂಶವೇ?



‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ನಾಯಕನು ತೆಗೆದುಕೊಳ್ಳುವ ನಿರ್ಧಾರವನ್ನು ವಿರೋಧಿಸಲು ಜನರಿಗೆ ಅವಕಾಶ ಇರಬೇಕು’

• ಯೋಗೇಂದ್ರ ಯಾದವ್, ರಾಹುಲ್ ಶಾಸ್ತ್ರಿ, ಶ್ರೇಯಸ್ ಸರ್ದೇಸಾಯಿ

ಇದೊಂದು ಅಸಾಮಾನ್ಯ ಲೋಕಸಭಾ ಚುನಾವಣೆಯಾಗಿತ್ತು. ಹಾಗಾದರೆ, ಇಂಥ ಅಸಾಮಾನ್ಯ ಚುನಾವಣೆಯ ಫಲಿತಾಂಶವು ಏನನ್ನು ಸಾರುತ್ತಿದೆ ಎನ್ನುವ ಪ್ರಶ್ನೆಯನ್ನೂ ನಾವು ಹಾಕಿಕೊಳ್ಳಬೇಕಲ್ಲವೇ. ಬಹುಶಃ ಈ ಬಾರಿಯ ಲೋಕಸಭಾ ಚುನಾವಣೆಯ ಫಲಿತಾಂಶವು, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯತೀತ ಭಾರತದ ಉಳಿವನ್ನು ಅಪೇಕ್ಷಿಸಿ ಜನರು ನೀಡಿದ ಆದೇಶ ಎಂದು ಭಾವಿಸಿಕೊಳ್ಳಬಹುದೇ? ಈ ಎಲ್ಲ ಪ್ರಮುಖ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಮೂಲಕ ನಮ್ಮ ಈ ಲೇಖನಗಳ ಸರಣಿಯನ್ನು ಮುಗಿಸುತ್ತಿದ್ದೇವೆ.

ಭಾರತವು ಜಾತ್ಯತೀತವಾಗಿ ಹಾಗೂ ಪ್ರಜಾಪ್ರಭುತ್ವವಾದಿಯಾಗಿಯೇ ಉಳಿಯಬೇಕು ಎಂದು ಜನರು ಅಪೇಕ್ಷಿಸಿದ್ದಾರೆ ಎಂದೇ ಈ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಇದು ‘ಸರ್ವಶ್ರೇಷ್ಠ ನಾಯಕ’ನ ಕುರಿತು ಬಂದ ಜನಾದೇಶ. ಕಳೆದ 10 ವರ್ಷಗಳ ತನ್ನ ಸರ್ವಾಧಿಕಾರಿ ವರ್ತನೆಗಾಗಿ, ಮುಂದಿನ ಐದು ವರ್ಷಗಳಲ್ಲಿ ದೇಶದ ಗಣತಂತ್ರ ವ್ಯವಸ್ಥೆಯನ್ನು ಬುಡಮೇಲು ಮಾಡಲು ತನಗೆ ಅಭೂತಪೂರ್ವ ಗೆಲುವು ತಂದುಕೊಡಿ ಎಂದು ನರೇಂದ್ರ ಮೋದಿ ಅವರು ಜನರಲ್ಲಿ ಕೇಳಿಕೊಂಡಿದ್ದರು. ಆದರೆ, ಮೋದಿ ಅವರ ಈ ಬೇಡಿಕೆಯನ್ನು ಜನರು ತಿರಸ್ಕರಿಸಿದ್ದಾರೆ.

ಈ ಚುನಾವಣೆಯಲ್ಲಿ, ಹಿಂದೂ ಬಹುಸಂಖ್ಯಾತವಾದದ ಪ್ರಭಾವವಿತ್ತು. ಜತೆಗೆ ಮೋದಿ ಅವರು ಮುಸ್ಲಿಂ ವಿರೋಧದ ಅತಿರೇಕ ನಡೆಸಿದರೂ, ಕೋಮು ಧ್ರುವೀಕರಣ ಯತ್ನಿಸಿದರೂ ಗೆಲುವು ದೊರೆಯಲಿಲ್ಲ. ಈ ಫಲಿತಾಂಶವು ಮೋದಿಯ ವೈಯಕ್ತಿಕ ಸೋಲು. ತಾನು ಅಜೇಯ ಎಂಬಂತೆ ಬಿಂಬಿಸಿಕೊಂಡಿದ್ದ ಮೋದಿ ಅವರ ಬಲೂನಿಗೆ ಈ ಫಲಿತಾಂಶವು ಸೂಜಿ ಚುಚ್ಚಿದೆ.

ಇವೆಲ್ಲವೂ ಘಟಿಸಲೇ ಬೇಕಿತ್ತು: ಸ್ವತಂತ್ರ ಮತ್ತು ಮುಕ್ತ ಚುನಾವಣೆಯೇ ನಡೆಯದ, ನಾಗರಿಕ ಹಕ್ಕುಗಳಿಗೆ ರಕ್ಷಣೆಯೇ ಇಲ್ಲದ ಹಾಗೂ ವಿರೋಧ ಪಕ್ಷಗಳಿಗೆ ಸಮಾನ ಅವಕಾಶವೇ ಇಲ್ಲದಂಥ ‘ಅರೆ ಸರ್ವಾಧಿಕಾರ’ದಿಂದ ‘ಪೂರ್ಣ ಸರ್ವಾಧಿಕಾರ’ದತ್ತ ದೇಶವು ಹೊರಳುತ್ತಿತ್ತು. ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಹಿನ್ನೆಲೆಗೆ ಸರಿಯುತ್ತಿತ್ತು. ಈ ಎಲ್ಲದಕ್ಕೂ ಈ ಫಲಿತಾಂಶ ತಡೆ ಒಡ್ಡಿದೆ.

ಆಡಳಿತ ಪಕ್ಷದ ಒಳಗೂ ಹೊರಗೂ, ಸಂಸತ್ತಿನ ಒಳಗೂ ಹೊರಗೂ ಪ್ರಜಾಪ್ರಭುತ್ವವಾದಿ ನಿಲುವುಗಳು ಮತ್ತೆ ತಲೆಎತ್ತಿವೆ. ಸಂವಿಧಾನದತ್ತವಾಗಿ ಬಂದಿರುವ ಜಾತ್ಯತೀತ ನಿಲುವನ್ನು ಛಿದ್ರಗೊಳಿಸಿ, ಭಾರತವನ್ನು ಹಿಂದೂ ಬಹುಸಂಖ್ಯಾತವಾದಿ ರಾಷ್ಟ್ರವನ್ನಾಗಿಸುವ ಸಿದ್ಧಾಂತ ಪ್ರೇರಿತ ಕಾರ್ಯಯೋಜನೆಯನ್ನು ಈ ಫಲಿತಾಂಶವು ತಡೆದು ನಿಲ್ಲಿಸಿದೆ.

ಇವೆಲ್ಲವೂ ಬಹಳ ಮುಖ್ಯವಾದ ಬದಲಾವಣೆ ಗಳೇನೋ ಹೌದು. ಆದರೆ, ಇಷ್ಟುಮಾತ್ರಕ್ಕೆ ಈ ಫಲಿತಾಂಶವು ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯತೀತ ಭಾರತವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಬಂದಿದೆ ಎನ್ನಲಾಗದು. ಪ್ರಜಾಪ್ರಭುತ್ವವಾದಿ ಭಾರತವನ್ನು ಉಳಿಸಿಕೊಳ್ಳುತ್ತಿದ್ದೇವೆ ಎಂದು ಜನರು ಮತ ಹಾಕಿಲ್ಲ. ಆದರೆ, ಈ ಸ್ವರೂಪದ ಮತದಾನದಿಂದ ಪ್ರಜಾಪ್ರಭುತ್ವ ಉಳಿಯಿತು. ಫಲಿತಾಂಶವು ಈ ಚುನಾವಣೆಯ ಕುರಿತು ಒಟ್ಟಾರೆಯಾಗಿ ಏನನ್ನು ಹೇಳುತ್ತಿದೆ ಎಂಬುದರ ಕುರಿತಷ್ಟೇ ವಿಶ್ಲೇಷಣೆಗಳನ್ನು ನಡೆಸಲಾಗುತ್ತಿದೆ. ಮತದಾರನ ಅಭಿಪ್ರಾಯವನ್ನು ತಿಳಿಯದ ಹೊರತು ಈ ವಿಶ್ಲೇಷಣೆಗಳು ಎಷ್ಟರ ಮಟ್ಟಿಗೆ ಸೂಕ್ತವಾಗಿವೆ ಎಂಬುದನ್ನು ತಿಳಿಯಲು ಸಾಧ್ಯವಿಲ್ಲ.

ಲೋಕನೀತಿ–ಸಿಎಸ್‌ಡಿಎಸ್ ಸಂಸ್ಥೆಗಳು ತಮ್ಮ ಚುನಾವಣೋತ್ತರ ಸಮೀಕ್ಷೆಗಳನ್ನು ಪ್ರಕಟಿಸಿವೆ. 20 ಸಾವಿರ ಜನರನ್ನು ಮುಖಾಮುಖಿ ಸಂದರ್ಶಿಸಿ ಈ ಸಮೀಕ್ಷೆಯನ್ನು ನಡೆಸಲಾಗಿದೆ. ಸಂದರ್ಶನವನ್ನು ಮತದಾನ ನಡೆದ ನಂತರ ಮತ್ತು ಮತ ಎಣಿಕೆಗೂ ಮುನ್ನ ನಡೆಸಲಾಗಿದೆ. ಕಳೆದ 30 ವರ್ಷಗಳಿಂದಲೂ ಈ ಸಂಸ್ಥೆಗಳು ಇಂಥ ಸಮೀಕ್ಷೆಯನ್ನು ನಡೆಸುತ್ತಿವೆ. (ಅರಿಕೆ: ಲೇಖಕರಲ್ಲಿ ಇಬ್ಬರು ಈ ಹಿಂದೆ ಈ ಸಂಸ್ಥೆಗಳ ಸಮೀಕ್ಷಾ ತಂಡದ ಭಾಗವಾಗಿದ್ದರು. ಆದರೆ, ಈಗ ಅವರಿಗೂ ಈ ಸಮೀಕ್ಷೆಗೂ ಯಾವುದೇ ಸಂಬಂಧ ಇಲ್ಲ) ಈ ಸಮೀಕ್ಷೆಯ ಮೂಲಕ ಮತದಾರನ ಮನದಾಳವನ್ನು ತುಸುಮಟ್ಟಿಗೆ ಗ್ರಹಿಸಬಹುದಾಗಿದೆ.

ಮತದಾರನು ಯಾರಿಗೆ ಮತ ನೀಡಿದ್ದಾನೆ, ಆತನ ಸಾಮಾಜಿಕ ಹಿನ್ನೆಲೆಯನ್ನು ಮುಖ್ಯವಾಗಿಸಿಕೊಂಡು ಚುನಾವಣೋತ್ತರ ಸಮೀಕ್ಷೆಗಳು ನಡೆಯುತ್ತವೆ. ಆದರೆ, ಈ ಸಮೀಕ್ಷೆಯು ಈ ತೆರನಾಗಿಲ್ಲ. ಇಲ್ಲಿ ಮತದಾರನ ಅಭಿಪ್ರಾಯವನ್ನೂ ಸೇರಿಸಿಕೊಳ್ಳಲಾಗಿದೆ. ಈ ಸಮೀಕ್ಷೆಯ ದತ್ತಾಂಶಗಳ ಕುರಿತು ಈ ಸಂಸ್ಥೆಗಳೊಟ್ಟಿಗೆ ಕೆಲಸ ಮಾಡುವ ಪ್ರಾಜ್ಞರು ಸೂಕ್ಷ್ಮವಾದ ಹೊಳಹುಗಳಿರುವ ವಿಶ್ಲೇಷಣೆಗಳನ್ನು ನೀಡಲಿದ್ದಾರೆ. ಆದರೆ, ಲಭ್ಯವಿರುವ ದತ್ತಾಂಶಗಳಿಂದಲೇ ನಾವು ಕೆಲವು ವಿಶ್ಲೇಷಣೆಗಳನ್ನು ಮಾಡಬಹುದು.

ಜೀವನಾಡಿಯಂತಿರುವ ಪ್ರಜಾಪ್ರಭುತ್ವ: ಪ್ರಜಾಪ್ರಭುತ್ವದ ಕುರಿತು ಮಾತನಾಡುವುದಾದರೆ, ಒಂದಂತು ಸ್ಪಷ್ಟ: ನೈಜ ಸ್ವರೂಪದ ಪ್ರಜಾಪ್ರಭುತ್ವವು ಏಳು ದಶಕ ದೇಶದಲ್ಲಿ ಜಾರಿಯಲ್ಲಿತ್ತು. ಈ ಕಾರಣದಿಂದಾಗಿಯೇ ಪ್ರಜಾಪ್ರಭುತ್ವವು ಜನರ ಜೀವನಾಡಿಯಂತಾಗಿದೆ. ಹೀಗಿರುವಾಗ ಜನರ ಜೀವನಾಡಿಯ ಮೇಲೆ ಬುಲ್ಡೋಜರ್ ಹತ್ತಿಸಲು ಸಾಧ್ಯವಿಲ್ಲ.

ನ್ಯಾಯಸಮ್ಮತ ಚುನಾವಣೆಯ ಮೂಲಕ ಸರ್ಕಾರವನ್ನು ಬದಲಿಸುವ ಅವಕಾಶವನ್ನು ಪ್ರಜಾಪ್ರಭುತ್ವ ನೀಡುತ್ತದೆ ಎಂಬುದನ್ನು ಭಾರತೀಯರು ನಂಬುತ್ತಾರೆ. ಈ ಸಮೀಕ್ಷೆಯಲ್ಲಿ ಶೇ 46ರಷ್ಟು ಜನರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹಳ ವರ್ಷ ಒಂದೇ ಪಕ್ಷದ ಸರ್ಕಾರವು ಅಧಿಕಾರ ನಡೆಸುವುದಕ್ಕಿಂತ ಸರ್ಕಾರಗಳನ್ನು ಬದಲಾಯಿಸಿದರೇ ದೇಶದಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧ್ಯ ಎನ್ನುವ ಅಭಿಪ್ರಾಯವನ್ನು ಸಮೀಕ್ಷೆಯಲ್ಲಿ ಭಾಗವಹಿಸಿದ ಮೂವರಲ್ಲಿ ಇಬ್ಬರು ವ್ಯಕ್ತಪಡಿಸಿದ್ದಾರೆ.

ಚುನಾವಣೆಗಳ ಮೂಲಕ ಸರ್ಕಾರವನ್ನು ಬದಲಿಸಬಹುದು ಎಂಬುದಕ್ಕೆ ಮಾತ್ರವೇ ಜನರು ಪ್ರಜಾಪ್ರಭುತ್ವವನ್ನು ಬೆಂಬಲಿಸುತ್ತಿಲ್ಲ. ಇದಕ್ಕೆ ಹಲವು ಆಯಾಮಗಳಿವೆ. ಜನರಿಂದಲೇ ಚುನಾಯಿತವಾದ ಸರ್ಕಾರವನ್ನು ಜನರೇ ನಿಯಂತ್ರಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇಂಥದ್ದು ಸಾಧ್ಯವಿದೆ ಎನ್ನುವುದು ಜನರಿಗೆ ತಿಳಿದಿದೆ. ಇದೇ ಕಾರಣಕ್ಕಾಗಿಯೇ ಭಾರತೀಯರು ಪ್ರಜಾಪ್ರಭುತ್ವವನ್ನು ಬೆಂಬಲಿಸುತ್ತಾರೆ. ವಾಸ್ತವದಲ್ಲಿ, ಭಾರತೀಯ ಮತದಾರನ ಈ ಪ್ರವೃತ್ತಿಯನ್ನು ಮೋದಿ ಅವರು ಸಹಿಸುತ್ತಿರಲಿಲ್ಲ.

ತಮ್ಮ ನಾಯಕನ ನಿರ್ಧಾರವನ್ನು ಪ್ರಭಾವಿಸುವ ಮತ್ತು ಕೆಲವು ಬಾರಿ ವಿರೋಧಿಸುವ ಹಕ್ಕು ಜನರಿಗೆ ಇದೆ ಎಂದು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ 77ರಷ್ಟು ಮಂದಿ ಅಭಿಪ್ರಾಯಪಟ್ಟಿದ್ದಾರೆ. ಜನರ ಈ ಅಭಿಪ್ರಾಯವು ಪ್ರಸ್ತುತ ಮೋದಿ ಆಡಳಿತಕ್ಕೆ ನೀಡಿದ ಉತ್ತರ ಎಂದೇ ಭಾವಿಸಬೇಕಾಗುತ್ತದೆ.



‘ಪ್ರಜಾಪ್ರಭುತ್ವದಲ್ಲಿ ಚುನಾಯಿತ ನಾಯಕರನ್ನು ಕೇಳುವ ಹಕ್ಕುಗಳು ನಾಗರಿಕರಿಗೆ ಇರಬೇಕು’

ಸರ್ಕಾರದ ಯೋಜನೆಯೊಂದು ತಮಗೆ ಅನುಕೂಲಕರವಾಗಿಲ್ಲ ಎಂದಾದರೆ, ನಾವು ಅದನ್ನು ವಿರೋಧಿಸಬಹುದು, ಅದು ನಮ್ಮ ಹಕ್ಕು ಎಂಬ ಅಭಿಪ್ರಾಯವನ್ನು ಇಷ್ಟೇ ಸಂಖ್ಯೆಯ (ಶೇ77ರಷ್ಟು) ಜನರು ವ್ಯಕ್ತಪಡಿಸುತ್ತಾರೆ.

ಸಾಂವಿಧಾನಿಕ ಸಂಸ್ಥೆಗಳು ಹಾಗೂ ನ್ಯಾಯಾಲಯಗಳು ಚುನಾಯಿತ ಸರ್ಕಾರದ ಅಧಿಕಾರವನ್ನು ನಿಯಂತ್ರಣದಲ್ಲಿ ಇರಿಸುವ ಕೆಲಸ ಮಾಡಬೇಕು ಎಂಬುದನ್ನು ಶೇ68ರಷ್ಟು ಜನರು ಹೇಳುತ್ತಾರೆ. ಭಾರತೀಯ ಮತದಾರರಿಗೆ ಉದಾರವಾದಿ ಪ್ರಜಾ ಪ್ರಭುತ್ವ ಕುರಿತು ತಿಳಿವಳಿಕೆ ಇಲ್ಲದೆ ಇರಬಹುದು, ಅದರ ವ್ಯಾಖ್ಯಾನವನ್ನು ಮಾಡಲು ಬರದೇ ಇರಬಹುದು. ಆದರೆ, ಭಾರತೀಯರು ಸರ್ವಾಧಿಕಾರವನ್ನು, ಸರ್ಕಾರವು ಉತ್ತರದಾಯಿಯಾಗಿ ಇಲ್ಲದಿರುವುದನ್ನು ಹಾಗೂ ನಿರಂಕುಶ ಆಡಳಿತವನ್ನು ಸಹಿಸಿಕೊಳ್ಳುವುದಿಲ್ಲ.

ಜನರು ಪ್ರಜಾಪ್ರಭುತ್ವದ ಕುರಿತು ಇಷ್ಟೆಲ್ಲಾ ಸೂಕ್ಷ್ಮವಾದ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ ಎಂದು ಸಂಭ್ರಮಿಸುವುದಕ್ಕೆ ಆತುರಬೇಡ. ಕೆಲವು ಆತಂಕಕಾರಿ ಅಂಶಗಳೂ ಈ ಸಮೀಕ್ಷೆಗಳಿಂದ ತಿಳಿದುಬಂದಿವೆ. ಅದೇನೆಂದರೆ, ‘ಚುನಾವಣೆಗಳನ್ನು ಗಂಭೀರವಾಗಿ ತೆಗೆದುಕೊಳ್ಳದ ಒಬ್ಬ ಪ್ರಬಲ ನಾಯಕ ನಮಗೆ ಬೇಕು’ ಎಂಬ ಪ್ರಶ್ನೆಯನ್ನು ಜನರಿಗೆ ಕೇಳಲಾಯಿತು. ಇಂಥ ಮೃದು ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿದ್ದು, ಸಮೀಕ್ಷೆಯಲ್ಲಿ ಭಾಗವಹಿಸಿದ್ದ ನಾಲ್ವರಲ್ಲಿ ಒಬ್ಬರು ಮಾತ್ರ. ಉಳಿದ ಮೂವರು ಇಂಥ ಮೃದು ಸರ್ವಾಧಿಕಾರವನ್ನು ಒಪ್ಪಿಕೊಳ್ಳುತ್ತಾರೆ.

ಆತಂಕದ ಮಧ್ಯೆ ತುಸು ಸಮಾಧಾನಕರ ವಿಚಾರವೂ ಇದೆ. 2019ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಇದೇ ಮೃದು ಸರ್ವಾಧಿಕಾರದ ಕುರಿತು ಪ್ರಶ್ನೆ ಕೇಳಲಾಗಿತ್ತು. ಆ ಸಮೀಕ್ಷಾ ಅಂಕಿ–ಅಂಶಗಳಿಗೆ ಹೋಲಿಸಿದರೆ, ಈ ಬಾರಿ ಮೃದು ಸರ್ವಾಧಿಕಾರಿ ಧೋರಣೆಯನ್ನು ಒಪ್ಪಿಕೊಳ್ಳುವವರ ಪ್ರಮಾಣದಲ್ಲಿ 10 ಶೇಕಡಾವಾರು ಅಂಶಗಳಷ್ಟು ಕಡಿಮೆಯಾಗಿದೆ. ಈ ಧೋರಣೆಯನ್ನು ಒಪ್ಪಿಕೊಳ್ಳದವರ ಪ್ರಮಾಣದಲ್ಲಿ 2 ಶೇಕಡಾವಾರು ಅಂಶಗಳಷ್ಟು ಏರಿಕೆಯಾಗಿದೆ. ಸರ್ಕಾರವು ಸರ್ವಾಧಿಕಾರದತ್ತ ಹೊರಳುತ್ತಿದ್ದರೆ, ಜನರು ಅದರ ವಿರುದ್ಧ ಇದ್ದರು.

ಕಳೆದ ಐದು ವರ್ಷಗಳಲ್ಲಂತೂ ಪ್ರಜಾಪ್ರಭುತ್ವವು ತೀವ್ರ ದಾಳಿಗೆ ಒಳಗಾಗಿದೆ. ಇಂಥ ಸಂದರ್ಭದಲ್ಲಿಯೂ, ನಮ್ಮ ಮತದ ಮೂಲಕ ನಾವು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬಹುದು ಅಥವಾ ಬದಲಾವಣೆಗಳನ್ನು ತರಬಹುದು ಎಂದು ಶೇ 67ರಷ್ಟು ಜನರು ಸಮೀಕ್ಷೆಯಲ್ಲಿ ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಸಂದರ್ಭವು ಕಠಿಣ ಆಗಿದ್ದಿರಬಹುದು, ಆದರೆ, ಈ ಸಂಖ್ಯೆಯು ಆತಂಕ ಹುಟ್ಟಿಸುತ್ತದೆ. ಏಕೆಂದರೆ, ಇದೇ ಪ್ರಶ್ನೆಯನ್ನು 2019ರಲ್ಲಿ ಕೇಳಿದ್ದಾಗ, ಶೇ 83ರಷ್ಟು ಜನರು, ತಮ್ಮ ಮತದಿಂದ ಬದಲಾವಣೆ ಸಾಧ್ಯ ಎಂದು ಹೇಳಿದ್ದರು. ಚುನಾವಣಾ ಪ್ರಕ್ರಿಯೆಯಲ್ಲಿ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ. 2019ರಲ್ಲಿ ಚುನಾವಣಾ ಆಯೋಗದ ಕುರಿತು ಜನರು ಹೆಚ್ಚಿನ ಆತ್ಮವಿಶ್ವಾಸವನ್ನು (ಶೇ 57ರಷ್ಟು) ಇಟ್ಟುಕೊಂಡಿದ್ದರು. ಆದರೆ, 2024ರಲ್ಲಿ ಆಯೋಗದಲ್ಲಿ ವಿಶ್ವಾಸ ಇರಿಸಿರುವ ಜನರ ಸಂಖ್ಯೆಯು ಶೇ 47ಕ್ಕೆ ಕುಸಿದಿದೆ. ಇವಿಎಂಗಳ ಕುರಿತೂ ಹೆಚ್ಚಿನ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ. 2019ರಲ್ಲಿ ಇವಿಎಂ ಕುರಿತು ಶೇ 57ರಷ್ಟು ಜನರಿಗೆ ವಿಶ್ವಾಸವಿತ್ತು. ಈಗ ಪ್ರಮಾಣವು ಶೇ 34ರಷ್ಟಕ್ಕೆ ಕುಸಿದಿದೆ.

ಮೋದಿ ಸರ್ಕಾರವು ಪ್ರಜಾಪ್ರಭುತ್ವದ ಮೇಲೆ ನಡೆಸಿದ ದಾಳಿಯ ಕಾರಣಕ್ಕಾಗಿಯೇ, ಸರ್ಕಾರವನ್ನು ಜನರು ಶಿಕ್ಷಿಸಿದ್ದಾರೆ ಎಂದು ಬಿಡುಬೀಸಾಗಿ ಹೇಳಲು ಸಾಧ್ಯವಿಲ್ಲ. ಆದರೂ, ಮತದಾನದ ಮೂಲಕ ಜನರು ತಮ್ಮ ಅಭಿಪ್ರಾಯವನ್ನಂತೂ ಹೇಳಿದ್ದಾರೆ. ಮೇಲುನೋಟಕ್ಕೇ ಕೆಲವು ವಿಚಾರಗಳನ್ನು ನಾವು ಗಮನಿಸಬಹುದು. ಚುನಾವಣಾ ಸಮಯದಲ್ಲಿ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸುವ ಸರ್ಕಾರದ ಕ್ರಮವನ್ನು ಜನರು ಇಷ್ಟಪಡಲಿಲ್ಲ. ಇಂತಹ ಬಂಧನವನ್ನು ಸಮರ್ಥಿಸುವವರ ಸಂಖ್ಯೆ ಒಂದರಷ್ಟಿದ್ದರೆ, ಅದೇ ಸಂದರ್ಭದಲ್ಲಿ ಇದು ರಾಜಕೀಯಪ್ರೇರಿತ ಬಂಧನ ಎನ್ನುವವರ ಸಂಖ್ಯೆ ಎರಡರಷ್ಟಿತ್ತು.

ಮೋದಿ ಅವರ ಬಿಜೆಪಿಯ ಕುರಿತು ಯಾವುದನ್ನು ನೀವು ಇಷ್ಟಪಡುವುದಿಲ್ಲ ಎಂದು ಜನರನ್ನು ಕೇಳಲಾಯಿತು. ಇದಕ್ಕೆ ಶೇ 0.8ರಷ್ಟು ಜನರು ‘ಸರ್ಕಾರವು ಸರ್ವಾಧಿಕಾರಿ’ ಯಾಗಿತ್ತು ಎಂದು ಉತ್ತರಿಸಿದ್ದರು. ‘ಮೋದಿ ಸರ್ಕಾರವು ಮತ್ತೊಮ್ಮೆ ಅಧಿಕಾರಕ್ಕೆ ಬರಬಾರದು ಎಂಬುದಕ್ಕೆ ಕೆಲವು ಕಾರಣಗಳನ್ನು ನೀಡಿ’ ಎಂದು ಕೇಳಲಾಯಿತು. ಇದಕ್ಕೆ ಶೇ 1.1ರಷ್ಟು ಜನರು, ‘ಸರ್ಕಾರವು ಬಹಳ ಅಸಹಿಷ್ಣುವಾಗಿತ್ತು. ಜೊತೆಗೆ ಸರ್ಕಾರವು ನಾಗರಿಕರ ಹಕ್ಕುಗಳನ್ನು ದಮನ ಮಾಡಿತ್ತು’ ಎಂದು ಉತ್ತರಿಸಿದರು. ಶೇ0.8 ಅಥವಾ ಶೇ1.1ರಷ್ಟು ಎನ್ನುವುದು ಬಹಳ ಕಡಿಮೆ ಸಂಖ್ಯೆಯಾಯಿತು ನಿಜ. ಆದರೆ, ನಮ್ಮ ಸರಣಿ ಲೇಖನಗಳ ಉದ್ದಕ್ಕೂ ಇಂಥ ಕಡಿಮೆ ಸಂಖ್ಯೆಗಳಷ್ಟಿರುವ ಜನರೇ ಈ ಬಾರಿಯ ಚುನಾವಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂಬುದನ್ನು ಸಾಬೀತುಪಡಿಸಿದ್ದೇವೆ.



‘ಚುನಾಯಿತ ಸರ್ಕಾರದ ಅಧಿಕಾರಗಳನ್ನು ತಹಬಂದಿಯಲ್ಲಿ ಇಡಲು ಸಾಂವಿಧಾನಿಕ ಸಂಸ್ಥೆಗಳು ಮತ್ತು ನ್ಯಾಯಾಲಯಗಳಿಗೆ ಅಧಿಕಾರ ಇರಬೇಕು’

ಚುನಾವಣೆಯ ಫಲಿತಾಂಶ, ಸಮೀಕ್ಷೆಯಲ್ಲಿ ದೊರೆತ ದತ್ತಾಂಶಗಳು ಮತ್ತು ಅಭಿಪ್ರಾಯಗಳು ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಭಾರತದ ಭವಿತವ್ಯಕ್ಕೆ ಒದಗಿಸಿಕೊಟ್ಟ ಭದ್ರತೆ ಅಲ್ಲ. ಆದರೆ ಗಣತಂತ್ರದ ನೆಲೆಗಟ್ಟನ್ನು ಮರುಸ್ಥಾಪಿಸಲು ಒಂದು ರಾಜಕೀಯ ಅವಕಾಶವನ್ನು ಇದು ಒದಗಿಸಿಕೊಟ್ಟಿದೆ ಎಂಬುದಂತೂ ನಿಜ. ಭಾರತವೆಂಬ ಸಿದ್ಧಾಂತವನ್ನು ಛಿದ್ರಮಾಡಲೆಂದೇ ನಡೆಸಲಾದ ಈ ಚುನಾವಣೆ ಒಂದರಿಂದಲೇ ಇದಕ್ಕಿಂತ ಹೆಚ್ಚಿನದನ್ನೇನೂ ನಿರೀಕ್ಷಿಸಲಾಗದು. ❖

ಮೊದಲ ಲೇಖಕ: ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ, **ಎರಡನೇ ಲೇಖಕ:** ಸಂಶೋಧಕ, **ಮೂರನೇ ಲೇಖಕ:** ಸಮೀಕ್ಷಾ ಸಂಶೋಧನೆ ಸಂಶೋಧಕ



‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತರಿಗೆ ಇಷ್ಟ ಇಲ್ಲದೇ ಇದ್ದರೂ, ಅಲ್ಪಸಂಖ್ಯಾತರ ಹಕ್ಕುಗಳನ್ನು ಸರ್ಕಾರವು ರಕ್ಷಿಸಲೇಬೇಕು’

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತ ಸಮುದಾಯದ ಇಚ್ಛೆಗೇ ಪ್ರಾಧಾನ್ಯ ಇರಬೇಕು’

‘ಅಲ್ಪಸಂಖ್ಯಾತರನ್ನು ಸಮಾನರನ್ನಾಗಿ ಕಂಡರಷ್ಟೇ ಸಾಲದು, ಬದಲಿಗೆ ಅವರಿಗೆ ಸರ್ಕಾರವು ವಿಶೇಷ ಸವಲತ್ತುಗಳನ್ನು ಒದಗಿಸಬೇಕು’

‘ಬಹುಸಂಖ್ಯಾತರ ಆಚಾರ–ವಿಚಾರಗಳನ್ನು ಅಲ್ಪಸಂಖ್ಯಾತರು ಅಳವಡಿಸಿಕೊಳ್ಳಬೇಕು’

ಜಾತ್ಯತೀತ ನೆಲೆ ಸಡಿಲವಾಗಿಸದ ಬಹುಸಂಖ್ಯಾತವಾದ

ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಜನರ ನಿಲುವುಗಳು ಖಚಿತವಾಗಿ ಇರುವಂತೆ ಜಾತ್ಯತೀತ ನಿಲುವುಗಳಲ್ಲಿ ಇದ್ದಂತಿಲ್ಲ. ಜಾತ್ಯತೀತ ನಿಲುವುಗಳ ಬಗ್ಗೆ ಜನರ ಅಭಿಪ್ರಾಯ ಮಿಶ್ರ ಸ್ವರೂಪದ್ದು. ಈಚಿನ ವರ್ಷಗಳಲ್ಲಿ ಬಹುಸಂಖ್ಯಾತವಾದದ ಪರವಾಗಿ ಪ್ರಬಲ ಜನಾಭಿಪ್ರಾಯವನ್ನು ರೂಪಿಸುವಲ್ಲಿ ಅಥವಾ ಜನಾಭಿಪ್ರಾಯ ಬದಲಾಗುವಂತೆ ಮಾಡುವಲ್ಲಿ ಬಿಜೆಪಿ ಪರಿಣಾಮಕಾರಿಯಾಗಿ ಕೆಲಸ ಮಾಡಿತು.

ಅಲ್ಪಸಂಖ್ಯಾತರ ಹಕ್ಕುಗಳ ಕುರಿತಾಗಿ ‘ಸರ್ವಶ್ರೇಷ್ಠ ನಾಯಕ’ ಲಂಗುಲಗಾಮಿಲ್ಲದೆ ನಡೆಸಿದ ದಾಳಿಯಿಂದ ಎಲ್ಲ ಮತಗಳೂ ಪಲ್ಲಟವಾಗುತ್ತವೆ ಎಂದು ನಿರೀಕ್ಷಿಸಬಾರದು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಹೇಳಿಕೆ ಮತ್ತು ಭರವಸೆಗಳನ್ನು ನಿರಾಕರಿಸುವಂತಹ ದತ್ತಾಂಶಗಳನ್ನು ಈ ಸಮೀಕ್ಷೆಯು ಒದಗಿಸಿಕೊಟ್ಟಿದೆ. ಮೋದಿ ಸರ್ಕಾರವು ಮಾಡಿದ ಕೆಲಸದಲ್ಲಿ ತಮಗೆ ಅತಿಹೆಚ್ಚು ಇಷ್ಟವಾದದ್ದು ರಾಮಮಂದಿರ ಲೋಕಾರ್ಪಣೆ ಎಂದು ಹೇಳಿದ ಜನರ ಪ್ರಮಾಣ ಶೇ 22ಷ್ಟು ಮಾತ್ರ. ರಾಮ ಮಂದಿರದ ವಿಚಾರದ ಕಾರಣಕ್ಕೆ ಬಿಜೆಪಿಗೆ ಮತ್ತೊಂದು ಅವಕಾಶ ನೀಡಬೇಕು ಎಂದವರು ನಗಣ್ಯ ಎನ್ನಬಹುದಾದ ಶೇ 5ರಷ್ಟು ಜನರು ಮಾತ್ರ. ಆದರೂ ರಾಮ ಮಂದಿರ ವಿಚಾರವು, ಜನರು ಬಿಜೆಪಿ ಜತೆಗೇ ಉಳಿಯುವಲ್ಲಿ ಕೆಲಸ ಮಾಡಿದೆ. ಆದರೆ ಈ ವಿಚಾರವು ಎಲ್ಲಾ ಮತಗಳನ್ನು ಬಿಜೆಪಿಯತ್ತ ಸೆಳೆಯುವಂತೆ ಮಾಡಿದೆ ಎನ್ನಲಾಗದು.

ಎಲ್ಲರನ್ನೂ ಒಳಗೊಳ್ಳುವ ಭಾರತದ ಪರಿಕಲ್ಪನೆಗೆ ಸಮೀಕ್ಷೆಯಲ್ಲಿ ಬಹುತೇಕ ಸರ್ವಾನುಮತ ದೊರೆತಿದೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಧಾನಿ ರೂಪಿಸಿದ ‘ನುಸುಳುಕೋರರು’ ಪರಿಕಲ್ಪನೆಗೆ ಸಂಪೂರ್ಣ ವಿರುದ್ಧ ಎಂಬಂತೆ ಜನರು ತಮ್ಮ ಅಭಿಪ್ರಾಯಗಳನ್ನು ಸಮೀಕ್ಷೆಯಲ್ಲಿ ದಾಖಲಿಸಿದ್ದರು. ‘ಭಾರತ ಹಿಂದೂಗಳಿಗೆ ಮಾತ್ರ ಸೇರಿದ್ದು’ ಎಂಬ ಹೇಳಿಕೆಯನ್ನು ಒಪ್ಪುವ ಒಬ್ಬ ವ್ಯಕ್ತಿ ಮಾತ್ರ ಇದ್ದರೆ, ‘ಭಾರತವು ಹಿಂದೂಗಳಿಗೆ ಮಾತ್ರವಲ್ಲ. ಬದಲಿಗೆ ದೇಶದ ಎಲ್ಲಾ ಧರ್ಮದ ಜನರಿಗೂ ಸೇರಿದ್ದು’ ಎಂಬ ಹೇಳಿಕೆಯನ್ನು ಬೆಂಬಲಿಸುವ ಏಳು ಮಂದಿ ಇದ್ದಾರೆ.

ಬಹುಸಂಖ್ಯಾತವಾದವನ್ನು ಒಪ್ಪುವವರ ಪ್ರಮಾಣದಲ್ಲಿ ಸ್ವಲ್ಪ ಬದಲಾವಣೆ ಆಗಿದೆ ಎಂಬುದನ್ನೂ ಈ ಸಮೀಕ್ಷೆ ದಾಖಲಿಸಿದೆ. ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತರ ಇಚ್ಛೆಗೇ ಪ್ರಾಧಾನ್ಯ ಇರಬೇಕು’ ಎಂಬ ಹೇಳಿಕೆಯನ್ನು ಒಪ್ಪುವವರ ಪ್ರಮಾಣ ಇಳಿಕೆಯಾಗುತ್ತಲೇ ಇದೆ. 2014ರಲ್ಲಿ ಶೇ 40ರಷ್ಟು ಜನರು ಈ ಹೇಳಿಕೆಯನ್ನು ಒಪ್ಪಿದ್ದರು. 2019ರಲ್ಲಿ ಅಂತಹ ಜನರ ಪ್ರಮಾಣ ಶೇ 29ರಷ್ಟಕ್ಕೆ ಕುಸಿದಿತ್ತು. ಈಗ 2024ರಲ್ಲಿ ಆ ಪ್ರಮಾಣ ಶೇ 21ರಷ್ಟಕ್ಕೆ ಕುಸಿದಿದೆ.

ಆದರೆ, ಇದೇ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಇದ್ದ ಬೆಂಬಲ ಗಣನೀಯ ಪ್ರಮಾಣದಲ್ಲಿ ಏರಿಕೆಯೂ ಆಗಿಲ್ಲ ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ಅವರು ಭಾವನೆಗಳನ್ನು ಉದ್ದೀಪಿಸಿದ್ದರ ಪರಿಣಾಮ ಹೀಗಾಗಿರಬಹುದು. 2004ರಲ್ಲಿ, ‘ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು ಚುನಾಯಿತ ಸರ್ಕಾರದ ಕರ್ತವ್ಯ’ ಎಂಬುದನ್ನು ಸಂಪೂರ್ಣವಾಗಿ ಒಪ್ಪುವವರ ಪ್ರಮಾಣ ಶೇ 67ರಷ್ಟು ಇತ್ತು. 2019ರಲ್ಲಿ ಇದು ಶೇ 47ಕ್ಕೆ ಮತ್ತು 2024ರಲ್ಲಿ ಶೇ 38ಕ್ಕೆ ಕುಸಿದಿದೆ. ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲಾ ವಿಚಾರದಲ್ಲಿ ಪ್ರಜಾಸತ್ತಾತ್ಮಕ ನಿಲುವುಗಳನ್ನು ಒಪ್ಪುವವರ ಪ್ರಮಾಣ ಹೀಗೆಯೇ ಕುಸಿದಿದೆ. ಜತೆಯಲ್ಲಿ ಇಂತಹ ಪ್ರಜಾಸತ್ತಾತ್ಮಕ ನಿಲುವುಗಳನ್ನು ಸಂಪೂರ್ಣವಾಗಿ ಒಪ್ಪದೇ ಇರುವವರ ಪ್ರಮಾಣವೂ ಕುಸಿದಿದೆ ಎಂಬುದನ್ನು ಗಮನಿಸಬೇಕು. ಜನಾಭಿಪ್ರಾಯದಲ್ಲಿ ಆದ ಈ ಬದಲಾವಣೆಗಳಿಗೂ, ಧಾರ್ಮಿಕ ಧ್ರುವೀಕರಣದ ಯತ್ನಕ್ಕೂ ಸಂಬಂಧವಿಲ್ಲ ಎಂಬುದನ್ನೇ ಇದು ಹೇಳುತ್ತದೆ.

ಬಹುಸಂಖ್ಯಾತವಾದದ ರಾಜಕೀಯ ಆಯಾಮವು ಮೃದುವಾದಂತೆ ತೋರಿದರೂ, ಅಲ್ಪಸಂಖ್ಯಾತರು ಬಹುಸಂಖ್ಯಾತರ ಆಚಾರವಿಚಾರಗಳನ್ನು ಅನುಸರಿಸಬೇಕು ಎಂಬಂತಹ ಒತ್ತಡ ಹೆಚ್ಚುತ್ತಲೇ ಇದೆ. ಅಲ್ಪಸಂಖ್ಯಾತರು ಬಹುಸಂಖ್ಯಾತರ ಸಂಸ್ಕೃತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳುವವರ ಪ್ರಮಾಣ ಶೇ 7ರಷ್ಟಕ್ಕೆ ಏರಿಕೆಯಾಗಿದೆ. ಆದರೆ ಈ ಹೇಳಿಕೆಯನ್ನು ತಿರಸ್ಕರಿಸುವವರ ಪ್ರಮಾಣ ಶೇ 6ಕ್ಕೆ ಕುಸಿದಿದೆ. ಇಂತಹ ಹೇಳಿಕೆಯನ್ನು ವಿರೋಧಿಸುವವರಿಗಿಂತ ಒಪ್ಪುವವರ ಪ್ರಮಾಣವೇ ಹೆಚ್ಚಾಗಿದ್ದು ಇದೇ ಮೊದಲು ಎಂಬುದೇ ಬಹಳ ಎಚ್ಚರದಿಂದ ಗಮನಿಸಬೇಕಾದ ಅಂಶ.

ಈ ಎಲ್ಲಾ ಅಂಶಗಳು ಜಾತ್ಯತೀತವಾದಕ್ಕೆ ದೊರೆತ ಬೆಂಬಲ ಎಂದು ಭಾವಿಸಲಾಗದು. ಆದರೆ, ಭಾರತೀಯ ಮತದಾರರ ಜಾತ್ಯತೀತ ನೆಲೆಯನ್ನು ಸಡಿಲಗೊಳಿಸುವಲ್ಲಿ ‘ಬಹುಸಂಖ್ಯಾತವಾದದ ಬಿರುಗಾಳಿ’ ಯಶಸ್ವಿಯಾಗಿಲ್ಲ ಎಂದಂತೂ ಗಟ್ಟಿಯಾಗಿ ಹೇಳಬಹುದು.

ಗುಂಡಣ್ಣ

ಸಾಯುವುದು ಹೇಗೆ? ಸಾಯಿಸುವುದು ಹೇಗೆ?

ಪ್ರೊ.ಎಂ. ಕೃಷ್ಣೇಗೌಡ

ಅರ್ಜುನದೊಂದು ಶಪಥ ಇತ್ತು- ‘ಯಾರಾದರೂ ನನ್ನನ್ನು ನಿಂದಿಸಿದರೆ ಸಹಿಸಿಕೊಂಡೇನು, ಆದರೆ ನನ್ನ ದಿವ್ಯವಾದ ಧನಸ್ಸು, ಗಾಂಡೀವವನ್ನು ನಿಂದಿಸಿದರೆ ಆ ನಿಂದಿಸಿದವರನ್ನು ನಾನು ಕೊಲ್ಲದೆ ಬಿಡುವುದಿಲ್ಲ’ ಅನ್ನುವುದು ಆ ಶಪಥ.

ಒಮ್ಮೆ ಪ್ರಸಂಗವಶಾತ್ ಧರ್ಮರಾಯ ಅರ್ಜುನನ ಗಾಂಡೀವವನ್ನು ನಿಂದಿಸಿಬಿಟ್ಟ. ಥಟ್ಟನೆ ಸಿಟ್ಟಿಗೆದ್ದ ಅರ್ಜುನ. ಶಪಥ ನೆನಪಾಯಿತು. ಆದರೆ ಪೂಜ್ಯನಾದ ಅಣ್ಣನನ್ನು ಕೊಲ್ಲುವುದು ಹೇಗೆ? ಕೊಲ್ಲದಿದ್ದರೆ ಶಪಥದ ಗತಿಯೇನು? ಸಂಕಟಕ್ಕೆ ಬಿದ್ದ ಅರ್ಜುನ. ಆಗ ಕೃಷ್ಣ ಬಂದ. ಕೃಷ್ಣನ ಬಳಿ ಅರ್ಜುನ ತನ್ನ ಸಂಕಟವನ್ನು ಹೇಳಿಕೊಂಡ. ಆಗ ಕೃಷ್ಣ ಹೇಳಿದ- ‘ಅರ್ಜುನಾ, ಧರ್ಮಜನನ್ನು ಕೊಲ್ಲಬೇಕೆಂದರೆ ಅವನನ್ನು ಕತ್ತರಿಸಿ ಕೊಲ್ಲಬೇಕೆಂದಿಲ್ಲ. ಅವನನ್ನು ಚೆನ್ನಾಗಿ ಬಯ್ದುಬಿಡು. ಯಾಕೆಂದರೆ ದೊಡ್ಡವರನ್ನು ಬಯ್ದರೆ ಅವರನ್ನು ಕೊಂದ ಹಾಗೆ’.

ಅರ್ಜುನ ಹಾಗೇ ಮಾಡಿದ. ಅಣ್ಣನನ್ನು ವಾಚಾಮಗೋಚರ ಬಯ್ದ. ‘ನಿನ್ನಿಂದಾಗಿ, ನಿನ್ನ ದ್ಯೂತ ವ್ಯಸನದಿಂದಾಗಿ ನಾವೆಲ್ಲಾ ಎಷ್ಟೊಂದು ಕಷ್ಟ ಎದುರಿಸಬೇಕಾಯಿತು, ಅವಮಾನ ಅನುಭವಿಸಬೇಕಾಯಿತು, ಮಡದಿ ದ್ರೌಪದಿಯ ವಸ್ತ್ರಾಪಹರಣಕ್ಕೆ ಕಾರಣನಾದ ಪಾಪಿಯೂ ನೀನೇ. ಗಂಡಸರಾದ ನಾವು ಷಂಡರಾಗಿ ಬದುಕಿದ್ದೂ ಅವಿವೇಕಿಯಾದ ನಿನ್ನಿಂದಲೇ...’ ಹೀಗೆ ಪರಿಪರಿಯಾಗಿ ಧರ್ಮಜನನ್ನು ಬಯ್ದ ಅರ್ಜುನ. ಅಂತೂ ಅದರಿಂದ ಕೃಷ್ಣ ಹೇಳಿದಂತೆ ಧರ್ಮರಾಯ ಸತ್ತ ಹಾಗಾಯಿತು.

ಈಗ ಇನ್ನೊಂದು ಸಮಸ್ಯೆ. ಪಾಂಡವರಲ್ಲಿ ಒಬ್ಬ ಸತ್ತರೂ ಉಳಿದವರೆಲ್ಲರೂ ಸತ್ತುಹೋಗಬೇಕೆಂಬುದು ಇನ್ನೊಂದು ಶಪಥ. ಅಣ್ಣ ‘ಸತ್ತ ಮೇಲೆ’ ಈಗ ಉಳಿದ ಮೂವರಿಗಿಂತ ಮೊದಲು ತಾನು ಸಾಯಬೇಕಲ್ಲ, ಸಾಯುವುದು ಹೇಗೆ? ಮೂರು ಲೋಕದ ಗಂಡ ಆತ್ಮಹತ್ಯೆ ಮಾಡಿಕೊಳ್ಳುವುದೆ? ಹೇಗೆ ಮಾಡುವುದು? ತೋಚಲಿಲ್ಲ. ‘ಕೃಷ್ಣಾ’ ಎಂದ.

ಮತ್ತೆ ಬಂದ ಕೃಷ್ಣ. ‘ಅರ್ಜುನಾ, ನಿನ್ನ ಸಂಕಟ ತಿಳಿಯಿತು ನನಗೆ. ನೀನೀಗ ಸಾಯಬೇಕೆಂದು ಬಯಸಿದ್ದಿ. ಹಾಗಾದರೆ ನೀನು ಹೀಗೆ ಮಾಡು. ನಿನ್ನನ್ನು ನೀನೇ ಹೊಗಳಿಕೋ. ಬೇರೆಯವರಿಗೆ ಬೇಸರವಾಗುವಷ್ಟು ನೀನೇ ನಿನ್ನ ಗುಣಗಾನ ಮಾಡಿಕೋ. ಆಗ ನೀನು ಸತ್ತಂತೆ...’

ಅರ್ಜುನ ತನ್ನ ಬಿರುದು ಪರಾಕ್ರಮಗಳನ್ನೆಲ್ಲಾ ತಾನೇ ಹೊಗಳಿಕೊಂಡ- ತನಗೇ ನಾಚಿಕೆಯಾಗುವಷ್ಟು. ಎದುರಿದ್ದವರಿಗೆ ಹೇಸಿಗೆಯಾಗುವಷ್ಟು. ಹಾಗೆ ಅರ್ಜುನನೂ ‘ಸತ್ತ’.

ಕೃಷ್ಣನ ಮಾತು ಎಷ್ಟು ಧ್ವನಿಪೂರ್ಣ... ನಾವೂ ಆಗಾಗ ಹೀಗೆ ಯಾರುಯಾರನ್ನೋ ಸಾಯಿಸುತ್ತೇವೆ ಮತ್ತು ನಾವೂ ಸಾಯುತ್ತಿರುತ್ತೇವೆ ಅಲ್ಲವೇ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜೂನ್ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಚತುರ್ದಶಿ ಗಂ. 7-32 ನಕ್ಷತ್ರ: ಜ್ಯೇಷ್ಠ ಗಂ. 18-19 ಯೋಗ: ಶುಭ ಗಂ. 18-42 ಕರಣ: ವಣಿಜ ಗಂ. 07-32, ಮಿಥುನ ಮಾಸದ ನೇ 07 ದಿನ, ಮಳೆನಕ್ಷತ್ರ: ಮೃಗಶಿರ 4.
ರಾಹುಕಾಲ : ಬೆಳಗ್ಗೆ 10-30 – 12-00
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 14 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 1, 7

ಮೇಷ: ಷೇರುಗಳಲ್ಲಿ ಹೂಡಿಕೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ಲಾಭದಾಯಕವಾಗಿ ತೋರುವುದಿಲ್ಲ. ಕೆಲಸಗಳನ್ನು ಸಾಧಿಸಿಕೊಳ್ಳಬೇಕಿದ್ದರೆ ಅವಿರತ ಶ್ರಮ ಅಗತ್ಯ. ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು.

ವೃಷಭ: ಸಮಸ್ಯೆಗಳು ಏನೇ ಇದ್ದರೂ ಸಮಾಧಾನವಾಗಿ ನಗು ಮೊಗದಿಂದ ವರ್ತಿಸುವುದು ಪ್ರಮುಖ ಕರ್ತವ್ಯವಾಗಿರುತ್ತದೆ. ಕಣ್ಣು, ಕಿವಿಗೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾದಲ್ಲಿ ವೈದ್ಯರನ್ನು ಭೇಟಿ ಮಾಡಿರಿ.

ಮಿಥುನ: ತವರು ಮನೆಯಲ್ಲಿನ ಜಗಳವು ಗಂಡನ ಮನೆಯಲ್ಲಿರುವ ನಿಮ್ಮ ಮನಶ್ಶಾಂತಿಯನ್ನು ಕೆಡಿಸುತ್ತದೆ. ಜಯದ ಜೊತೆಗೆ ನೆಮ್ಮದಿ ಕೂಡ ನಿಮ್ಮದಾಗುತ್ತದೆ. ಕುಟುಂಬದವರೊಡನೆ ಸಂತೋಷದಿಂದ ಕಾಲ ಕಳೆಯುವಂತಾಗಲಿದೆ.

ಕರ್ಕಾಟಕ: ಅದ್ಭುತವಾದ ಉಪನಿಷತ್ ವಾಕ್ಯಗಳ ಬಳಕೆಯನ್ನು ಮಾಡಿ ಪತ್ರಿಕೆಗೆ ಬರೆದ ಲೇಖನಕ್ಕೆ ಓದುಗರಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆಯುವಿರಿ. ಹಣದ ವಿಷಯದಲ್ಲಿ ದಾಕ್ಷಿಣ್ಯದ ಮಾತುಗಳಿಗೆ ಮರುಳಾಗಬೇಡಿ.

ಸಿಂಹ: ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣಿತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವಿಸುವುದು. ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಾಕಾಂಕ್ಷೆ ಇರುವವರಿಗೆ ಶುಭ ದಿನ.

ಕನ್ಯಾ: ಸ್ವಂತ ಊರಿನಲ್ಲಿ ಉತ್ತಮ ಸ್ಥಾನಮಾನದಿಂದಾಗಿ ಹೆಚ್ಚಿನ ಗೌರವ ದೊರೆಯುವುದು. ಎಣ್ಣೆಯಲ್ಲಿ ಕರಿದ ಖಾದ್ಯಗಳ ಸೇವನೆಯಿಂದ ಅನಾರೋಗ್ಯ ಎದುರಾಗಬಹುದು. ಪೊಲೀಸ್ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರಲಿದೆ.

ತುಲಾ: ಆಹಾರದ ವ್ಯತ್ಯಾಸದಿಂದಾಗಿ ಚರ್ಮದಲ್ಲಿ ದಡಾರಗಳು ಅಥವಾ ತುರಿಕೆಯಂಥ ಕಾಯಿಲೆಗಳು ಉಂಟಾಗಬಹುದು. ಅನಿರೀಕ್ಷಿತವಾದರೂ ಬದುಕಿನಲ್ಲಿ ಒಳ್ಳೆಯ ಬೆಳವಣಿಗೆಗಳಾಗುವ ಲಕ್ಷಣಗಳು ಕಾಣುತ್ತಿವೆ.

ವೃಶ್ಚಿಕ: ಹವಾಮಾನ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸವನ್ನು ಉಳಿಸಿಕೊಳ್ಳಲು ಸಾಹಸವನ್ನು ಮಾಡಬೇಕಾಗಬಹುದು. ಸಂಗೀತ ಕಚೇರಿ, ನೃತ್ಯಕಾರ್ಯಕ್ರಮ ನೀಡುವ ಕಲಾವಿದರಿಗೆ ಬೇಡಿಕೆ ಹೆಚ್ಚಾಗಲಿದೆ.

ಧನು: ಬಹಳ ದಿನಗಳಿಂದ ಅಪೇಕ್ಷಿಸಿದ ಯಾತ್ರೆಗೆ ಶುಭ ಮುಹೂರ್ತ ಸಿಗುವುದು. ಮನಸ್ಸಿನಲ್ಲಿ ನೋವಿದ್ದರೂ ಇತರರ ಎದುರು ನಗುಮೊಗದ ಮುಖವಾಡವನ್ನು ಧರಿಸಬೇಕಾಗುವಂತಹ ಪರಿಸ್ಥಿತಿ ನಿಮ್ಮದಾಗಾಗುತ್ತದೆ.

ಮಕರ: ಸ್ನೇಹಿತರ ಭರವಸೆಯ ಮಾತುಗಳು ಸೋಲುಗಳನ್ನು ಮೆಟ್ಟಿ ಆಶಾ ಭಾವನೆಯನ್ನು ತರುತ್ತದೆ. ಅನುಭವದ ಕೊರತೆಯಿಂದಾಗಿ ಕೆಲಸಗಳಲ್ಲಿ ವಿಳಂಬವಾಗಬಹುದು. ಈಶ್ವರನನ್ನು ಆರಾಧಿಸಿರಿ. ಶುಭವಾಗುತ್ತದೆ.

ಕುಂಭ: ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ನೂತನ ದಂಪತಿಗಳು ಸಂತಾನದ ಶುಭ ಸುದ್ದಿ ಕೇಳುವಿರಿ. ಪರಸ್ಪರ ಕಾಳಜಿಗಳ ಬಗ್ಗೆ ಪಾಲುದಾರರು ಸಂತಸದ ಒಪ್ಪಿಗೆ ನೀಡುತ್ತಾರೆ.

ಮೀನ: ಹತ್ತಿ ಬಟ್ಟೆಯ ತಯಾರಕರಿಗೆ ಹಾಗೂ ವ್ಯಾಪಾರಸ್ಥರಿಗೆ ಗ್ರಾಹಕರು ದೊರಕಲಿದ್ದಾರೆ. ಗುರುಗಳ ಮನಸ್ಸಿಗೆ ನೋವು ಉಂಟುಮಾಡುವಂಥ ಕೆಲಸವನ್ನು ಮಾಡದಿರಿ. ವಕೀಲೀ ವೃತ್ತಿಯವರಿಗೆ ಶುಭವಾಗುವುದು.

ಪದಬಂಧ 5718

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅವನು ಸರ ತರಲು ತೋರಿದ ಆತುರ (4)
3.ಅಳತೆ ಮೀರಿದ ಸ್ಥಿತಿ (4)
5.ಭವ್ಯವಾದ ಸೌಧ (3)
6.ಬೆಲೆ ಕೊಟ್ಟು ಕೊಂಡುಕೊಳ್ಳು (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲುಭೂಮಿ (7)
10.ಅನಿರೀಕ್ಷಿತ ಘಟನೆ (4)
11.ಋತುಗಳ ರಾಜ (3)
14.ಕೆಟ್ಟ ಹವ್ಯಾಸ (4)
15.ಇದು ಹಿಂದಿಯವನ ಪರಿಶ್ರಮ! (4)

ಮೇಲಿಂದ ಕೆಳಕ್ಕೆ
1.ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ (2)
2.ಅತಿಶಯವಾದ ಮೋಹ (3)
4.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
5.ಮನದೊಳಗಿರುವ ಕಾಮ (3)
6.ಖನಿಯಲ್ಲಿ ಸಿಕ್ಕಿದುದು (3)
8.ಮುನಿದು ಕುಳಿತಿರುವ ಅಜ್ಜ! (3)
9.ಮಿತದಲ್ಲಿನ ಸ್ಪಂದನ ಗೊತ್ತಾಯಿತೇ? (3)
10.ತರಿಸಿ ಕೊಂಡ ವಸ್ತು (3)
12.ಕಾಯ ನೋಡಿದಾಗಲೇ ಈ ಅನುಮಾನ! (3)
13.ಆಸ್ತಿ ಇಲ್ಲಿದೆ (2)



5717ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಧಕ 3.ಹತ್ತಿರ
5.ಪತಿ 6.ಚತುರ
7.ನೆಪ 9.ಕೆರ
11.ಹಣಿಗೆ 13.ತೆನೆ
14.ಕಟಾವು 15.ತಿರುಳು

ಮೇಲಿಂದ ಕೆಳಕ್ಕೆ:
1.ಬಾಣಂತಿ 2.ಕವಚ
3.ಹಮ್ಮೀರ 4.ರವಾನೆ
5.ಪಳೆಯುಳಿಕೆ 8.ಪರ್ಯಾಲೋಚನೆ
10.ರಕ್ಷಕ 11.ಹಗೇವು
12.ಗೆಳತಿ 13.ತೆಗಳು

ಸುಡೊಕು 6103

	9			3			6	
4					7		2	9
	8	3		9		1		7
		4			9		8	
	2	6		5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6102 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ: ನಿಗದಿತ ಅವಧಿಯಲ್ಲಿ ತನಿಖೆ ಪೂರ್ಣಗೊಳಿಸುವ ಉದ್ದೇಶ

ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆಗೆ 33 ಠಾಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ನಿರ್ವಹಿಸಲು ನಾಗರಿಕ ಹಕ್ಕು ನಿರ್ದೇಶನಾಲಯದ (ಡಿಸಿಆರ್‌ಇ) 33 ಘಟಕಗಳನ್ನು 'ವಿಶೇಷ ಪೊಲೀಸ್ ಠಾಣೆ'ಗಳೆಂದು ಘೋಷಿಸಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರತಿ ಜಿಲ್ಲೆಗೊಂದು ಠಾಣೆ ಮತ್ತು ಬೆಂಗಳೂರಿನಲ್ಲಿ ಎರಡು ಈ ವಿಶೇಷ ಪೊಲೀಸ್ ಠಾಣೆಗಳಿರಲಿವೆ. ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಎಲ್ಲ ಪ್ರಕರಣಗಳನ್ನು ಈ ಠಾಣೆಗಳಿಗೆ ವರ್ಗಾಯಿಸಲಾಗುವುದು ಎಂದು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಒಳಾಡಳಿತ ಇಲಾಖೆಯಿಂದ ಸಿಆರ್‌ಪಿಸಿ ಕಾಯ್ದೆ 1973ರ ಕಲಂ 2 ಎಸ್ ಅಡಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಕೆಲವು ರಾಜ್ಯಗಳಲ್ಲಿ ಈಗಾಗಲೇ ವಿಶೇಷ ಪೊಲೀಸ್ ಠಾಣೆಗಳು ಇವೆ. ರಾಜ್ಯದಲ್ಲಿ 2022 ರ ಡಿಸೆಂಬರ್‌ವರೆಗೆ 7,633 ಪ್ರಕರಣಗಳು ಮಾತ್ರ ನ್ಯಾಯಾಲಯಕ್ಕೆ ಬಂದಿವೆ. ಈ ಪೈಕಿ 1,723 ಪ್ರಕರಣಗಳು ವಿಲೇವಾರಿ ಆಗಿವೆ. 1,363 ಪ್ರಕರಣಗಳು ಖುಲಾಸೆ ಆಗಿದ್ದು, ಕೇವಲ 68 ಪ್ರಕರಣಗಳಲ್ಲಿ ಶಿಕ್ಷೆ ಆಗಿದೆ. ಶಿಕ್ಷೆ ಪ್ರಮಾಣ ಶೇ 4ರಷ್ಟು ಎಂದು ಅವರು ವಿವರಿಸಿದರು.

ರಾಜ್ಯದಲ್ಲಿ ಪ್ರತಿ ವರ್ಷ 2,000 ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಇನ್ನು ಮುಂದೆ ಪರಿಶಿಷ್ಟರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ವಿಶೇಷ ಠಾಣೆಗಳಲ್ಲಿಯೇ ದಾಖಲಿಸಲಾಗುವುದು. ನಿಗದಿತ ಅವಧಿಯಲ್ಲಿ ತನಿಖೆ ನಡೆಸಿ, ನಿಗದಿತ ಸಮಯದೊಳಗೆ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಇದರಿಂದಾಗಿ ಸಮಯಬದ್ಧವಾಗಿ ಮತ್ತು ನ್ಯಾಯೋಚಿತವಾಗಿ ತನಿಖೆ ನಡೆಸಬಹುದಾಗಿದೆ. ತನಿಖೆಯ ಗುಣಮಟ್ಟವೂ ಹೆಚ್ಚಾಗಲಿದೆ. ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದ ಆರ್ಥಿಕ ದುಃಸ್ಥಿತಿಯ ಬಗ್ಗೆ ಸಾರ್ವಜನಿಕರಲ್ಲೂ ಅರಿವು ಮೂಡಲು ಸಹಾಯಕವಾಗುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 24ರಷ್ಟು ಈ ಸಮುದಾಯದವರೇ ಇದ್ದಾರೆ ಎಂದು ಪಾಟೀಲ ತಿಳಿಸಿದರು.

ಪ್ರತಿಯೊಂದು ವಿಶೇಷ ಠಾಣೆಯಲ್ಲೂ ಡಿವೈಎಸ್‌ಪಿ/ಎಸಿಪಿ ದರ್ಜೆಯ ಅಧಿಕಾರಿಗಳು ಇರುತ್ತಾರೆ. ಇಡೀ ರಾಜ್ಯಕ್ಕೆ 1 ಎಡಿಜಿಪಿ, 1 ಐಜಿಪಿ, 10 ಎಸ್‌ಪಿ, 12 ಡಿವೈಎಸ್‌ಪಿ, 27 ಪಿಐ, 181 ಹೆಡ್ ಕಾನ್‌ಸ್ಟೆಬಲ್‌ಗಳು ಮತ್ತು 412 ಕಾನ್‌ಸ್ಟೆಬಲ್‌ಗಳು ಸೇರಿ 677 ಹುದ್ದೆಗಳ ಅಗತ್ಯವಿದೆ ಎಂಬ ಪ್ರಸ್ತಾವನೆ ಇದೆ. ಈ ವಿಚಾರವನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಗೃಹ ಇಲಾಖೆಗಳು ಸಭೆಸಿ ತೀರ್ಮಾನ ತೆಗೆದುಕೊಳ್ಳುತ್ತವೆ ಎಂದರು.

ಕೆಜಿಎಫ್: ಚಿನ್ನದ ಗಣಿ ಚಟುವಟಿಕೆಗೆ ಒಪ್ಪಿಗೆ

ಕೆಜಿಎಫ್‌ನ ಭಾರತ್ ಚಿನ್ನದ ಗಣಿ ಲಿಮಿಟೆಡ್(ಬಿಜಿಎಂಎಲ್) ಆವರಣದಲ್ಲಿ ಸೈನೇಡ್ ಗುಡ್ಡ ಎಂದೇ ಕರೆಯಲಾಗುವ 13 ಟೈಲಿಂಗ್ ಡಂಪ್ (ಚಿನ್ನ ತೆಗೆದ ಬಳಿಕ ಉಳಿದ ಮಣ್ಣಿನ ದಿಬ್ಬ) ಪ್ರದೇಶದಲ್ಲಿ ಗಣಿ ಚಟುವಟಿಕೆ ನಡೆಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.
5213.21 ಹೆಕ್ಟೇರ್ ಪ್ರದೇಶದಲ್ಲಿ ಈ ಚಟುವಟಿಕೆಗಳು ನಡೆಯಲಿವೆ. 2,330 ಎಕರೆ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ನೀಡಬೇಕು ಎನ್ನುವ ಬೇಡಿಕೆ ಸರ್ಕಾರದ್ದಾಗಿದೆ. ಇದರಿಂದಾಗಿ ಸಾವಿರಾರು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಶಾಲೆ, ಪಿಯು ಕಾಲೇಜುಗಳಿಗೆ ಉಚಿತ ವಿದ್ಯುತ್, ನೀರು

ರಾಜ್ಯ ಎಲ್ಲ ಸರ್ಕಾರಿ ಶಾಲೆಗಳು, ಪದವಿ ಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯವನ್ನು ನೀಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ರಾಜ್ಯದ 46,829 ಸರ್ಕಾರಿ ಶಾಲೆಗಳು ಮತ್ತು 1,234 ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯವನ್ನು ₹29.19 ಕೋಟಿ ವೆಚ್ಚದಲ್ಲಿ ಜಾರಿಗೊಳಿಸಲಾಗುವುದು. ಈವರೆಗೆ ಈ ಮೊತ್ತವನ್ನು ಎಸ್‌ಡಿಎಂಸಿಗಳು ಭರಿಸುತ್ತಿದ್ದವು ಎಂದು ಹೇಳಿದರು.

ವೇತನ ಪರಿಷ್ಕರಣೆ: ಸಿ.ಎಂಗೆ ಅಧಿಕಾರ

ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 7ನೇ ವೇತನ ಆಯೋಗದ ಶಿಫಾರಸು ಜಾರಿ ಮಾಡುವ ಸಂಬಂಧ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿದೆ.

ಸಂಪುಟ ಸಭೆಯಲ್ಲಿ ಅನೌಪಚಾರಿಕವಾಗಿ ಈ ವಿಷಯ ಪ್ರಸ್ತಾಪವಾಯಿತು. ಶೇ 27.5ರಷ್ಟು ಫಿಟ್‌ಮೆಂಟ್ ನೀಡಲು ಆಯೋಗ ಶಿಫಾರಸು ಮಾಡಿದೆ. ಕೆಲವು ಸಚಿವರು ಅಷ್ಟನ್ನೇ ಕೊಡುವುದಕ್ಕೆ ಸಮ್ಮತಿಸಿದರೆ, ಕೆಲವರು ಶೇ 25ಕ್ಕೆ ಸೀಮಿತಗೊಳಿಸಿದರೆ ಸಾಕು ಎಂದು ಸಲಹೆ ನೀಡಿದರು. ಮತ್ತೆ ಕೆಲವು ಸಚಿವರು ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ನೌಕರರು ಬಿಜೆಪಿಗೆ ಮತ ಹಾಕಿರುವಾಗ, ವೇತನ ಪರಿಷ್ಕರಣೆ ಮಾಡಬೇಕಾ ಎಂದೂ ಪ್ರಶ್ನಿಸಿದ್ದಾಗಿ ಮೂಲಗಳು ಹೇಳಿವೆ.

ಜುಲೈನಲ್ಲಿ ವಿಧಾನಮಂಡಲ ಅಧಿವೇಶನ ನಡೆಸಲು ಒಪ್ಪಿಕೊಳ್ಳಲಾಗಿದೆ. ದಿನಾಂಕ ತೀರ್ಮಾನಿಸುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿದೆ. ಅಧಿವೇಶನ ಎರಡು ವಾರ ನಡೆಯಲಿದೆ.

ಜನವರಿ 26, ಆಗಸ್ಟ್ 15 ಮತ್ತು ನವೆಂಬರ್ 26ರ ಸಂವಿಧಾನ ದಿನಾಚರಣೆಗಳಂದು ಎಲ್ಲಾ ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳು ಮತ್ತು ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಮಹಾತ್ಮ ಗಾಂಧೀಜಿಯವರ ಭಾವಚಿತ್ರದ ಜತೆಗೆ ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನೂ ಇಟ್ಟು ಆಚರಣೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಭ್ರೂಣ ಲಿಂಗ ಪತ್ತೆ: ಮಾಹಿತಿ ನೀಡಿದವರಿಗೆ ₹1 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರೂಣ ಲಿಂಗ ಪತ್ತೆ ಬಗ್ಗೆ ಮಾಹಿತಿ ನೀಡಿದವರಿಗೆ ನೀಡುವ ಬಹುಮಾನವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಏರಿಕೆ ಮಾಡಿ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಶಸ್ವಿಗೊಂಡ ಗುಪ್ತ ಕಾರ್ಯಾಚರಣೆಯಲ್ಲಿ ಮಾಹಿತಿ ನೀಡಿದವರಿಗೆ ಈ ಬಹುಮಾನ ನೀಡಲಾಗುವುದು. ಬಹುಮಾನದ ಮೊತ್ತದಲ್ಲಿ ₹50 ಸಾವಿರವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದಲೂ, ಇನ್ನುಳಿದ ₹50 ಸಾವಿರ ಮೊತ್ತವನ್ನು ಆಯಾ ಜಿಲ್ಲೆಗಳಲ್ಲಿ ಸಂಗ್ರಹವಾಗಿರುವ ಪಿಸಿಪಿಎನ್‌ಡಿಟಿ ಶುಲ್ಕದಿಂದ ಭರಿಸಲು ತಿಳಿಸಲಾಗಿದೆ.

2023ರ ಡಿ.11ರಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮೇಲ್ವಿಚರಣಾ ಮಂಡಳಿ ಸಭೆಯಲ್ಲಿ ಬಹುಮಾನದ ಮೊತ್ತವನ್ನು ಏರಿಸಲು ನಿರ್ಧರಿಸಲಾಗಿತ್ತು ಎಂದು ಹೇಳಲಾಗಿದೆ.

ರೇಣುಕಸ್ವಾಮಿ ಹತ್ಯೆ: ಹೇಳಿಕೆ ನೀಡದಂತೆ ಸಚಿವರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಸಚಿವರು ಹೇಳಿಕೆಗಳನ್ನು ನೀಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟ ಸಭೆಯಲ್ಲಿ ಸೂಚನೆ ನೀಡಿದ್ದಾರೆ.

ಕೊಲೆ ಪ್ರಕರಣದಲ್ಲಿ ದರ್ಶನ್ ಬಂಧನಕ್ಕೊಳಗಾಗಿರುವ ವಿಚಾರವನ್ನು ಪ್ರಸ್ತಾಪಿಸಲು ಒಂದಿಬ್ಬರು ಸಚಿವರು ಪ್ರಯತ್ನಿಸಿದಾಗ ಸಿದ್ದರಾಮಯ್ಯ ಅದಕ್ಕೆ ಅವಕಾಶ ನೀಡಲಿಲ್ಲ ಮತ್ತು ಯಾರೂ ಈ ವಿಚಾರವಾಗಿ ಹೇಳಿಕೆಗಳನ್ನು ನೀಡಬಾರದು ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಉಪಸಮಿತಿ ರಚನೆ: ರಾಜ್ಯದ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಲು ಸಂಪುಟ ಸಮಿತಿಯನ್ನು ರಚಿಸಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಆಸ್ತಿ ನಗದೀಕರಣ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಾನ ಸಂಗ್ರಹಕ್ಕಾಗಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ 25 ಸಾವಿರ ಎಕರೆ ಜಮೀನು ನಗದೀಕರಣಗೊಳಿಸುವ ಯಾವುದೇ ಪ್ರಸ್ತಾವ ರಾಜ್ಯ ಸರ್ಕಾರ ಮುಂದೆ ಇಲ್ಲ ಎಂದು ಮುಖ್ಯಮಂತ್ರಿ ಸಚಿವಾಲಯ ಸ್ಪಷ್ಟಪಡಿಸಿದೆ.

'ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಎದುರಾಗಿರುವ ಆರ್ಥಿಕ ಹೊರೆ ಸರಿದೂಗಿಸಲು ರಾಜ್ಯ ಸರ್ಕಾರ, ಜಮೀನು ನಗದೀಕರಣಗೊಳಿಸುವ ಬಗ್ಗೆ ಚಿಂತನೆ ನಡೆಸಿದೆ' ಎಂದು 'ಪ್ರಜಾವಾಣಿ'ಯಲ್ಲಿ ಇದೇ 18ರಂದು ಪ್ರಕಟವಾಗಿರುವ ವರದಿಗೆ ಸಚಿವಾಲಯ ಸ್ಪಷ್ಟನೆ ನೀಡಿದೆ. 'ಸಂಪನ್ಮೂಲ ಕ್ರೋಡೀಕರಣಕ್ಕೆ ಸಂಬಂಧಿಸಿದ ಎಲ್ಲ ಕ್ರಮ ಮತ್ತು ಪ್ರಸ್ತಾವ ಗಳನ್ನು ಆರ್ಥಿಕ ಇಲಾಖೆ ಪರಿಶೀಲಿ ಸುತ್ತಿದ್ದು, ಸಾರ್ವಜನಿಕರ ಗಮನಕ್ಕೆ ತಂದೇ ಸರ್ಕಾರ ಮುಂದುವರಿಯಲಿದೆ' ಎಂದಿದೆ.

'ನಾಗರಿಕರಿಗೆ ಅನಗತ್ಯವಾಗಿ ಹೊರೆ ಆಗದಂತೆ ಸಂಪನ್ಮೂಲ ಕ್ರೋಡೀಕರಣವನ್ನು ಬಲಪಡಿಸುವುದು ಸರ್ಕಾರದ ಜವಾಬ್ದಾರಿ. ಸಮಾನ ಆರ್ಥಿಕ ಬೆಳವಣಿಗೆಯು ಸ್ಥಿರವಾಗಿರುವಂತೆ ಖಾತ್ರಿಪಡಿಸುವುದರ ಜತೆ ಜತೆಗೇ ತ್ವರಿತವಾಗಿ ಆಗುತ್ತಿರುವ ಆರ್ಥಿಕ ಬೆಳವಣಿಗೆಯ ಕೆಲವು ಪ್ರಯೋಜನಗಳನ್ನು ಆರ್ಥಿಕವಾಗಿ ದುರ್ಬಲವಾಗಿರುವ ವರ್ಗ ಪಡೆದುಕೊಳ್ಳುವಂತೆ ನೋಡಿಕೊಳ್ಳುವುದಕ್ಕೆ ಸರ್ಕಾರ ಗಮನ ನೀಡುತ್ತಿದೆ. ಈ ದೃಷ್ಟಿಯಲ್ಲಿ ವರಮಾನ ಸಂಗ್ರಹ ಹೆಚ್ಚಿಸುವ ಹಲವು ಕ್ರಮಗಳನ್ನು ಪರಿಗಣಿಸಲಾಗುತ್ತಿದೆ' ಎಂದೂ ಹೇಳಿದೆ.

'ಹೆಚ್ಚುವರಿಯಾಗಿ ತೆರಿಗೇತರ ಆದಾಯವನ್ನು ಹೆಚ್ಚಿಸಿಕೊಳ್ಳುವ, ಅಂದರೆ ಗಣಿಗಾರಿಕೆ, ನಗರ ಪ್ರದೇಶಗಳಲ್ಲಿ ಜಾಹೀರಾತು ಅಳವಡಿಕೆ, ಹೆಸರುಗಳ ಹಕ್ಕಿನ ಮಾರಾಟ ಇತ್ಯಾದಿ ಕ್ರಮಗಳಿಂದ ಹೆಚ್ಚಿನ ಆದಾಯ ಗಳಿಸುವ ಅಗಾಧ ಸಾಮರ್ಥ್ಯವನ್ನು ಸರ್ಕಾರ ಹೊಂದಿದೆ. ತೆರಿಗೆ ಸಂಗ್ರಹದ ವ್ಯಾಪ್ತಿ ಹಿಗ್ಗಿಸುವುದು ಕೂಡ ಸರ್ಕಾರದ ಮುಂದಿರುವ ಮತ್ತೊಂದು ಅವಕಾಶ. ಹೀಗೆ ಮಾಡಲಾಗಿರುವ ಶಿಫಾರಸುಗಳಲ್ಲಿ, ಆಯಕಟ್ಟಿನ ಜಾಗವಾಗಿರದ ಭೂಮಿಯನ್ನು ನಗದೀಕರಿಸುವುದು ಕೂಡ ಒಂದಾಗಿದೆ. ಹಾಗೆಂದ ಮಾತ್ರಕ್ಕೆ ಸರ್ಕಾರದ ಭೂಮಿಯನ್ನು ಮಾರಾಟ ಮಾಡಲಾಗುತ್ತದೆ ಎಂದೇನು ಅರ್ಥೈಸಬೇಕಾಗಿಲ್ಲ' ಎಂದು ಹೇಳಿದೆ.

'ಅತಿಕ್ರಮಣದ ಅಪಾಯವಿರುವ ಸರ್ಕಾರಿ ಖಾಲಿ ಜಮೀನುಗಳನ್ನು ಮಾರಾಟ ಮಾಡದೆಯೂ ನಿರಂತರವಾಗಿ ಆದಾಯ ತಂದಕೊಡುವಂತೆ ಅಭಿವೃದ್ಧಿಪಡಿಸಬಹುದು. ಸಾರ್ವಜನಿಕ ಭೂಮಿಯನ್ನು ಸಂಪೂರ್ಣವಾಗಿ ಮಾರಾಟ ಮಾಡುವ ಬದಲು, ಹಣಕಾಸು ಕ್ರೋಡೀಕರಣದ ನವೀನ ಮತ್ತು ಫಲಪ್ರದವಾದ ಆರ್ಥಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ವರಮಾನ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಆರ್ಥಿಕ ಇಲಾಖೆಯ ಮುಂದಿರುವ ಪ್ರಸ್ತಾವಗಳ ಪ್ರಾಥಮಿಕ ಮಾಹಿತಿಯನ್ನಷ್ಟೆ ಆಧಾರವಾಗಿ ಇಟ್ಟುಕೊಂಡು, ಆತುರದಿಂದ ಯಾವುದೇ ತೀರ್ಮಾನಕ್ಕೆ ಬರುವುದು ಸೂಕ್ತವಲ್ಲ ಎಂದೂ ತಿಳಿಸಿದೆ.

'ಆಸ್ತಿ ಮಾರದೇ ಸಂಪನ್ಮೂಲ ಸಂಗ್ರಹ'

'ಸರ್ಕಾರಿ ಭೂಮಿ ಮಾರಾಟ ಮಾಡದೆ ಮತ್ತು ತೆರಿಗೆಗಳನ್ನು ಹೆಚ್ಚಿಸದೆ ಸಂಪನ್ಮೂಲಗಳನ್ನು ಸಂಗ್ರಹಿಸಲು ಹಲವು ಮಾರ್ಗಗಳಿವೆ. ಉದಾಹರಣೆಗೆ, ವ್ಯವಸ್ಥಿತವಾದ ನಗರ ನಿರ್ಮಾಣ ಯೋಜನೆ, ಮೂಲಸೌಕರ್ಯಗಳ ನಿರ್ಮಾಣ, ನಾಗರಿಕ ಸೌಕರ್ಯಗಳನ್ನು ಒದಗಿಸುವುದು, ರಸ್ತೆ, ಮೆಟ್ರೊ ಮಾರ್ಗ ನಿರ್ಮಾಣದಂಥ ಕ್ರಮಗಳ ಮೂಲಕ ಖಾಸಗಿ ಭೂಮಿಯ ಬೆಲೆ ಹೆಚ್ಚಳವಾದಂತೆ ಸರ್ಕಾರಿ ಭೂಮಿಯ ಬೆಲೆ ಹೆಚ್ಚಳ ಮಾಡಿ ವರಮಾನ ಸಂಗ್ರಹವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ' ಎಂದು ಸಚಿವಾಲಯದ ಸ್ಪಷ್ಟನೆ ಪ್ರತಿಪಾದಿಸಿದೆ.

ನಟನ ಮನೆಯಲ್ಲಿ ₹37.40 ಲಕ್ಷ ಜಪ್ತಿ • ₹3 ಲಕ್ಷ ತಂದುಕೊಟ್ಟ ಪತ್ನಿ ವಿಜಯಲಕ್ಷ್ಮಿ

'ಕೊಲೆ ಮುಚ್ಚಿಹಾಕಲು ದರ್ಶನ್ ₹40 ಲಕ್ಷ ಸಾಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಲೆ ಪ್ರಕರಣದಿಂದ ಪಾರಾಗಲು ಹಾಗೂ ಇತರೆ ಆರೋಪಿಗಳ ಮೂಲಕ ಸಾಕ್ಷ್ಯನಾಶ ಮಾಡಲು ನಟ ದರ್ಶನ್, ತನ್ನ ಸ್ನೇಹಿತ ಮೋಹನ್‌ರಾಜ್ ಎಂಬವರ ಕಡೆಯಿಂದ ₹40 ಲಕ್ಷ ಸಾಲ ಪಡೆದುಕೊಂಡಿದ್ದರು' ಎಂಬ ಸಂಗತಿ ಪಶ್ಚಿಮ ವಿಭಾಗದ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

₹40 ಲಕ್ಷ ಪೈಕಿ ₹37.40 ಲಕ್ಷವನ್ನು ರಾಜರಾಜೇಶ್ವರಿನಗರದಲ್ಲಿರುವ ದರ್ಶನ್ ಮನೆಯಲ್ಲಿ ಜಪ್ತಿ ಮಾಡಲಾಗಿದೆ. ಜೊತೆಗೆ, ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಪತಿ ನೀಡಿದ್ದ ₹3 ಲಕ್ಷ ಹಾಗೂ ಇತರೆ ವಸ್ತುಗಳನ್ನು ಪ್ರಕರಣದ ತನಿಖಾ ತಂಡಕ್ಕೆ ತಂದುಕೊಟ್ಟಿದ್ದಾರೆ.

'ಕೊಲೆ ಪ್ರಕರಣ ಸಂಬಂಧ ಮೊದಲ ಬಾರಿಗೆ ಹೇಳಿಕೆ ನೀಡಿದ್ದ ಆರೋಪಿ ದರ್ಶನ್, 'ನಾನು ಕೊಲೆ ಮಾಡಿಲ್ಲ' ಎಂದು ವಾದಿಸಿದ್ದರು. ಸಾಕ್ಷ್ಯಗಳನ್ನು ಎದುರಿಟ್ಟು ವಿಚಾರಿಸಿದಾಗ ತಪ್ಪೊಪ್ಪಿಕೊಂಡು ಮರು ಹೇಳಿಕೆ ನೀಡಿದ್ದಾರೆ.

'ಕೊಲೆ ಪ್ರಕರಣದಲ್ಲಿ ಮುಂದಿನ ದಿನಗಳಲ್ಲಿ ಸಂಕಷ್ಟ ಎದುರಾಗುವ ಮುನ್ಸೂಚನೆ ಇತ್ತು. ಕೊಲೆ ಪ್ರಕರಣವನ್ನು ಮುಚ್ಚಿ ಹಾಕಲು, ಬೇರೆಯವರನ್ನು ಠಾಣೆಗೆ ಶರಣು ಮಾಡಿಸಲು ಹಾಗೂ ಸಾಕ್ಷ್ಯ ನಾಶ ಮಾಡಲು ಹಣದ ಅಗತ್ಯವಿತ್ತು. ಸ್ನೇಹಿತ ಮೋಹನ್ ರಾಜ್ ಕಡೆಯಿಂದ ₹40 ಲಕ್ಷ ಪಡೆದುಕೊಂಡು ಮನೆಯಲ್ಲಿಟ್ಟುಕೊಂಡಿದ್ದೆ' ಎಂಬುದಾಗಿ ದರ್ಶನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದರ್ಶನ್ ಹೇಳಿಕೆ ಆಧರಿಸಿ ಮೋಹನ್‌ರಾಜ್ ಅವರನ್ನು ವಿಚಾರಿಸಿದಾಗ, ಸಾಲ ಕೊಟ್ಟಿದ್ದನ್ನು ಒಪ್ಪಿಕೊಂಡಿದ್ದಾರೆ. ಇದೇ ಮಾಹಿತಿ ಆಧರಿಸಿ, ರಾಜರಾಜೇಶ್ವರಿನಗರದಲ್ಲಿರುವ ದರ್ಶನ್ ಮನೆಯಲ್ಲಿ ಜೂನ್ 19ರಂದು ಶೋಧ ನಡೆಸಲಾಗಿತ್ತು. ಇದೇ ಸಂದರ್ಭದಲ್ಲಿ ₹37.40 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿವೆ.



ಕೊಲೆ ಆರೋಪಿ ದರ್ಶನ್ ಅವರನ್ನು ನ್ಯಾಯಾಲಯದಿಂದ ಕರೆದೊಯ್ಯುತ್ತಿರುವ ಪೊಲೀಸರು

'ಕೊಲೆ ನಡೆದ ಮರುದಿನ ಮೈಸೂರಿನ ರಾಡಿಸನ್ ಹೋಟೆಲ್‌ನಲ್ಲಿದ್ದ ದರ್ಶನ್, ತನ್ನ ಬಳಿಯ ₹3 ಲಕ್ಷ ಹಾಗೂ ಇತರೆ ವಸ್ತುಗಳನ್ನು ಪತ್ನಿ ವಿಜಯಲಕ್ಷ್ಮಿಗೆ ನೀಡುವಂತೆ ಮೇಕಪ್‌ಮ್ಯಾನ್ ಕೈಗೆ ಕೊಟ್ಟಿದ್ದರು. ಆತ, ವಿಜಯಲಕ್ಷ್ಮಿ ಅವರಿಗೆ ನಗದು ತಲುಪಿಸಿದ್ದ. ಇದೇ ಮಾಹಿತಿ ಆಧರಿಸಿ ವಿಜಯಲಕ್ಷ್ಮಿ ಅವರಿಗೆ ನೋಟಿಸ್ ನೀಡಲಾಗಿತ್ತು. ಠಾಣೆಗೆ ಬಂದಿದ್ದ ಅವರು, ₹3 ಲಕ್ಷ ನಗದು ಹಾಗೂ ಉಳಿದ ವಸ್ತುಗಳನ್ನು ತನಿಖಾ ತಂಡಕ್ಕೆ ಒಪ್ಪಿಸಿದ್ದಾರೆ. ಪಂಚರ ಸಮ್ಮುಖದಲ್ಲಿ ಅವುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿದ್ಯುತ್ ಶಾಕ್ ಉಪಕರಣ ಜಪ್ತಿ: 'ರೇಣುಕಸ್ವಾಮಿ ಅವರಿಗೆ ವಿದ್ಯುತ್ ಶಾಕ್ ಕೊಟ್ಟು ಚಿತ್ರಹಿಂಸೆ ನೀಡಿ ಅಮಾನುಷ ಹಾಗೂ ಅಮಾನವೀಯವಾಗಿ ಕೊಲೆ ಮಾಡಲಾಗಿದೆ. ವಿದ್ಯುತ್ ಶಾಕ್ ನೀಡಲು ಬಳಸಿದ್ದ 'ಎಲೆಕ್ಟ್ರಿಕ್ ಶಾಕ್ ಟಾರ್ಚ್' ಆರೋಪಿ ಧನರಾಜ್ ಅಲಿಯಾಸ್ ರಾಜನ ಬಳಿ ಇತ್ತು. ಆತನ ಮನೆಯಲ್ಲಿ ಶೋಧ ನಡೆಸಿ, ಉಪಕರಣ, ಮೊಬೈಲ್, ಬಟ್ಟೆಗಳು, ಚಪ್ಪಲಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೃತನ ಚಿನ್ನದ ಸರ, ಉಂಗುರ ಜಪ್ತಿ: ರೇಣುಕಸ್ವಾಮಿ ಅವರ ಚಿನ್ನದ ಸರ ಹಾಗೂ ಉಂಗುರವನ್ನು ಆರೋಪಿಗಳು ಸುಲಿಗೆ ಮಾಡಿದ್ದರು. ಆರೋಪಿ ರಾಘವೇಂದ್ರ ಮನೆಯಲ್ಲಿ ಸರ ಹಾಗೂ ಉಂಗುರ ಜಪ್ತಿ ಮಾಡಲಾಗಿದೆ. ಜೊತೆಗೆ, ದರ್ಶನ್ ನೀಡಿದ್ದ ಎನ್ನಲಾದ ₹4,50,500 ನಗದು, ಇಟಿಯೋಸ್ ಕಾರು (ಕೆಎ 11 ಬಿ 7939) ಸಹ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ದರ್ಶನ್ ಮನೆ ಎದುರು ಹಾಗೂ ಕೃತ್ಯ ನಡೆದ ಶೆಡ್‌ನಲ್ಲಿ ನಿಲ್ಲಿಸಿದ್ದ ಆರೋಪಿಗಳ ಹೋಂಡಾ ಆಕ್ಟಿವಾ, ಹೋಂಡಾ ಶೈನ್, ಟಿವಿಎಸ್ ಜ್ಯೂಪಿಟರ್ ಹಾಗೂ ಹೋಂಡಾ ಡಿಯೊ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇಬ್ಬರು ಆರೋಪಿಗಳು ಕೃತ್ಯ ಬಳಿಕ ರಾಜರಾಜೇಶ್ವರಿನಗರದ ಐಡಿಯಲ್ ಹೋಮ್‌ನ ರಿಲಯನ್ಸ್ ಟ್ರೆಂಡ್ಸ್ ಮಳಿಗೆಯಲ್ಲಿ ಹೊಸ ಬಟ್ಟೆ ಖರೀದಿಸಿದ್ದರು. ಇದಕ್ಕೆ ಸಂಬಂಧಪಟ್ಟ ಬಿಲ್ ಹಾಗೂ ಮಳಿಗೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಲಾಗಿದೆ. ಪಟ್ಟಣಗೆರೆ ಕೆ. ಜಯಣ್ಣ ಅವರ ಶೆಡ್‌ನಲ್ಲಿ ಆರೋಪಿ ಕಾರ್ತಿಕ್ ಅಲಿಯಾಸ್ ಕಪ್ಪೆ ತನ್ನ ಮೊಬೈಲ್ ಬಚ್ಚಿಟ್ಟಿದ್ದರು. ಅದನ್ನೂ ಪತ್ತೆ ಮಾಡಿ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಎರಡು ಮೊಬೈಲ್‌ಗೆ ಹುಡುಕಾಟ: 'ರೇಣುಕಸ್ವಾಮಿ ಹಾಗೂ ಆರೋಪಿಯೊಬ್ಬನ ಮೊಬೈಲ್ ಮೋರಿಗೆ ಎಸೆಯಲಾಗಿತ್ತು. ಬಿಬಿಎಂಪಿ ಸಿಬ್ಬಂದಿ ಸಹಾಯದಿಂದ ಮೋರಿಯಲ್ಲಿ ಹುಡುಕಾಟ ನಡೆಸಲಾಗುತ್ತಿದ್ದು, ಸದ್ಯಕ್ಕೆ ಮೊಬೈಲ್‌ಗಳು ಸಿಕ್ಕಿಲ್ಲ' ಎಂದು ಮೂಲಗಳು ತಿಳಿಸಿವೆ. 'ಆರೋಪಿಗಳನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಲಾಗಿದ್ದು, ವೈದ್ಯರು ಕೂದಲಿನ ಮಾದರಿ ಸಂಗ್ರಹಿಸಿದ್ದಾರೆ. ಜೊತೆಗೆ, ಹಲವರ ರಕ್ತದ ಮಾದರಿಯನ್ನೂ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಕೊಲೆ ಸಂಚು ಮಾಡಿದ್ದು ಪವಿತ್ರಾ'

'ಬಂಧಿತ ಆರೋಪಿ ಪವಿತ್ರಾ ಗೌಡ ಅವರೇ, ರೇಣುಕಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಸಂಚುಕೋರರು. ನಟ ದರ್ಶನ್ ಹಾಗೂ ಇತರೆ ಆರೋಪಿಗಳಿಗೆ ಪ್ರಚೋದನೆ ನೀಡಿ ಕೊಲೆ ಮಾಡಿಸಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿ ಮೊಬೈಲ್‌ನಲ್ಲಿ ಮಹತ್ವದ ಪುರಾವೆ: 'ಕೊಲೆ ಪ್ರಕರಣದ ಆರೋಪಿಯೊಬ್ಬನ ಮೊಬೈಲ್‌ನಲ್ಲಿ ಮಹತ್ವದ ಪುರಾವೆ ಇದೆ. ಅದನ್ನು ಆರೋಪಿಗೆ ಕಳುಹಿಸಿದವರು ಯಾರು ಎಂಬ ಬಗ್ಗೆ ಮಾಹಿತಿ ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಕ್ಷ್ಯ ಹೇಳದಂತೆ ಬೆದರಿಕೆ'

'ಪಟ್ಟಣಗೆರೆ ಶೆಡ್‌ನಲ್ಲಿದ್ದ ಹಲವು ಕೆಲಸಗಾರರು, ಪ್ರಕರಣದ ಪ್ರಮುಖ ಸಾಕ್ಷಿಗಳು. ಕೆಲಸಗಾರರಿಗೆ ಹಣದ ಆಮಿಷವೊಡ್ಡಿರುವ ಕೆಲವರು, 'ಸಾಕ್ಷ್ಯ ಹೇಳಿದರೆ ಕೊಲೆ ಮಾಡುತ್ತೇವೆ' ಎಂಬುದಾಗಿ ಬೆದರಿಕೆಯೊಡ್ಡುತ್ತಿರುವ ಮಾಹಿತಿ ಲಭ್ಯವಾಗಿದೆ. ಬೆದರಿಕೆಯೊಡ್ಡಿದವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಶೆಡ್ ಮಾಲೀಕ ಜಯಣ್ಣ ಅವರ ವಿಚಾರಣೆ ನಡೆಸಲಾಗಿತ್ತು. ಆರೋಪಿ ದೀಪಕ್, ಶೆಡ್ ನಿರ್ವಹಣೆ ಮಾಡುತ್ತಿದ್ದನೆಂದು ಅವರು ಹೇಳಿಕೆ ನೀಡಿದ್ದಾರೆ. ಕೆಲಸಗಾರರಿಗೆ ಬೆದರಿಕೆ ಇರುವ ಬಗ್ಗೆಯೂ ಮಾಹಿತಿ ನೀಡಿದ್ದಾರೆ' ಎಂದರು.

'ದರ್ಶನ್ ನೀಡಿದ್ದರು ಎನ್ನಲಾದ ₹5 ಲಕ್ಷವನ್ನು ಕೆಲ ಆರೋಪಿಗಳು, ಸ್ನೇಹಿತರಿಗೆ ನೀಡಿದ್ದಾರೆ. ಅವುಗಳನ್ನು ಜಪ್ತಿ ಮಾಡಬೇಕಿದೆ' ಎಂದು ಪೊಲೀಸರು ತಿಳಿಸಿದರು.

'ಅಪರಾಧ ಹಿನ್ನೆಲೆಯುಳ್ಳ ದರ್ಶನ್ ಅಭಿಮಾನಿಗಳ ಬಳಕೆ'

'ಆರೋಪಿ ನಟ ದರ್ಶನ್, ಅಪರಾಧ ಹಿನ್ನೆಲೆಯುಳ್ಳವರು. ಅವರ ವಿರುದ್ಧ ವಿಜಯನಗರ (2021), ಟಿ. ನರಸೀಪುರ (2022) ಹಾಗೂ ರಾಜರಾಜೇಶ್ವರಿನಗರ (2024) ಠಾಣೆಯಲ್ಲಿ ಈ ಹಿಂದೆ ಮೂರು ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದ್ದಾರೆ.

'ತನ್ನ ಹಣ ಹಾಗೂ ಅಭಿಮಾನಿ ಬಳಗವನ್ನು ಬಳಸಿಕೊಂಡು ಕೃತ್ಯದಲ್ಲಿ ಭಾಗಿಯಾಗಿ ಹಾಗೂ ಅಭಿಮಾನಿಗಳನ್ನು ಭಾಗಿಯಾಗಿಸಿ ಕೃತ್ಯ ಎಸಗಿದ್ದಾರೆ. ರೇಣುಕಸ್ವಾಮಿ ಅವರನ್ನು ಅಮಾನುಷವಾಗಿ ಹಾಗೂ ಮಾರಣಾಂತಿಕವಾಗಿ ಹಲ್ಲೆ ಮಾಡಿ ಕೊಲೆ ಮಾಡಿರುವುದು ಭೌತಿಕ, ತಾಂತ್ರಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಗಳಿಂದ ಗೊತ್ತಾಗಿದೆ. ಇದೊಂದು ಜೀವಾವಧಿ ಶಿಕ್ಷೆಗೆ ಅರ್ಹವಾದ ಪ್ರಕರಣ. ಆರೋಪಿಗಳು, ಪ್ರಭಾವಿಗಳು. ಜಾಮೀನು ನೀಡಿದರೆ, ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ, ಜಾಮೀನು ನೀಡಬಾರದು' ಎಂದು ಪೊಲೀಸರು ನ್ಯಾಯಾಲಯವನ್ನು ಕೋರಿದ್ದಾರೆ.

'ಮೈಸೂರಿನ ರಾಡಿಸನ್ ಹೋಟೆಲ್‌ನಲ್ಲಿದ್ದ ದರ್ಶನ್, ಕೊಲೆ ಪ್ರಕರಣದಿಂದ ಬಚಾವಾಗಲು ಅಲ್ಲಿಂದಲೇ ಅವರಿಗೆ ಕರೆ ಮಾಡಿ ಸಂಚು ಮಾಡಿದ್ದರು. ಆರೋಪಿಗಳನ್ನು ಶರಣು ಮಾಡಿಸಲು ಪ್ರಯತ್ನಿಸುತ್ತಿದ್ದರು' ಎಂದು ತಿಳಿಸಿದ್ದಾರೆ.

ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ ಖಂಡಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಗುರುವಾರ ಸೈಕಲ್ ಜಾಥಾ ನಡೆಸಿದರು –ಪ್ರಜಾವಾಣಿ ಚಿತ್ರ.

ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ: ಬಿಜೆಪಿ ಸೈಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆಯ ಆದೇಶ ಹಿಂಪಡೆಯಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು. ಪಕ್ಷದ ಕಚೇರಿ ಜಗನ್ನಾಥ ಭವನದಿಂದ ವಿಧಾನಸೌಧದ ವರೆಗೆ ಹಮ್ಮಿಕೊಂಡಿದ್ದ ಸೈಕಲ್ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜನರಿಗೆ ಹೊರೆಯಾಗುವ ಬೆಲೆ ಏರಿಕೆ ಈ ನಿರ್ಧಾರವನ್ನು ಸರ್ಕಾರ ತಕ್ಷಣ ಕೈಬಿಡಬೇಕು. ಇಲ್ಲದಿದ್ದರೆ ಬಿಜೆಪಿ ರಾಜ್ಯದ ಎಲ್ಲೆಡೆ ಹೋರಾಟ ಮುಂದುವರಿಸಲಿದೆ. ಮುಖ್ಯಮಂತ್ರಿ ತಮ್ಮ ನಿರ್ಧಾರದಿಂದ ಹಿಂದೆ ಸರಿಯುವವರೆಗೆ ಈ ಹೋರಾಟ ನಿಲ್ಲುವುದಿಲ್ಲ ಎಂದರು.

ಬರಗಾಲದ ಕಾರಣ ಆರು ತಿಂಗಳಿನಿಂದ ರೈತರು ಪರದಾಡುತ್ತಿದ್ದಾರೆ. ಇಂತಹ ಸಮಯದಲ್ಲಿ ತೈಲ ಬೆಲೆ ಏರಿಕೆಯ ಬರೆ ಎಳೆದಿದ್ದಾರೆ. ಅತ್ತ ಸಿದ್ದರಾಮಯ್ಯ ಸಂಪುಟದ ಸಚಿವರು ಬಸ್, ನೀರಿನ ದರ ಹೆಚ್ಚಳದ ಹೇಳಿಕೆ ನೀಡುತ್ತಿದ್ದಾರೆ ಎಂದರು.

'ಇಳಿಸಿ ಇಳಿಸಿ ತೈಲ ಬೆಲೆ ಇಳಿಸಿ, ತೊಲಗಿಸಿ ತೊಲಗಿಸಿ ರಾಜ್ಯ ಸರ್ಕಾರ ತೊಲಗಿಸಿ, ಬೇಕೇ ಬೇಕು ನ್ಯಾಯ ಬೇಕು, ಬೆಲೆ ಏರಿಕೆ ಮಾಡಿದ ರಾಜ್ಯ ಸರ್ಕಾರಕ್ಕೆ ಧಿಕ್ಕಾರ' ಮೊದಲಾದ ಘೋಷಣೆಗಳು ಮೊಳಗಿದವು. ಜಾಥಾ ಸ್ವಲ್ಪ ದೂರ ಸಾಗುತ್ತಿದ್ದಂತೆ ತಡೆದ ಪೊಲೀಸರು, ಹಲವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು. ಶಾಸಕ ಡಾ. ಸಿ.ಎಸ್.ಅಶ್ವತ್ಥನಾರಾಯಣ, ವಿಧಾನ ಪರಿಷತ್ ಸದಸ್ಯರಾದ ಸಿ.ಟಿ.ರವಿ, ಛಲವಾದಿ ನಾರಾಯಣಸ್ವಾಮಿ ಭಾಗವಹಿಸಿದ್ದರು.

'ಗುಡಿಗೆ ಹೋಗಲಷ್ಟೇ ಸದ್ಯ ತೆರಿಗೆಯಿಲ್ಲ!' (ಕಲಬುರಗಿ ವರದಿ): 'ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತಾವಧಿ ಬೆಲೆಏರಿಕೆಯ ಯುಗ. ಪೆಟ್ರೋಲ್–ಡೀಸೆಲ್ ಸೇರಿದಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಎಲ್ಲದರ ತೆರಿಗೆ ಹೆಚ್ಚಿಸಿದ್ದು, ಸದ್ಯ ದೇವಸ್ಥಾನ–ದೇವರುಗಳಷ್ಟೇ ಉಳಿದಿವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವ್ಯಂಗ್ಯವಾಡಿದರು. ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಗುರುವಾರ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ರೇಣುಕಸ್ವಾಮಿ ಹತ್ಯೆ ಪ್ರಕರಣ: ದರ್ಶನ್ ಸೇರಿ ನಾಲ್ವರು ಪುನಃ ಕಸ್ಟಡಿಗೆ

ಒಂದನೇ ಪುಟದಿಂದ...

'ಪೊಲೀಸರು ಇಡೀ ತನಿಖೆಯ ಇಂಚಿಂಚೂ ವಿವರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತಿದ್ದಾರೆ. ಇದರಿಂದಾಗಿ ಮಾಧ್ಯಮಗಳು ಪರ್ಯಾಯ ವಿಚಾರಣೆ ನಡೆಸುತ್ತಿವೆ. ಸಾಕ್ಷಿಗಳು ಬಾಯಿ ಬಿಡುತ್ತಿಲ್ಲ ಎಂದು ಆರೋಪಿಸುವುದು ಸಲ್ಲದು. ಯಾಕೆಂದರೆ ಮೌನವಾಗಿರಲೂ ಅವರಿಗೆ ಹಕ್ಕಿದೆ. ಕೊಲೆಗಾರ ಯಾರು ಎಂಬುದನ್ನು ಕೋರ್ಟ್ ತೀರ್ಮಾನಿಸಬೇಕೇ ಹೊರತು ಮಾಧ್ಯಮಗಳ ವಿಚಾರಣೆಯಿಂದ ಅಲ್ಲ. ಕೂಡಲೇ, ಈ ಪ್ರಕರಣದಲ್ಲಿ ಮಾಧ್ಯಮಗಳನ್ನು ನಿಯಂತ್ರಿಸಲು ನಿರ್ದೇಶಿಸಬೇಕು' ಎಂದು ಕೋರಿದರು.

ಈ ಮಾತುಗಳನ್ನು ಬಲವಾಗಿ ಅಲ್ಲಗಳೆದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಇದು ಕೋರ್ಟ್. ಇಲ್ಲಿ ಆರೋಪಿಗಳ ಪರ ವಕೀಲರು ರಾಜಕೀಯ ಭಾಷಣ ಮಾಡಬಾರದು. ಕಾನೂನಿನ ಪ್ರಕಾರ ಏನಿದೆಯೋ ಅದನ್ನು ಹೇಳಬೇಕು. ಆರೋಪಿಗಳು ಬಾಯಿ ಬಿಡುತ್ತಿಲ್ಲ ಎಂಬ ಕಾರಣಕ್ಕಾಗಿಯೇ ನಾಲ್ವರು ಆರೋಪಿಗಳನ್ನು ಪುನಃ ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಮನವಿ ಮಾಡಲಾಗುತ್ತಿದೆ' ಎಂದು ಪ್ರತಿಪಾದಿಸಿದರು.

ಸುದೀರ್ಘ ವಾದ–ಪ್ರತಿವಾದದ ನಂತರ ನ್ಯಾಯಾಧೀಶ ವಿಶ್ವನಾಥ್ ಅವರು ಒಂದು ಹಂತದಲ್ಲಿ ಎಲ್ಲ ಆರೋಪಿಗಳನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲು ಮುಂದಾಗುತ್ತಿದ್ದಂತೆಯೇ ಪ್ರಸನ್ನ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ಇನ್ನೂ ಐದು ಗಂಟೆ ಆಗಿಲ್ಲ. ಬೇಕಿದ್ದರೆ ಮೊದಲಿನ ಮತ್ತು ಎರಡನೆಯ ರಿಮಾಂಡ್ ಅರ್ಜಿಯನ್ನು 5 ಗಂಟೆಯ ಒಳಗೆ ಎಲ್ಲ ಆರೋಪಿಗಳಿಗೂ ಸರ್ವ್ ಮಾಡಲಾಗುವುದು' ಎಂದರು.

ಈ ಮಾತಿಗೆ ದಿವಾಕರ್ ಸೇರಿದಂತೆ ಇತರೆ ಆರೋಪಿಗಳ ವಕೀಲರು ಪ್ರಸನ್ನ ಕುಮಾರ್ ಮೇಲೆ ಮುಗಿಬಿದ್ದು ವಾಗ್ದಾಳಿ ನಡೆಸಿದರು. ಇದಕ್ಕೆ ಪ್ರತಿಯಾಗಿ ಪ್ರಸನ್ನ ಕುಮಾರ್ ಕೂಡಾ ಏರಿದ ಧ್ವನಿಯಲ್ಲಿ ಸುಪ್ರೀಂ ಕೋರ್ಟ್‌ನ ಪೂರ್ವನಿದರ್ಶನಗಳನ್ನು ಪ್ರಸ್ತುತಪಡಿಸುವ ಮೂಲಕ ನಾಲ್ವರು ಆರೋಪಿಗಳನ್ನು ಪುನಃ ಪೊಲೀಸ್ ಕಸ್ಟಡಿಗೆ ಪಡೆಯುವಲ್ಲಿ ಯಶಸ್ವಿಯಾದರು.

'ಇದೇ 22ರ ಸಂಜೆ ಐದು ಗಂಟೆಯ ಒಳಗೆ ನಾಲ್ವರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಠಾಣಾಧಿಕಾರಿಯು ಆರೋಪಿಗಳನ್ನು ಸಿಸಿಟಿವಿ ಕ್ಯಾಮೆರಾಗಳ ನಿಗಾದಲ್ಲೇ ವಿಚಾರಣೆ ನಡೆಸಬೇಕು. ಆರೋಪಿಗಳ ಪರ ಯಾವ ವಕೀಲರು ವಕಾಲತ್ತಿಗೆ ಸಹಿ ಹಾಕಿದ್ದಾರೆಯೋ ಅವರನ್ನು ಭೇಟಿ ಮಾಡಲು ಪೊಲೀಸರು ಮುಕ್ತ ಅವಕಾಶ ಕಲ್ಪಿಸಬೇಕು. ಜೈಲು ಅಧಿಕಾರಿಗಳು ಅಗತ್ಯವಿದ್ದರೆ ಆರೋಪಿಗಳಿಗೆ ಅಗತ್ಯ ವೈದ್ಯಕೀಯ ನೆರವು ಕಲ್ಪಿಸಬೇಕು' ಎಂದು ಆದೇಶಿಸಿದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು.

ಎಸ್‌ಪಿಪಿಗೆ ದಾರಿ ಬಿಡಿ...!: ಎಸಿಎಂಎಂ ಕೋರ್ಟ್ ಕಟ್ಟಡದ ಎರಡನೇ ಮಹಡಿಯಲ್ಲಿರುವ 24ನೇ ಕೋರ್ಟ್ ಹಾಲ್ ಮತ್ತು ಕೆಳ ಆವರಣದ ಎಲ್ಲ ಪ್ರವೇಶ ದ್ವಾರಗಳಲ್ಲಿ ಮಧ್ಯಾಹ್ನ 2 ಗಂಟೆಯಿಂದಲೇ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮಧ್ಯಾಹ್ನ 3.30ಕ್ಕೆ 'ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯ ಗುನ್ನೆ' ಎಂದು ಪ್ರಕರಣವನ್ನು ಕೂಗಿದ 20 ನಿಮಿಷಗಳ ನಂತರ ವಿಶೇಷ ಪ್ರಾಸಿಕ್ಯೂಟರ್ ಹಾಗೂ ಪೊಲೀಸರು ಕೋರ್ಟ್ ಪ್ರವೇಶಿಸಲು ಸಾಧ್ಯವಾಯಿತು. ಕಿಕ್ಕಿರಿದು ತುಂಬಿದ್ದ ಕಾರಿಡಾರ್ ಹಾಗೂ ಕೋರ್ಟ್ ಹಾಲ್ ಒಳಗೆ ಕಾಲಿಡಲೂ ಸಾಧ್ಯವಿಲ್ಲದಷ್ಟು ವಕೀಲರು, ದರ್ಶನ್ ಮತ್ತು ಪ್ರಕರಣದ ಕಲಾಪ ವೀಕ್ಷಿಸಲು ತುದಿಗಾಲಲ್ಲಿ ನಿಂತಿದ್ದರು.

ಒಂದು ಹಂತದಲ್ಲಿ ನ್ಯಾಯಾಧೀಶ ವಿಶ್ವನಾಥ್ ಸಿ.ಗೌಡರ್ ಅವರು, 'ಎಸ್‌ಪಿಪಿ ಬರಲು ದಾರಿ ಬಿಡಿ, ನೀವು ಹೀಗೆಯೇ ಮಾಡಿದರೆ ಪ್ರಕರಣವನ್ನು ಹೊರತುಪಡಿಸಿದ ಇತರ ಎಲ್ಲರನ್ನೂ ಇಲ್ಲಿಂದ ಹೊರಗೆ ಹೋಗಲು ಆದೇಶಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು. ಕಡೆಗೆ 20 ನಿಮಿಷಗಳ ನಂತರ ಪಿ.ಪ್ರಸನ್ನ ಕುಮಾರ್ ಮತ್ತು ಅವರ ಸಹಾಯಕ ವಕೀಲ ಸಿ.ಸಚಿನ್ ಕೋರ್ಟ್ ಒಳಗೆ ಪ್ರವೇಶಿಸಲು ಸಾಧ್ಯವಾಯಿತು.

ಆರೋಪಿಗಳಿಗೆ ಅಗತ್ಯ ಟ್ರೀಟ್‌ಮೆಂಟ್ ಕೊಡಿ..

ಒಂದನೇ ಪುಟದಿಂದ...

'ಜೈಲಿನ ಅಧಿಕಾರಿಗಳು ಆರೋಪಿಗಳಿಗೆ ಅಗತ್ಯ ಟ್ರೀಟ್‌ಮೆಂಟ್ ಕೊಡಬೇಕು' ಎಂದು ನ್ಯಾಯಾಧೀಶರು ಆದೇಶಿಸುತ್ತಿದ್ದಂತೆಯೇ, ಆರೋಪಿ ಪರ ವಕೀಲರು, ಸ್ವಾಮಿ, 'ತಾವು ಈ ರೀತಿ ಆದೇಶಿಸಿದರೆ ಅಲ್ಲಿ ಅವರಿಗೆ ಬೇರೆಯದೇ ಆದ ಟ್ರೀಟ್‌ಮೆಂಟ್ ಕೊಡುತ್ತಾರೆ...' ಎಂದು ಆಕ್ಷೇಪಿಸಿದರು. ಇದಕ್ಕೆ ನ್ಯಾಯಾಧೀಶರು, 'ಹಾಗಾದರೆ ಪೊಲೀಸರು ಯಾವ ರೀತಿಯ ಟ್ರೀಟ್‌ಮೆಂಟ್ ಕೊಡುತ್ತಾರೆ ಎಂಬುದನ್ನು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಲಿ ಬಿಡಿ' ಎಂದರು. 'ಸ್ವಾಮಿ, ಆ ರೀತಿ ಅಲ್ಲ. ಪೊಲೀಸರು ಅವರಿಗೆ ಮೂರನೇ ದರ್ಜೆಯ ಟ್ರೀಟ್‌ಮೆಂಟ್ ಕೊಡುತ್ತಾರೆ' ಎಂದು ವಕೀಲರು ಆರೋಪಿಸಿದರು.

ಹೆಣ್ಣು ಭ್ರೂಣಹತ್ಯೆ ವಿರುದ್ಧ ಆರೋಗ್ಯ ಇಲಾಖೆ- ಔಷಧ ನಿಯಂತ್ರಣ ಇಲಾಖೆ ಜಂಟಿ ಕ್ರಮ

ಗರ್ಭಪಾತ ಕಿಟ್ ಮಾರಾಟ ತಡೆಗೆ ತಂಡ

• ಎಂ.ಎನ್.ಯೋಗೇಶ್

ಪ್ರಜಾವಾಣಿ ವಿಶೇಷ

ಚಿತ್ರದುರ್ಗ: ಹೆಣ್ಣು ಭ್ರೂಣ ಹತ್ಯೆ ಹೆಚ್ಚಳಕ್ಕೆ ಕಾರಣವಾಗಿರುವ ಎಂಟಿಪಿ ಕಿಟ್‌ಗಳ ಅವೈಜ್ಞಾನಿಕ ಮಾರಾಟ ತಡೆಯಲು ಆರೋಗ್ಯ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆ ಜಂಟಿ ಕಾರ್ಯಾಚರಣೆಗೆ ಮುಂದಾಗಿದ್ದು ಔಷಧ ಮಾರಾಟ, ದಾಸ್ತಾನು, ವಿತರಣೆ ತಪಾಸಣೆಗೆ 'ಜಿಲ್ಲಾ ತಂಡ' ರಚಿಸುವಂತೆ ಆದೇಶಿಸಿ ಸುತ್ತೋಲೆ ಹೊರಡಿಸಿವೆ.

ಕಾಳಸಂತೆಯಲ್ಲಿ, ಔಷಧಿ ಅಂಗಡಿಗಳಲ್ಲಿ ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ–ಗರ್ಭಪಾತಕ್ಕೆ ಬಳಸುವ ಮಾತ್ರೆಗಳು) ಕಿಟ್ ಮಾರಾಟವಾಗುತ್ತಿರುವ ಮಾಹಿತಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತಾಲಯ ಹಾಗೂ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಜೂನ್ 10ರಂದು ಸಭೆ ನಡೆಸಿದ್ದರು. ಅದರನ್ವಯ ಎಲ್ಲಾ ಜಿಲ್ಲೆಗಳಲ್ಲಿ ಎರಡೂ ಇಲಾಖೆ ಅಧಿಕಾರಿಗಳನ್ನೊಳಗೊಂಡ ತಂಡ ರಚಿಸುವಂತೆ ಆದೇಶಿಸಿ ಜೂನ್ 19ರಂದು ಸುತ್ತೋಲೆ ಹೊರಡಿಸಲಾಗಿದೆ.

ಉಪ ಔಷಧ ನಿಯಂತ್ರಣಾಧಿಕಾರಿ (ಪ್ರಾದೇಶಿಕ ಕಚೇರಿ) ನೇತೃತ್ವದಲ್ಲಿ ಸಮಿತಿ ರಚಿಸಬೇಕು. ಸಮಿತಿಯಲ್ಲಿ ಆಯಾ ಜಿಲ್ಲೆಗಳ ಸಹಾಯಕ ಔಷಧ ನಿಯಂತ್ರಣಾಧಿಕಾರಿ, ತಾಲ್ಲೂಕು ವೈದ್ಯಾಧಿಕಾರಿ ಹಾಗೂ ಆಯಾ ವ್ಯಾಪ್ತಿಯ ವೈದ್ಯಾಧಿಕಾರಿ ಸದಸ್ಯರಾಗಿರಬೇಕು. ಸಮಿತಿಯು ಜಿಲ್ಲೆಯ ಸಗಟು ಹಾಗೂ ಚಿಲ್ಲರೆ ಔಷಧಿ ಅಂಗಡಿಯಲ್ಲಿ ಮಾರಾಟವಾಗುವ ಎಂಟಿಪಿ ಕಿಟ್ ಮೇಲೆ ನಿಗಾ ವಹಿಸಬೇಕು ಎಂದು ಸೂಚಿಸಲಾಗಿದೆ.

'ಎಂಟಿಪಿ ತಿದ್ದುಪಡಿ ಕಾಯ್ದೆ–1971ರನ್ವಯ ವೈದ್ಯರ ಸಲಹೆ ಇಲ್ಲದೆ ಎಂಟಿಪಿ ಕಿಟ್ ಮಾರಾಟ ಮಾಡುವುದು ಅಪರಾಧ. ಆದರೆ, ರಾಜ್ಯದಾದ್ಯಂತ ಔಷಧಿ ಅಂಗಡಿಗಳಲ್ಲಿ ಮಿತಿ ಮೀರಿದ ಪ್ರಮಾಣದಲ್ಲಿ ಎಂಟಿಪಿ ಕಿಟ್ ಮಾರಾಟವಾಗುತ್ತಿವೆ. ಆರೋಗ್ಯ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಪ್ರತಿ ಔಷಧಿ ಅಂಗಡಿಯನ್ನು ಪರಿಶೀಲಿಸಿದರೆ ಮಾತ್ರ ಎಂಟಿಪಿ ಕಿಟ್ ಮಾರಾಟಕ್ಕೆ ತಡೆಯೊಡ್ಡಲು ಸಾಧ್ಯ ಎಂದು' ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ನೀಡಿರುವ ಮಾರ್ಗಸೂಚಿಯಂತೆ ಗರ್ಭಪಾತದ ವೈದ್ಯಕೀಯ ನಿರ್ವಹಣೆ (ಎಂಎಂಎ–ಮೆಡಿಕಲ್ ಮ್ಯಾನೇಜ್‌ಮೆಂಟ್ ಆಫ್ ಅಬಾರ್ಷನ್) ಕಾರ್ಯವು ನೋಂದಾಯಿತ ವೈದ್ಯರಿಂದ ನೋಂದಾಯಿತ, ಸುರಕ್ಷಿತ ಸ್ಥಳದಲ್ಲಿ ನಡೆಯಬೇಕು. ಆದರೆ 9 ವಾರಗಳ ಗರ್ಭಾವಸ್ಥೆಯಲ್ಲೇ ನೋಂದಾಯಿತರಲ್ಲದ ವೈದ್ಯರು ವೈದ್ಯಕೀಯ ಸಲಹೆ ಇಲ್ಲದಿದ್ದರೂ ಗರ್ಭಪಾತ ನಡೆಸುತ್ತಿದ್ದಾರೆ. ಇದು ತಾಯಂದಿರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿದ್ದು, ಕಡಿವಾಣ ಹಾಕಬೇಕಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಪ್ರತಿ ತಿಂಗಳು 20ರಂದು ವರದಿ: ಆರೋಗ್ಯ ಇಲಾಖೆ ಅಧಿಕಾರಿಗಳು ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಬೇಕು. ಎರಡೂ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಔಷಧಿ ಅಂಗಡಿಗಳನ್ನು ಪರಿಶೀಲಿಸಬೇಕು. ಈ ಕುರಿತ ಸಮಗ್ರ ವರದಿಯನ್ನು ಪ್ರತಿ ತಿಂಗಳು 20ರಂದು ರಾಜ್ಯ ಕುಟುಂಬ ಕಲ್ಯಾಣ ವಿಭಾಗಕ್ಕೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

'ಜಿಲ್ಲಾ ಸಮಿತಿ ರಚನೆ ಸಂಬಂಧ ಸರ್ಕಾರದ ಆದೇಶ ಬಂದಿದೆ. ಈ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಲಾಗುವುದು. ಔಷಧಿ ಅಂಗಡಿಗಳ ಪರಿಶೀಲನೆ ಕುರಿತಂತೆ ಜಿಲ್ಲಾ ತಂಡದ ಸದಸ್ಯರಿಗೆ ತರಬೇತಿ ನೀಡಲಾಗುತ್ತದೆ ಎಂಬ ಮಾಹಿತಿ ಇದೆ' ಎಂದು ಜಿಲ್ಲಾ ಸಹಾಯಕ ಔಷಧ ನಿಯಂತ್ರಣಾಧಿಕಾರಿ ಎಂ.ಎಸ್.ಗೀತಾ ಹೇಳಿದರು.

ಅನಧಿಕೃತ ಗರ್ಭಪಾತಕ್ಕೆ ತಡೆ

'ಹೆಣ್ಣುಭ್ರೂಣಹತ್ಯೆ ಸೇರಿದಂತೆ ಎಲ್ಲಾ ರೀತಿಯ ಅನಧಿಕೃತ ಗರ್ಭಪಾತ ತಡೆಗೆ ಎಂಟಿಪಿ ಕಿಟ್ ಮಾರಾಟದ ಮೇಲೆ ನಿಯಂತ್ರಣ ಹೇರಲು ಕ್ರಮ ಕೈಗೊಳ್ಳಲಾಗುವುದು. ಔಷಧಿ ಮಾರಾಟಗಾರರು ಲೆಕ್ಕವಿಲ್ಲದೇ ಎಂಟಿಪಿ ಕಿಟ್ ಸಂಗ್ರಹಿಸಿ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ. ಮುಂದೆ ಜಿಲ್ಲಾ ತಂಡದ ಮೂಲಕ ಇದಕ್ಕೆ ಅಂತ್ಯ ಹಾಡಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ.ರಂದೀಪ್ 'ಪ್ರಜಾವಾಣಿ'ಗೆ ತಿಳಿಸಿದರು.

ನೀಟ್ ಅಕ್ರಮ, ಎನ್‌ಇಟಿ ರದ್ದತಿ ಕುರಿತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ವ್ಯಂಗ್ಯ

‘ಮಾನಸಿಕವಾಗಿ ಕುಗ್ಗಿದ ಪ್ರಧಾನಿ ಮೋದಿ’

ಪ್ರಜಾವಾಣಿ ವಾರ್ತೆ

ನವದೆಹಲಿ: 'ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು 'ಮಾನಸಿಕವಾಗಿ ಕುಗ್ಗಿದ' ಹಾಗೂ ಮೈತ್ರಿ ಸರ್ಕಾರ ನಡೆಸಲು ಹೆಣಗಾಡುತ್ತಿರುವ ವ್ಯಕ್ತಿ' ಎಂದು ಬಣ್ಣಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ನೀಟ್ ಪರೀಕ್ಷಾ ಅಕ್ರಮ ಹಾಗೂ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ರದ್ದತಿ ಕುರಿತು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅವರೀಗ ಪೂರ್ಣ ಸಮರ್ಥರಲ್ಲ. ಅವರು ಕಾರ್ಯನಿರ್ವಹಿಸಲು ತುಂಬಾ ಕಷ್ಟಪಡುತ್ತಿದ್ದಾರೆ. ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಕುಸಿದಿದ್ದಾರೆ. ಸದ್ಯಕ್ಕೆ ಪ್ರಧಾನಿಯ ಮುಖ್ಯ ಕಾರ್ಯಸೂಚಿ ಸ್ಪೀಕರ್ ಹುದ್ದೆಯನ್ನು ತಮ್ಮ ಪಕ್ಷಕ್ಕೆ ಪಡೆಯುವುದಾಗಿದೆ. ಹಾಗಾಗಿ, ಅವರು ನೀಟ್ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಂಡಿಲ್ಲ. ಅವರ ಮನಸ್ಸೆಲ್ಲ ಸ್ಪೀಕರ್ ಹುದ್ದೆಯತ್ತಲೇ ಕೇಂದ್ರೀಕೃತವಾಗಿದೆ' ಎಂದರು.

'ಶಿಕ್ಷಣ ಸಂಸ್ಥೆಗಳು ಬಿಜೆಪಿ ಹಾಗೂ ಅದರ ಮಾತೃಸಂಸ್ಥೆ ಆರ್‌ಎಸ್‌ಎಸ್‌ನ ಕಬಂಧಬಾಹುವಿನಲ್ಲಿ ಸಿಲುಕಿರುವುದು ಪ್ರಶ್ನೆಪತ್ರಿಕೆ ಸೋರಿಕೆಗೆ ಪ್ರಮುಖ ಕಾರಣವಾಗಿದೆ. ಅರ್ಹತೆ ಆಧಾರದಲ್ಲಿ ಕುಲಪತಿಗಳ ನೇಮಕ ಆಗುತ್ತಿಲ್ಲ. ಸೈದ್ಧಾಂತಿಕ ಹಿನ್ನೆಲೆ ಹೊಂದಿರುವ ಅಸಮರ್ಥ ಕುಲಪತಿಗಳನ್ನು ನೇಮಿಸುವ ಮೂಲಕ ಇಡೀ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ಆರೋಪಿಯಿಂದ ತಪ್ಪೊಪ್ಪಿಗೆ

ಪಟ್ನಾ (ಪಿಟಿಐ): ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಸಿಕಂದರ್ ಪ್ರಸಾದ್ ಯದುವೇಂದು, ಪರೀಕ್ಷೆ ಬರೆಯಲಿದ್ದ ನಾಲ್ವರು ಮಂದಿಗೆ ಪರೀಕ್ಷೆಗೆ ಒಂದು ದಿನ ಮೊದಲು ಪ್ರಶ್ನೆಪತ್ರಿಕೆಗಳನ್ನು ಒದಗಿಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಅಲ್ಲದೆ, ಪ್ರಶ್ನೆಪತ್ರಿಕೆ ಒದಗಿಸಲು ಪ್ರತಿ ವಿದ್ಯಾರ್ಥಿಯಿಂದ ₹40 ಲಕ್ಷ ಕೇಳಿದ್ದಾಗಿಯೂ ಹೇಳಿದ್ದಾನೆ.

ಯದುವೇಂದು ನೀಡಿರುವ ತಪ್ಪೊಪ್ಪಿಗೆ ಹೇಳಿಕೆಯಲ್ಲಿ, ಪ್ರತಿಷ್ಠಿತ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಸೋರಿಕೆಯಲ್ಲಿ ಕುಖ್ಯಾತಿ ಗಳಿಸಿರುವ ನಿತೀಶ್ ಕುಮಾರ್ ಮತ್ತು ಅಮಿತ್ ಆನಂದ್ ಜೊತೆ ತಾನು ಹೊಂದಿರುವ ಸಂಪರ್ಕದ ಬಗ್ಗೆಯೂ ಮಾಹಿತಿ ಇದೆ ಎಂದು ಬಿಹಾರ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ಘಟಕದ ಮೂಲಗಳು ಹೇಳಿವೆ.

ಪ್ರಶ್ನೆಪತ್ರಿಕೆಯನ್ನು ಮೇ 4ರಂದೇ ನೀಡಲು ಪರೀಕ್ಷಾರ್ಥಿಗಳಿಂದ ತಲಾ ₹40 ಲಕ್ಷ ಕೇಳಿದ್ದಾಗಿ ಯದುವೇಂದು ಹೇಳಿದ್ದಾನೆ. ಬಿಹಾರದ ದಾನಪುರ ಪುರಸಭೆಯಲ್ಲಿ ಯದುವೇಂದು ಕಿರಿಯ ಎಂಜಿನಿಯರ್ ಆಗಿದ್ದಾನೆ.

'ನಿತೀಶ್ ಮತ್ತು ಅಮಿತ್ ಅವರನ್ನು ಸಂಪರ್ಕಿಸಿ ನಾನು, ಆಯುಷ್ ಕುಮಾರ್, ಅನುರಾಗ್ ಯಾದವ್, ಅಭಿಷೇಕ್ ಕುಮಾರ್ ಮತ್ತು ಶಿವನಂದನ್ ಕುಮಾರ್ ಎಂಬ ನಾಲ್ಕು ಪರೀಕ್ಷಾರ್ಥಿಗಳ ಪಟ್ಟಾರ್ ಎಂದು ತಿಳಿಸಿದ್ದೆ' ಎಂದಿದ್ದಾನೆ.

ನಿತೀಶ್ ಮತ್ತು ಅಮಿತ್ ಅವರು ಪ್ರಶ್ನೆಪತ್ರಿಕೆ ಒದಗಿಸಲು ಪ್ರತಿ ಪರೀಕ್ಷಾರ್ಥಿಗೆ ₹32 ಲಕ್ಷ ದರ ನಿಗದಿ ಮಾಡಿದ್ದರು. ಈ ನಾಲ್ಕು ಮಂದಿಯನ್ನು ಮೇ 4ರಂದು ಅತಿಥಿ ಗೃಹವೊಂದಕ್ಕೆ ಕರೆಸಿ, ಸೋರಿಕೆಯಾದ ಪ್ರಶ್ನೆಪತ್ರಿಕೆಯನ್ನು ಬಳಸಿ ಪರೀಕ್ಷೆಗೆ ಸಿದ್ಧತೆ ನಡೆಸಲು ನೆರವು ಒದಗಿಸಲಾಯಿತು ಎಂದು ಹೇಳಿದ್ದಾನೆ.

ಮೇ 5ರಂದು ನಡೆದ ಪರೀಕ್ಷೆಯಲ್ಲಿ ಅದೇ ಪ್ರಶ್ನೆಗಳು ಇದ್ದವು ಎಂಬುದನ್ನು ಈ ಪರೀಕ್ಷಾರ್ಥಿಗಳು ಒಪ್ಪಿಕೊಂಡಿದ್ದಾರೆ. ಈ ನಾಲ್ಕು ಮಂದಿ ಪರೀಕ್ಷಾರ್ಥಿಗಳ ಪೈಕಿ ಅನುರಾಗ್ ಯಾದವ್ ರಾಜಸ್ಥಾನದ ಕೋಟಾದಲ್ಲಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದ.

ಅಂಕಿ ಅಂಶಗಳು

11.21 ಲಕ್ಷ ಪರೀಕ್ಷೆಗೆ ಹೆಸರು ನೋಂದಾಯಿಸಿದ್ದವರು

9 ಲಕ್ಷ ಹಾಜರಾದ ಅಭ್ಯರ್ಥಿಗಳು

317 ನಗರಗಳಲ್ಲಿ ಪರೀಕ್ಷೆ ನಡೆದಿತ್ತು

1,205 ಪರೀಕ್ಷೆ ನಡೆದಿದ್ದ ಕೇಂದ್ರಗಳು

‘ಪ್ರಯೋಗ ಶಾಲೆಯಿಂದ ಅಕ್ರಮ ಶುರು’

'ಗುಜರಾತ್ ಹಾಗೂ ಮಧ್ಯಪ್ರದೇಶವನ್ನು ತಮ್ಮ ಸೈದ್ಧಾಂತಿಕ ಪ್ರಯೋಗಶಾಲೆ ಎಂದು ಬಿಜೆಪಿಯವರು ಬಣ್ಣಿಸಿಕೊಳ್ಳುತ್ತಾರೆ. ಪರೀಕ್ಷಾ ಅಕ್ರಮದ ಮೂಲ ಶುರುವಾಗಿದ್ದೇ ಮಧ್ಯಪ್ರದೇಶದಿಂದ. ವ್ಯಾಪಂ ಹಗರಣದಿಂದಾಗಿ 40–50 ಜನರು ಸತ್ತರು. ಈಗ ಅವರು ತಮ್ಮ ಕಲ್ಪನೆಯನ್ನು ದೇಶದ ಇತರ ಭಾಗಗಳಿಗೆ ವಿಸ್ತರಿಸಿದ್ದಾರೆ.

ಪರೀಕ್ಷೆ: ಆಕ್ರೋಶ ಭುಗಿಲು

ಒಂದನೇ ಪುಟದಿಂದ...

ಕಾರಿನ ಮೇಲೆ ನಿಂತು ಕಪ್ಪುಪಟ್ಟಿ ನಡೆದ ಹೊಂದಿದ್ದ ಚೀಲವನ್ನು ಗಾಳಿಯಲ್ಲಿ ತೂರಿ ಆಕ್ರೋಶ ವ್ಯಕ್ತಪಡಿಸಿದ ವರುಣ್ ಚೌಧರಿ, ಕೇಂದ್ರ ಶಿಕ್ಷಣ ಸಚಿವರು ಈ ಹಣವನ್ನು ತೆಗೆದುಕೊಂಡು, ವಿದ್ಯಾರ್ಥಿಗಳ ಭವಿಷ್ಯ ಫುಟ್‌ಬಾಲ್ ರೂಪಿಸಲಿ ಎಂದು ವ್ಯಂಗ್ಯವಾಡಿದರು.

'ಶಿಕ್ಷಣ ಸಚಿವರು ಹಣಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ನೀಟ್ ಮತ್ತು ನೆಟ್‌ನಲ್ಲಿ ದೊಡ್ಡ ಹಗರಣ ನಡೆದಿದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.

ಯುವ ಕಾಂಗ್ರೆಸ್ ಪ್ರತಿಭಟನೆ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ನಿವಾಸದ ಬಳಿ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರೂ ಪ್ರತಿಭಟನೆ ನಡೆಸಿ,

ನೀಟ್ ಮತ್ತು ನೆಟ್ ಅಕ್ರಮವನ್ನು ಖಂಡಿಸಿದರು. ಈ ಎರಡೂ ಪರೀಕ್ಷೆಗಳ ಭವಿಷ್ಯ ಕತ್ತಲೆಗೆ ತಳ್ಳಿದಂತಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅನ್ನು ನಿಷೇಧಿಸಬೇಕು ಮತ್ತು ನೀಟ್–ಯುಜಿ ಮತ್ತು ಯುಜಿಸಿ–ನೆಟ್ ಪರೀಕ್ಷಾರ್ಥಿಗಳಿಗೆ ಆದಷ್ಟು ಬೇಗ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದರು.

ಐವೈಸಿ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಮಾತನಾಡಿ, 'ಪರೀಕ್ಷಾ ವಂಚನೆಯಿಂದ ವಿದ್ಯಾರ್ಥಿಗಳಿಗೆ ಭಾರಿ ಮೋಸ ಆಗಿದೆ. ಜತೆಗೆ ದೇಶದ ಭವಿಷ್ಯಕ್ಕೆ ದ್ರೋಹ ಎಸಗಿದಂತಾಗಿದೆ' ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಹಲವು ಐವೈಸಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ಕೇಂದ್ರಕ್ಕೆ ಸರ್ಕಾರಕ್ಕೆ ನೋಟಿಸ್

ಒಂದನೇ ಪುಟದಿಂದ...

ಇದರ ಜೊತೆಯಲ್ಲೇ, ನೀಟ್–ಯುಜಿ 2024 ಪರೀಕ್ಷೆಗೆ ಸಂಬಂಧಿಸಿದಂತೆ ಬೇರೆ ಬೇರೆ ಹೈಕೋರ್ಟ್‌ಗಳಲ್ಲಿ ನಡೆಯುತ್ತಿರುವ ವಿಚಾರಣೆಗಳಿಗೆ ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಎಸ್.ವಿ.ಎನ್. ಭಟ್ಟಿ ಅವರ ಇದ್ದ ವಿಭಾಗೀಯ ಪೀಠವು ಗುರುವಾರ ತಡೆಯಾಜ್ಞೆ ನೀಡಿದೆ. ಮುಂದಿನ ವಿಚಾರಣೆಯನ್ನು ಜುಲೈ 8ರಂದು ನಡೆಸಲಾಗುತ್ತದೆ ಎಂದು ಪೀಠ ಹೇಳಿದೆ. ಆ ದಿನಕ್ಕೆ ಮೊದಲು ಕೇಂದ್ರ ಸರ್ಕಾರ ಹಾಗೂ ಎನ್‌ಟಿಎ ಪ್ರತಿಕ್ರಿಯೆ ಸಲ್ಲಿಸಬೇಕಿದೆ.ಆದರೆ, ಕೌನ್ಸೆಲಿಂಗ್ ಪ್ರಕ್ರಿಯೆಗೆ ತಡೆ ಇಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ. ಕೌನ್ಸೆಲಿಂಗ್ ಪ್ರಕ್ರಿಯೆಯು ಜುಲೈ 6ರಂದು ಶುರುವಾಗಲಿದೆ. ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬನನ್ನು ಬಿಹಾರದಲ್ಲಿ ಬಂಧಿಸಲಾಗಿದೆ ಎಂದು ವಕೀಲರೊಬ್ಬರು ಪೀಠಕ್ಕೆ ಮಾಹಿತಿ ನೀಡಿದರು.

ಅಕ್ರಮಗಳ ಆರೋಪ ಕುರಿತು ಬಿಹಾರ ಹಾಗೂ ಗುಜರಾತ್‌ನಲ್ಲಿ ಎಫ್‌ಐಆರ್ ದಾಖಲಾಗಿದೆ. ಇದರ ವಸ್ತುಸ್ಥಿತಿ ಏನಿದೆ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ಪೊಲೀಸರಿಗೆ ಸೂಚಿಸಬೇಕು ಎಂದು ವಕೀಲರೊಬ್ಬರು ಮನವಿ ಮಾಡಿದರು.

ನೀಟ್–ಯುಜಿ 2024 ಪರೀಕ್ಷೆಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಿದವರ ವಾದಗಳಲ್ಲಿ ಸಾಮ್ಯ ಇದೆ ಎಂದು ಪೀಠವು ಹೇಳಿತು. ಬಿಹಾರದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ, ಪರೀಕ್ಷೆಯಲ್ಲಿ ಇತರ ಕೆಲವು ಅಕ್ರಮಗಳು ನಡೆದಿವೆ ಎಂಬ ಆರೋಪಗಳು ಇವೆ.

ಎಫ್‌ಐಆರ್ ದಾಖಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಯುಜಿಸಿ–ನೆಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಅಪರಿಚಿತ ವ್ಯಕ್ತಿಗಳ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಅಪರಿಚಿತ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120-ಬಿ (ಕ್ರಿಮಿನಲ್ ಪಿತೂರಿ) ಮತ್ತು 420 (ವಂಚನೆ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳ ಪ್ರಕರಣ ದಾಖಲಿಸಿರುವುದಾಗಿ ಎಫ್‌ಐಆರ್ ಹೇಳಿದೆ..

ಯುಜಿಸಿ- ನೆಟ್ ರದ್ದುಗೊಳಿಸಿದ ಕ್ರಮವನ್ನು ವಿರೋಧಿಸಿ ವಿದ್ಯಾರ್ಥಿಗಳು ಲಖನೌನಲ್ಲಿ ತೀವ್ರ ಪ್ರತಿಭಟನೆ ನಡೆಸಿದರು.

ಪರೀಕ್ಷೆ ರದ್ದತಿಗೆ ಸಮರ್ಥನೆ

ನವದೆಹಲಿ (ಪಿಟಿಐ): 'ಯುಜಿಸಿ–ನೆಟ್ ಪರೀಕ್ಷೆ ಬಗ್ಗೆ ಯಾವುದೇ ದೂರುಗಳು ಬಂದಿರಲಿಲ್ಲ. ಆದರೆ ವಿದ್ಯಾರ್ಥಿಗಳ ಹಿತಾಸಕ್ತಿ ದೃಷ್ಟಿಯಿಂದ ಈ ಪರೀಕ್ಷೆಯನ್ನು ರದ್ದುಪಡಿಸಲಾಯಿತು' ಎಂದು ಶಿಕ್ಷಣ ಸಚಿವಾಲಯ ಗುರುವಾರ ತಿಳಿಸಿದೆ.

'ನಮ್ಮ ಬಳಿ ಲಭ್ಯವಿದ್ದ ಆಧಾರಗಳ ಮೇರೆಗೆ ಸ್ವಯಂ ಪ್ರೇರಿತವಾಗಿ ಪರೀಕ್ಷೆ ರದ್ದುಪಡಿಸುವ ಕ್ರಮ ತೆಗೆದುಕೊಂಡಿದ್ದೇವೆ.' ಎಂದು ಸಚಿವಾಲಯದ ಜಂಟಿ ಕಾರ್ಯದರ್ಶಿ ಗೋವಿಂದ್ ಜೈಸ್ವಾಲ್ ಸುದ್ದಿಗಾರರಿಗೆ ಹೇಳಿದರು.

ನಮ್ಮ ವಿದ್ಯಾರ್ಥಿಗಳ ಜೀವನ ಮತ್ತು ಭವಿಷ್ಯ ನಿತ್ಯ ನಾಶವಾಗುತ್ತಿದೆ. ಲೋಕಸಭಾ ಚುನಾವಣೆಯಿಂದ ಪ್ರಧಾನಿ ಮೋದಿ ಯಾವುದೇ ಪಾಠ ಕಲಿತಿಲ್ಲ. ಆದಷ್ಟು ಬೇಗ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ವಜಾಗೊಳಿಸಬೇಕು
ಸಾಕೇತ್ ಗೋಖಲೆ, ಸಂಸದ, ಟಿಎಂಸಿ

ಮೊದಲಿಗೆ ಸಿಯುಇಟಿಯಲ್ಲಿ ವ್ಯತ್ಯಾಸಗಳಾದವು. ಬಳಿಕ ನೀಟ್ ಹಗರಣ, ಈಗ ಯುಜಿಸಿ–ನೆಟ್ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ! ಬಿಜೆಪಿ ಸರ್ಕಾರವು ಶಿಕ್ಷಣ ವ್ಯವಸ್ಥೆಯನ್ನು ಪೂರ್ಣವಾಗಿ ಅಪಹಾಸ್ಯ ಮಾಡಿದೆ
ಸಿಪಿಐ (ಎಂ)

ನೆಟ್ ಅನ್ನು ರದ್ದುಗೊಳಿಸಿದಂತೆಯೇ, ನೀಟ್ ಅನ್ನೂ ರದ್ದುಗೊಳಿಸಿ. ಏಕೆಂದರೆ ಈ ಪರೀಕ್ಷೆಯಲ್ಲೂ ಅಕ್ರಮಗಳು ನಡೆದಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಇಲ್ಲಿಯೂ ಪರೀಕ್ಷಾ ಸಮಗ್ರತೆಗೆ ಧಕ್ಕೆಯಾಗಿದೆ
ಮನೋಜ್ ಝಾ, ಸಂಸದ, ಆರ್‌ಜೆಡಿ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಬಂಧಿತರಾಗಿರುವ ಪ್ರಮುಖ ಆರೋಪಿಯು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ಅಧಿಕಾರಿಗಳೊಂದಿಗೆ ಸಂಪರ್ಕ ಹೊಂದಿದ್ದಾನೆ. ಈ ಬಗ್ಗೆಯೂ ತನಿಖೆ ಆಗಬೇಕಿದೆ
ವಿಜಯ್ ಕುಮಾರ್ ಸಿನ್ಹಾ
ಉಪ ಮುಖ್ಯಮಂತ್ರಿ, ಬಿಹಾರ

ನೀಟ್ ಮತ್ತು ನೆಟ್ ಪರೀಕ್ಷೆಗಳನ್ನು ನಡೆಸುವಲ್ಲಿ ಎನ್‌ಟಿಎ ಲೋಪವನ್ನು ಸಹಿಸಲು ಆಗುವುದಿಲ್ಲ. ಎನ್‌ಟಿಎಯಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಕೇಂದ್ರ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು
ಪಿಣರಾಯಿ ವಿಜಯನ್
ಮುಖ್ಯಮಂತ್ರಿ, ಕೇರಳ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಒಂದು ಪರೀಕ್ಷೆಯನ್ನೂ ಸರಿಯಾಗಿ ನಡೆಸಲು ಆಗುತ್ತಿಲ್ಲ. ಭವಿಷ್ಯದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯಲು ಅದು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ
ಅಸಾದುದ್ದೀನ್ ಓವೈಸಿ
ಮುಖ್ಯಸ್ಥ, ಎಐಎಂಐಎಂ

ಕಳ್ಳಬಟ್ಟಿ: ಮೃತರ ಸಂಖ್ಯೆ 38ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಕಲ್ಲಕುರಿಚ್ಚಿ/ ಚೆನ್ನೈ: ಕರುಣಾಪುರಂನಲ್ಲಿ ನಡೆದ ಕಳ್ಳಬಟ್ಟಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 38ಕ್ಕೆ ಏರಿದೆ. ಕರುಣಾಪುರಂ ಗುರುವಾರ ಮೃತರ ಕುಟುಂಬ ಸದಸ್ಯರ ಆರ್ತನಾದ, ಗೋಳಾಟಕ್ಕೆ ಸಾಕ್ಷಿಯಾಯಿತು.

ಮೃತರಲ್ಲಿ ಇಬ್ಬರು ಮಹಿಳೆಯರು, ಒಬ್ಬರು ತೃತೀಯಲಿಂಗಿ ಸೇರಿದ್ದಾರೆ.

'ಸಾವಿನ ಸಂಖ್ಯೆ 38ಕ್ಕೆ ತಲುಪಿದೆ. ಕಲ್ಲಕುರಿಚ್ಚಿ ಸರ್ಕಾರಿ ಆಸ್ಪತ್ರೆಯಲ್ಲಿ 23 ಮಂದಿ, ಪಾಂಡಿಚೇರಿ (3), ಸಲೇಂ(8), ವಿಲ್ಲುಪುರಂ(4) ಮೃತಪಟ್ಟಿದ್ದಾರೆ' ಎಂದು ಲೋಕೋಪಯೋಗಿ ಸಚಿವ ಇ.ವಿ.ವೇಲು ತಿಳಿಸಿದರು.

ಘಟನೆ ಬಳಿಕ 100ಕ್ಕೂ ಅಧಿಕ ಮಂದಿಯನ್ನು ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಮೃತರ ಕುಟುಂಬದ ಸದಸ್ಯರಿಗೆ ತಲಾ ₹10 ಲಕ್ಷ, ಚಿಕಿತ್ಸೆ ಪಡೆಯುತ್ತಿರುವವರಿಗೆ ₹50 ಸಾವಿರ ಆರ್ಥಿಕ ನೆರವು ನೀಡಲಾಗುವುದು.
ಎಂ.ಕೆ.ಸ್ಟಾಲಿನ್, ಮುಖ್ಯಮಂತ್ರಿ

'ಮೆಥನಾಲ್ ಮಿಶ್ರಿತ ಕಳ್ಳಬಟ್ಟಿ ಸೇವನೆಯಿಂದಲೇ ಎಲ್ಲರೂ ಮೃತಪಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದರು.

'ಭವಿಷ್ಯದಲ್ಲಿ ಇಂತಹ ಪ್ರಕರಣ ತಡೆಯಲು ಪರಿಶೀಲಿಸಿ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಲಾಗುವುದು' ಎಂದರು.

ಅವಘಡದ ಬಳಿಕ ಎಸ್ಪಿಯನ್ನು ಅಮಾನತುಗೊಳಿಸಿದ್ದು, ಡಿ.ಸಿಯನ್ನು ವರ್ಗಾಯಿಸಿದೆ.

ಬಿಸಿಗಾಳಿಗೆ ದೆಹಲಿ ತತ್ತರ; 17 ಸಾವು

ನವದೆಹಲಿ (ಪಿಟಿಐ): ಹಲವು ದಿನಗಳಿಂದ ಬಿಸಿಗಾಳಿಯ ತೀವ್ರತೆಯಿಂದಾಗಿ ತತ್ತರಿಸಿರುವ ದೆಹಲಿಯಲ್ಲಿ ಗುರುವಾರ ಬೆಳಿಗ್ಗೆ ಸಾಧಾರಣ ಮಳೆಯಾಗಿ, ವಾತಾವರಣ ಕೊಂಚ ತಂಪಾಯಿತು. ಹಾಗಿದ್ದರೂ, ಬಿಸಿಲಾಘಾತ ಸೇರಿದಂತೆ ತಾಪಮಾನಕ್ಕೆ ಸಂಬಂಧಿಸಿದ ಆನಾರೋಗ್ಯದ ಕಾರಣದಿಂದ 24 ಗಂಟೆಗಳಲ್ಲಿ ಆರ್‌ಎಂಎಲ್ ಮತ್ತು ಸಫ್ದರ್‌ಜಂಗ್ ಆಸ್ಪತ್ರೆಗಳಲ್ಲಿ 17 ಜನರು ಮೃತಪಟ್ಟಿದ್ದಾರೆ.

ಸಫ್ದರ್‌ಜಂಗ್ ಆಸ್ಪತ್ರೆಯ ಅಧಿಕಾರಿಗಳು ನೀಡಿರುವ ಮಾಹಿತಿ ಪ್ರಕಾರ, ಉಷ್ಣತೆಗೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವ 33 ಮಂದಿ ದಾಖಲಾಗಿದ್ದು, 24 ಗಂಟೆಗಳಲ್ಲಿ 13 ಮಂದಿ ಕೊನೆಯುಸಿರೆಳೆದಿದ್ದಾರೆ.

'ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಗೆ 24 ಗಂಟೆಗಳಲ್ಲಿ 22 ಮಂದಿ ದಾಖಲಾಗಿದ್ದು, ಈ ಪೈಕಿ ನಾಲ್ವರು ಕೊನೆಯುಸಿರೆಳೆದಿದ್ದಾರೆ. 13 ಮಂದಿ ವೆಂಟಿಲೇಟರ್‌ನಲ್ಲಿದ್ದಾರೆ.

50 ಶವಗಳು ಪತ್ತೆ: ಈ ಮಧ್ಯೆ, ಎರಡು ದಿನಗಳ ಅವಧಿಯಲ್ಲಿ ದೆಹಲಿಯ ವಿವಿಧ ಕಡೆಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ 50 ಮಂದಿಯ ಶವಗಳು ಪತ್ತೆಯಾಗಿವೆ. ಆದರೆ, ಇವರೆಲ್ಲರೂ ಬಿಸಿಗಾಳಿಯ ಕಾರಣದಿಂದ ಮೃತಪಟ್ಟಿದ್ದಾರೆಯೇ ಎಂಬುದನ್ನು ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ದೃಢಪಡಿಸಿಲ್ಲ.

ಅರವಿಂದ ಕೇಜ್ರಿವಾಲ್‌ಗೆ ಜಾಮೀನು ಮಂಜೂರು

ನವದೆಹಲಿ (ಪಿಟಿಐ): ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ.

ಅರವಿಂದ ಕೇಜ್ರಿವಾಲ್

ನ್ಯಾಯಾಲಯದ ಆದೇಶದಿಂದಾಗಿ ಕೇಜ್ರಿವಾಲ್ ಅವರು ನಿರಾಳರಾಗಿದ್ದಾರೆ. ಜಾಮೀನು ದೊರಕಿರುವುದಕ್ಕೆ ಪ್ರತಿಕ್ರಿಯಿಸಿರುವ ಎಎಪಿ, 'ಸತ್ಯಮೇವ ಜಯತೇ' ಎಂದು ಹೇಳಿದೆ.

'ಸತ್ಯಕ್ಕೆ ತೊಂದರೆ ಕೊಡಬಹುದು. ಆದರೆ, ಸೋಲಿಸಲು ಸಾಧ್ಯವಿಲ್ಲ
ಅತಿಶಿ, ದೆಹಲಿ ಎಎಪಿ ಸಚಿವೆ

ಜಾಮೀನು ಮಂಜೂರು ಮಾಡಿರುವುದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಆದೇಶವನ್ನು 48 ಗಂಟೆಗಳ ಕಾಲ ತಡೆ ಹಿಡಿಯಬೇಕು ಎಂಬ ಜಾರಿ ನಿರ್ದೇಶನಾಲಯದ ಮನವಿಯನ್ನು ವಿಶೇಷ ನ್ಯಾಯಾಧೀಶ ನಿಯಾಯ್ ಬಿಂದು ಅವರು ತಿರಸ್ಕರಿಸಿದರು. ₹1 ಲಕ್ಷದ ವೈಯಕ್ತಿಕ ಬಾಂಡ್ ಪಡೆದು ಕೇಜ್ರಿವಾಲ್ ಅವರನ್ನು ಬಿಡುಗಡೆ ಮಾಡುವಂತೆ ನ್ಯಾಯಾಧೀಶರು ಆದೇಶಿಸಿದರು.

ತನಿಖೆಯ ದಿಕ್ಕು ತಪ್ಪಿಸಲು ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಬಾರದು ಎಂಬುದೂ ಸೇರಿದಂತೆ ವಿವಿಧ ಷರತ್ತುಗಳನ್ನು ಹಾಕಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.ತನಿಖೆಗೆ ಸಹಕಾರ ನೀಡುವಂತೆ ಮತ್ತು ಅಗತ್ಯವಿದ್ದಾಗಲೆಲ್ಲ ನ್ಯಾಯಾಲಯದ ಮುಂದೆ ಹಾಜರಾಗಬೇಕು ಎಂದೂ ನ್ಯಾಯಾಧೀಶರು ತಿಳಿಸಿದರು. ಇದಕ್ಕೂ ಮೊದಲು, ಜಾಮೀನು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಆದೇಶವನ್ನು ಕಾಯ್ದಿರಿಸಿತ್ತು.

ದೆಹಲಿಯ ಎಎಪಿ ಸರ್ಕಾರದ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಶುಕ್ರವಾರ ಅವರು ಬಿಡುಗಡೆಯಾಗುವ ಸಾಧ್ಯತೆಯಿದೆ.

ಕಣಿವೆಯಲ್ಲಿ ರೈಲು

ಭಾರತೀಯ ರೈಲ್ವೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಮಿಸಿರುವ ಜಗತ್ತಿನ ಅತ್ಯಂತ ಎತ್ತರದ ಚೆನಾಬ್ ಸೇತುವೆಯಲ್ಲಿ ಗುರುವಾರ ನಡೆಸಲಾದ ಮೆಮು ರೈಲಿನ ಪ್ರಾಯೋಗಿಕ ಸಂಚಾರ ಯಶಸ್ವಿಯಾಗಿದೆ. ರಂಬಾನ್ ಜಿಲ್ಲೆಯ ಸಂಗಲದಾನ್ ಮತ್ತು ರಿಯಾಸೀ ನಡುವಿನ 46 ಕಿ.ಮೀ ಉದ್ದದ ವಿದ್ಯುತ್ ಮಾರ್ಗದಲ್ಲಿ ಗಂಟೆಗೆ 40 ಕಿ.ಮೀ ವೇಗದಲ್ಲಿ ಎಂಟು ಬೋಗಿಗಳ ಮೆಮು ರೈಲು ಸಂಚರಿಸಿದೆ – ಪಿಟಿಐ ಚಿತ್ರ

ಸಂಜಯ್ ಸಿಂಗ್ ವಿರುದ್ಧ ವಾರಂಟ್

ಸುಲ್ತಾನಪುರ(ಉತ್ತರ ಪ್ರದೇಶ) (ಪಿಟಿಐ): ಕೋವಿಡ್–19 ನಿರ್ಬಂಧಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣದಲ್ಲಿ ವಿಚಾರಣೆಗೆ ಗೈರಾದ ಹಿನ್ನೆಲೆಯಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ವಿರುದ್ಧ ಇಲ್ಲಿನ ಸಂಸದರ–ಶಾಸಕರ ನ್ಯಾಯಾಲಯ ಗುರುವಾರ ಬಂಧನ ವಾರಂಟ್ ಹೊರಡಿಸಿದೆ.

'ಹಲವು ಬಾರಿ ವಿಚಾರಣೆಗೆ ಗೈರಾದ ಹಿನ್ನೆಲೆಯಲ್ಲಿ, ನ್ಯಾಯಾಧೀಶರು ವಾರಂಟ್ ಜಾರಿ ಮಾಡಿದ್ದಾರೆ' ಎಂದು ವಿಶೇಷ ಸರ್ಕಾರಿ ವಕೀಲ ತಿಳಿಸಿದ್ದಾರೆ.

ಶೇ 50ರಿಂದ ಶೇ 65ಕ್ಕೆ ಹೆಚ್ಚಿಸಿದ್ದ ನಿತೀಶ್ ಸರ್ಕಾರ

ಮೀಸಲಾತಿ ಪ್ರಮಾಣ ಏರಿಕೆ ರದ್ದು

ಪಟ್ನಾ(ಪಿಟಿಐ): ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟರು, ಹಿಂದುಳಿದ ವರ್ಗಗಳು ಹಾಗೂ ಬುಡಕಟ್ಟು ಜನರ ಮೀಸಲಾತಿ ಪ್ರಮಾಣವನ್ನು ಶೇ 50ರಿಂದ ಶೇ 65ಕ್ಕೆ ಹೆಚ್ಚಿಸಿ ಬಿಹಾರ ಸರ್ಕಾರ ಕಳೆದ ವರ್ಷ ಕೈಗೊಂಡಿದ್ದ ನಿರ್ಧಾರವನ್ನು ಪಟ್ನಾ ಹೈಕೋರ್ಟ್ ಗುರುವಾರ ರದ್ದುಪಡಿಸಿದೆ.

ಹೈಕೋರ್ಟ್‌ನ ಈ ನಿರ್ಧಾರದಿಂದ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ತೀವ್ರ ಹಿನ್ನಡೆಯಾದಂತಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಇದಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ರೂಪಿಸಿದ್ದ ಶಾಸನವನ್ನು ಪ್ರಶ್ನಿಸಿ ಹಲವರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಕೆ.ವಿನೋದಚಂದ್ರನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ನಡೆಸಿತು.

ರಾಜ್ಯದಲ್ಲಿ ಕೈಗೊಂಡಿದ್ದ ಜಾತಿ ಸಮೀಕ್ಷೆ ಆಧರಿಸಿ ಬಿಹಾರ ಸರ್ಕಾರವು ಎಸ್‌ಸಿ, ಎಸ್‌ಟಿ, ಒಬಿಸಿ ಹಾಗೂ ಇಬಿಸಿಗಳಿಗೆ ಇದ್ದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ನಿರ್ಧಾರವನ್ನು ಕೈಗೊಂಡಿತ್ತು. ಈ ಸಂಬಂಧ, ಕಳೆದ ವರ್ಷ ನವೆಂಬರ್ 21ರಂದು ಗೆಜೆಟ್ ಅಧಿಸೂಚನೆಯನ್ನು ಸಹ ಪ್ರಕಟಿಸಿತ್ತು.

ಮುಖ್ಯಾಂಶಗಳು

- ಕಳೆದ ವರ್ಷ ರೂಪಿಸಲಾಗಿದ್ದ ಶಾಸನ ಪ್ರಶ್ನಿಸಿದ್ದ ಅರ್ಜಿ ವಿಚಾರಣೆ
- ನಿತೀಶ್ ಕುಮಾರ್ ನೇತೃತ್ವ ಸರ್ಕಾರಕ್ಕೆ ಹಿನ್ನಡೆ: ವಿಶ್ಲೇಷಣೆ
- ಶೇ 50ಕ್ಕಿಂತ ಹೆಚ್ಚು ಮೀಸಲು ನೀಡುವಂತಿಲ್ಲ: ಕೋರ್ಟ್

'ಮೀಸಲಾತಿ ಪ್ರಮಾಣ ಹೆಚ್ಚಿಸಿ ಬಿಹಾರ ಸರ್ಕಾರ ಮಾಡಿದ್ದ ತಿದ್ದುಪಡಿಗಳಿಂದ ಸಂವಿಧಾನದ ವಿಧಿಗಳಾದ 14, 16 ಹಾಗೂ 20ರ ಉಲ್ಲಂಘನೆಯಾಗುತ್ತದೆ ಎಂಬುದು ನಮ್ಮ ವಾದವಾಗಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ತನ್ನ ತೀರ್ಪನ್ನು ಕಾಯ್ದಿರಿಸಿತ್ತು' ಎಂದು ಕೆಲ ಅರ್ಜಿದಾರರ ಪರ ವಕೀಲೆ ರಿತಿಕಾ ರಾಣಿ ಹೇಳಿದ್ದಾರೆ.

ಅರ್ಜಿದಾರರ ಮತ್ತೊಂದು ಗುಂಪಿನ ಪರ ವಕೀಲ ನಿರ್ಭಯ್ ಪ್ರಶಾಂತ್, 'ಜಾತಿ ಸಮೀಕ್ಷೆ ಆಧಾರದಲ್ಲಿ ಇಂತಹ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಹೇಳುವ ಮೂಲಕ ರಾಜ್ಯ ಸರ್ಕಾರ ತನ್ನ ನಡೆಯನ್ನು ಸಮರ್ಥಿಸಿಕೊಂಡಿತ್ತು' ಎಂದರು.

ಸುಪ್ರೀಂ ಕೋರ್ಟ್‌ನಲ್ಲಿ ಬಿಹಾರ ಸರ್ಕಾರ ಮೇಲ್ಮನವಿ ಸಲ್ಲಿಸಿದರೆ, ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರವು ಈ ನಡೆಯನ್ನು ಬೆಂಬಲಿಸುವುದೇ
ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ನಾವು, ಇಂದಿರಾ ಸಾಹ್ನಿ ಪ್ರಕರಣ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪುಗಳನ್ನು ಉಲ್ಲೇಖಿಸಿದ್ದೆವು. ಇತ್ತೀಚೆಗೆ, ಮರಾಠರಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ ತೀರ್ಪನ್ನು ಸಹ ನ್ಯಾಯಾಲಯದ ಗಮನಕ್ಕೆ ತಂದಿದ್ದೆವು' ಎಂದರು.

'ನಮ್ಮ ವಾದ ಆಲಿಸಿದ ನ್ಯಾಯಾಲಯ, ಶೇ 50ರ ಮಿತಿಗಿಂತ ಅಧಿಕ ಮೀಸಲಾತಿಯನ್ನು ಯಾವುದೇ ರಾಜ್ಯ ಸರ್ಕಾರ ನೀಡುವಂತಿಲ್ಲ ಎಂದು ಸ್ಪಷ್ಟಪಡಿಸಿದೆ' ಎಂದು ವಕೀಲ ಪ್ರಶಾಂತ್ ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು–560 040.

ಸಂಖ್ಯೆ:ಕಾಅ(ವಿಜಯನಗರ)/ಕೆಪಿಪಿ/ಸಕಾಅ/ಟೆಂಡರ್/04/2024–25 ದಿನಾಂಕ: 20–06–2024

ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ) (ಕೆಡಬ್ಲ್ಯೂ-4) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ.

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ರವರು ಬೃಬೆಂಮಪಾ, ಬೆಂಗಳೂರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ನಿಗದಿಪಡಿಸಿದ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ)
1.	ವಾರ್ಡ್ ನಂ.134ರ ವಿಜಯನಗರ ವಿಧಾನಸಭಾ ಕ್ಷೇತ್ರದ ಬಾಪೂಜಿನಗರ ದಲ್ಲಿರುವ ಜಿ ಕೆ ನಾಯ್ದು ರಂಗಮಂದಿರದಲ್ಲಿ ಪೀಠೋಪಕರಣಗಳ ಸರಬರಾಜು ಮತ್ತು ಅಗ್ನಿಶಾಮಕ ಕಾಮಗಾರಿ ಸೇರಿದಂತೆ 25 ಹಾಸಿಗೆಗಳ ಆಸ್ಪತ್ರೆ ಹಾಗೂ ಡಯಾಲಿಸಿಸ್ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ.	450.00	ರೂ.6,75,000/– (ಇ-ಸಂಗ್ರಹಣೆ ಪೋರ್ಟಲ್‌ಮೂಲಕ ರೂ.1.00 ಲಕ್ಷ ಮತ್ತು ಬಾಕಿ ರೂ.5,75,000/– ಬ್ಯಾಂಕ್ ಗ್ಯಾರಂಟಿ ರೂಪದಲ್ಲಿರುತ್ತದೆ.

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: 27–06–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 18–07–2024 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 3. ಪೂರ್ವ ಬಿಡ್ ಸಭೆಯು ದಿನಾಂಕ: 05–07–2024 ರಂದು ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಹಂತ, ಬೆಂಗಳೂರು–11 ಇಲ್ಲಿ ನಡೆಸಲಾಗುವುದು. 4. ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 04–07–2024 ಸಂಜೆ 4:00 ಗಂಟೆಗೆಯವರೆಗೆ. 5. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 19–07–2024ರ ಸಂಜೆ 4:30 ಗಂಟೆಗೆ. 6. ಇಎಂಡಿ ಬ್ಯಾಂಕ್ ಗ್ಯಾರಂಟಿಯನ್ನು ವಿಭಾಗ ಕಛೇರಿಗೆ ದಿನಾಂಕ: 19–07–2024ರ ಮಧ್ಯಾಹ್ನ 3:00 ಗಂಟೆಗೆ ಮುಂಚಿತವಾಗಿ ಸಲ್ಲಿಸಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ
ದೂರವಾಣಿ ಸಂಖ್ಯೆ : 08225–272128 Email : sec.mmtemple@gmail.com

ಸಂಖ್ಯೆ ಶ್ರೀ ಮ.ಮ.ಕ್ಷೇ.ಅ.ಪ್ರಾ/3/ಪಿಆರ್/30/2023–24 ದಿನಾಂಕ : 14–06–2024

ಇ–ಟೆಂಡರ್ ಪ್ರಕಟಣೆ 2ನೇ ಕರೆ (ದ್ವಿ–ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ.ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	ಪ್ರತಿನಿತ್ಯ ಬಂಗಾರದ ರಥೋತ್ಸವ ಮಾಡಿಸುವ ಸೇವಾರ್ಥದಾರರಿಗೆ ವಿತರಿಸಲು ಬೇಕಾಗಿರುವ 200ಗ್ರಾಂ ತೂಕ 3.50 ಇಂಚು ವ್ಯಾಸವಿರುವ ತಾಮ್ರದ ಚೆಂಬು ಹಾಗೂ 300ಗ್ರಾಂ ತೂಕವುಳ್ಳ 9.30 ಇಂಚು ವ್ಯಾಸವುಳ್ಳ CU-93% ಇರುವ ತಾಮ್ರದ ತಟ್ಟೆ ಸೇರಿ ಒಂದು ಸೆಟ್ಟು ಹಾಗೂ ಸದರಿ ತಟ್ಟೆಯ ಮೇಲ್ಭಾಗದಲ್ಲಿ ಶ್ರೀಸ್ವಾಮಿಯ ಬಂಗಾರದ ರಥೋತ್ಸವವಿರುವ ಭಾವ ಚಿತ್ರದೊಡನೆ ಹಾಗೂ ಶ್ರೀಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ ಎಂದು ಮುದ್ರಿಸಿ 60 ಸಾವಿರ ಸೆಟ್ಟ್‌ಗಳನ್ನು 2024–25ನೇ ಅವಧಿಗೆ ಒದಗಿಸುವುದಕ್ಕೆ ಒಳಪಟ್ಟು ಎಲ್ಲಾ ತೆರಿಗೆಗಳು ಸೇರಿ.	425.00	4,25,000–00

ವಿವರಗಳನ್ನು www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ : 14–07–2024 ಸಂಜೆ : 4.00 ಗಂಟೆ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ 9886306737ನ್ನು ಸಂಪರ್ಕಿಸಬಹುದು.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿನಾಂಕ : 15–06–2024	ರ ನಂತರ
2.	ಗುಣಮಟ್ಟ ಮಾದರಿ ಟೆಂಡರ್ ಪೂರ್ವಭಾವಿ ಸಭೆ (Sample Tender pre bid meeting)	ದಿನಾಂಕ : 02–07–2024	ಮಧ್ಯಾಹ್ನ 12.00 ಗಂಟೆಗೆ
3.	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ : 15–07–2024	ಸಂಜೆ 4.00 ಗಂಟೆವರೆಗೆ
4.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ : 17–07–2024	ಬೆಳಗ್ಗೆ 11.00 ಗಂಟೆ ನಂತರ
5.	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ತಾಂತ್ರಿಕ ಬಿಡ್ ಪರಿಶೀಲನೆಯ ನಂತರ	

ಸಹಿ/– ಕಾರ್ಯದರ್ಶಿ
ಶ್ರೀಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ
ಸಂ: ವಾಸಾಸಂಇ:ಚಾ.ನಗರ:36:2024–25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/03/2024–25 ದಿನಾಂಕ: 18–06–2024

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2023–24 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 25–06–2024 ರಂದು ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/453/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ: 02/2024–25
ದಿನಾಂಕ: 19–06–2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಠ ಮೊತ್ತ ರೂ.75.00 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.80.00 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 29–06–2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು. ಸೂಚನೆ:ಬಿಡ್ಡುದಾರರು ಜಿ.ಎಸ್.ಟಿ ಸೇರಿದಂತೆ ದರಗಳನ್ನು ನಮೂದಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/81/ಕೆಎಸ್‌ಎಂಸಿಎ/2024–25

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ, (ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/ಗ್ರೂಪ್–ಡಿ &ನಾ.ಕ್ಲಿ.ಟೆ/241/2023–24 ದಿನಾಂಕ: 12/06/2024

ಇ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಹೊರ ಗುತ್ತಿಗೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆಯನ್ನು ನೀಡಲು ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ವಾರ್ಷಿಕ ಅಂದಾಜು ಮೊತ್ತ 6500000/–ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 1300000/–ಗಳ ಇ.ಎಂ.ಡಿ ಯನ್ನು ಇ– ಪಾವತಿ ಮೂಲಕ ಸಕಾಲದಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ದಿ॥ 26/06/2024 ರ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
ವಾಸಾಸಂಇ/ಹಿಸನಿ/ಹಾಸನ/84/ಕೆಎಸ್‌ಎಂಸಿಎ/2024–25

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001.
ಸಂಖ್ಯೆ: ಪಿ.ಎಸ್.ಸಿ. 508 ಆರ್‌ಟಿಬಿ–2/2023–24/514 ದಿನಾಂಕ: 19–06–2024

ತಿದ್ದುಪಡಿ ಅಧಿಸೂಚನೆ

ಆಯೋಗವು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಮತ್ತು ತಿದ್ದುಪಡಿ ನಿಯಮ 2022 ರನ್ವಯ ಸಾರಿಗೆ ಇಲಾಖೆಯಲ್ಲಿನ ಗ್ರೂಪ್ ಸಿ ವೃಂದದ ಮೋಟಾರು ವಾಹನ ನಿರೀಕ್ಷಕರು 70 (ಆರ್‌ಪಿಸಿ) ಮತ್ತು 06 (ಹೈ.ಕ.) ಹುದ್ದೆಗಳ ನೇಮಕಾತಿ ಸಂಬಂಧ ದಿ: 14–03–2024 ರಂದು ವೃಂದವಾರು ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭ ದಿ: 22–04–2024 ಮತ್ತು ಕೊನೆಯ ದಿ: 21–05–2024 ಎಂದು ನಿಗದಿಪಡಿಸಲಾಗಿತ್ತು. ಆದರೆ ತಾಂತ್ರಿಕ ಕಾರಣದಿಂದ ಸದರಿ ಹುದ್ದೆಗೆ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವ ಕಾಲಮಿತಿಯನ್ನು ದಿ: 22–04–2024 ಮತ್ತು 17–05–2024ರ ಪ್ರಕಟಣೆಯಲ್ಲಿ ಮುಂದೂಡಲಾಗಿತ್ತು. ಪ್ರಸ್ತುತ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವ ಕಾಲಮಿತಿಯನ್ನು ಈ ಕೆಳಗಿನಂತೆ ಮರುನಿಗದಿಪಡಿಸಿ ದಿ: 30–05–2024ರ ಪ್ರಕಟಣೆಯ ಮೂಲಕ ಅಭ್ಯರ್ಥಿಗಳಿಗೆ ಮಾಹಿತಿಗಾಗಿ ತಿಳಿಸಲಾಗಿದೆ.

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	30-05-2024
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	30-06-2024
ಶುಲ್ಕ ಪಾವತಿಸಲು ಕೊನೆಯ ದಿನಾಂಕ	30-06-2024

ಉಳಿದಂತೆ ದಿನಾಂಕ: 14–03–2024ರ ಅಧಿಸೂಚನೆಗಳಲ್ಲಿನ ಇತರ ಷರತ್ತು/ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/–
(ಡಾ. ರಾಕೇಶ್ ಕುಮಾರ್.ಕೆ)
ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ.
DIPR/CP/RO452/24-25

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,516
ಇಂದಿನ ಅಂತ್ಯ	23,567
▲	51
ದಿನದ ಗರಿಷ್ಠ	23,624

ವಿನಿಮಯ ದರ

$ ಡಾಲರ್	83.61
£ ಪೌಂಡ್	106.29
€ ಯುರೊ	89.72
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹980 (975)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹923 (927)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹312-490
ದ್ವಿತಳಿ (ಬಿ.ವಿ)	₹365-620

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಎಚ್.ಪಿ. ಗೋಪಾಲ ರೆಡ್ಡಿ

ಕುಂದಲಹಳ್ಳಿ

ನಿಧನ: 21-06-2004

ನೀವು ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದವು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ದುಃಖತಪ್ತ ಧರ್ಮಪತ್ನಿ: ಪ್ರಭಾವತಿ

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಸ್ ಟಿ ವೆಂಕಟಸ್ವಾಮಿ

12.04.1948 - 21.06.2023

ನಿಮ್ಮ ಸವಿನೆನಪು ನಮ್ಮಲ್ಲಿ ಮನದಲ್ಲಿ ಹಚ್ಚ ಹಸಿರಾಗಿದೆ, ನೀವು ತೋರಿದ ಆದರ್ಶದ ದಾರಿಯಲ್ಲಿ ಸಾಗುವೆವು

ಸದಾ ನಿಮ್ಮ ನೆನಪಿನಲ್ಲಿರುವ ಜಿ ಎಂ ಪಾರ್ವತಿ ಕುಟುಂಬದವರು ಮತ್ತು ಬಂಧುಮಿತ್ರರು

ಮುಂಬೈ ಧಾರಣೆ

ಶೇಂಗಾ

20-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	922 (922)
ಪಾಮ್ ವಾರದ ಡೆಲಿವರಿ	921 (925)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹71,800 (71,400)

ಬೆಳ್ಳಿ ಕೆ.ಜಿ ₹90,000 (88,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹192
ಗುಡ್ ಲಾಟ್ ₹180	(ಪ್ರತಿ ಕೆ.ಜಿಗೆ)

ಬಿಗಿ ನಿಯಮದಿಂದ ತಗ್ಗಿದ ಅಪಾಯ: ಗವರ್ನರ್ ಶಕ್ತಿಕಾಂತ ದಾಸ್

ಅಡಮಾನರಹಿತ ಸಾಲ ಇಳಿಕೆ

ಮುಂಬೈ (ಪಿಟಿಐ): 'ಅಡಮಾನರಹಿತ ಸಾಲಗಳು ಆರ್ಥಿಕತೆ ಬೆಳವಣಿಗೆಗೆ ದೊಡ್ಡ ಅಪಾಯ ಒಡ್ಡುತ್ತವೆ. ಇಂತಹ ಸಾಲ ನೀಡಿಕೆ ಮೇಲೆ ಬಿಗಿಯಾದ ಕ್ರಮ ಕೈಗೊಂಡಿದ್ದರಿಂದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎದುರಾಗಬಹುದಾದ ಅಪಾಯದ ಮಟ್ಟ ತಗ್ಗಿದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಆರ್‌ಬಿಐನಿಂದ ಗುರುವಾರ 'ಆರ್ಥಿಕತೆ ಚೇತರಿಕೆ' ಕುರಿತು ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಂಭಾವ್ಯ ಅಪಾಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಹೆಜ್ಜೆಯಾಗಿ ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆಯ ನಿಯಮಗಳನ್ನು ಬಿಗಿಗೊಳಿಸಲಾಗಿತ್ತು ಎಂದರು.



ದೇಶೀಯ ಹಣಕಾಸು ವ್ಯವಸ್ಥೆಯು ಹಿಂದಿಗಿಂತಲೂ ಹೆಚ್ಚು ಸದೃಢವಾಗಿದೆ. ಕೋವಿಡ್ ಸಾಂಕ್ರಾಮಿಕದ ಪೂರ್ವದ ಸ್ಥಿತಿಗೆ ಮರಳಿದ್ದೇವೆ

ಶಕ್ತಿಕಾಂತ ದಾಸ್, ಗವರ್ನರ್, ಆರ್‌ಬಿಐ

'ಇಂತಹ ಸಾಲ ನೀಡಿಕೆ ಬಗ್ಗೆ ಉಪೇಕ್ಷೆ ತಳೆದರೆ ಭವಿಷ್ಯದಲ್ಲಿ ದೊಡ್ಡ ಸಮಸ್ಯೆಗಳು ಸೃಷ್ಟಿಯಾಗುವುದು ನಿಶ್ಚಿತ. ಬಿಗಿ ನಿಲುವು ತಳೆದಿದ್ದರಿಂದ ಅಡಮಾನರಹಿತ ಸಾಲ ನೀಡಿಕೆ ಪ್ರಮಾಣದಲ್ಲಿ ಕಡಿಮೆಯಾಗಿದೆ. ಈ ಕ್ರಮವು ನನಗೆ ಸಮಾಧಾನ ತಂದಿದೆ' ಎಂದು ತಿಳಿಸಿದರು.

ಆರ್‌ಬಿಐ ನಿರ್ಬಂಧ ವಿಧಿಸುವುದಕ್ಕೂ ಮೊದಲು ತುರ್ತು ಅಗತ್ಯಗಳಿಗೆ ನೀಡುವ ಕ್ರೆಡಿಟ್ ಕಾರ್ಡ್ ಸಾಲದ ಪ್ರಮಾಣವು ಶೇ 30ರಷ್ಟು ಇತ್ತು. ಸದ್ಯ ಶೇ 23ಕ್ಕೆ ಕುಗ್ಗಿದೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್‌ಬಿಎಫ್‌ಸಿ) ಸಾಲ ನೀಡಿಕೆ ಪ್ರಮಾಣವು ಶೇ29ರಿಂದ ಶೇ18ಕ್ಕೆ ಇಳಿಕೆಯಾಗಿದೆ ಎಂದು ವಿವರಿಸಿದರು.

ಕಳೆದ ವರ್ಷದ ನವೆಂಬರ್ 16ರಂದು ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಆಗಬಹುದಾದ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಆರ್‌ಬಿಐ ಹೆಚ್ಚಿಸಿತ್ತು. ಈ ಕ್ರಮದಿಂದಾಗಿ ಎನ್‌ಬಿಎಫ್‌ಸಿಗಳ ಸಾಲ ನೀಡಿಕೆಯಲ್ಲಿ ಇಳಿಕೆಯಾಗಿದೆ ಎಂದರು.

ದೇಶದಲ್ಲಿ ಬಂಡವಾಳ ಪ್ರಮಾಣವೂ ಹೆಚ್ಚಿದೆ. ವಸೂಲಾಗದ ಸಾಲದ ಪ್ರಮಾಣದಲ್ಲಿ ಇಳಿಕೆಯಾಗಿದೆ. ಸರ್ಕಾರಿ ಹಾಗೂ ಸರ್ಕಾರೇತರ ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಯು ಉತ್ತಮವಾಗಿದೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಕಳ್ಳಸಾಗಣೆ: 1,658 ಕೆ.ಜಿ ಚಿನ್ನ ಜಪ್ತಿ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ ₹3,500 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದ್ದು, ಈ ಪೈಕಿ ಮಾದಕ ವಸ್ತುಗಳು ಮತ್ತು ಚಿನ್ನದ ಪಾಲು ಹೆಚ್ಚಿದೆ ಎಂದು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಪ್ರಧಾನ ಮಹಾ ನಿರ್ದೇಶಕ ಮೋಹನ್ ಕುಮಾರ್ ಸಿಂಗ್ ಹೇಳಿದ್ದಾರೆ.

ಎಫ್‌ಐಸಿಸಿಐನಿಂದ ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಒಳನುಸುಳುವಿಕೆಯ ಜಾಲ ಹಾಗೂ ಕಳ್ಳಸಾಗಣೆಗೆ ಕಡಿವಾಣ ಹಾಕುವುದು ಸವಾಲಾಗಿದೆ. ಮಾದಕ ವಸ್ತುಗಳು ಹಾಗೂ ನಿಷೇಧಿತ ವಸ್ತುಗಳ ಕಳ್ಳಸಾಗಣೆಯಲ್ಲಿ ತೊಡಗುವ ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದೆ. ಕೊರಿಯರ್ ಮತ್ತು ಅಂಚೆ ಮೂಲಕವೂ ತರಿಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ ಎಂದರು.

ಒಟ್ಟು 623 ಕಳ್ಳಸಾಗಣೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ದಿನವೊಂದಕ್ಕೆ ಸರಾಸರಿ 2 ಪ್ರಕರಣಗಳನ್ನು ಪತ್ತೆ ಹಚ್ಚಿದಂತಾಗುತ್ತದೆ. 1,658 ಕೆ.ಜಿ ಚಿನ್ನ ಜಪ್ತಿ ಮಾಡಲಾಗಿದೆ. 2022-23ನೇ ಸಾಲಿಗೆ ಹೋಲಿಸಿದರೆ ಚಿನ್ನ ಜಪ್ತಿಯಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ ಎಂದು ಹೇಳಿದರು.

ಸ್ವಿಸ್: ಭಾರತೀಯರ ಠೇವಣಿ ಇಳಿಕೆ

ನವದೆಹಲಿ/ ಜೂರಿಚ್ (ಪಿಟಿಐ): ಭಾರತೀಯರು ಹಾಗೂ ಸಂಸ್ಥೆಗಳು ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಠೇವಣಿ ಪ್ರಮಾಣವು 2023ರಲ್ಲಿ ಶೇ 70 ರಷ್ಟು ಕಡಿಮೆಯಾಗಿದೆ ಎಂದು ಸ್ವಿಟ್ಜರ್‌ಲೆಂಡ್ ಕೇಂದ್ರೀಯ ಬ್ಯಾಂಕ್ ತಿಳಿಸಿದೆ.

ಸ್ವಿಸ್ ಬ್ಯಾಂಕ್‌ನ ಸ್ಥಳೀಯ ಶಾಖೆಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಸದ್ಯ ಒಟ್ಟು ₹9,771 ಕೋಟಿಯಿದ್ದು, ಇದು ನಾಲ್ಕು ವರ್ಷಗಳ ಕನಿಷ್ಠ ಮಟ್ಟವಾಗಿದೆ ಎಂದು ಗುರುವಾರ ಬಿಡುಗಡೆಯಾಗಿರುವ ಬ್ಯಾಂಕ್‌ನ ವರದಿ ಹೇಳಿದೆ.

2021ರಲ್ಲಿ ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರ ಠೇವಣಿ ಪ್ರಮಾಣವು 14 ವರ್ಷಗಳ ಗರಿಷ್ಠ ಮಟ್ಟವಾದ ₹30,500 ಕೋಟಿ ಇತ್ತು. ಭಾರತೀಯರು ಜಮೆ ಮಾಡಿರುವ ಹಣದ ಮೊತ್ತವು ಸತತ ಎರಡು ವರ್ಷಗಳಿಂದ ಕಡಿಮೆಯಾಗುತ್ತಿದೆ. ಬಾಂಡ್‌ಗಳು, ಷೇರುಗಳು ಸೇರಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮೊತ್ತದಲ್ಲಿ ಭಾರಿ ಇಳಿಕೆಯಾಗಿದೆ ಎಂದು ತಿಳಿಸಿದೆ.

ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯ ಉದ್ಯಮಿಗಳು, ರಾಜಕಾರಣಿಗಳು ಅಪಾರ ಪ್ರಮಾಣದಲ್ಲಿ 'ಕಪ್ಪು ಹಣ' ಇಟ್ಟಿದ್ದಾರೆ ಎಂಬ ವಿಷಯ ಚರ್ಚೆಯಾಗುತ್ತಿದೆ. ಆದರೆ, ಈ ಮೊತ್ತವು ಅಲ್ಲಿನ ಬ್ಯಾಂಕ್‌ಗಳು ಸ್ವಿಸ್ ನ್ಯಾಷನಲ್ ಬ್ಯಾಂಕ್‌ಗೆ (ಎಸ್‌ಎನ್‌ಬಿ) ನೀಡಿರುವ ಅಧಿಕೃತ ಮಾಹಿತಿಯಾಗಿದೆ. ಈ ಮೊತ್ತವು ಭಾರತೀಯರ 'ಕಪ್ಪು ಹಣ' ಕುರಿತ ಮಾಹಿತಿಯಲ್ಲ. ಅಲ್ಲದೆ ಭಾರತೀಯರು, ಅನಿವಾಸಿ ಭಾರತೀಯರು ಅಥವಾ ಇತರರು ಮೂರನೇ ರಾಷ್ಟ್ರದ ಸಂಸ್ಥೆಗಳ ಹೆಸರಿನಲ್ಲಿ ಠೇವಣಿ ಇರಿಸಿರುವ ವಿವರವನ್ನು ಈ ಅಂಕಿಅಂಶಗಳು ಒಳಗೊಂಡಿಲ್ಲ.

'ಗೋಧಿ ಬೆಲೆ ನಿಯಂತ್ರಣಕ್ಕೆ ಕ್ರಮ'

ನವದೆಹಲಿ (ಪಿಟಿಐ): ಗ್ರಾಹಕರ ಹಿತದೃಷ್ಟಿಯಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ಗೋಧಿ ಬೆಲೆಯನ್ನು ನಿಯಂತ್ರಿಸುವ ಸಂಬಂಧ ಮಾರುಕಟ್ಟೆ ಮಧ್ಯಪ್ರವೇಶಿಸಲು ಸರ್ಕಾರ ಸಿದ್ಧವಿದೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಕುರಿತಂತೆ ಗುರುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಾರುಕಟ್ಟೆಯಲ್ಲಿನ ಬೆಲೆಯ ಮೇಲೆ ನಿಗಾವಹಿಸುವಂತೆ ಅಧಿಕಾರಿಗಳಿಗೆ ಸಚಿವ ಶಾ ಅವರು, ನಿರ್ದೇಶನ ನೀಡಿದ್ದಾರೆ ಎಂದು ತಿಳಿಸಿದೆ.

ಸಚಿವಾಲಯದ ಅಂಕಿಅಂಶದ ಪ್ರಕಾರ, ಕಳೆದ ಒಂದು ವರ್ಷದ ಅವಧಿಯಲ್ಲಿ ಗೋಧಿ ಮತ್ತು ಗೋಧಿ ಹಿಟ್ಟಿನ ಬೆಲೆಯಲ್ಲಿ ಶೇ 2ರಷ್ಟು ಏರಿಕೆಯಾಗಿದೆ.

ಕಳೆದ ವರ್ಷಕ್ಕಿಂತಲೂ ಈ ವರ್ಷದಲ್ಲಿ ಸರ್ಕಾರವು ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಕಾಪು ದಾಸ್ತಾನು ಮಾಡಿದೆ. ಪಡಿತರ ವಿತರಣೆ ಸೇರಿ ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ ವಾರ್ಷಿಕ 18.4 ದಶಲಕ್ಷ ಟನ್‌ನಷ್ಟು ಗೋಧಿಯ ಅಗತ್ಯವಿದೆ ಎಂದು ತಿಳಿಸಿದೆ.

ಸಚಿವೆ ನಿರ್ಮಲಾಗೆ ಕೈಗಾರಿಕಾ ಒಕ್ಕೂಟದ ಮನವಿ

'ಅಧಿಕ ತೆರಿಗೆ ಹೊರೆ ಇಳಿಸಿ'

ನವದೆಹಲಿ (ಪಿಟಿಐ): ದೇಶದ ಜನಸಾಮಾನ್ಯರು ಅತಿಯಾದ ತೆರಿಗೆ ಹೊರೆಯಿಂದ ಪರಿತಪಿಸುತ್ತಿದ್ದು, ಅದನ್ನು ಇಳಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಕ್ರಮಕೈಗೊಳ್ಳಬೇಕಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟಗಳು ಒತ್ತಾಯಿಸಿವೆ.

ಗುರುವಾರ ನಡೆದ 2024–25ನೇ ಆರ್ಥಿಕ ಸಾಲಿನ ಬಜೆಟ್ ಪೂರ್ವ ಸಮಾಲೋಚನಾ ಸಭೆಯಲ್ಲಿ ಕೈಗಾರಿಕಾ ವಲಯದ ಮುಖಂಡರು ಮತ್ತು ಒಕ್ಕೂಟದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಬಜೆಟ್ ಪೂರ್ವ ಸಮಾಲೋಚನೆ ಕುರಿತಂತೆ ನವದೆಹಲಿಯಲ್ಲಿ ಗುರುವಾರ ಕೈಗಾರಿಕಾ ವಲಯದ ಮುಖಂಡರು ಮತ್ತು ಒಕ್ಕೂಟಗಳೊಟ್ಟಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಭೆ ನಡೆಸಿದರು –ಪಿಟಿಐ ಚಿತ್ರ

ಸರ್ಕಾರವು ಬಂಡವಾಳ ವೆಚ್ಚವನ್ನು ಹೆಚ್ಚಿಸಬೇಕು. ಆಹಾರ ಹಣದುಬ್ಬರದ ಇಳಿಕೆಗೆ ಸಂಬಂಧಿಸಿದಂತೆ ಕೈಗೊಳ್ಳುವ ಕ್ರಮಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಬೇಕಿದೆ ಎಂದು ಸಲಹೆ ಮುಂದಿಟ್ಟರು.

ದೇಶದ ಆರ್ಥಿಕತೆಗೆ ಮತ್ತಷ್ಟು ವೇಗ ಸಿಗಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರವು ಮೂಲ ಸೌಕರ್ಯ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕಿದೆ ಎಂದು ಕೋರಿದರು.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು (ಎಂಎಸ್‌ಎಂಇ) ದೇಶದ ಆರ್ಥಿಕತೆಯ ಬೆನ್ನೆಲುಬಾಗಿವೆ. ಈ ವಲಯದಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ. ಹಾಗಾಗಿ, ವಲಯದ ಬಲವರ್ಧನೆಗೆ ಒತ್ತು ನೀಡಬೇಕಿದೆ ಎಂದು ಸಲಹೆ ನೀಡಿದರು.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಕ್ಷ ಸಂಜೀವ್ ಪುರಿ, 'ತೆರಿಗೆ ಸ್ಲ್ಯಾಬ್‌ಗಳಲ್ಲಿ ಬದಲಾವಣೆ ಮಾಡಬೇಕು. ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯನ್ನು ಮತ್ತಷ್ಟು ಸುಗಮಗೊಳಿಸಬೇಕು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ವಿಶೇಷ ಒತ್ತು ನೀಡಬೇಕು' ಎಂದು ಒತ್ತಾಯಿಸಿದರು.

ಎಫ್‌ಐಸಿಸಿಐ ಅಧ್ಯಕ್ಷ ಸುಬ್ರಕಾಂತ್ ಪಾಂಡ ಮಾತನಾಡಿ, 'ತೆರಿಗೆ ಪದ್ಧತಿಯನ್ನು ಸರಳೀಕರಿಬೇಕು. ಹಣದುಬ್ಬರ ನಿಯಂತ್ರಣಕ್ಕೆ ಕ್ರಮವಹಿಸಬೇಕು. ಸರ್ಕಾರದ ಬಂಡವಾಳ ವೆಚ್ಚವನ್ನು ಹೆಚ್ಚಿಸಬೇಕು' ಎಂದು ಕೋರಿದರು.

ರೂಪಾಯಿ ಮೌಲ್ಯ 17 ಪೈಸೆ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಗುರುವಾರ ರೂಪಾಯಿ ಮೌಲ್ಯವು 17 ಪೈಸೆ ಕುಸಿದಿದ್ದು, ಎರಡು ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹83.61ಕ್ಕೆ ತಲುಪಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ. ಇದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿದೆ. ದೇಶೀಯ ಷೇರುಪೇಟೆಗಳು ಏರಿಕೆ ದಾಖಲಿಸಿದರೂ ರೂಪಾಯಿಯು ಚೇತರಿಕೆ ಕಾಣಲಿಲ್ಲ. ಸೆನ್ಸೆಕ್ಸ್ 141 ಅಂಶ ಏರಿಕೆ ಕಂಡು, 77,478 ಅಂಶಕ್ಕೆ ತಲುಪಿದೆ. ನಿಫ್ಟಿ 51 ಅಂಶ ಏರಿಕೆ ಕಂಡು, 23,567 ಅಂಶಗಳಲ್ಲಿ ಸ್ಥಿರಗೊಂಡಿತು.

ರಾನಿಲ್ ಜೊತೆ ಜೈಶಂಕರ್ ಚರ್ಚೆ

ಕೊಲಂಬೊ (ಪಿಟಿಐ): ಭಾರತದ ₹50.18 ಕೋಟಿ ಆರ್ಥಿಕ ನೆರವಿನಲ್ಲಿ ಅಭಿವೃದ್ಧಿಪಡಿಸಿದ 'ಕಡಲತಡಿಯ ರಕ್ಷಣಾ ಸಂಯೋಜನಾ ಕೇಂದ್ರ'ವನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಇಲ್ಲಿ ಉದ್ಘಾಟಿಸಿದರು.

ಶ್ರೀಲಂಕಾ ಪ್ರವಾಸದಲ್ಲಿರುವ ಸಚಿವ ಜೈಶಂಕರ್, ಇದೇ ವೇಳೆ ಪ್ರಧಾನಿ ದಿನೇಶ್ ಗುಣವರ್ಧನಾ ಅವರನ್ನು ಭೇಟಿಯಾಗಿ ಚರ್ಚಿಸಿದ್ದು, ಅಭಿವೃದ್ಧಿ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಭಾರತ ಅಗತ್ಯ ಬೆಂಬಲ ನೀಡಲಿದೆ ಎಂಬ ಬದ್ಧತೆಯನ್ನು ಪುನರುಚ್ಚರಿಸಿದರು.

ವಿದ್ಯುತ್, ಇಂಧನ, ಸಂವಹನ, ಬಂದರು ಮೂಲಸೌಕರ್ಯ, ವೈಮಾನಿಕ, ಡಿಜಿಟಲ್, ಆರೋಗ್ಯ, ಆಹಾರ ಭದ್ರತೆ, ಶಿಕ್ಷಣ, ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಪಡಿಸುವ ಕುರಿತಂತೆ ಶ್ರೀಲಂಕಾ ಅಧ್ಯಕ್ಷರ ಜೊತೆ ಚರ್ಚಿಸಿದರು.

ಭೇಟಿ ಕುರಿತಂತೆ 'ಎಕ್ಸ್'ನಲ್ಲಿಯೂ ಜೈಶಂಕರ್ ಸಂದೇಶ ಹಂಚಿಕೊಂಡಿದ್ದಾರೆ. ಅಭಿವೃದ್ಧಿ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳು ಶ್ರೀಲಂಕಾದಲ್ಲಿನ ಜನರ ನಿರೀಕ್ಷೆಗಳನ್ನು ಈಡೇರಿಸಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

₹60,523 ಕೋಟಿ ಮೌಲ್ಯದ ಉತ್ಪನ್ನ ರವಾನೆ

ಸಾಗರೋತ್ಪನ್ನ ರಫ್ತು ದಾಖಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: 2023-24ನೇ ಆರ್ಥಿಕ ವರ್ಷದಲ್ಲಿ ಭಾರತವು ₹60,523 ಕೋಟಿ ಮೌಲ್ಯದ ಒಟ್ಟು 17.81ಲಕ್ಷ ಟನ್ ಸಾಗರೋತ್ಪನ್ನಗಳನ್ನು ರಫ್ತು ಮಾಡಿದ್ದು, ದಾಖಲೆಯಾಗಿದೆ.

ಶೀತಲೀಕರಿಸಿದ ಸಿಗಡಿಗಳು, ಮೀನು ಪ್ರಮುಖ ರಫ್ತು ಉತ್ಪನ್ನವಾಗಿ ಮುಂದುವರಿದಿವೆ. ಯುಎಸ್‌ಎ ಮತ್ತು ಚೀನಾ ಸಾಗರೋತ್ಪನ್ನಗಳ ಪ್ರಮುಖ ಆಮದು ದೇಶಗಳಾಗಿವೆ.

2023-24ನೇ ಸಾಲಿನಲ್ಲಿ ಭಾರತದ ರಫ್ತು ಪ್ರಮಾಣ ಶೇ 2.67ರಷ್ಟು ವೃದ್ಧಿಸಿದೆ. 2022-23ನೇ ಸಾಲಿನಲ್ಲಿ ₹63,969 ಕೋಟಿ ಮೌಲ್ಯದ ಒಟ್ಟು 17.35 ಲಕ್ಷ ಟನ್ ಸಾಗರೋತ್ಪನ್ನಗಳನ್ನು ರಫ್ತು ಮಾಡಲಾಗಿತ್ತು ಎಂದು ಸಾಗರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಿ.ವಿ. ಸ್ವಾಮಿ ತಿಳಿಸಿದ್ದಾರೆ.

ಭಾರತವು ₹40,013 ಕೋಟಿ ವಿದೇಶಿ ವಿನಿಮಯ ಗಳಿಸಿ, ಶೀತಲೀಕರಿಸಿದ ಸಿಗಡಿ ರಫ್ತು ವಹಿವಾಟಿನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ರಫ್ತು ಪ್ರಮಾಣದಲ್ಲಿ ಶೇ 40.19ರಷ್ಟು ಮತ್ತು ಒಟ್ಟು ಡಾಲರ್ ಗಳಿಕೆಯಲ್ಲಿ ಶೇ 66.12ರಷ್ಟು ಪಾಲು ಹೊಂದಿದ್ದು, 2023-24ರಲ್ಲಿ ಸಿಗಡಿ ರಫ್ತು ಪ್ರಮಾಣವು ಶೇ 0.69ರಷ್ಟು ಹೆಚ್ಚಾಗಿದೆ.

ಶೀತಲೀಕರಿಸಿದ ಸಿಗಡಿ ಉತ್ಪನ್ನಗಳ ಒಟ್ಟು ರಫ್ತು 7.16 ಲಕ್ಷ ಟನ್ ಆಗಿದೆ. ಟೈಗರ್ ಸಿಗಡಿಗಳ ರಫ್ತು ಪ್ರಮಾಣ ಶೇ 24.91ರಷ್ಟು ಏರಿಕೆ ಕಂಡಿದೆ. ₹2,855 ಕೋಟಿ ಮೌಲ್ಯದ 38,987 ಟನ್ ಟೈಗರ್ ಸಿಗಡಿ ರಫ್ತು ಮಾಡಲಾಗಿದೆ. ವನ್ನಾಮಿ ಸಿಗಡಿ ಉತ್ಪನ್ನಗಳ ರಫ್ತು ಪ್ರಮಾಣದಲ್ಲಿ ಶೇ 0.33ರಷ್ಟು ಬೆಳವಣಿಗೆ ಸಾಧಿಸಿದ್ದರೂ, ರಫ್ತಿನ ಮೌಲ್ಯದಲ್ಲಿ ಶೇ 11.56ರಷ್ಟು ಕುಸಿತವಾಗಿದೆ ಎಂದಿದ್ದಾರೆ.

ಶೀತಲೀಕರಿಸಿದ ಮೀನುಗಳ ರಫ್ತಿನಲ್ಲಿ ₹5,509 ಕೋಟಿ ವಿದೇಶಿ ವಿನಿಮಯ ಗಳಿಸಿದೆ. ಫಿಶ್ ಮೀಲ್ ಮತ್ತು ಫೀಡ್, ಒಣಗಿಸಿದ ಉತ್ಪನ್ನಗಳ ರಫ್ತು ವಹಿವಾಟಿನಲ್ಲಿ ₹3684.79 ಕೋಟಿ ಆದಾಯ ಲಭಿಸಿದೆ.

ಶೀತಲೀಕರಿಸಿದ ಬೊಂಡಾಸ್ ₹3,061 ಕೋಟಿ ವಿದೇಶಿ ವಿನಿಮಯ ದಾಖಲಿಸಿದೆ. ಸುರಿಮಿ ಮತ್ತು ಸುರಿಮಿ ಆಧಾರಿತ ಉತ್ಪನ್ನಗಳ ರಫ್ತಿನಲ್ಲಿ ಶೇ4.12ರಷ್ಟು ಬೆಳವಣಿಗೆಯಾಗಿದೆ. ಕಪ್ಪೆ ಬೊಂಡಾಸ್ ಉತ್ಪನ್ನಗಳ ರಫ್ತಿನಲ್ಲಿ ₹2,252 ಕೋಟಿ ಆದಾಯ ದೊರೆತಿದೆ. ಚಿಲ್ಡ್ ಮೀನು, ಆಕ್ಟೋಪಸ್, ಮೀನಿನ ಎಣ್ಣೆ, ಜೀವಂತ ಮೀನುಗಳ ರಫ್ತು, ಕೊಂಬು ಸಿಗಡಿ, ಫಿಶ್ ಮಾವ್ಸ್‌ಗಳ ರಫ್ತಿನಲ್ಲೂ ಆದಾಯ ವೃದ್ಧಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-8800
ಮಧುಗಿರಿ	₹3900-7500
ಮಳವಳ್ಳಿ	₹5000-5000
ತುರುವೇಕೆರೆ	₹7800-8800

ಇಸ್ರೊ–ನಾಸಾ ಬಾಂಧವ್ಯಕ್ಕೆ ಹೆಚ್ಚಿನ ಬಲ

ವಾಷಿಂಗ್ಟನ್ (ಪಿಟಿಐ): 'ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಜೊತೆಗಿನ ಸಹಭಾಗಿತ್ವವನ್ನು ಇನ್ನಷ್ಟು ವಿಸ್ತರಿಸಲಾಗುವುದು' ಎಂದು 'ನಾಸಾ' ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿದ್ದಾರೆ.

ಭಾರತದ ಗಗನಯಾತ್ರಿಯ ಜೊತೆಗೂಡಿ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಜಂಟಿ ಕಾರ್ಯಾಚರಣೆ ನಡೆಸುವುದೂ ಇದರಲ್ಲಿ ಸೇರಿದೆ ಎಂದು ಗುರುವಾರ ತಿಳಿಸಿದರು. ಕ್ರಮವಾಗಿ ಭಾರತ ಮತ್ತು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ಡೊಭಾಲ್ ಮತ್ತು ಜೇಕ್ ಸುಲಿವಾನ್, 'ಇಸ್ರೊದ ಗಗನಯಾತ್ರಿಗಳಿಗೆ ಅಮೆರಿಕದಲ್ಲಿ ತರಬೇತಿ ನೀಡಲಾಗುವುದು' ಎಂದು ಜಂಟಿ ಹೇಳಿಕೆ ನೀಡಿದ ಹಿಂದೆಯೇ ಈ ಮಾತು ಹೇಳಿದ್ದಾರೆ.

ರಾಮಾಯಣ ಅಣಕಿಸುವ ನಾಟಕ ಐಐಟಿ ವಿದ್ಯಾರ್ಥಿಗಳಿಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಮುಂಬೈ: ಇಲ್ಲಿನ ಪವಾಯಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಬಾಂಬೆ (ಐಐಟಿ- ಬಾಂಬೆ) ವಿದ್ಯಾರ್ಥಿಗಳು ರಾಮಾಯಣವನ್ನು ಅಣಕಿಸುವ ನಾಟಕ ಪ್ರದರ್ಶಿಸಿದ್ದು ವಿವಾದಕ್ಕೆ ಕಾರಣವಾಗಿದೆ. ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ಭಾರಿ ದಂಡ ವಿಧಿಸಲಾಗಿದೆ.

ಐಐಟಿ–ಬಾಂಬೆಯ ಪ್ರದರ್ಶಕ ಕಲೆಗಳ ಉತ್ಸವದ ಅಂಗವಾಗಿ ಪ್ರದರ್ಶಿಸಿದ 'ರಾಹೋವನ್' ಹೆಸರಿನ ನಾಟಕವು ಹಿಂದೂಗಳ ಸಂಸ್ಕೃತಿಯನ್ನು ಅಣಕಿಸಿದೆಯಲ್ಲದೆ, ಅವರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದೆ ಎಂದು ಆರೋಪಿಸಲಾಗಿದೆ.

ಇದೇ ವರ್ಷ ಮಾರ್ಚ್ 31ರಂದು ನಾಟಕ ಪ್ರದರ್ಶನ ನಡೆದಿದ್ದು, ಅದರ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ನಾಟಕವು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಐಐಟಿ-ಬಾಂಬೆ ಶಿಸ್ತು ಸಮಿತಿಯು ಮೇ 8ರಂದು ಸಭೆ ಸೇರಿತ್ತು. ಆದರೆ, ವಿದ್ಯಾರ್ಥಿಗಳಿಗೆ ದಂಡ ವಿಧಿಸುವ ತೀರ್ಮಾನವನ್ನು ಜೂನ್ 4ರಂದು ತೆಗೆದುಕೊಂಡಿದೆ. ದಂಡ ಪಾವತಿಸಲು ಜೂನ್ 30ರ ಗಡುವನ್ನೂ ವಿಧಿಸಿದೆ.

ನಾಟಕದಲ್ಲಿ ಭಾಗಿಯಾದ ಕೆಲವು ವಿದ್ಯಾರ್ಥಿಗಳಿಗೆ ₹1.2 ಲಕ್ಷ ದಂಡ ಹಾಗೂ ಇನ್ನು ಕೆಲವರಿಗೆ ₹40 ಸಾವಿರ ದಂಡ ವಿಧಿಸಲಾಗಿದೆ ಎಂದು ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಡೀನ್ ಹೇಳಿದ್ದಾರೆ.

'ರಾಮಾಯಣವನ್ನು ಕೆಟ್ಟದಾಗಿ ಚಿತ್ರಿಸಿದ 'ರಾಹೋವನ್' ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡಿರುವುದನ್ನು ಸ್ವಾಗತಿಸುತ್ತೇವೆ. ಈ ವಿದ್ಯಾರ್ಥಿಗಳು ಭಗವಾನ್ ರಾಮ, ಸೀತಾ ಮಾತೆ ಮತ್ತು ಭಗವಾನ್ ಲಕ್ಷ್ಮಣರನ್ನು ಅಪಹಾಸ್ಯ ಮಾಡಲು ತಮ್ಮ ಶೈಕ್ಷಣಿಕ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು @ಐಐಟಿಬಿ ಫಾರ್ ಭಾರತ್‌ಎಂಬ 'ಎಕ್ಸ್' ಖಾತೆಯಲ್ಲಿ ಬರೆಯಲಾಗಿದೆ.

ಲೆವೆಲ್ ಕ್ರಾಸಿಂಗ್‌ಗಳಿಗೆ ಮುಕ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲು ಸುರಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ಭಾರತೀಯ ರೈಲ್ವೆಯು ದೇಶದಾದ್ಯಂತ ಎಲ್ಲ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳಿಗೆ ಮುಕ್ತಿ ನೀಡಲು ಯೋಜನೆ ರೂಪಿಸಿದೆ. ಇದಕ್ಕಾಗಿ 17 ಸಾವಿರಕ್ಕೂ ಅಧಿಕ ಮೇಲ್ಸೇತುವೆ (ರೋಡ್ ಓವರ್‌ಬ್ರಿಜ್- ಆರ್‌ಒಬಿ) ಮತ್ತು ಅಂಡರ್‌ಪಾಸ್‌ಗಳನ್ನು (ರೋಡ್ ಅಂಡರ್‌ಬ್ರಿಜ್ -ಆರ್‌ಯುಬಿ) ನಿರ್ಮಿಸಲು ಮುಂದಾಗಿದೆ.

ರೈಲ್ವೆಯ ವಿವಿಧ ವಲಯಗಳಲ್ಲಿ ಮುಂದಿನ 14 ವರ್ಷಗಳಲ್ಲಿ ಒಟ್ಟು 17,083 ಆರ್‌ಒಬಿ/ ಆರ್‌ಯುಬಿ ನಿರ್ಮಾಣ ಮಾಡಲಾಗುವುದು. ಅದರಲ್ಲಿ 750 ಮೇಲ್ಸೇತುವೆ ಮತ್ತು ಅಂಡರ್‌ಪಾಸ್‌ಗಳ ನಿರ್ಮಾಣ ಕಾರ್ಯ ಈ ಹಣಕಾಸು ವರ್ಷದಲ್ಲಿ ಪೂರ್ಣಗೊಳಿಸಲಾಗುವುದು ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ರೈಲು ಅಪಘಾತ ಪ್ರಮಾಣ ಕಡಿಮೆ ಮಾಡಲು ರೈಲ್ವೆಯು ಈಗಾಗಲೇ ದೇಶದ ಎಲ್ಲ ಕಡೆ ಕಾವಲುರಹಿತ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದು ಹಾಕಿದೆ. ಇದೀಗ ಲೆವೆಲ್ ಕ್ರಾಸಿಂಗ್‌ಗಳನ್ನೇ ತೆಗೆದುಹಾಕಲು ಮುಂದಾಗಿದೆ.

2004–2014ರ ಅವಧಿಯಲ್ಲಿ 825 ಮತ್ತು 2014–2024ರ ಅವಧಿಯಲ್ಲಿ 1,760 ಕಾವಲುರಹಿತ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲಾಗಿದೆ. ಇದೇ ಅವಧಿಯಲ್ಲಿ ಒಟ್ಟು 1,610 ಆರ್‌ಒಬಿ/ ಆರ್‌ಯುಬಿ ನಿರ್ಮಿಸಲಾಗಿದೆ.

ಈ ಹಿಂದೆ, ಕಾವಲುರಹಿತ ಲೆವೆಲ್ ಕ್ರಾಸಿಂಗ್‌ಗಳು ರೈಲು ಅಪಘಾತಗಳಿಗೆ ಪ್ರಮುಖ ತಾಣಗಳಾಗಿದ್ದವು. ಎಲ್ಲ ಕಾವಲುರಹಿತ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಿರುವುದರಿಂದ ಅಪಘಾತದ ಪ್ರಮಾಣ ಗಣನೀಯವಾಗಿ ತಗ್ಗಿದೆ. 2004–14ರ ಅವಧಿಯಲ್ಲಿ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ 143 ಮಂದಿ ಮೃತಪಟ್ಟಿದ್ದರೆ, 2014–24ರ ಅವಧಿಯಲ್ಲಿ ಸಾವಿನ ಪ್ರಮಾಣ 26ಕ್ಕೆ ಕಡಿಮೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಹೆದ್ದಾರಿಗಳು ಹೊರತುಪಡಿಸಿ ಉಳಿದ ಕಡೆ ಲೆವೆಲ್ ಕ್ರಾಸಿಂಗ್‌ಗಳಿಗೆ ಒಪ್ಪಿಗೆ ನೀಡುವ ಮತ್ತು ನಿರ್ಮಾಣ ಕೆಲಸವನ್ನು ರೈಲ್ವೆ ಇಲಾಖೆಯು ಸ್ವಂತ ಖರ್ಚಿನಲ್ಲಿ ಮಾಡಲಿದೆ. ಆದ್ಯತೆ, ಕಾರ್ಯಸಾಧ್ಯತೆ, ಅನುದಾನದ ಲಭ್ಯತೆಯ ಆಧಾರದ ಮೇಲೆ ನಿರ್ಮಾಣ ಕೆಲಸ ತೆಗೆದುಕೊಳ್ಳಲು ಯೋಜನೆರೂಪಿಸಿದೆ.

ಬಿಜೆಪಿ ಮಾಜಿ ಶಾಸಕ, ಇತರ ಐವರಿಗೆ ಜೈಲು

ರಾಂಪುರ(ಉತ್ತರ ಪ್ರದೇಶ)(ಪಿಟಿಐ): 12 ವರ್ಷದ ಹಿಂದಿನ ಪ್ರಕರಣವೊಂದರಲ್ಲಿ ಬಿಜೆಪಿಯ ಮಾಜಿ ಶಾಸಕ ಕಾಶಿರಾಮ್ ದಿವಾಕರ ಹಾಗೂ ಇತರ ಐದು ಜನರಿಗೆ ಇಲ್ಲಿನ ಸಂಸದರ–ಶಾಸಕರ ವಿಶೇಷ ನ್ಯಾಯಾಲಯವು 7 ವರ್ಷ ಜೈಲು ಶಿಕ್ಷೆ ಹಾಗೂ ತಲಾ ₹1.01 ಲಕ್ಷ ದಂಡ ವಿಧಿಸಿ ಗುರುವಾರ ಆದೇಶಿಸಿದೆ.

ಪ್ರಕರಣದಲ್ಲಿ ಎಲ್ಲ ಆರು ಜನರು ತಪ್ಪಿತಸ್ಥರು ಎಂದು ನ್ಯಾಯಾಲಯದ ನ್ಯಾಯಾಧೀಶ ವಿಜಯಕುಮಾರ್ ಬುಧವಾರ ಹೇಳಿದ್ದರು. ಕೃಷ್ಣಪಾಲ್, ಭರತ್, ಸಂಜು ಯಾದವ್, ಮೇಘರಾಜ್ ಹಾಗೂ ಸುರೇಶ ಗುಪ್ತಾ ಶಿಕ್ಷೆಗೆ ಒಳಗಾದವರು. ಸಾಕ್ಷ್ಯಾಧಾರ ಕೊರತೆಯಿಂದಾಗಿ ನ್ಯಾಯಾಲಯವು ಇತರ 21 ಜನರನ್ನು ಖುಲಾಸೆಗೊಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

REQUIRED EXPERIENCED Telecaller, Field Executive For Bank Loan collection Salary + Incentive, Commission. 9916276701, 9900709308.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/–. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9148525233

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ. 13,000/- - 17,000/-, 8951315839, 9141634619

ಶಿಕ್ಷಣ

Training

ವಿಜಯನಗರ, ರಾಮಮೂರ್ತಿನಗರ, ಬನಶಂಕರಿಯಲ್ಲಿರುವ ಸಂಭವ್ ಫೌಂಡೇಶನ್ ನಿಂದ ಹೇರ್ & ಬ್ಯೂಟಿ ಕೋರ್ಸ್‌ಗಳು. 5 ತಿಂಗಳಲ್ಲಿ ಇಂಟರ್ನ್‌ಶಿಪ್ ಮತ್ತು ಪ್ಲೇಸ್‌ಮೆಂಟ್. ಕಲಿಯಿರಿ ಮತ್ತು ಗಳಿಸಿ @ ರೂ . 500 ದೈನಂದಿನ : + 91 9620414072, 9011264528

ಪ್ರವಾಸ

Travel

ಸಪ್ಟೆಂಬರ್ ತಿಂಗಳಲ್ಲಿ ಚಾರ್ ಧಾಮ್ ಯಾತ್ರಾ ಕಾಶಿ,ಅಯೋಧ್ಯ. ಗಯಾ ಕಲ್ಕತ್ತ ಪುರಿಜಗನ್ನಾಥ ಯಾತ್ರಾ ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ ವೈಷ್ಣೋದೇವಿ ಕಾಶ್ಮೀರ ಕುರುಕ್ಷೇತ್ರ ಅಮೃತಸರ್ ಆಗ್ರ,ದೆಹಲಿ ಇತ್ಯಾದಿ 28000/ 40000/(ಕೆಲವೇ ಸೀಟುಗಳಿವೆ) ಆಗಸ್ಟ್/ ಸೆಪ್ಟಂಬರ್‌ನಲ್ಲಿ 6ದಿನಗಳು ಕಾಶಿ ಅಯೋಧ್ಯಯಾತ್ರೆಗೆ 32000/ 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219/ 9886968166

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 17.07.2024 ರಾಮೇಶ್ವರ ಕನ್ಯಾಕುಮಾರಿ ಇತ್ಯಾದಿ. 26.07.2024 ಸಮಗ್ರಕೇರಳ ಪಳನಿ ಕನ್ಯಾಕುಮಾರಿ ಇತ್ಯಾದಿ.16.09.2024 ವೈಷ್ಣೋದೇವಿ ಯಾತ್ರಾ. 9448390735 9449721678

ಭವಿಷ್ಯ

Astrology

★ಪರಮಶ್ರೇಷ್ಠ★ ಶ್ರೀದೇವಾನಂದನ್‌ರವರಿಂದ ನಿಮ್ಮ ಎಲ್ಲಾ ಪರಿಹಾರವಾಗದ ವಿವಾಹ,ಕುಟುಂಬ,ದಾಂಪತ್ಯ ಕಲಹ,ಬಂಜೆತನ ದುರ್ನಡತೆ, ದುಶ್ಚಟ,ಸಾಲ,ಶತ್ರು ರೋಗ ಲೈಂಗಿಕತೆ, ಸ್ತ್ರೀಪುರುಷ ವಶೀಕರಣಕ್ಕೆ ಸಂಪರ್ಕಿಸಿರಿ: 9845005009

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

@ 500/-* PER SQCM

www.dhclassifieds.com

BOOK NOW

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9731810277
+91 9901641752 | 9845114560

*Conditions apply

ಕರ್ನಾಟಕ ಕ್ರಿಕೆಟ್ ವಲಯದಲ್ಲಿ ಮೂಡಿದ ಆಘಾತ

ವೇಗದ ಪರಂಪರೆಯ ಕೊಂಡಿ ಡೇವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ವೇಗದ ಬೌಲರ್‌ಗಳ ಪರಂಪರೆಯಲ್ಲಿ ಪ್ರಮುಖ ಹೆಸರು ಡೇವಿಡ್ ಜೂಡ್ ಜಾನ್ಸನ್ ಅವರದ್ದು.

1993ರಿಂದ ಒಂದು ದಶಕದ ಕಾಲ ದೇಶಿ ಕ್ರಿಕೆಟ್‌ನಲ್ಲಿ ದೂಳೆಬ್ಬಿಸಿದ್ದ ಶರವೇಗಿ ಡೇವಿಡ್. ಆ ಕಾಲಘಟ್ಟದಲ್ಲಿ ವೇಗದ ತಾರೆ ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್ ಮತ್ತು ದೊಡ್ಡಗಣೇಶ್ ಅವರೊಂದಿಗೆ ಕರ್ನಾಟಕದ ವೇಗದ ಬೌಲಿಂಗ್ ವಿಭಾಗವನ್ನು ಬಲಾಢ್ಯಗೊಳಿಸಿದ್ದವರು ಡೇವಿಡ್. ಇವರೆಲ್ಲರೂ ಒಂದೇ ಕಾಲಘಟ್ಟದಲ್ಲಿ ಮಿಂಚಿದ್ದು, ಕರ್ನಾಟಕದಲ್ಲಿ ವೇಗದ ಬೌಲಿಂಗ್ ಬೆಳವಣಿಗೆಗೆ ಗಟ್ಟಿ ಬುನಾದಿಯಾಯಿತು.

ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಜನಿಸಿ ಭಾರತ ಕ್ರಿಕೆಟ್ ತಂಡದಲ್ಲಿ ಆಡುವ ಮಟ್ಟಕ್ಕೆ ಬೆಳೆದಿದ್ದು ಡೇವಿಡ್ ಅವರದ್ದು ಸಣ್ಣ ಸಾಧನೆಯೇನಲ್ಲ. ಅವರಿಗೆ ಬಾಲ್ಯದಿಂದಲೂ ಬೌಲಿಂಗ್ ಮೇಲೆಯೇ ಹೆಚ್ಚು ಪ್ರೀತಿ. ಬ್ಯಾಟರ್‌ಗಳ ವಿರುದ್ಧ ಸದಾ ಪ್ರಾಬಲ್ಯ ಮೆರೆಯಲು ತುಡಿಯುತ್ತಿದ್ದರು. ಬಲಗೈ ಮಧ್ಯಮವೇಗಿಯಾಗಿದ್ದ ಡೇವಿಡ್ ಜಾನ್ಸನ್ ತಮ್ಮ 17ನೇ ವಯಸ್ಸಿನಲ್ಲಿ ಹೊನಲು ಬೆಳಕಿನ ಟೆನಿಸ್ ಕ್ರಿಕೆಟ್ ಪಂದ್ಯದಲ್ಲಿ 8 ವಿಕೆಟ್ ಗಳಿಸಿದ್ದರು.

ಇದನ್ನು ಗಮನಿಸಿದ ಅವರ ಸ್ನೇಹಿತರೊಬ್ಬರು ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್‌ನಲ್ಲಿ ಆಡಲು ಆಹ್ವಾನಿಸಿದರು. ಆರಂಭದಲ್ಲಿ ಡೇವಿಡ್ ಒಪ್ಪಿರಲಿಲ್ಲ. ಕೆಲಕಾಲದ ನಂತರ ಕ್ಲಬ್ ಸೇರಿಕೊಂಡರು. ಅಲ್ಲಿಂದ ಹಿಂದಿರುಗಿ ನೋಡಲಿಲ್ಲ. ಶಫಿ ದಾರಾಶಾ ಟೂರ್ನಿಯಲ್ಲಿ ಮಿಂಚಿದರು. ಎಂಟು ವಿಕೆಟ್ ಕಬಳಿಸಿದರು. ನಂತರ ಕರ್ನಾಟಕ ರಣಜಿ ಟ್ರೋಫಿ ತಂಡದಲ್ಲಿ ಸ್ಥಾನ ಪಡೆದರು. ಅಲ್ಲಿಯೂ ಮಿಂಚಿದ ಅವರು ಭಾರತ ಎ ತಂಡದಲ್ಲಿಯೂ ಆಡಿದರು.

ಆ ಸಂದರ್ಭದಲ್ಲಿ ಸುಮಾರು 150 ಕಿಲೋಮೀಟರ್‌ಗಿಂತಲೂ ಹೆಚ್ಚು ವೇಗದ ಎಸೆತಗಳನ್ನು ಪ್ರಯೋಗಿಸುತ್ತಿದ್ದ ಡೇವಿಡ್ ಭುಜಬಲವನ್ನು ನೋಡಿ ಕಣ್ಣಗಲಿಸಿದವರು ಹಲವರು. ಅವರು 'ದಿಟ್ಟೆದೆಯ ಬೌಲರ್' ಎಂದೇ ಪ್ರಸಿದ್ಧರಾದವರು.

1995–96ರ ರಣಜಿ ಟ್ರೋಫಿ ಟೂರ್ನಿಯಲ್ಲಿ ಕೇರಳ ವಿರುದ್ಧದ ಪಂದ್ಯದಲ್ಲಿ 152ಕ್ಕೆ10 ವಿಕೆಟ್ ಗಳಿಸಿದರು. ಅದರೊಂದಿಗೆ ಭಾರತ ತಂಡದ ಆಯ್ಕೆಗಾರರಗಮನಸೆಳೆದರು.

ಅದೇ ವರ್ಷ ದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಡೇವಿಡ್ ಪದಾರ್ಪಣೆ ಮಾಡಿದ್ದರು. ಆ ಪಂದ್ಯದಲ್ಲಿ ಸುನಿಲ್ ಜೋಶಿ, ಅನಿಲ್ ಕುಂಬ್ಳೆ ಮತ್ತು ವೆಂಕಟೇಶ್ ಪ್ರಸಾದ್ ಕೂಡ ಇದ್ದರು. ಆಸ್ಟ್ರೇಲಿಯಾದ ಮೈಕೆಲ್ ಸ್ಲೇಟರ್ ಅವರನ್ನು ಶೂನ್ಯಕ್ಕೆ ಔಟ್ ಮಾಡಿದ್ದ ಜಾನ್ಸನ್ ಟೆಸ್ಟ್ ಕ್ರಿಕೆಟ್‌ನಲ್ಲಿ ವಿಕೆಟ್ ಖಾತೆ ತೆರೆದಿದ್ದರು. ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್‌ನಲ್ಲಿಯೂ ಎರಡು ವಿಕೆಟ್ (ಹರ್ಷಲ್ ಗಿಬ್ಸ್ ಹಾಗೂ ಮೆಕ್‌ಮಿಲನ್) ಗಳಿಸಿದ್ದರು. ಆದರೆ ಅವರ ಅಂತರರಾಷ್ಟ್ರೀಯ ಕ್ರಿಕೆಟ್ ಪಯಣ ಎರಡು ಟೆಸ್ಟ್‌ಗಳಿಗೆ ಸೀಮಿತವಾಯಿತು. ಅವರಿಗಿದ್ದ ಪ್ರತಿಭೆ ಹಾಗೂ ಸಾಮರ್ಥ್ಯಕ್ಕೆ ಇನ್ನೂ ಎತ್ತರಕ್ಕೆ ಬೆಳೆಯಬೇಕಿತ್ತು ಎಂದು ಅವರ ಸಮಕಾಲೀನ ಆಟಗಾರರು ಹೇಳುತ್ತಾರೆ.

'ನಾನು ಮತ್ತು ಡೇವಿಡ್ ಜೂನಿಯರ್ ಕ್ರಿಕೆಟ್‌ನಿಂದ ಜೊತೆಗೆ ಆಡಿದವರು. ಕರ್ನಾಟಕ ತಂಡಕ್ಕೆ ನಾನು ನಾಯಕತ್ವ ವಹಿಸಿದಾಗ ಅವರೂ ತಂಡದಲ್ಲಿದ್ದರು. ಯಾವುದೇ ಪಂದ್ಯದ ಯಾವುದೇ ಹಂತದಲ್ಲಿ ಅವರಿಗೆ ಚೆಂಡು ಕೊಟ್ಟರೂ ನಿರಾಶೆ ಮಾಡುತ್ತಿರಲಿಲ್ಲ. ತಂಡಕ್ಕೆ ಉತ್ತಮ ಫಲ ನೀಡುತ್ತಿದ್ದರು. ನಿಜವಾದ ಹೋರಾಟಗಾರ. ಅವರ ಬೌಲಿಂಗ್ ಆ್ಯಕ್ಷನ್ ಚೆನ್ನಾಗಿತ್ತು. ಅವರ ನಿಧನದ ಸುದ್ದಿ ಕೇಳಿ ಬಹಳ ಆಘಾತವಾಗಿದೆ. ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿಯನ್ನು ದೇವರು ನೀಡಲಿ' ಎಂದು ಮಾಜಿ ಕ್ರಿಕೆಟಿಗ ಸುನಿಲ್ ಜೋಶಿ ಸ್ಮರಿಸಿದರು.

ಡೇವಿಡ್ 39 ಪ್ರಥಮ ದರ್ಜೆ ಪಂದ್ಯಗಳಿಂದ 125 ವಿಕೆಟ್ ಗಳಿಸಿದರು. ಕೆಲವು ಪಂದ್ಯಗಳಲ್ಲಿಯೂ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದರು. ಒಂದು ಶತಕ ಸಹಿತ 437 ರನ್‌ಗಳು ಅವರ ಖಾತೆಯಲ್ಲಿವೆ.

ಕ್ರಿಕೆಟ್‌ನಿಂದ ನಿವೃತ್ತರಾದ ನಂತರ ಜಾನ್ಸನ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರತಿಭಾಶೋಧ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದರು. ದಕ್ಷಿಣ ವಲಯ 16 ವರ್ಷದೊಳಗಿನವರ ತಂಡದ ಕೋಚ್ ಹಾಗೂ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ)ಲ್ಲಿ ತರಬೇತುದಾರರಾಗಿ ಕೆಲಸ ಮಾಡಿದ್ದರು. ವೃತ್ತಿಜೀವನದ ಪ್ರತಿಯೊಂದು ಹಂತದಲ್ಲಿಯೂ ಹೋರಾಟ ಮತ್ತು ಛಲದ ಹಾದಿ ಅನುಸರಿಸಿದವರು. ಕಷ್ಟಗಳನ್ನು ದಿಟ್ಟತನದಿಂದ ಎದುರಿಸುತ್ತಲೇ ಬಂದವರು. ಆದರೆ ಇಂದು ಮಾತ್ರ ಸೋತು ಹೋರಾಟ ನಿಲ್ಲಿಸಿದರು.

ಗೌರವ: ಗುರುವಾರ ನಡೆದ ಅಫ್ಗಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ಭಾರತ ತಂಡದ ಆಟಗಾರರು ಡೇವಿಡ್ ಜಾನ್ಸನ್ ಅವರಿಗೆ ಗೌರವ ಸಲ್ಲಿಸಲು ತೋಳಿಗೆ ಕಪ್ಪು ಪಟ್ಟಿ ಕೊಂಡು ಆಡಿದರು.

ರಣಜಿ ಟ್ರೋಫಿಯಲ್ಲಿ ಸಾಧನೆ

ಪದಾರ್ಪಣೆ	28	718.5	116	2576
1992-93 (ಗೋವಾ ಎದುರು; ಪಣಜಿ)	ಪಂದ್ಯ	ಓವರ್	ಮೇಡನ್	ರನ್
ಕೊನೆ ಪಂದ್ಯ	95	55ಕ್ಕೆ8 (ಇನಿಂಗ್ಸ್)	385	101
2001-02 (ಹೈದರಾಬಾದ್ ಎದುರು)	ವಿಕೆಟ್	ಶ್ರೇಷ್ಠ	ರನ್ ಗಳಿಕೆ	ಶ್ರೇಷ್ಠ

	ಟೆಸ್ಟ್	ಪ್ರಥಮ ದರ್ಜೆ ಕ್ರಿಕೆಟ್ (ಒಟ್ಟು/ಬೌಲಿಂಗ್)	ಲಿಸ್ಟ್ ಎ
ಪಂದ್ಯ	2	39	33
ವಿಕೆಟ್	3	125	41
ಶ್ರೇಷ್ಠ	52ಕ್ಕೆ2	55ಕ್ಕೆ8	26ಕ್ಕೆ4

ಮಾಹಿತಿ: ಚನ್ನಗಿರಿ ಕೇಶವಮೂರ್ತಿ

ಕ್ರಿಕೆಟಿಗ ಡೇವಿಡ್ ಜಾನ್ಸನ್ ಆತ್ಮಹತ್ಯೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕನ್ನಡಿಗ ಡೇವಿಡ್ ಜಾನ್ಸನ್ (52) ಅವರು ಗುರುವಾರ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಕೊತ್ತನೂರಿನ ಕನಕಶ್ರೀ ಲೇಔಟ್‌ನ ಎಸ್‌ಎಲ್‌ವಿ ಪ್ಯಾರಡೈಸ್ ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯಿಂದ ಬೆಳಿಗ್ಗೆ 9.30ರ ಸುಮಾರಿಗೆ ಕೆಳಗಡೆ ಜಿಗಿದಿದ್ದಾರೆ. ಜೋರಾಗಿ ಶಬ್ದ ಬಂದ ಕಾರಣ ಭದ್ರತಾ ಸಿಬ್ಬಂದಿಯೊಬ್ಬರು ಬಂದು ನೋಡಿದಾಗ ಜಾನ್ಸನ್ ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಡೇವಿಡ್ ಅವರು ಖಿನ್ನತೆಗೆ ಒಳಗಾಗಿದ್ದರು. ಹೀಗಾಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಕೊತ್ತನೂರು ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಡೇವಿಡ್ ಜಾನ್ಸನ್

ಡೇವಿಡ್ ಮತ್ತು ನಾನು ತುಂಬ ಉತ್ತಮ ಸ್ನೇಹಿತರಾಗಿದ್ದೆವು. ಅವರೊಂದಿಗೆ ಬೌಲಿಂಗ್ ಮಾಡಿದ ದಿನಗಳನ್ನು ಮರೆಯಲು ಸಾಧ್ಯವಿಲ್ಲ. ಎರಡು ವರ್ಷಗಳ ಹಿಂದೆ ನಾವು ಆಫ್ರಿಕಾದ ರುವಾಂಡಾ ದೇಶಕ್ಕೆ ಕ್ರಿಕೆಟ್ ಪ್ರವಾಸ ಮಾಡಿದ್ದೆವು. ಅವರು ಬೆಂಗಳೂರಿನಲ್ಲಿ ಅಕಾಡೆಮಿ ಆರಂಭಿಸಿದ್ದರು. ಅವರ ಸಾವಿನಿಂದ ಅಪಾರ ದುಃಖವಾಗಿದೆ.

ದೊಡ್ಡ ಗಣೇಶ್, ಮಾಜಿ ಕ್ರಿಕೆಟಿಗ

ಆ ಸಮಯದಲ್ಲಿ ಬ್ಯಾಟರ್‌ಗಳು ಡೇವಿಡ್ ಎಸೆತಗಳನ್ನು ಎದುರಿಸಲು ಭಯಪಡುತ್ತಿದ್ದರು. ಅವರು ಪ್ರಯೋಗಿಸುತ್ತಿದ್ದ ಎಸೆತಗಳ ವೇಗ ಹಾಗಿತ್ತು. ರನ್ ಅಪ್ ಮತ್ತು ಆರ್ಮ್ ಸ್ಪೀಡ್ ಬಹಳ ಚುರುಕಾಗಿದ್ದವು. ಅವರ ರೌಂಡ್ ಆರ್ಮ್ ಆ್ಯಕ್ಷನ್‌ನಲ್ಲಿ ರಿವರ್ಸ್ ಸ್ವಿಂಗ್‌ಗಳೂ ಪರಿಣಾಮಕಾರಿಯಾಗಿದ್ದವು.

ವೆಂಕಟೇಶ್ ಪ್ರಸಾದ್, ಮಾಜಿ ಕ್ರಿಕೆಟಿಗ

'ಡ್ರಾ' ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್, ಸ್ಕಾಟ್ಲೆಂಡ್

ಕೊಲೋನ್ (ಜರ್ಮನಿ), (ಎಪಿ): ಸ್ವಿಜರ್ಲೆಂಡ್ ವಿರುದ್ಧ 28 ವರ್ಷಗಳಲ್ಲಿ ಮೊದಲ ಜಯ ಗಳಿಸುವ ಸ್ಕಾಟ್ಲೆಂಡ್ ಆಸೆ ಈಡೇರಲಿಲ್ಲ. ಆದರೆ ಸ್ಕಾಟರು ಗುರುವಾರ ನಡೆದ ಯುರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್ 'ಎ' ಗುಂಪಿನ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿ ಸ್ವಿಟ್ಜರ್ಲೆಂಡ್ ಜೊತೆ 1-1 ಸಮಬಲ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ಜರ್ಮನಿ ಎದುರು ಮ್ಯೂನಿಕ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಎದುರಾದ ಸೋಲಿನಿಂದ ಚೇತರಿಸಿಕೊಂಡ ಸ್ಕಾಟ್ಲೆಂಡ್ ಈ 'ಡ್ರಾ'ದಿಂದಾಗಿ ಅಂತಿಮ 16ರ ಸುತ್ತು ತಲುಪುವ ಆಸೆಯನ್ನು ಜೀವಂತವಾಗಿರಿಕೊಂಡಿತು.

ಅನುಭವಿಗಳಿದ್ದ ಸ್ವಿಸ್ ತಂಡದ ಎದುರು ಸ್ಕಾಟ್ಲೆಂಡ್ 13ನೇ ನಿಮಿಷ ಮುನ್ನಡೆಯಿತು. ಮ್ಯಾಂಚೆಸ್ಟರ್ ಯುನೈಟೆಡ್‌ಗೆ ಆಡುವ ಸ್ಕಾಟ್ ಮೆಕ್‌ಟೊಮಿನೆ ಅವರು, ಕ್ಯಾಲಂ ಮೆಕ್‌ಗ್ರೆಗೋರ್ ಪಾಸ್‌ನಲ್ಲಿ ಚೆಂಡನ್ನು ಗುರಿ ತಲುಪಿಸಿದರು.

ಆದರೆ ವಿರಾಮಕ್ಕೆ ಮೊದಲೇ ಸ್ವಿಟ್ಜರ್ಲೆಂಡ್ ಸಮ ಮಾಡಿಕೊಂಡಿತು. 26ನೇ ನಿಮಿಷ ಶೆಡ್ರಾನ್ ಶಾಖಿರಿ ಅವರು ಅಂಥೊನಿ ರಾಲ್ಸ್ಟನ್ ಅವರಿಂದ ಪಡೆದ ಪಾಸ್‌ನಲ್ಲಿ ಚೆಂಡನ್ನು ಅಮೋಘ ರೀತಿ ಗೋಲಿನೊಳಕ್ಕೆ ನಿರ್ದೇಶಿಸಿದ್ದರಿಂದ ಸ್ಕೋರ್ ಸಮನಾಯಿತು. ಸ್ಕಾಟ್ಲೆಂಡ್ ತಂಡವೇ ಹೆಚ್ಚು ಅವಕಾಶಗಳನ್ನು ಪಡೆಯಿತು. ಗ್ರಾಂಟ್ ಹನ್ಲಿ ಅವರು ಉತ್ತಮ ಗೋಲು ಅವಕಾಶದಲ್ಲಿ 'ಹೆಡ್' ಮಾಡಿದ ಚೆಂಡು ಗೋಲುಗಂಬಕ್ಕೆ ಹೊಡೆಯಿತು.

1996ರ ಯೂರೊ ಕಪ್‌ನಲ್ಲಿ ಸ್ಕಾಟ್ಲೆಂಡ್ ಕೊನೆಯ ಸಲ ಸ್ವಿಟ್ಜರ್ಲೆಂಡ್ ತಂಡವನ್ನು (1-0 ಯಿಂದ) ಸೋಲಿಸಿತ್ತು.

ಸ್ಕಾಟ್ಲೆಂಡ್ 'ಎ' ಗುಂಪಿನ ಅಂತಿಮ ಪಂದ್ಯವನ್ನು ಭಾನುವಾರ ಸ್ಟುಟ್‌ಗಾರ್ಟ್‌ನಲ್ಲಿ ಹಂಗೆರಿ ವಿರುದ್ಧ ಆಡಲಿದೆ. ಆ ಪಂದ್ಯ ಗೆದ್ದರೆ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ನಾಕೌಟ್ ಹಂತಕ್ಕೆ ತಲುಪಬಹುದು.

ಇನ್ನೊಂದು ಡ್ರಾ: ಲುಕಾ ಜೋವಿಕ್ 'ಇಂಜುರಿ ಅವಧಿ'ಯಲ್ಲಿ (90+5) ಗಳಿಸಿದ ಗೋಲಿನಿಂದ ಸರ್ಬಿಯಾ ಮ್ಯೂನಿಕ್‌ನಲ್ಲಿ ಗುರುವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಸ್ಲೊವೇನಿಯಾ ಜೊತೆ 1-1 ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಯಾನ್ ಕಾರ್ನಿಸ್ನಿಕ್ ಅವರು 69ನೇ ನಿಮಿಷ ಸ್ಲೊವೇನಿಯಾಕ್ಕೆ ಮುನ್ನಡೆ ಒದಗಿಸಿದ್ದರು. ಚಾರಿತ್ರಿಕ ವಿಜಯದ ಕನಸಿನಲ್ಲಿದ್ದ ಸ್ಲೊವೇನಿಯಾ ತಂಡಕ್ಕೆ ಜೋವಿಕ್ ಗಳಿಸಿದ ಅಂತಿಮ ಕ್ಷಣದ ಗೋಲಿನಿಂದ ನಿರಾಸೆಯಾಯಿತು.

ದಂಡ: ಅಲ್ಬೇನಿಯಾ ಮತ್ತು ಸರ್ಬಿಯಾ ಅಭಿಮಾನಿಗಳು ತಮ್ಮ ತಂಡದ ಪಂದ್ಯಗಳ ವೇಳೆ 'ರಾಷ್ಟ್ರೀಯವಾದಿ' ಬ್ಯಾನರ್‌ಗಳನ್ನು ಪ್ರದರ್ಶಿಸಿದ ಕಾರಣಕ್ಕೆ ಯುಇಎಫ್‌ಎ, ಆ ರಾಷ್ಟ್ರಗಳ ಫೆಡರೇಷನ್‌ಗೆ ಬುಧವಾರ ತಲಾ ₹9 ಲಕ್ಷ ದಂಡ ವಿಧಿಸಿದೆ.

ಕ್ರೀಡಾ ಸ್ಪರ್ಧೆಯ ವೇಳೆ ಯೋಗ್ಯವಲ್ಲದ ರೀತಿ, ಪ್ರಚೋದನಕಾರಿ ಸಂದೇಶ ರವಾನಿಸಿದ ಕಾರಣಕ್ಕೆ ದಂಡ ವಿಧಿಸಲಾಗಿದೆ. ಅಲ್ಬೇನಿಯಾ ಅಭಿಮಾನಿಗಳು ಪ್ರದರ್ಶಿಸಿದ ಬ್ಯಾನರ್‌ನಲ್ಲಿ ಆ ದೇಶದ ಗಡಿಯೊಳಗೆ ನೆರೆಯ ರಾಷ್ಟ್ರಗಳ ಪ್ರದೇಶಗಳನ್ನು ಸೇರಿಸಲಾಗಿತ್ತು. ಡೋರ್ಟ್‌ಮುಂಡ್‌ನಲ್ಲಿ ಇಟಲಿ ವಿರುದ್ಧ 2-1 ರಿಂದ ಸೋತಿದ್ದ ಪಂದ್ಯದಲ್ಲಿ ಬ್ಯಾನರ್ ಕಾಣಿಸಿತ್ತು.

ಗೆಲ್ಸೆನ್‌ಕಿರ್ಚೆನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಪಂದ್ಯದ ವೇಳೆ ಸರ್ಬಿಯಾ ಅಭಿಮಾನಿಗಳು ಪ್ರದರ್ಶಿಸಿದ ಬ್ಯಾನರ್‌ನಲ್ಲಿ ಕೊಸೊವೊ ದೇಶದ ಭಾಗವನ್ನು ಸರ್ಬಿಯಾದ ನಕ್ಷೆಯೊಳಗೆ ಸೇರಿಸಲಾಗಿತ್ತು. 'ನೊ ಸರಂಡರ್' ಎಂಬ ಸಂದೇಶವೂ ಇತ್ತು.

ಸ್ಕಾಟ್ಲೆಂಡ್ ತಂಡದ ಚೆ ಆ್ಯಡಮ್ಸ್ (ಎಡಗಡೆ) ಚೆಂಡಿನ ನಿಯಂತ್ರಣಕ್ಕೆ ಯತ್ನಿಸಿದರು —ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಇಂದಿನ ಪಂದ್ಯಗಳು

ಸ್ಲೊವಾಕಿಯಾ	Vs	ಉಕ್ರೇನ್	ಸಂಜೆ 6.30
ಪೋಲೆಂಡ್	Vs	ಆಸ್ಟ್ರಿಯಾ	ರಾತ್ರಿ 9.30
ನೆದರ್ಲೆಂಡ್ಸ್	Vs	ಫ್ರಾನ್ಸ್	ರಾತ್ರಿ 12.30

ಲೈವ್ ಸೋನಿ ಸ್ಪೋರ್ಟ್ಸ್

ಮೃತರಾಗಿ 25 ವರ್ಷಗಳಾದರೂ ಸಿಗದ ಗೌರವ

ಮಾರ್ಷಲ್ ಸಮಾಧಿಯ ಅವಗಣನೆ

ಬ್ರಿಜ್‌ಟೌನ್ (ಬಾರ್ಬಡೋಸ್), (ಪಿಟಿಐ): ಕ್ರಿಕೆಟ್ ಕಂಡ ಸಾರ್ವಕಾಲಿಕ ಶ್ರೇಷ್ಠ ವೇಗದ ಬೌಲರ್‌ಗಳಲ್ಲಿ ಒಬ್ಬರಾದ ಮಾಲ್ಕಂ ಮಾರ್ಷಲ್ ಅವರ ಸಮಾಧಿ ಅವಗಣನೆಗೆ ಒಳಗಾಗಿದೆ. ಒಂದು ಕಾಲದಲ್ಲಿ ಜಗತ್ತಿನ ಖ್ಯಾತನಾಮ ಬ್ಯಾಟರ್‌ಗಳನ್ನು ನಡುಗಿಸಿದ್ದ ವೆಸ್ಟ್ ಇಂಡೀಸ್‌ನ ಈ ಸಾಧಕ ನಿಧನರಾಗಿ 25 ವರ್ಷಗಳಾಗಿದ್ದು, ಅವರಿಗೆ ಸಲ್ಲಬೇಕಾದ ಗೌರವ ನೀಡುವಲ್ಲಿ ತಾಯ್ನಾಡು ಮರೆತಿದೆ.

ಇಲ್ಲಿನ ಗ್ರಾಂಟ್ಲಿ ಆ್ಯಡಮ್ಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅನತಿ ದೂರದಲ್ಲಿರುವ ಸೇಂಟ್ ಬಾರ್ತಲೋಮಿಯೊ ಚರ್ಚ್ ಬದಿಯ ಸ್ಮಶಾನದಲ್ಲಿ ಈ ಸಮಾಧಿಯಿದೆ. ಆದರೆ ಕಪ್ಪು ಶಿಲೆಯ ಸಮಾಧಿಯಿರುವ ಜಾಗವನ್ನು ಸ್ಥಳೀಯಾಡಳಿತ ನಿರ್ಲಕ್ಷಿಸಿದೆ. ಈ ಜಾಗ ಕುಡುಕರ ಅಡ್ಡೆಯಾಗಿದೆ. ಇಲ್ಲಿ ಮದ್ಯದ ಬಾಟಲುಗಳು, ಸೇದಿ ಬಿಸಾಕಿದ ಸಿಗರೇಟು ತುಂಡಗಳು ಹೇರಳವಾಗಿ ಬಿದ್ದಿವೆ. ಅವರನ್ನು ಜನ ಮರೆತಿದ್ದಾರೆ.

ಮಾರ್ಷಲ್ ಕ್ಯಾನ್ಸರ್‌ನಿಂದ 41ನೇ ವಯಸ್ಸಿನಲ್ಲೇ ಮೃತಪಟ್ಟಿದ್ದರು. ಅವರು 1980ರ ದಶಕದ ಆರಂಭದಲ್ಲಿ ತಂಡದ ಇತರ ವೇಗದ ಬೌಲರ್‌ಗಳಾದ ಮೈಕೆಲ್ ಹೋಲ್ಡಿಂಗ್, ಜೋಲ್ ಗಾರ್ನರ್, ಆ್ಯಂಡಿ ರಾಬರ್ಟ್ಸ್ ಜೊತೆಗೂಡಿ ಹಲವು ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದರು. ಆದರೆ ಈಗಿನ ಪೀಳಿಗೆ ಅವರ ಕೊಡುಗೆ ಮರೆತಂತಿದೆ.

'ಆಗಿನ ಕಾಲದ ಕ್ರಿಕೆಟಿಗರಿಗೆ ಈಗಿನಷ್ಟು ಹಣ ಮತ್ತು ಆಕರ್ಷಣೆ ಇರಲಿಲ್ಲ. ಈಗಿನ ಕಾಲದ ಕ್ರಿಕೆಟಿಗರನ್ನು ಜನ ಅಷ್ಟು ಸುಲಭವಾಗಿ ಮರೆಯುವುದಿಲ್ಲ' ಎಂದು ಕ್ರಿಕೆಟ್ ಅಭಿಮಾನಿ ಎಂದು ಹೇಳಿಕೊಂಡ ಕೆವಿನ್ ಎಂಬವರು ಹೇಳಿದರು. ಆದರೆ ಹಲವರಿಗೆ ಇಲ್ಲಿ ಈ ಮಹಾನ್ ಬೌಲರ್ ಸಮಾಧಿಯಿರುವುದೇ ಗೊತ್ತಿಲ್ಲ.

ಮಾರ್ಷಲ್ ತಮ್ಮ ಕೊನೆಯ ಟೆಸ್ಟ್ ಪಂದ್ಯವನ್ನು 1991ರಲ್ಲಿ ಆಡಿದ್ದರು. 81 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 376 ವಿಕೆಟ್‌ಗಳನ್ನು ಪಡೆದಿದ್ದಾರೆ. ಅದೂ ಅಚ್ಚರಿಯ 20.94ರ ಸರಾಸರಿಯಲ್ಲಿ! ಅವರು ಹ್ಯಾಂಪ್‌ಶೈರ್ ಕೌಂಟಿ ತಂಡಕ್ಕೂ ಆಡಿದ್ದರು. ಅಲ್ಲಿನ ಕ್ರೀಡಾಂಗಣವನ್ನು ಸಂಪರ್ಕಿಸುವ ರಸ್ತೆಗೆ ಮಾರ್ಷಲ್ ಅವರ ಹೆಸರಿಡಲಾಗಿದೆ.

1999ರಲ್ಲಿ ಅವರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು. ಕೆಲವೇ ತಿಂಗಳ ನಂತರ ಅವರು ಮೃತರಾಗಿದ್ದರು.

ಸರ್ ಗ್ಯಾರ್ಫೀಲ್ಡ್ ಸೋಬರ್ಸ್ ಮತ್ತು ಜೋಲ್ ಗಾರ್ನರ್ ಅವರೂ ಬಾರ್ಬಡೋಸ್‌ನವರು.

ಮಾಲ್ಕಂ ಮಾರ್ಷಲ್ ಅವರ ಸಮಾಧಿ

ಚೆನ್ನೈಗೆ ಇಂದು ಫಿಡೆ ತಂಡ

ಚೆನ್ನೈ (ಪಿಟಿಐ): ಅಂತರರಾಷ್ಟ್ರೀಯ ಚೆಸ್ ಫೆಡರೇಷನ್‌ನ (ಫಿಡೆ) ಇಬ್ಬರು ಸದಸ್ಯರ ತಂಡ ಶುಕ್ರವಾರ ಚೆನ್ನೈಗೆ ಬರಲಿದ್ದು, ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಸ್ಥಳ ಪರಿಶೀಲನೆ ನಡೆಸಲಿದೆ.

ಫಿಡೆಯ ಯೋಜನೆ ಮತ್ತು ಅಭಿವೃದ್ಧಿ ಆಯೋಗದ ಕಾರ್ಯದರ್ಶಿ ಕೆರ್ಮನ್ ಗೊರಿಯೇವಾ ಮತ್ತು ಫಿಡೆ ಪಿಆರ್ ವಿಭಾಗದ ಮುಖ್ಯಸ್ಥೆ ಅನ್ನಾ ವೊಲ್ಕೋವಾ ಅವರು ಈ ಕರ್ತವ್ಯನಿರ್ವಹಣೆಗೆ ಬರಲಿದ್ದಾರೆ ಎಂದು ವಿಶ್ವಾಸಾರ್ಹ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ. ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಆತಿಥ್ಯಕ್ಕೆ ಬಿಡ್ ಸಲ್ಲಿಸಿರುವ ಮೂರು ನಗರಗಳಲ್ಲಿ ಚೆನ್ನೈ ಒಂದಾಗಿದೆ. ದೆಹಲಿ ಮತ್ತು ಸಿಂಗಪುರ ಇನ್ನೆರಡು ನಗರಗಳಾಗಿವೆ. ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ದೆಹಲಿಯ ಆತಿಥ್ಯಕ್ಕೆ ಬಿಡ್ ಸಲ್ಲಿಸಿದರೆ, ತಮಿಳುನಾಡು ಕ್ರೀಡಾ ಅಭಿವೃದ್ಧಿ ಪ್ರಾಧಿಕಾರವು ಚೆನ್ನೈಗೆ ಆತಿಥ್ಯ ವಹಿಸಬೇಕೆಂದು ಬಿಡ್‌ನಲ್ಲಿ ಮನವಿ ಮಾಡಿದೆ. ಹಾಲಿ ಚಾಂಪಿಯನ್, ಚೀನಾದ ಗ್ರ್ಯಾಂಡ್‌ಮಾಸ್ಟರ್ ಡಿಂಗ್ ಲಿರೆನ್ ಈ ಬಾರಿಯ ಫೈನಲ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ದೊಮ್ಮರಾಜು ಗುಕೇಶ್ ಅವರನ್ನು ಎದುರಿಸಲಿದ್ದಾರೆ.

ಒಲಿಂಪಿಕ್ಸ್‌ಪೂರ್ವ ಹಾಕಿ ಶಿಬಿರಕ್ಕೆ 27 ಮಂದಿ ಆಯ್ಕೆ

ಬೆಂಗಳೂರು (ಪಿಟಿಐ): ಒಲಿಂಪಿಕ್ಸ್ ಹಾಕಿ ಪೂರ್ವ ರಾಷ್ಟ್ರೀಯ ಶಿಬಿರಕ್ಕೆ 27 ಆಟಗಾರರ ಪಟ್ಟಿಯನ್ನು ಹಾಕಿ ಇಂಡಿಯಾ ಗುರುವಾರ ಪ್ರಕಟಿಸಿದೆ. ಉತ್ತಮ ಪ್ರದರ್ಶನ ನೀಡಿರುವ ಹಾಲಿ ಆಟಗಾರರ ಮೇಲೆಯೇ ಹಾಕಿ ಇಂಡಿಯಾ ಹೆಚ್ಚಿನ ಭರವಸೆ ಇಟ್ಟಿದೆ.

ಈ ಶಿಬಿರ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕೇಂದ್ರದಲ್ಲಿ ಜೂನ್ 21 ರಿಂದ ಜುಲೈ 8 ರವರೆಗೆ ನಡೆಯಲಿದೆ. ಒಲಿಂಪಿಕ್ಸ್ ಮುಂದಿನ ತಿಂಗಳ 26ರಂದು ಆರಂಭವಾಗಲಿದ್ದು, ಆ.11ರಂದು ಮುಕ್ತಾಯಗೊಳ್ಳಲಿದೆ. ಒಲಿಂಪಿಕ್ಸ್ ಹಾಕಿಯಲ್ಲಿ ಭಾರತ 'ಬಿ' ಗುಂಪಿನಲ್ಲಿದೆ. ಬೆಲ್ಜಿಯಂ, ಅರ್ಜೆಂಟೀನಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ಗುಂಪಿನಲ್ಲಿರುವ ಇತರ ತಂಡಗಳು. ಭಾರತ ತನ್ನ ಮೊದಲ ಪಂದ್ಯವನ್ನು ಜುಲೈ 27ರಂದು ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ಆಯ್ಕೆಯಾದ 27 ಆಟಗಾರರು: ಗೋಲ್ ಕೀಪರ್ಸ್: ಕೃಷ್ಣ ಬಹಾದ್ದೂರ್ ಪಾಠಕ್, ಪಿ.ಆರ್.ಶ್ರೀಜೇಶ್, ಸೂರಜ್ ಕರ್ಕೇರಾ. **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗರಾಜ್ ಸಿಂಗ್, ಸಂಜಯ್, ಆಮಿರ್ ಅಲಿ. **ಮಿಡ್‌ಫೀಲ್ಡರ್ಸ್:** ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್, ಸುಮಿತ್, ಶಂಶೇರ್ ಸಿಂಗ್, ನೀಲಕಂಠ ಶರ್ಮಾ, ರಾಜಕುಮಾರ್ ಪಾಲ್, ವಿಷ್ಣುಕಾಂತ ಸಿಂಗ್, ಆಕಾಶ್‌ದೀಪ್ ಸಿಂಗ್, ಮೊಹಮ್ಮದ್ ರಾಹಿಲ್. **ಫಾರ್ವರ್ಡ್ಸ್:** ಮನ್‌ದೀಪ್ ಸಿಂಗ್, ಲಲಿತ್ ಕುಮಾರ್, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಗುರ್ಜಂತ್ ಸಿಂಗ್, ಬಾಬಿ ಸಿಂಗ್ ಧಾಮಿ, ಅರಿಜಿತ್ ಸಿಂಗ್ ಹುಂಡಲ್.

ಉತ್ತರಾಖಂಡದತ್ತ ಕರ್ನಾಟಕದ ಸಮರ್ಥ್



ಬೆಂಗಳೂರು: ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ಕರ್ನಾಟಕದ ತಂಡದ ಆರಂಭಿಕ ಬ್ಯಾಟರ್ ಆರ್. ಸಮರ್ಥ್ ಉತ್ತರಾಖಂಡ ತಂಡದಲ್ಲಿ ಆಡಲಿದ್ದಾರೆ.

ಬೇರೆ ರಾಜ್ಯಕ್ಕೆ ವಲಸೆ ಹೋಗಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಿರಾಕ್ಷೇಪಣಾ ಪತ್ರವನ್ನು ನೀಡಿದೆ.

'ದಶಕಕ್ಕೂ ಹೆಚ್ಚು ಕಾಲ ಕರ್ನಾಟಕದಲ್ಲಿ ಕ್ರಿಕೆಟ್ ಆಡಿದ್ದೇನೆ. ಮೂರು ಮಾದರಿಗಳಲ್ಲಿಯೂ ಆಡಿದ್ದೇನೆ. ಇದೀಗ ಹೊಸ ಸವಾಲು ಎದುರಿಸುವ ಸಮಯ ಬಂದಿದೆ. ಆದ್ದರಿಂದ ಇಲ್ಲಿಂದ ಬೇರೆಡೆಗೆ ಸಾಗಲು ನಿರ್ಧರಿಸಿದ್ದೇನೆ' ಎಂದು ಸಮರ್ಥ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಎಸ್‌ಸಿಎ ನನಗೆ ಎಲ್ಲವನ್ನೂ ನೀಡಿದೆ. ರಣಜಿ ಟ್ರೋಫಿ ಟೂರ್ನಿಯಲ್ಲಿ ಮುಂಬೈ ಎದುರಿನ ಪಂದ್ಯದಲ್ಲಿ ಪದಾರ್ಪಣೆ (2013) ಮಾಡಿದ್ದೆ. ರಣಜಿ ಟ್ರೋಫಿ ಜಯಿಸಿದ ತಂಡದಲ್ಲಿದ್ದೆ. ಭಾರತ ಎ ತಂಡದಲ್ಲಿಯೂ ಆಡಿದೆ. ಇದೊಂದು ಅದ್ಬುತ ಅನುಭವ ನೀಡಿದ ಪ್ರಯಾಣ. ಇದಕ್ಕಾಗಿ ಎಲ್ಲರಿಗೂ ಆಭಾರಿಯಾಗಿರುವೆ' ಎಂದು 32 ವರ್ಷದ ಸಮರ್ಥ್ ಹೇಳಿದ್ದಾರೆ.

ಸಮರ್ಥ್ ಅವರು 88 ಪ್ರಥಮ ದರ್ಜೆ ಪಂದ್ಯಗಳಿಂದ 5508 ರನ್ ಗಳಿಸಿದ್ದಾರೆ. ಅದರಲ್ಲಿ 13 ಶತಕ, 29 ಅರ್ಧಶತಕಗಳಿವೆ. 64 ಲಿಸ್ಟ್ ಎ ಪಂದ್ಯಗಳಿಂದ 2665 ರನ್ ಗಳಿಸಿದ್ದಾರೆ. 8 ಶತಕ ಮತ್ತು 16 ಅರ್ಧಶತಕ ಹೊಡೆದಿದ್ದಾರೆ. 23 ಟಿ20 ಪಂದ್ಯಗಳಲ್ಲಿ ಆಡಿ 275 ರನ್ ಕಲೆಹಾಕಿದ್ದಾರೆ.

ಖುಷಿ ವಿ. ಮತ್ತು ಆಕಾಶ್ ಕೆ.ಜೆ.

ಟಿಟಿ: ಆಕಾಶ್, ಖುಷಿಗೆ ಪ್ರಶಸ್ತಿ

ಬೆಂಗಳೂರು: ಆಕಾಶ್ ಕೆ.ಜೆ. ಮತ್ತು ಖುಷಿ ವಿ. ಅವರು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಿ.ವಿ.ರಾಮನ್‌ನಗರ ವಿಭಾಗ, 8ನೇ ಅಡ್ಡರಸ್ತೆ, 12ನೇ ಎ ಮುಖ್ಯ ರಸ್ತೆ, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು – 560038

ಸಂ. ಕಾಅ/ಸಿವಿರಾ/ಕೆಪಿಪಿಪಿ/05/2024-25 ದಿನಾಂಕ : 19-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಣಿಯಾದ ಅಥವಾ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೆ / ಎಂಇಎಸ್ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಗುತ್ತಿಗೆದಾರಿಂದ ಐಟಂ ದರ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.	ಕಾಮಗಾರಿಯ ಹೆಸರು
1	ವಾರ್ಡ್ ಸಂ. 108 ಕಾಕ್ಸ್ ಟೌನ್‌ನಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
2	ವಾರ್ಡ್ ಸಂ. 109, ಬೆನ್ನಿಗಾನಹಳ್ಳಿಯಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
3	ವಾರ್ಡ್ ಸಂ. 110, ಸಿವಿ ರಾಮನ್ ನಗರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
4	ವಾರ್ಡ್ ಸಂ. 111, ಕಗ್ಗದಾಸಪುರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
5	ವಾರ್ಡ್ ಸಂ. 112, ಹೊಸ ತಿಪ್ಪಸಂದ್ರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
6	ವಾರ್ಡ್ ಸಂ. 113, ಹೊಯ್ಸಳನಗರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
7	ವಾರ್ಡ್ ಸಂ. 114, ಜೀವನಭೀಮಾನಗರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–
8	ವಾರ್ಡ್ ಸಂ. 115, ಕೋನೇನ ಅಗ್ರಹಾರದಲ್ಲಿ ಟಾರು, ಗಟಾರಗಳನ್ನು ಒದಗಿಸುವುದು ಮತ್ತು ಇತರ ಸಂಬಂಧಿತ ಅಭಿವೃದ್ಧಿ. **ಕಾಮಗಾರಿಗಳು ಕಾಮಗಾರಿಯ ಅಂದಾಜು ಮೌಲ್ಯ** : ರೂ. 125 ಲಕ್ಷಗಳು. **ಸರ್ಕಾರದ ಆದೇಶದಂತೆ ಇಎಂಡಿ** : ರೂ. 2,00,000/–

ವೇಳಾಪಟ್ಟಿ : (1) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **(http://kppp.karnataka.gov.in)** ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ : **21-06-2024** ರಿಂದ ಡೌನ್‌ಲೋಡ್ ಮಾಡಬಹುದು. (2) ಬಿಡ್ ಪೂರ್ವ ಸಭೆಯನ್ನು ಕಾರ್ಯಪಾಲಕ ಅಭಿಯಂತರರು (ಸಿ.ವಿ.ರಾಮನ್ ನಗರ ವಿಭಾಗ) ರವರ ಕಛೇರಿಯಲ್ಲಿ **24-06-2024 ರಂದು 11:00 ಗಂಟೆಗೆ** ನಡೆಸಲಾಗುವುದು (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **28-06-2024 ರಂದು 16:00 ಗಂಟೆಯವರೆಗೆ** (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ : **29-06-2024 ರಂದು 11:00 ಗಂಟೆಗೆ.** (5) ಆರ್ಥಿಕ ಪ್ರಸ್ತಾವನೆಗಳನ್ನು **ಕೆಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ** ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಸಿ.ವಿ.ರಾಮನ್‌ನಗರ ವಿಭಾಗ

ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ/514/ಯುಬಿವಿ/2023 ದಿನಾಂಕ: 14.06.2024

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾವಿಲಯಗಳ ಅಧಿನಿಯಮ 2018ರ ಪ್ರಕರಣ 13(4)(i) ರ ಉಪಬಂಧಗಳನುಸಾರ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/– ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/457/2024-25

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515/28484518

ಸಂಖ್ಯೆ: ಡಿಪಿಎಸ್/ಸಿಎಸ್‌ಟಿಜಿ/ಜಿಎಸ್‌ಟಿಸಿ/1/2024 ದಿನಾಂಕ: 19.06.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಜಿ.ಎಸ್.ಟಿ (ಸರಕು ಮತ್ತು ಸೇವಾ ತೆರಿಗೆ) ದಾಖಲೆಗಳ ಕ್ರಮಬದ್ಧಗೊಳಿಸುವಿಕೆ ಮತ್ತು 2024–25 ರಿಂದ 2026–27ನೇ ಸಾಲಿನವರೆಗಿನ ಮಾಸಿಕ ಮತ್ತು ವಾರ್ಷಿಕ ತೆರಿಗೆ ರಿಟರ್ನ್ಸ್ ಕಾರ್ಯ ನಿರ್ವಹಿಸಿಕೊಡಲು ಬೆಂಗಳೂರಿನಲ್ಲಿನ ಅರ್ಹ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಈ ರೀತಿಯ ಸಂಸ್ಥೆಗಳಿಂದ ಕೆ.ಟಿ.ಪಿ.ಪಿ ನಿಯಮಗಳಡಿ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 10.00 ಲಕ್ಷ**ಗಳಾಗಿದ್ದು ಇದರ ಒಟ್ಟು ಇ.ಎಂ.ಡಿ. ಮೊತ್ತ ರೂ.50,000/–. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **08.07.2024**. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: **28.06.2024ರಂದು ಮಧ್ಯಾಹ್ನ 3.00 ಗಂಟೆಗೆ** ಮೇಲ್ಕಂಡ ವಿಳಾಸದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು

ವಾಸಾಸಂಇ/ವಾ.ಪ್ರ/448/ಎಂಎಎ/2024-25

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ., ಬಿ.ಎಂ.ಟಿ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು–560022, ದೂರವಾಣಿ ಸಂಖ್ಯೆ: 080–23570382 ಇ–ಮೇಲ್: jcctdvol@gmail.com
ಸಂಖ್ಯೆ: ವಾ.ತೆ.ಜಂ.ಆ(ಆ)/ವಿಸಸೇತೆಕ–01/ಬಿಎಂ/ಸಿ.ಆರ್–03(1)/2024–25 ದಿನಾಂಕ:19.06.2024

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ **ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 7 ಜನ (ಏಳು) ಸ್ವಚ್ಛತಾ ಸಿಬ್ಬಂದಿ ಮತ್ತು 6 ಜನ (ಆರು) ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು** 1999ರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 6ನೇ ಜುಲೈ 2024.**
ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ.
ದೂರವಾಣಿ ಸಂಖ್ಯೆ: 080–23470479.
https://www.kppp.karnataka.gov.in / https://www.ctax.kar.nic.in

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಬೆಂಗಳೂರು

ಪುರಸಭಾ ಕಾರ್ಯಾಲಯ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.
Phone: 08199-230221, E-mail: tmchosdurga@yahoo.com
Helpline 080-23108108, website: www.hosadurgatown.gov.in
ಕ್ರಮಾಂಕ: ತಾಶಾ/ಸಿಆರ್–03/2024–25/3 ದಿನಾಂಕ: 18.06.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ 2022–23 ಮತ್ತು 2023–24ನೇ ಸಾಲಿನ 15 ಹಣಕಾಸು ಆಯೋಗದ ಅನುದಾನ ಮತ್ತು ಇಂದಿರಾ ಕ್ಯಾಂಟೀನ್ ದುರಸ್ತಿ ಅನುದಾನದ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 28.06.2024ರ ಸಂಜೆ 5:00 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕಾಮಗಾರಿ ಹೆಸರು: 1) DMA/2024-25/PM/WORK_INDENT18874. ಅಂದಾಜು ಮೊತ್ತ: ರೂ. 12.065/– ಲಕ್ಷ. ಇಎಂಡಿ: ರೂ. 30,170/–. ನಿಗಧಿ ಪಡಿಸಿದ ಕಾಲಾವಧಿ: 4 ತಿಂಗಳು. 2) DMA/2024-25/WS/WORK_INDENT18932. ಅಂದಾಜು ಮೊತ್ತ: ರೂ. 5.00/- ಲಕ್ಷ. ಇಎಂಡಿ: ರೂ. 12,500/–. ನಿಗಧಿ ಪಡಿಸಿದ ಕಾಲಾವಧಿ: 4 ತಿಂಗಳು. 3) DMA/2024-25/OW/WORK INDENT17839. ಅಂದಾಜು ಮೊತ್ತ: ರೂ. 2.88/- ಲಕ್ಷ. ಇಎಂಡಿ: ರೂ. 7,200/–. ನಿಗಧಿ ಪಡಿಸಿದ ಕಾಲಾವಧಿ: 4 ತಿಂಗಳು. 4) DMA/2024-25/BD/WORK_INDENT18739. ಅಂದಾಜು ಮೊತ್ತ: ರೂ. 5.00/- ಲಕ್ಷ. ಇಎಂಡಿ: ರೂ. 12,500/–. ನಿಗಧಿ ಪಡಿಸಿದ ಕಾಲಾವಧಿ: 4 ತಿಂಗಳು.

ಷರತ್ತುಗಳು: ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲತಾಣ www.hosadurgatown.mrc.gov.in/ ರ Tenders ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

RO No. 51: DIPR/CTA/KSMCA/2024-25 ಸಹಿ/– ಮುಖ್ಯಾಧಿಕಾರಿ, ಪುರಸಭೆ, ಹೊಸದುರ್ಗ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817,
E-mail ID : kwbceklb14@gmail.com

ಸಂ. ಕಜಮ/ಮುಅಕ/ತಾಂತ್ರಿಕ/ನೀ.ಸ/ಹೆಚ್.ಬಿ.ಡಿ–ಎನ್.ಜಿ.ಆರ್/2024–25/300 ದಿನಾಂಕ: 19–06–2024

:: ಟೆಂಡರ್ ಆಹ್ವಾನಿಸುವ ಸೂಚನೆ ::

ಸಂ. ಕಜಮ/ಮುಅಕ/ತಾಂತ್ರಿಕ/ನೀ.ಸ/ಹೆಚ್.ಬಿ.ಡಿ–ಎನ್.ಜಿ.ಆರ್/2024–25/300 ದಿನಾಂಕ: 19–06–2024
1) ಕಾಮಗಾರಿಯ ವಿವರ : ನಗರೋತ್ಥಾನ ಹಂತ–3 ರಡಿ ಬೀದರ್ ಜಿಲ್ಲೆಯ ಹುಮನಾಬಾದ ಪಟ್ಟಣದ ಧನಗರಗಡ್ಡದಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಶಾಫ್ಟ್ ಮಾದರಿಯ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ (ಲಂಪಸಮ್) **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2024–25/ಡಬ್ಲ್ಯೂ.ಎಸ್/ವರ್ಕ_ಇಂಡೆಂಡ್ 126),** ಕಾಮಗಾರಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) (ಜಿ.ಎಸ್.ಟಿ ಸೇರಿಸಿ) : **126.57,** ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ): **2.00,** ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ, ಕಾಮಗಾರಿ ಪೂರ್ಣಗೊಳಿಸುವ ಅವಧಿ : 09 ತಿಂಗಳು.

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ನೀಸ/ಹಳ್ಳಿಖೇಡ/2024–25/301 ದಿನಾಂಕ: 19–06–2024
2) ಕಾಮಗಾರಿಯ ವಿವರ : ಹಳ್ಳಿಖೇಡ (ಬಿ) ಪುರಸಭೆ ಠೇವಣಿ ಕೊಡುಗೆಯಡಿ ಬೀದರ್ ಜಿಲ್ಲೆಯ ಹಳ್ಳಿಖೇಡ (ಬಿ) ಪಟ್ಟಣದ ಆಲೂರ ರಸ್ತೆಯ ಅಂಗನವಾಡಿ ಹತ್ತಿರ 2.50 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಶಾಫ್ಟ್ ಮಾದರಿಯ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಹಾಗೂ ಪುರಸಭೆ ಕಛೇರಿಯಿಂದ ಹಾಲಿ ಇರುವ 200 ಮಿ.ಮೀ ವ್ಯಾಸದ ಪಿ.ವಿ.ಸಿ ಕೊಳವೆ ಮಾರ್ಗದಿಂದ ಪ್ರಸ್ತಾಪಿತ 2.50 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರದವರೆಗೆ 150 ಮಿ.ಮೀ ವ್ಯಾಸದ ಡಿ.ಐ.ಕೆ–7 ಕೊಳವೆ ಮಾರ್ಗ ಒದಗಿಸುವುದು, ಅಳವಡಿಸುವುದು ಮತ್ತು ಅನುಷ್ಠಾನಗೊಳಿಸುವ ಕಾಮಗಾರಿ. (ಲಂಪ್ ಸಮ್). **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2024–25/ಡಬ್ಲ್ಯೂ.ಎಸ್/ ವರ್ಕ_ಇಂಡೆಂಡ್217),** ಕಾಮಗಾರಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) (ಜಿ.ಎಸ್.ಟಿ ಸೇರಿಸಿ) : **124.54,** ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ): 2.00, ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ, ಕಾಮಗಾರಿ ಪೂರ್ಣಗೊಳಿಸುವ ಅವಧಿ : 09 ತಿಂಗಳು

3) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: **20–06–2024 12:30 ಗಂಟೆಯ ನಂತರ,** 4) ಪೂರ್ವ ಟೆಂಡರ್ ಸಭೆ ದಿನಾಂಕ: **28–06–2024 ಸಮಯ 11:30 ಗಂಟೆಯವರೆಗೆ,** 5) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **05–07–2024 ಸಮಯ 17:30 ಗಂಟೆಯವರೆಗೆ,** 6) ಟೆಂಡರ್ ತೆರೆಯುವ ದಿನಾಂಕ : **08–07–2024 ಸಮಯ 11:00 ಗಂಟೆಯ ನಂತರ,** 7) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817, E-mail ID : kwbceklb14@gmail.com 8) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/110/ಕೆ.ಎಸ್.ಎಂ.ಸಿ.&ಎ/2024–25

ಸೂರ್ಯಕುಮಾರ್ ಮಿಂಚಿನ ಅರ್ಧಶತಕ • ಬೂಮ್ರಾ ನಿಖರ ದಾಳಿ • ಅಫ್ಗನ್ ಬಳಗಕ್ಕೆ ನಿರಾಸೆ

‘ಎಂಟರ ಘಟ್ಟ’ದಲ್ಲಿ ಭಾರತ ಶುಭಾರಂಭ

ಪ್ರಜಾವಾಣಿ ವಾರ್ತೆ

ಬ್ರಿಜ್‌ಟೌನ್, ಬಾರ್ಬಾಡೋಸ್: ಸೂರ್ಯಕುಮಾರ್ ಯಾದವ್ ಅರ್ಭಟ ಮತ್ತು ಜಸ್‌ಪ್ರೀತ್ ಬೂಮ್ರಾ ನಿಖರ ದಾಳಿಯ ಬಲದಿಂದ ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8ರ ಹಂತದಲ್ಲಿ ಶುಭಾರಂಭ ಮಾಡಿತು.

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಒಂದನೇ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 47 ರನ್‌ಗಳಿಂದ ಅಫ್ಗಾನಿಸ್ತಾನ ವಿರುದ್ಧ ಜಯಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ಆರಂಭದಲ್ಲಿ ಆತಂಕ ಎದುರಿಸಿತ್ತು. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್ ಸೂರ್ಯಕುಮಾರ್ (53; 28ಎ, 4X5, 6X3) ಮಿಂಚಿನ ಬ್ಯಾಟಿಂಗ್‌ನಿಂದಾಗಿ ಆತಂಕ ದೂರವಾಯಿತು. ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 181 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ ತಂಡವು ಬೂಮ್ರಾ (4–1–7–3) ದಾಳಿಗೆ ಶರಣಾಯಿತು. 20 ಓವರ್‌ಗಳಲ್ಲಿ 134 ರನ್ ಗಳಿಸಿ ಶರಣಾಯಿತು. ಗುಲ್ಬದೀನ್ ನೈಬ್ (17 ರನ್), ಅಜ್ಮತ್‌ಉಲ್ಲಾ ಒಮರ್‌ಝೈ (26 ರನ್) ಹಾಗೂ ನಜೀಬುಲ್ಲಾ ಜದ್ರಾನ್ (19 ರನ್) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಬೂಮ್ರಾ ಅವರಿಗೆ ಎಡಗೈ ವೇಗಿ ಅರ್ಷದೀಪ್ ಸಿಂಗ್ (36ಕ್ಕೆ3) ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ (32ಕ್ಕೆ2) ಉತ್ತಮ ಜೊತೆ ನೀಡಿದರು. ಇದರಿಂದಾಗಿ ಅಫ್ಗನ್ ತಂಡದ ಬ್ಯಾಟಿಂಗ್ ಪಡೆ ಕುಸಿಯಿತು.

ಸೂರ್ಯ ಅರ್ಭಟ; ಪಾಂಡ್ಯ ಮಿಂಚು: ಅಫ್ಗನ್ ತಂಡದ ಬೌಲರ್ ಫಜಲ್‌ಹಕ್ ಫರೂಕಿ (33ಕ್ಕೆ3) ಮತ್ತು ನಾಯಕ ರಶೀದ್ ಖಾನ್ (26ಕ್ಕೆ3) ಅವರ ದಾಳಿಯ ಮುಂದೆ ಭಾರತ ತಂಡವು ಒಂದು ಹಂತದಲ್ಲಿ ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತ್ತು. 90 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ರೋಹಿತ್ 61.54ರ ಸ್ಟ್ರೈಕ್‌ರೇಟ್‌ನಲ್ಲಿ 8 ರನ್ ಗಳಿಸಿದರು. ಕೊಹ್ಲಿ 24 ಎಸೆತಗಳಲ್ಲಿ 24 ರನ್ ಹೊಡೆದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ರಿಷಭ್ ಪಂತ್ (20; 11ಎ, 4X4) ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಇರಲಿಲ್ಲ.

ಈ ಹಂತದಲ್ಲಿ ದಿಟ್ಟತನದಿಂದ ಬ್ಯಾಟ್ ಬೀಸಿದ ಸೂರ್ಯ ಬೆಳಗಿದರು. 189.29ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಆದರೆ ಶಿವಂ ದುಬೆ ಕೇವಲ ಒಂದು ಸಿಕ್ಸರ್ ಮಾತ್ರ ಗಳಿಸಿದರು. ಸೂರ್ಯ ಜೊತೆಗೂಡಿದ ಹಾರ್ದಿಕ್ ಬೌಲರ್‌ಗಳ ಬೆವರಿಳಿಸಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿದರು. ಇದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸಲು ಸಾಧ್ಯವಾಯಿತು. ಸೂರ್ಯ 27 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು.

17ನೇ ಓವರ್‌ನಲ್ಲಿ ಸೂರ್ಯಕುಮಾರ್ ವಿಕೆಟ್ ಗಳಿಸಿದ ಫರೂಕಿ ಜೊತೆಯಾಟವನ್ನು ಮುರಿದರು. ನಂತರದ ಓವರ್‌ನಲ್ಲಿ ಹಾರ್ದಿಕ್ ಕೂಡ ಔಟಾದರು.

ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ಸೊಬಗು –ಎಪಿ/ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ 8ಕ್ಕೆ 181 (20 ಓವರ್)
ರೋಹಿತ್ ಸಿ ರಶೀದ್ ಬಿ ಫರೂಕಿ 8 (13ಎ, 4X1)
ಕೊಹ್ಲಿ ಸಿ ನಬಿ ಬಿ ರಶೀದ್ 24 (24ಎ, 6X1)
ಪಂತ್ ಎಲ್‌ಬಿಡಬ್ಲ್ಯು ಬಿ ರಶೀದ್ 20 (11ಎ, 4X4)
ಸೂರ್ಯಕುಮಾರ್ ಸಿ ನಬಿ ಬಿ ಫರೂಕಿ 53 (28ಎ, 4X5, 6X3)
ಶಿವಂ ಎಲ್‌ಬಿಡಬ್ಲ್ಯು ಬಿ ರಶೀದ್ 10 (7ಎ, 6X1)
ಹಾರ್ದಿಕ್ ಬಿ ಅಜ್ಮತ್‌ಉಲ್ಲಾ ಬಿ ನವೀನ್ 32 (24ಎ, 4X3, 6X2)
ಜಡೇಜ ಸಿ ಗುಲ್ಬದಿನ್ ಬಿ ಫರೂಕಿ 7 (5ಎ, 4X1)
ಅಕ್ಷರ್ ರನ್‌ಔಟ್ (ಗುರ್ಬಾಜ್/ನವೀನ್) 12 (6ಎ, 4X2)
ಅರ್ಷದೀಪ್ ಔಟಾಗದೆ 2 (2ಎ)
ಇತರೆ: 13 (ಲೆಗ್‌ಬೈ 5, ವೈಡ್ 8)
ವಿಕೆಟ್ ಪತನ: 1–11 (ರೋಹಿತ್ ಶರ್ಮಾ; 2.5), 2–54 (ರಿಷಭ್ ಪಂತ್; 6.6), 3–62 (ವಿರಾಟ್ ಕೊಹ್ಲಿ; 8.3), 4–90 (ಶಿವಂ ದುಬೆ; 10.5), 5–150 (ಸೂರ್ಯ ಕುಮಾರ್;16.6), 6–159 (ಹಾರ್ದಿಕ್ ಪಾಂಡ್ಯ; 17.6), 7–165 (ರವೀಂದ್ರ ಜಡೇಜ; 18.4), 8–181 (ಅಕ್ಷರ್ ಪಟೇಲ್; 19.6)
ಬೌಲಿಂಗ್: ಫಜಲ್‌ಹಕ್ ಫರೂಕಿ 4–0–33–3, ಮೊಹಮ್ಮದ್ ನಬಿ 3–0–24–0, ನವೀನ್ ಉಲ್ ಹಕ್ 4–0–40–1, ರಶೀದ್ ಖಾನ್ 4–0–26–3, ನೂರ್ ಅಹಮದ್ 3–0–30–0, ಅಜ್ಮತ್‌ಉಲ್ಲಾ 2–0–23–0.

ಅಫ್ಗಾನಿಸ್ತಾನ 134 (20 ಓವರ್)
ಗುರ್ಬಾಜ್ ಸಿ ಪಂತ್ ಸಿ ಬೂಮ್ರಾ 11 (8ಎ, 4x1, 6x1)
ಹಜರತುಲ್ಲಾ ಸಿ ಜಡೇಜ ಬಿ ಬೂಮ್ರಾ 2 (4ಎ)
ಜದ್ರಾನ್ ಸಿ ಶರ್ಮಾ ಬಿ ಪಟೇಲ್ 8 (11ಎ, 4x1)
ಗುಲ್ಬದೀನ್ ಸಿ ಪಂತ್ ಬಿ ಕುಲದೀಪ್ 17 (21ಎ, 4x1, 6x1)
ಅಜ್ಮತ್‌ವುಲ್ಲಾ ಸಿ ಪಟೇಲ್ ಬಿ ಜಡೇಜ 26 (20ಎ, 4x2, 6x1)
ನಜೀಬುಲ್ಲಾ ಸಿ ಅರ್ಷದೀಪ್ ಬಿ ಬೂಮ್ರಾ 19 (17ಎ, 6x2)
ನಬಿ ಸಿ ಜಡೇಜ ಬಿ ಕುಲದೀಪ್ 14 (14ಎ, 6x1)
ರಶೀದ್ ಸಿ ಜಡೇಜ ಬಿ ಅರ್ಷದೀಪ್ 2 (6ಎ)
ನೂರ್ ಅಹಮ್ಮದ್ ಸಿ ಶರ್ಮಾ ಬಿ ಅರ್ಷದೀಪ್ 12 (18ಎ, 4x1, 6x1)
ನವೀನ್ ಸಿ ಪಂತ್ ಬಿ ಅರ್ಷದೀಪ್ 0 (1ಎ)
ಫರೂಕಿ ಔಟಾಗದೇ 4 (1ಎ, 4x1)
ಇತರೆ: 19 (ಬೈ 4, ಲೆಗ್‌ಬೈ 7, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-13 (ರಹಮಾನುಲ್ಲಾ ಗುರ್ಬಾಜ್, 1.2), 2-23 (ಇಬ್ರಾಹಿಂ ಜದ್ರಾನ್, 3.4), 3-23 (ಹಜರತ್‌ಉಲ್ಲಾ ಝಜೈ, 4.1), 4-67 (ಗುಲ್ಬದೀನ್ ನೈಬ್, 10.2), 5-71 (ಅಜ್ಮತ್‌ಉಲ್ಲಾ ಒಮರ್‌ಝೈ, 11.1), 6-102 (ನಜೀಬುಲ್ಲಾ ಜದ್ರಾನ್, 15.2), 7-114 (ಮೊಹಮ್ಮದ್ ನಬಿ, 16.3), 8-121 (ರಶೀದ್ ಖಾನ್, 17.4), 9-121 (ನವೀನ್ ಉಲ್ ಹಕ್, 17.5), 10-134 (ನೂರ್ ಅಹಮದ್, 19.6)
ಬೌಲಿಂಗ್: ಅರ್ಷದೀಪ್ 4–0–36–3, ಜಸ್‌ಪ್ರೀತ್ ಬೂಮ್ರಾ 4–1–7–3, ಅಕ್ಷರ್ ಪಟೇಲ್ 3–1–15–1, ಹಾರ್ದಿಕ್ ಪಾಂಡ್ಯ 2–0–13–0, ಕುಲದೀಪ್ ಯಾದವ್ 4–0–32–2, ರವೀಂದ್ರ ಜಡೇಜ 3–0–20–1
ಪಂದ್ಯದ ಆಟಗಾರ: ಸೂರ್ಯಕುಮಾರ್ ಯಾದವ್

ಫಲಿತಾಂಶ: ಭಾರತ ತಂಡಕ್ಕೆ 47 ರನ್‌ಗಳ ಜಯ

ಸಾಲ್ಟ್ ಅಬ್ಬರ, ವಿಂಡೀಸ್ ತತ್ತರ

ಇಂಗ್ಲೆಂಡ್‌ಗೆ ಎಂಟು ವಿಕೆಟ್‌ಗಳ ಅಧಿಕಾರಯುತ ಜಯ

ಆಕ್ರಮಣಕಾರಿಯಾಗಿ ಆಡಿದ ಫಿಲ್ ಸಾಲ್ಟ್ – ಎಪಿ/ಪಿಟಿಐ ಚಿತ್ರ

ಗ್ರಾಸ್ ಐಲೆಟ್ (ಸೇಂಟ್ ಲೂಸಿಯಾ), (ಪಿಟಿಐ): ಆರಂಭ ಆಟಗಾರ ಫಿಲ್ ಸಾಲ್ಟ್ ಅವರ ಅಜೇಯ 87 ರನ್‌ಗಳ ಆಕ್ರಮಣಕಾರಿ ಆಟದ ನೆರವಿನಿಂದ ಇಂಗ್ಲೆಂಡ್ ತಂಡ ಗುರುವಾರ ಆತಿಥೇಯ ವೆಸ್ಟ್ ಇಂಡೀಸ್ ತಂಡದ ಮೇಲೆ ಎಂಟು ವಿಕೆಟ್‌ಗಳ ಸುಲಭ ಗೆಲುವಿನೊಡನೆ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಅಭಿಯಾನವನ್ನು ಅಮೋಘವಾಗಿ ಆರಂಭಿಸಿತು.

ಮೊದಲು ಆಡಿದ ವೆಸ್ಟ್ ಇಂಡೀಸ್ 4 ವಿಕೆಟ್‌ಗೆ 180 ರನ್ ಪೇರಿಸಿತು. ಆದರೆ ಇಂಗ್ಲೆಂಡ್ 17.3 ಓವರುಗಳಲ್ಲೇ 2 ವಿಕೆಟ್‌ಗೆ 181 ರನ್ ಹೊಡೆದು ಸುಲಭವಾಗಿ ಗುರಿತಲುಪಿತು.

ಸಾಲ್ಟ್ 47 ಎಸೆತಗಳ ಬ್ಯಾಟಿಂಗ್‌ನಲ್ಲಿ ಏಳು ಬೌಂಡರಿ, ಐದು ಸಿಕ್ಸರ್‌ಗಳನ್ನು ಹೊಡೆದರು. ಅವರಿಗೆ ಜಾನಿ ಬೇಸ್ಟೊ (ಔಟಾಗದೇ 48, 26ಎ, 4x5, 6x2) ಬೆಂಬಲ ನೀಡಿದರು. ಇವರಿಬ್ಬರ ನಡುವೆ ಮುರಿಯದ ಮೂರನೇ ವಿಕೆಟ್‌ಗೆ 44 ಎಸೆತಗಳಲ್ಲಿ 97 ರನ್‌ಗಳು ಹರಿದುಬಂದವು.

ಏಳು ರನ್ ಗಳಿಸಿದ್ದಾಗ ಅಖೀಲ್ ಹುಸೇನ್ ಬೌಲಿಂಗ್‌ನಲ್ಲಿ ನಿಕೋಲಸ್ ಪೂರನ್ ಅವರಿಂದ ಪಡೆದ ಜೀವದಾನದ ಲಾಭವನ್ನು ಸಾಲ್ಟ್ ಸಮರ್ಥವಾಗಿ ಬಳಸಿಕೊಂಡರು. ರೊಮಾರಿಯೊ ಶೆಫರ್ಡ್ ಅವರ (ಇನಿಂಗ್ಸ್‌ನ 16ನೇ) ಓವರ್‌ನಲ್ಲಿ ಅವರು ಮೂರು ಸಿಕ್ಸರ್, ಮೂರು ಬೌಂಡರಿ ಸಹಿತ 30 ರನ್ ಬಾಚಿದ್ದರಿಂದ ಗೆಲುವು ನಿರೀಕ್ಷೆಗಿಂತ ಬೇಗ ದಾಖಲಾಯಿತು.

ಆದರೆ ಇಂಗ್ಲೆಂಡ್ ಬೌಲರ್‌ಗಳಿಗೂ ಗೆಲುವಿನ ಸಮಾನ ಶ್ರೇಯ ಸಲ್ಲಬೇಕು. ಜೋಸ್ ಬಟ್ಲರ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿದ ನಂತರ ಬೌಲರ್‌ಗಳು 51 ಡಾಟ್ ಬಾಲ್‌ಗಳನ್ನು ಮಾಡಿದರು. ವೇಗಿ ಜೋಫ್ರಾ ಅರ್ಚರ್ (34ಕ್ಕೆ1) ಮತ್ತು ಅದಿಲ್ ರಶೀದ್ (21ಕ್ಕೆ1) ಅವರು ವೆಸ್ಟ್ ಇಂಡೀಸ್ ತಂಡವನ್ನು 200ರ ಗಡಿಯೊಳಗೆ ಕಟ್ಟಿಹಾಕಿದರು.

ಈ ಸೋಲಿನಿಂದ ವೆಸ್ಟ್ ಇಂಡೀಸ್‌ನ ಮುಂದಿನ ಎರಡೂ ಪಂದ್ಯಗಳನ್ನು (ಅಮೆರಿಕ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ) ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕಿತು.

ಇದಕ್ಕೆ ಮೊದಲು ವಿಂಡೀಸ್ ಪರ ನಿಕೋಲಸ್ ಪೂರನ್ (36, 32ಎ), ನಾಯಕ ರೋವ್ಮನ್ ಪೊವೆಲ್ (36, 17ಎ) ಆಕ್ರಮಣಕಾರಿಯಾಗಿ ಆಡಿದರು. ಕೊನೆಯಲ್ಲಿ ಶರ್ಫೇನ್ ರುದರ್‌ಫೋರ್ಡ್ 15 ಎಸೆತಗಳಲ್ಲಿ 28 ರನ್ ಗಳಿಸಿದರು.

ಸ್ಕೋರುಗಳು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 4 ವಿಕೆಟ್‌ಗೆ 180 (ಬ್ರಾಂಡನ್ ಕಿಂಗ್ 23, ಜಾನ್ಸನ್ ಚಾರ್ಲ್ಸ್ 38, ನಿಕೋಲಸ್ ಪೂರನ್ 36, ರೋವ್ಮನ್ ಪೊವೆಲ್ 36, ಶರ್ಫೇನ್ ರುದರ್‌ಫೋರ್ಡ್ ಔಟಾಗದೇ 28; ಅದಿಲ್ ರಶೀದ್ 21ಕ್ಕೆ1, ಮೊಯಿನ್ ಅಲಿ 15ಕ್ಕೆ1); **ಇಂಗ್ಲೆಂಡ್:** 17.3 ಓವರುಗಳಲ್ಲಿ 2 ವಿಕೆಟ್‌ಗೆ 181 (ಫಿಲ್ ಸಾಲ್ಟ್ ಔಟಾಗದೇ 87, ಜಾನಿ ಬೇಸ್ಟೊ ಔಟಾಗದೇ 48; ರಸೆಲ್ 21ಕ್ಕೆ1, ರೋಸ್ಟನ್ ಚೇಸ್ 19ಕ್ಕೆ1).
ಪಂದ್ಯದ ಆಟಗಾರ: ಫಿಲ್ ಸಾಲ್ಟ್

ಹರಿಣಗಳಿಗೆ ಆಂಗ್ಲರ ಸವಾಲು ಇಂದು

ಕ್ವಿಂಟನ್ ಡಿ ಕಾಕ್ –ಎಎಫ್‌ಪಿ ಚಿತ್ರ

ಗ್ರಾಸ್ ಐಲೆಟ್ (ಸೇಂಟ್ ಲೂಸಿಯಾ): ವೆಸ್ಟ್ ಇಂಡೀಸ್ ವಿರುದ್ಧ ಅಮೋಘ ಜಯ ಗಳಿಸಿರುವ ಇಂಗ್ಲೆಂಡ್ ತಂಡ ಈಗ ಆತ್ಮವಿಶ್ವಾಸದಲ್ಲಿದೆ. ಪ್ರಬಲ ಬೌಲಿಂಗ್ ದಾಳಿ ಹೊಂದಿರುವ ದಕ್ಷಿಣ ಆಫ್ರಿಕಾ ವಿರುದ್ಧ ಶುಕ್ರವಾರ ನಡೆಯುವ ಸೂಪರ್ ಎಂಟರ (ಎರಡನೇ ಗುಂಪು) ಪಂದ್ಯದಲ್ಲೂ ಇಂಗ್ಲೆಂಡ್ ಬ್ಯಾಟರ್‌ಗಳು ಅದೇ ಲಯದಲ್ಲಿ ಆಡುವ ವಿಶ್ವಾಸದಲ್ಲಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧ ಎಂಟು ವಿಕೆಟ್ ಜಯದ ಹಾದಿಯಲ್ಲಿ ಇಂಗ್ಲೆಂಡ್‌ನ ನೆಟ್ ರನ್ ರೇಟ್ (+1.34) ಸಹ ಸುಧಾರಿಸಿದ್ದು ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾದ ನೆಟ್ ರನ್ ರೇಟ್ +0.90 ಇದೆ. ಹೀಗಾಗಿ ಇಂಗ್ಲೆಡ್ ಒಳ್ಳೆಯ ಮನೋಬಲದಲ್ಲಿದೆ. ಈ ಪಂದ್ಯ ಗೆದ್ದವರು ಸೆಮಿಫೈನಲ್‌ಗೆ ಹೆಜ್ಜೆಯಿಡುವುದು ಖಚಿತ.

ದಕ್ಷಿಣ ಆಫ್ರಿಕಾ ಇನ್ನೊಂದೆಡೆ ಸೂಪರ್ ಎಂಟರ ತನ್ನ ಮೊದಲ ಪಂದ್ಯದಲ್ಲಿ ಅಮೆರಿಕ ವಿರುದ್ಧ 18 ರನ್‌ಗಳಿಂದ ಗೆಲ್ಲುವ ಮೊದಲು ಆತಂಕದ ಕ್ಷಣ ಎದುರಿಸಿತ್ತು. ಕಗಿಸೊ ರಬಾಡ, ಕೇಶವ ಮಹಾರಾಜ್ ಅವರಿಗೆ ಇಂಗ್ಲೆಂಡ್ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಎದುರಾಗಿದೆ. ಇವರಿಬ್ಬರು ಮಧ್ಯಮ ಮತ್ತು ಕೊನೆಯ ಹಂತದ ಓವರುಗಳಲ್ಲಿ ಶಿಸ್ತುಬದ್ಧ ಬೌಲಿಂಗ್ ಪ್ರದರ್ಶಿಸಿದ್ದರಿಂದ ದಕ್ಷಿಣ ಆಫ್ರಿಕಾಕ್ಕೆ ಅಮೆರಿಕದ ಅನಿರೀಕ್ಷಿತ ಪ್ರತಿಹೋರಾಟ ಮೆಟ್ಟಿನಿಲ್ಲಲು ಸಾಧ್ಯವಾಗಿತ್ತು.

ಈ ಟೂರ್ನಿಯ ಲೀಗ್ ಪಂದ್ಯಗಳಲ್ಲಿ ಸತತವಾಗಿ ವಿಫಲರಾಗಿದ್ದ ಕ್ವಿಂಟನ್ ಡಿ ಕಾಕ್, ಅಮೆರಿಕ ವಿರುದ್ಧ 74 ರನ್ ಗಳಿಸುವ ಮೂಲಕ ಲಯಕ್ಕೆ ಮರಳಿದ್ದಾರೆ.

ಇಂದಿನ ಪಂದ್ಯಗಳು

ಆಸ್ಟ್ರೇಲಿಯಾ Vs ಬಾಂಗ್ಲಾದೇಶ	(ಬೆಳಿಗ್ಗೆ 6)
ಇಂಗ್ಲೆಂಡ್ Vs ದಕ್ಷಿಣ ಆಫ್ರಿಕಾ	(ರಾತ್ರಿ 8)

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಆಸ್ಟ್ರೇಲಿಯಾ, ಬಾಂಗ್ಲಾ ಹಣಾಹಣಿ ಇಂದು

ಆಸ್ಟ್ರೇಲಿಯಾದ ಆ್ಯಡಂ ಜಂಪಾ

ನಾರ್ತ್‌ಸೌಂಡ್, ಆ್ಯಂಟಿಗಾ (ಪಿಟಿಐ): ಮಿಚೆಲ್ ಮಾರ್ಷ್ ನಾಯಕತ್ವದ ಆಸ್ಟ್ರೇಲಿಯಾ ತಂಡವು ಸೂಪರ್ 8ರ ಹಂತದ ಒಂದನೇ ಗುಂಪಿನ ಪಂದ್ಯದಲ್ಲಿ ಶುಕ್ರವಾರ ಬಾಂಗ್ಲಾದೇಶ ಎದುರು ಕಣಕ್ಕಿಳಿಯಲಿದೆ.

ಸಾಮರ್ಥ್ಯದ ದೃಷ್ಟಿಯಿಂದ ಬಾಂಗ್ಲಾಗಿಂತ ಆಸ್ಟ್ರೇಲಿಯಾವು ಬಲಾಢ್ಯವಾಗಿದೆ. 2021ರಲ್ಲಿ ಟಿ20 ವಿಶ್ವಕಪ್ ಜಯಿಸಿದ್ದ ಆಸ್ಟ್ರೇಲಿಯಾ ತಂಡವು ಈ ಬಾರಿಯೂ ಚಾಂಪಿಯನ್ ಆಗುವ ಕನಸು ಕಾಣುತ್ತಿದೆ.

ಆದರೆ ಬಾಂಗ್ಲಾದೇಶ ತಂಡವೂ ಆಘಾತ ನೀಡುವ ಸಾಮರ್ಥ್ಯ ಹೊಂದಿದೆ. ನಜ್ಮುಲ್ ಹುಸೇನ್ ಶಾಂತೊ ನಾಯಕತ್ವದಲ್ಲಿ ತಂಡದ ಬೌಲರ್‌ಗಳಾದ ಶಕೀಬ್ ಅಲ್ ಹಸನ್, ಮುಸ್ತಫಿಜುರ್ ರೆಹಮಾನ್, ಮೆಹಮುದುಲ್ಲಾ ಮತ್ತು ತಸ್ಕಿನ್ ಅಹಮದ್ ಅವರು ಉತ್ತಮ ಲಯದಲ್ಲಿದ್ದಾರೆ.

ಆದರೆ ಬ್ಯಾಟಿಂಗ್ ಕ್ರಮಾಂಕದಲ್ಲಿ ಸ್ಥಿರತೆಯ ಕೊರತೆ ಇದೆ. ಆಸ್ಟ್ರೇಲಿಯಾದ ಬೌಲಿಂಗ್ ಪಡೆ ಬಲಾಢ್ಯವಾಗಿದೆ. ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್, ಮಿಚೆಲ್ ಸ್ಟಾರ್ಕ್ ಹಾಗೂ ಸ್ಪಿನ್ನರ್ ಆ್ಯಡಂ ಜಂಪಾ ಅವರನ್ನು ಎದುರಿಸುವುದು ಬಾಂಗ್ಲಾ ತಂಡಕ್ಕೆ ಪ್ರಮುಖ ಸವಾಲಾಗಿದೆ.

ಬಾಂಗ್ಲಾದೇಶದ ಶಕೀಬ್ ಅಲ್ ಹಸನ್